## ಅಧ್ಯಾಯ - ೨

# ಇತಿಹಾಸ

ಭೌಗೋಳಿಕವಾಗಿ ದಖನ್ ಪ್ರಸ್ಥಭೂಮಿಯಲ್ಲಿರುವ ಕರ್ನಾಟಕದ ಉತ್ತರ ಭಾಗದ ಗುಲಬರ್ಗಾ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳ ಗಡಿಯಂಚಿಗೆ ಹೊಂದಿಕೊಂಡಿದೆ. ಬೀದರ್, ಗುಲಬರ್ಗಾ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ವಿಭಾಗೀಯ ಕೇಂದ್ರಸ್ಥಾನವಾಗಿರುವ ಗುಲಬರ್ಗಾ ಜಿಲ್ಲೆಯು ಸುದೀರ್ಘವಾದ ಐತಿಹಾಸಿಕ ಹಿನ್ನಲೆಯನ್ನು ಹಾಗೂ ಪರಂಪರೆಯನ್ನು ಹೊಂದಿದೆ. ಕರ್ನಾಟಕದ ಇತಿಹಾಸದುದ್ದಕ್ಕೂ ಪ್ರಮುಖ ಪಾತ್ರವಹಿಸಿರುವ ಈ ಜಿಲ್ಲೆಯನ್ನು ಶಾತವಾಹನರು, ಬಾದಾಮಿ ಚಾಳುಕ್ಯರು ರಾಷ್ಟ್ರಕೂಟರು ಕಲ್ಯಾಣದ ಚಾಳುಕ್ಯರು, ಕಳಚೂರ್ಯರು ಬಹಮನ್ ಷಾಹಿಗಳು ಹಾಗೂ ಬಿಜಾಪುರದ ಆದಿಲ್ ಷಾಹಿಗಳು ಸತತವಾಗಿ ಆಳ್ವಿಕೆ ಮಾಡಿರುವರು. ರಾಷ್ಟ್ರಕೂಟರು ಗುಲಬರ್ಗಾ ಸಮೀಪದಲ್ಲಿರುವ ಮಳಖೇಡವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂಬ ಅಭಿಪ್ರಾಯವಿದೆ. ಆನಂತರ ಕರ್ನಾಟಕವನ್ನು ಆಳಿದ ಚಾಳುಕ್ಯ ಸೋಮೇಶ್ವರನು ಆಗ ಇದೇ ಪ್ರಾದೇಶಿಕ ವ್ಯಾಪ್ತಿಯಲ್ಲಿದ್ದ ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಬಹಮನ್ ಷಾಹಿಗಳ ಆಳ್ವಿಕೆಯ ಸಂಸ್ಥಾಪಕನಾದ ಅಲ್ಲಾವುದಿನ್ ಬಹಮನ್ ಷಾ ಗುಲಬರ್ಗಾ ನಗರವನ್ನೇ ತನ್ನ ರಾಜಧಾನಿಯನ್ನಾಗಿ ಅಳವಡಿಸಿಕೊಂಡನು. ಬಹಮನ್‌ಷಾಹಿಗಳು ಗುಲಬರ್ಗಾದಿಂದ ೧೩೪೭ರಿಂದ ೧೪೨೪ರ ವರೆಗೆ ಪ್ರಬಲವಾಗಿ ಆಳ್ವಿಕೆ ಮಾಡಿದರು. ನಂತರ ಅಹಮದ್-ಷಾವಲಿ (೧೪೨೨-೧೪೩೬)ಯ ಆಡಳಿತಾವಧಿಯಲ್ಲಿ ಬಹಮನ್ ಷಾಹಿಗಳು ತಮ್ಮ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರ್‌ಗೆ ವರ್ಗಾಯಿಸಿದರು. ಈ ಸಾಮ್ರಾಜ್ಯವು ದಖನ್ ಪ್ರಸ್ಥಭೂಮಿಯ ಕೃಷ್ಣಾನದಿಯಿಂದ ತಪತಿ ನದಿಯವರೆಗೂ ಹಾಗೂ ಪಶ್ಚಿಮ ಘಟ್ಟಗಳಿಂದ ತೆಲಂಗಾಣ ಪ್ರದೇಶಗಳಲ್ಲಿ ಅವ್ಯತವಾಗಿರುವ ಪ್ರಾಂತ್ಯಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಈ ವಂಶದ ಧೀರ್ಘ ಆಳ್ವಿಕೆಯ ಅವಧಿಯಲ್ಲಿ ಅವರು ಮಾಡಿರುವ ಸಾಂಸ್ಕೃತಿಕ ಸಾಧನೆಗಳು ಇತಿಹಾಸದಲ್ಲಿ ಅವಿಸ್ಮರಣೀಯವಾಗಿವೆ. ಬಹಮನ್ ಷಾಹಿಗಳ ಆಳ್ವಿಕೆ ಅವನತಿಗೊಂಡ ಮೇಲೆ ಈ ಭಾಗವು ಹೈದರಾಬಾದ್ ನಿಜಾಮರ ಸಂಸ್ಥಾನವಾಗಿ ಮುಂದುವರೆದು ನಂತರ ಅಪರೋಕ್ಷವಾಗಿ ಬ್ರಿಟಿಷರ ಹತೋಟಿಯಲ್ಲಿ ಮುಂದುವರೆಯಿತು.

**ಪೌರಾಣಿಕ ಹಿನ್ನೆಲೆ**

ಈ ಜಿಲ್ಲೆಯಲ್ಲಿ ಪೌರಾಣಿಕ ಹಿನ್ನೆಲೆಯುಳ್ಳ ಅನೇಕ ಸ್ಥಳಗಳಿದ್ದು ಕೆಲವು ಪವಿತ್ರ ಕ್ಷೇತ್ರಗಳೆಂದು ಜನಪ್ರಿಯವಾಗಿವೆ. ಶಹಾಪುರ, ಸುರಪುರ ಹಾಗೂ ಜೇವರ್ಗಿ ತಾಲೂಕುಗಳ ಗಡಿಯಂತಿರುವ ಕೃಷ್ಣಾ-ಭೀಮೆಯರ ನಡುವೆ ವ್ಯಾಪಿಸಿರುವ

ಪ್ರದೇಶ ಹಾಗೂ ವಿಜಾಪುರ ಜಿಲ್ಲೆಯ ಮುದ್ದೆಬಿಹಾಳ ಹಾಗೂ ಸಿಂದಗಿ ತಾಲೂಕುಗಳ ವರೆಗಿನ ವ್ಯಾಪ್ತಿಯುಳ್ಳ ಭಾಗಗಳನ್ನು 'ಸಗರನಾಡು ಎಂದು ಕರೆಯಲಾಗುತ್ತದೆ.' ಪೌರಾಣಿಕ ನಂಬಿಕೆಯ ಪ್ರಕಾರ ಪುರಾಣ ಪ್ರಸಿದ್ಧನೂ ಮಹಾಬಲಶಾಲಿಯೂ ಪರಮ ಧಾರ್ಮಿಕನೂ ಆದ ಸಗರ ಚಕ್ರವರ್ತಿ ಸಗರನಾಡನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ಪ್ರತೀತಿಯಿದೆ. ಪೌರಾಣಿಕ ಕಥೆಯ ಪ್ರಕಾರ ಇಕ್ಷ್ವಾಕು ವಂಶದ ಅಂಬರೀಷನೆಂಬ ರಾಜನು ಪರಮಜ್ಞಾನಿಯೂ, ರಾಜರ್ಷಿಯೂ ಆಗಿದ್ದನು, ಆತನು ಮನುಪುತ್ರ ನಭಗನ ಪುತ್ರನಾದ ನಾಭಗನ ಮಗನು. ಅಂಬರೀಷನು ಬ್ರಹ್ಮಶಾಪಕ್ಕೆ ಗುರಿಯಾದನು. ಇದೇ ವಂಶದ ಸತ್ಯವ್ರತ (ತ್ರಿಶಂಕು)ನಿಗೆ ಹರಿಶ್ಚಂದ್ರನೆಂಬ ಪ್ರಖ್ಯಾತ ಮಗ ಹುಟ್ಟಿದ. ಹರಿಶ್ಚಂದ್ರನಿಗೆ ರೋಹಿತನೆಂಬ ಮಗನು ಜನಿಸಿದ. ರೋಹಿತನ ಮಗನೇ ಹರಿತ ಮತ್ತು ಈತನ ಮೊಮ್ಮಗನಾದ ಬಾಹುಕನು ಯುದ್ಧಗಳಲ್ಲಿ ಪರಾಭವಗೊಂಡು ನಿರಾಶನಾಗಿ ತನ್ನ ಮಡದಿಯೊಡನೆ ಅರಣ್ಯವನ್ನು ಸೇರಿದನು. ಆ ಸಮಯದಲ್ಲೇ ವೃದ್ಧಾಪ್ಯದಿಂದ ಬಾಹುಕನು ಮರಣ ಹೊಂದಿದನು. ಆನಂತರ ಅವನ ಪತ್ನಿಯು ಓರ್ವ ಮಹರ್ಷಿಯ ಸಂಬಂಧದಿಂದ ಗರ್ಭವತಿಯಾದಳು ಆಕೆಯ ಸವತಿಯರು ಅಸೂಯೆಯಿಂದ ಆಕೆಗೆ ತಿಳಿಯದ ಹಾಗೆ ವಿಷ ಉಣಿಸಿ ಭ್ರೂಣವನ್ನು ನಾಶ ಮಾಡಲು ಪ್ರಯತ್ನಿಸಿದಾಗ್ಯೂ ಗರ್ಭದ ಮೇಲೆ ಈ ವಿಷವು ಯಾವ ಪ್ರಭಾವಬೀರದೇ 'ಗರ' (ವಿಷ)ವನ್ನು ಮೈತಳೆದು ಜನಿಸಿದ ಮಗುವೇ 'ಸಗರ' ನೆಂಬ ಹೆಸರನ್ನು ಗಳಿಸಿದನು. ಈತನೇ ಮುಂದೆ ಯಶಸ್ವೀ ಸಾಮ್ರಾಟನಾಗಿ 'ಸಗರ ಚಕ್ರವರ್ತಿ' ಎನಿಸಿಕೊಂಡು ಸಗರನಾಡನ್ನು ಯಶಸ್ವಿಯಾಗಿ ಆಳ್ವಿಕೆ ಮಾಡಿದನೆಂಬ ನಂಬಿಕೆಯಿದೆ. ಪೌರಾಣಿಕ ಹಿನ್ನಲೆಯನ್ನು ಪಡೆದಿರುವ ಮತ್ತೊಂದು ಸ್ಥಳವೆಂದರೆ ಕೃಷ್ಣಾನದಿಯ ತೀರದಲ್ಲಿರುವ 'ಛಾಯಾ ಭಗವತಿಯು ಸೂರ್ಯದೇವನಿಗೆ ಸಂಬಂಧಿಸಿದ ಕ್ಷೇತ್ರವಾಗಿದೆ. ಪೌರಾಣಿಕ ನಂಬಿಕೆಯ ಪ್ರಕಾರ ಸೂರ್ಯದೇವನ ನಿರಂತರ ತಾಪಮಯ ಕಿರಣಗಳಿಂದ ಪ್ರಸರಿಸಿದ ಉಷ್ಣತೆಯನ್ನು ತಾಳಲಾರದೇ ಆತನ ಮೊದಲ ಸತಿಯಾದ ಸಂಮಜ್ಞಳು ನಿಧನಳಾದಾಗ ಅವಳಷ್ಟೇ ಸುಂದರ ರೂಪವುಳ್ಳ ಛಾಯಾದೇವಿಯು ಸೂರ್ಯನನ್ನು ಕೂಡಿದಳು ಸೂರ್ಯನು ಇವಳನ್ನು ತನ್ನ ನಿಜವಾದ ಸತಿಯೆಂದು ತಿಳಿದಿದ್ದನು. ಆದರೇ ಹಲವು ದಿನಗಳ ತರುವಾಯ ಈ ವಿಷಯದ ಬಗೆಗೆ ಇದ್ದ ಗೋಪ್ಯವಾದ ರಹಸ್ಯವು ಆತನಿಗೆ ಅರಿವಾದಾಗ ಸೂರ್ಯನು ಛಾಯಾ ದೇವಿಯನ್ನು ತ್ಯಜಿಸಿ ತನ್ನ ಮೊದಲ ಪತ್ನಿಯಾದ ಸಂಮಜ್ಞಳನ್ನು ಪುನಃ ಈ ಸ್ಥಳದಲ್ಲಿ ಕೂಡಿದನೆಂಬ ನಂಬಿಕೆ ಇದೆ.

ಅಮರಸಿಂಹನ ನಾಮಲಿಂಗಾನು ಶಾಸನ ಅಥವಾ ಅಮರಕೋಶ, ಮಂಗಳಾಷ್ಟಕ ಶ್ಲೋಕ, ಮತ್ಸ್ಯ, ಬ್ರಹ್ಮ ಮತ್ತು ವಾಮನ ಪುರಾಣಗಳಲ್ಲಿ ಹಾಗೂ ಮಹಾಭಾರತದಲ್ಲಿ ಭೀಮಾ ನದಿಯ ಉಲ್ಲೇಖ ಬಂದಿದೆ. ಪುರಾಣಗಳಲ್ಲಿ ಪವಿತ್ರ ನದಿಗಳ ಸಾಲಿನಲ್ಲಿ ಎಣಿಸಿದ ಇದನ್ನು 'ಮಹಾನದಿ' ಎಂದೂ ಉಲ್ಲೇಖಿಸಿಲಾಗಿದೆ. ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಭೀಮಾಶಂಕರವು ಭೀಮಾ ನದಿಯ ಉಗಮ ಸ್ಥಾನವಾಗಿದೆ. ತ್ರಿಪುರಾಸುರನನ್ನು ಸೋಲಿಸಿ ದಣಿದ ಶಿವನು ವಿಶ್ರಾಂತಿಗಾಗಿ ಸಹ್ಯಾದ್ರಿಗೆ ಬಂದನಂತೆ, ಆಗ ಇಬ್ಬರು ಋಷಿಗಳನ್ನು ಹತ್ಯೆಗೈದಿದ್ದ ಅಯೋಧ್ಯೆಯ ರಾಜ ಭೀಮಕನು ಪಾಪ ಪರಿಹಾರಕ್ಕಾಗಿ ತಪಸ್ಸಿಗೆಂದು ಇಲ್ಲಿಗೆ ಬಂದಿದ್ದನೆಂದು ಪ್ರತೀತಿಯಿದೆ. ಈತನ ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ವರ ನೀಡುವ ಕೃಪೆ ಮಾಡಿದನಂತೆ. ಆಗ ಶಿವನ ಹಣೆ ಬೆವರುತ್ತಿತ್ತಂತೆ ಇದನ್ನು ಕಂಡ ಭೀಮಕನ ಆ ಹಣೆಯ ಬೆವರೇ ನದಿಯಾಗಿ ಪ್ರವಹಿಸಲಿ ಎಂದು ನುಡಿದನಂತೆ ಈ ರೀತಿ ಭೀಮಕನ ಪ್ರಾರ್ಥನೆಯಿಂದ ಮೂಡಿಬಂದ ನದಿಯೇ ಮುಂದೆ 'ಭೀಮರತಿ' ಅಥವಾ 'ಭೀಮಾ' ನದಿ ಎಂದು ಜನಪ್ರಿಯವಾಯಿತೆಂದು ಐತಿಹ್ಯವಿದೆ. ಸನ್ನತಿಯು ಒಂದು ಪುರಾತನ ಸ್ಥಳವಾಗಿರುವಂತೆ ಪೌರಾಣಿಕ ಹಿನ್ನಲೆಯನ್ನೂ ಹೊಂದಿದೆ. ಈ ನಂಬಿಕೆಯ ಪ್ರಕಾರ ರಾಮ ಮತ್ತು ಸೀತೆಯರು ಇಲ್ಲಿ ಮುನಿನಾರಾಯಣ ಹಾಗೂ ಚಂದ್ರವದನ ಅಥವಾ ಚಂದ್ರಲಾಂಬರಾಗಿ ಅವತರಿಸಲು ಜನ್ಮತಾಳಿದರು. ಆಗ 'ಸೇತು' ಎಂಬ ರಾಜನು ಈ ಸ್ಥಳದಲ್ಲಿ ಸೀತೆಯನ್ನು ಕೆಣಕಿದಾಗ ಆತನು ಆಕೆಯ ಶಾಪಕ್ಕೆ ಗುರಿಯಾದನು. ಇಲ್ಲಿರುವ ಚಂದ್ರಲಾಂಬೆಯೇ ಪದ್ಮಾವತಿ ಎಂಬ ನಂಬಿಕೆ ಇದೆ. ಅನೇಕ ಪೌರಾಣಿಕ ಹಿನ್ನಲೆಯುಳ್ಳ ಹಲವಾರು ಸ್ಥಳಗಳಿವೆ. ಆದಿಗುರು ಶಂಕರಾಚಾರ್ಯರರು ಈ ದೇವಿಯನ್ನು ಕುರಿತು ಶ್ಲೋಕ ರಚಿಸಿರುವರು ಎಂದು ಹೇಳಲಾಗುವುದು.

**ಇತಿಹಾಸ ಪೂರ್ವಕಾಲ**

ಈಗಾಗಲೇ ಮೇಲೆ ವಿವರಿಸಿದಂತೆ ಗುಲಬರ್ಗಾ ಜಿಲ್ಲಾ ಪ್ರದೇಶವು ನೈಸರ್ಗಿಕವಾಗಿ ಸಂಪದ್ಭರಿತವಾಗಿದೆ. ಭೀಮಾ ನದಿಯು ವಾಯುವ್ಯ-ಆಗ್ನೇಯ ದಿಕ್ಕಿನಲ್ಲಿ ಜಿಲ್ಲೆಯ ಮಧ್ಯದಲ್ಲಿ ಹರಿಯುತ್ತಿದ್ದು ಇದರ ಉಪ-ನದಿಗಳು ಜಿಲ್ಲೆಯನ್ನು ಆವರಿಸಿವೆ.

ಈ ನದಿಯ ಉತ್ತರ ಭಾಗದಲ್ಲಿ ಫಲವತ್ತಾದ ಕರಿಮಣ್ಣಿದೆ. ದಕ್ಷಿಣ ಭಾಗದಲ್ಲಿ ವಿವಿಧ ಪ್ರಕಾರಗಳ ಕಲ್ಲುಗಳಿಂದ ಕೂಡಿದ ಸಣ್ಣ ಸಣ್ಣ ಬೆಟ್ಟಗಳ ಸಾಲುಗಳಿಂದ ತುಂಬಿ ಹೋಗಿವೆ ಮತ್ತು ಅಲ್ಲಲ್ಲಿ ತಾಮ್ರ, ಕಬ್ಬಿಣ ಮೊದಲಾದ ಖನಿಜ ಸಂಪತ್ತು ಗಣನೀಯ ಪ್ರಮಾಣದಲ್ಲಿವೆ. ಆದ್ದರಿಂದಲೇ ಬಹಳ ಪ್ರಾಚೀನ ಕಾಲದಿಂದಲೇ ಈ ಪ್ರದೇಶವು ಜನರ ಆವಾಸ ಸ್ಥಾನವಾಗಿತ್ತು. ಮತ್ತು ಭೀಮಾನದಿಯ ಸನ್ನಿವೇಶವು ಈ ಪ್ರದೇಶದ ಉತ್ತರ ಮತ್ತು ದಕ್ಷಿಣ ಭಾಗದಿಂದ ಜನರ ಓಡಾಟಕ್ಕೂ ಅನುಕೂಲವಾಗಿತ್ತು.

ಇಂಥ ಒಂದು ತುಂಬಾ ಹಿತಕರವಾದ ಪ್ರದೇಶದಲ್ಲಿ ಮಾನವರ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಕುರುಹುಗಳು ಸಿಕ್ಕಲ್ಲಿ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ೧೯ನೇ ಶತಮಾನದ ಉತ್ತರಾರ್ಧದ ದಶಕಗಳಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಎಂಬ ಭೂ ವಿಜ್ಞಾನಿಯು ಸುರಪುರ ತಾಲೂಕಿನ ಕೃಷ್ಣಾ ನದಿಯ ದಂಡೆಯ ಮೇಲೆ ಇರುವ ಎಡೆಹಳ್ಳಿಯಲ್ಲಿ ಆದಿ ಹಳೇ-ಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಪತ್ತೆ ಮಾಡಿದ್ದು ಇವುಗಳು ಭೀಮಾ ಸ್ಥಳದ ಗಷ್ಟು ಕಲ್ಲುಗಳ ಪ್ರಕಾರಗಳಲ್ಲೊಂದಾದ ಶೇರಿ ಕಲ್ಲು ಅಥವಾ ಶಹಾಬಾದ್ ಕಲ್ಲಿನವು ಆದರೆ. ಪುರಾತತ್ವ ಶಾಸ್ತ್ರಜ್ಞರು ಆದಿ ಹಳೇ-ಶಿಲಾಯುಗದ ಮಾನವರಿಗೆ ತನ್ನ ಉಪಕರಣಗಳನ್ನು ಮಾಡಿಕೊಳ್ಳಲು ಈ ಕಲ್ಲು ಅಷ್ಟು ಯೋಗ್ಯವಲ್ಲದ್ದರಿಂದ ಎಡೆಹಳ್ಳಿಯಲ್ಲಿ ದೊರೆತ ಉಪಕರಣಗಳ ಬಗೆಗೆ ಅಷ್ಟಾಗಿ ಗಮನ ಹರಿಸಲಿಲ್ಲ. ೧೯೭೦ರ ದಶಕದ ಆದಿ ಭಾಗದಲ್ಲಿ ದಖನ್ ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆಯ ಕೆ. ಪದ್ದಯ್ಯನವರು ಬ್ರೂಸ್‌ಫೂಟ್‌ರವರ ಶೋಧನೆಯನ್ನು ಗಂಬೀರವಾಗಿ ಗಮನಿಸಿ ಮತ್ತೆ ಈ ಪ್ರದೇಶದಲ್ಲಿ ಪುರಾತತ್ವ ಅನ್ವೇಷಣೆ ಕೈಗೊಂಡರು. ೧೯೬೦ರ ದಶಕದಲ್ಲಿ ಈ ವಿದ್ವಾಂಸರು 'ಶೋರಾಪುರ ಸಂಗಮ ಪ್ರದೇಶದ ಪ್ರಾಗ್ ಇತಿಹಾಸ ಮತ್ತು ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳು' ಎಂಬ ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಂಡಿದ್ದರು. ಏಕೆಂದರೆ ಹಿಂದೇ ೧೯ನೇ ಶತಮಾನದ ಮಧ್ಯಭಾಗದಲ್ಲಿ ಕರ್ನಲ್ ಮೆಡೋಸ್ ಟೈಲರ್ ಅವರು ಅನಂತರ ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳೆಂದು ಗುರುತಿಸಲಾದ ಕೆಲವು ಮಹತ್ವದ ಕಲ್ಲುವೃತ್ತಗಳ ಮತ್ತು ಕಲ್ಗೋರಿಗಳಿರುವ ನಿವೇಶಗಳನ್ನು ಜೇವರ್ಗಿ, ಅಂದೋಲ, ಚಿಕ್ಕನಹಳ್ಳಿ, ರಾಜನ ಕೋಳೂರು ಹಗರಟಗಿಯಲ್ಲಿ ಪತ್ತೆಮಾಡಿ ಅಧ್ಯಯನ ಮಾಡಿದ್ದರು. ಇವು ಇಂಗ್ಲೇಂಡ್ ಮೊದಲಾದ ಪಶ್ಚಿಮ ಯೂರೋಪಿನಲ್ಲಿಯ ಗ್ರಾಮ್‌ಲೆಕ್ಸ್ ಕಿಸ್ತರೀನ್ಸ್‌ಗಳಂತಿದೆ ಎಂದು ಅಭಿಪ್ರಾಯಪಟ್ಟಿದ್ದರು. ಅನಂತರ ಮಳಖೇಡ ಹಾಗೂ ಬೀಮಾ ನದಿ ದಂಡೆ ಪ್ರದೇಶದಲ್ಲಿ ಅ. ಸುಂದರ, ಎಸ್. ನಾಗರಾಜು ಅವರು ಮಧ್ಯಹಳೇ ಶಿಲಾಯುಗದ ಕಲ್ಲಿನ ಉಪಕರಣಗಳನ್ನು ಶೋಧಿಸಿದರು. ಸುಂದರ ಅವರು ಉಡಚಣ (ಅಫಜಲ್‌ಪುರ ತಾಲೂಕು) ಉಡಸಗಿ (ಸುರಪುರ ತಾಲೂಕು) ಕ್ರಮವಾಗಿ ಶಿಲಾ ತಾಮ್ರ ಯುಗದ ಹಂತದಲ್ಲಿಯ ನೂತನ ಶಿಲಾಯುಗದ ಜನವಾಸ್ತವ್ಯ ನೆಲೆಗಳನ್ನು ಗುರುತಿಸಿದ್ದರು. ಹಾಗೂ ಬೂದಿಹಾಳದಲ್ಲಿ ಎರಡು ಬೃಹತ್ ಬೂದಿಗುಡ್ಡಗಳು ಇರುವುದನ್ನು (೧೯೬೪) ವರದಿ ಮಾಡಿದ್ದರು. ಪದ್ದಯ್ಯನವರು ಸುರಪುರ ಸಂಗಮ ಪ್ರದೇಶದಲ್ಲಿ ಕ್ಷೇತ್ರ ಕಾರ್ಯ ಮಾಡುವಾಗ ಕಕ್ಕೇರ, ಕೊಡೇಕಲ್ ಇನ್ನೂ ಕೆಲವೆಡೆಗಳಲ್ಲಿ ಶಿಲಾ-ತಾಮ್ರಯುಗ ಹಂತದ ನೂತನ ಶಿಲಾಯುಗದ ಸಂಸ್ಕೃತಿಗಳನ್ನೂ ಅಲ್ಲಲ್ಲಿ ಬೂದಿಗುಡ್ಡಗಳನ್ನು ಅಧ್ಯಯನ ಮಾಡಿ ಕೊಡೇಕಲ್ಲಿನಲ್ಲಿಯ ಬೂದಿಗುಡ್ಡೆಯನ್ನು ಸಣ್ಣ ಪ್ರಮಾಣದಲ್ಲಿ ಉತ್ಖನನ ಮಾಡಿದರು. ಹೀಗೆ ಕ್ಷೇತ್ರಕಾರ್ಯ ಮತ್ತು ಉತ್ಖನನಗಳಿಂದ ಬೆಳಕಿಗೆ ಬಂದ ಎಲ್ಲ ಸಾಂಸ್ಕೃತಿಕ ಅವಶೇಷಗಳನ್ನು ವಿಮಾರ್ಶಾತ್ಮಕವಾಗಿ ವಿಶ್ಲೇಷಿಸಿ ವಿವರಣೆಯನ್ನು ಕೊಟ್ಟಿದ್ದಾರೆ. ಅನಂತರ ಹುಣಸಗಿಯಲ್ಲಿ ನಡೆಸಿದ ಅನ್ವೇಷಣೆ ಮತ್ತು ಉತ್ಖನನಗಳ ಫಲಿತಾಂಶಗಳನ್ನು ಪ್ರಕಟಿಸಿದ್ದಾರೆ. ಗುಲಬರ್ಗಾದವರೇ ಆದ ಕಪಟರಾಳ ಕೃಷ್ಣಾರಾಯರು ತಮ್ಮ ಸಂಶೋಧನೆಗಳಿಗೆ ಹೆಸರುವಾಸಿಯಾಗಿದ್ದರು. ಇವರ ಶೋಧನೆಗಳಲ್ಲಿ ಕರ್ನಾಟಕ ಆದಿ ಇತಿಹಾಸ ಕಾಲದ ಇತಿಹಾಸ, ಸಂಸ್ಕೃತಿ ಹಾಗೂ ವಿಶೇಷವಾಗಿ ಕಲೆಯ ದೃಷ್ಟಿಯಿಂದ ಸನ್ನತಿಯಲ್ಲಿಯ ಮಹತ್ವದ ಬೌದ್ಧ ನೆಲೆಯನ್ನು ಬೆಳಕಿಗೆ ತಂದರು ಸಂಶೋಧಿಸಿದ ಕ್ರಿ. ಶ. ೧-೨ನೇ ಶತಮಾನದ ಪ್ರಾಕೃತ ಶಾಸನಗಳು ಹಾಗೂ ಬೌದ್ಧ ಶಿಲ್ಪ ಕಲೆಯ ಅವಶೇಷಗಳ ಬಗೆಗೆ ಇವರು ೧೯೫೬ರಲ್ಲೇ ವರದಿ ಮಾಡಿದ್ದರು. ಈ ಶೋಧನೆಯ ಅರಿವಿಲ್ಲದೇ ಎಸ್. ನಾಗರಾಜು ಅವರು ೧೯೬೪ರಲ್ಲಿ ಸನ್ನತಿಯ ಭಾಗದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಒಂದು ವರದಿಯನ್ನು ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಿದರು. ಅನಂತರ ಎಸ್. ಶೇಷಾದ್ರಿ, ಪಿ. ಬಿ. ದೇಸಾಯಿ, ಎಂ. ಎಸ್. ನಾಗರಾಜರಾವ್ ಪದೇ ಪದೇ ಈ ನೆಲೆಯನ್ನು ಪರಿಶೀಲಿಸಿ ತಮ್ಮ ತಮ್ಮ ವರದಿಗಳನ್ನು ಪ್ರಕಟಿಸಿದರು. ಸರಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಈ ನೆಲೆಯನ್ನು ಅಂದಿನಿಂದ ರಕ್ಷಿಸುತ್ತಾ ಬಂದಿದೆ. ಈ ಎಲ್ಲ ಪ್ರಕಟಣೆಗಳಿಂದ ಈ ನೆಲೆಯನ್ನು ಅಂದಿನಿಂದ ರಕ್ಷಿಸುತ್ತಾ ಬಂದಿದೆ. ಈ ಎಲ್ಲ ಪ್ರಕಟಣೆಗಳಿಂದ ಈ ನೆಲೆಯ ಮಹತ್ವವನ್ನು ಅರಿತು ಪ್ರಾಚ್ಯವಸ್ತು ನಿರ್ದೇಶನಾಲಯವು ಅ. ಸುಂದರ್ ಅವರ ನೇತೃತ್ವದಲ್ಲಿ

ಪ್ರಪ್ರಥಮ ಉತ್ಖನನವನ್ನು ಮಾಡಿತು. ಅದೇ ಸಮಯದಲ್ಲಿ ಕೇಂದ್ರ ಸರಕಾರದ ಪುರಾತತ್ವ ಇಲಾಖೆಯು ದಕ್ಷಿಣ ಏಷ್ಯಾ ಅಧ್ಯಯನ ಸಂಸ್ಥೆ ಬ್ರಿಟೀಷ್ ಸಂಸ್ಥೆಯ ಸಹಯೋಗದೊಂದಿಗೆ ಸನ್ನತಿಗೆ ಹೊಂದಿಕೊಂಡಂತಿರುವ ಕಣಗಿನಹಾಳದಲ್ಲಿರುವ ಒಂದು ಮಹಾಸ್ತೂಪವನ್ನು ಉತ್ಖನನ ಮಾಡಿತು. ಇದೇ ಸಮಯದಲ್ಲಿ ಸನ್ನತಿಯಲ್ಲಿ ಇನ್ನೊಂದು ಮಹತ್ವದ ಶೋದನೆಯನ್ನು ಪುರಾತತ್ವ ಸರ್ವೇಕ್ಷಣಾ ಇಲಾಖೆ, ಹೈದರಾಬಾದ್ ವೃತ್ತದವರು ಮಾಡಿದರು. ಅದು ಮೌರ್ಯ ಚಕ್ರವರ್ತಿ ಅಶೋಕನ ಸಾಮ್ರಾಟನ ಪ್ರಸಿದ್ಧ ಹಳದಾಳ್‌ಪುರ ಬೃಹತ್ ಬಂಡೇ ಶಾಸನಗಳಲ್ಲಿಯ ೧೩ ಮತ್ತು ೧೪ನೇ ವಿಧಿಗಳು ಹಾಗೂ ಕಳಿಂಗದಲ್ಲಿದ್ದ ಅವನ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳು ಆಗಿದ್ದವು ಹಾಗೂ ಈ ಚಕ್ರವರ್ತಿಯ ಕಿರುಬಂಡೆ ಶಾಸನಗಳು ಮಾತ್ರ ಬ್ರಹ್ಮಗಿರಿ, ಉದೆಗೋಳಂ, ಮಸ್ಕಿ ಮೊದಲಾದ ಏಳು ಎಡೆಗಳಲ್ಲಿ ಶೋಧವಾಗಿದ್ದವು. ಕಳಿಂಗದ ಪ್ರತ್ಯೇಕ ಶಾಸನಗಳು ಇದುವರೆಗೆ ಅಲ್ಲಿ ಮಾತ್ರ ಇದ್ದುದು ತಿಳಿದಿತ್ತು. ಹೀಗೆ ಈ ಶಾಸನಗಳ ಶೋಧನೆಯು ಆದಿ-ಇತಿಹಾಸದ ಅಧ್ಯಯನಕ್ಕೆ ಅತ್ಯಂತ ಮಹತ್ವದ ಕೊಡುಗೆಗಳಾಗಿವೆ. ಈ ಬಗೆಯ ನೆಲೆಗಳು ಇನ್ನೂ ಕೆಲೆವೆಡೆಗಳಲ್ಲಿ ಅಂದರೆ ಅಣಗಿ (ಸುರಪುರ ತಾಲೂಕು) ಜೇವರ್ಗಿ, ಹಸರಗುಂಡಿಗಳಲ್ಲಿ ಪತ್ತೆಯಾಗಿವೆ. ಈಗ ಈ ಶೋಧನೆಗಳ ಹಿನ್ನಲೆಯಲ್ಲಿ ಆದಿ ಹಳೇ ಶಿಲಾಯುಗದಿಂದ ಹಿಡಿದು ಮೌರ್ಯ - ಶಾತವಾಹನ ಕಾಲಗಳವರೆಗಿನ ಸಾಂಸ್ಕೃತಿಕ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಲು ಪ್ರಯತ್ನಿಸಲಾಗಿದೆ.

ಹುಣಸಗಿಯಲ್ಲಿ ಆದಿ-ಹಳೇಶಿಲಾಯುಗದ ಐದು ನೆಲೆಗಳು ಈವರೆಗೆ ಪತ್ತೆಯಾಗಿವೆ. ಕರ್ನಾಟಕ ಹಾಗೂ ದಕ್ಷಿಣ ಭಾರತಗಳಲ್ಲಿ ಇಂತಹ ಹಲವಾರು ನೆಲೆಗಳು ಇವೆ. ಆದರೆ ಇವುಗಳಲ್ಲಿ ಬಹಳಷ್ಟು ನೆಲೆಗಳಲ್ಲಿ ಇರುವ ಆದಿ-ಹಳೇಶಿಲಾಯುಗದ ಉಪಕರಣಗಳು ನದಿಗಳ ಪ್ರವಾಹಗಳಿಗೆ ಸಿಕ್ಕಿ ತಮ್ಮ ತಮ್ಮ ಮೂಲಸ್ಥಾನಗಳಿಂದ ಸ್ಥಾನಪಲ್ಲಟವಾಗಿ ಈಗ ಅವು ಬೇರೆ ಬೇರೆ ಎಡೆಗಳಲ್ಲಿ ಕಂಡು ಬಂದಿವೆ. ಅದುದರಿಂದ ಅವುಗಳ ಮೂಲ ಸ್ಥಳಗಳು ತಿಳಿಯದೇ ಇರುವುದು ಈ ಸಂಸ್ಕೃತಿಯ ಅಧ್ಯಯನದಲ್ಲಿ ಒಂದು ದೊಡ್ಡ ತೊಡಕಾಗಿದೆ. ಆದರೆ, ಹುಣಸಗಿಯಲ್ಲಿಯ ನೆಲೆಗಳು ಎಲ್ಲವೂ ಮೂಲ ನೆಲೆಗಳಾಗಿವೆ. ಮತ್ತು ಇಂಥ ಉಪಕರಣಗಳನ್ನು ಸಿದ್ಧಮಾಡುವ ಕಾರ್ಯಾಗಾರಗಳಾಗಿವೆ. ಆದ್ದರಿಂದ ಇಡೀ ಭಾರತದಲ್ಲಿರುವ ಇಂಥ ಕೆಲವೇ ನೆಲೆಗಳಲ್ಲಿ ಇವುಗಳಾಗಿದ್ದು ಅತ್ಯಂತ ಮಹತ್ವದ್ದಾಗಿವೆ.

ಈ ನೆಲೆಯಲ್ಲಿ ಇಂಥಹ ಉಪಕರಣಗಳಲ್ಲಿ ಆಯ್ದು ತಂದ ಸೂಕ್ತ ಆಕಾರದ ಕಲ್ಲುಗಳು, ಇವುಗಳನ್ನು ಉಪಕರಣಗಳಾಗಿ ಮಾಡುವ ಕಾಲದಲ್ಲಿ ಎಬ್ಬಿಸಿದ ಚಕ್ಕೆಗಳು ಕೆಲವು ಕಾರಣಗಳಿಗಾಗಿ ತ್ಯಜಿಸಲ್ಪಟ್ಟ ಕಲ್ಲಿನ ಉಪಕರಣಗಳು ಹಾಗೂ ಸಿದ್ಧ ಮಾಡಿದ ಇನ್ನೂ ಅನುಪಯುಕ್ತ ಸ್ಥಿತಿಯಲ್ಲಿಯ ಉಪಕರಣಗಳು ಶೋಧನವಾಗಿವೆ. ಆದ್ದರಿಂದ ಈ ನೆಲೆಯು ಇಂಥಹ ಉಪಕರಣವನ್ನು ಮಾಡುವ ಕಾರ್ಯಾಗಾರವಾಗಿತ್ತೆಂಬುದು ಸ್ಪಷ್ಟ. ಇಲ್ಲಿ ಇನ್ನೊಂದು ಕುತೂಹಲಕಾರಿ ವಿಷಯವು ಬೆಳಕಿಗೆ ಬಂದಿದೆ. ಒಂದೆಡೆಯಲ್ಲಿ ನಾಲ್ಕೈದು ದೊಡ್ಡ ದೊಡ್ಡ ಕಲ್ಲುಗುಂಡುಗಳು ಒಂದರ ಪಕ್ಕದಲ್ಲಿ ಒಂದರಂತೆ ಇರಿಸಲಾಗಿದೆ. ಇವುಗಳನ್ನು ಬುದ್ಧಿ ಪೂರ್ವಕವಾಗಿ ಇಡಲಾಗಿದೆ. ಸ್ವಲ್ಪ ಹೆಚ್ಚು ಕಡಿಮೆ ವೃತ್ತಾಕಾರದಲ್ಲಿವೆ. ಒಳಬದಿಯಲ್ಲಿ ಒಂದು ದೊಡ್ಡ ಕಲ್ಲು ಇದರ ಹತ್ತಿರದಲ್ಲಿಯೇ ಎಟುಕುವ ಅಂತರದಲ್ಲಿ ಮತ್ತೊಂದು ಕಲ್ಲು, ಈ ಕಲ್ಲಿನ ಸುತ್ತಮುತ್ತೆಲ್ಲಾ ಎಬ್ಬಿಸಿದ ಚಕ್ಕೆಗಳು, ಅಪೂರ್ಣ ಶಿಲಾ ಉಪಕರಣಗಳು ಇದ್ದುವು. ಬಹುಮಟ್ಟಿಗೆ ಒಂದು ಕಲ್ಲಿನ ಮೇಲೆ ಪ್ರಾಗ್ ಇತಿಹಾಸ ಮಾನವನನ್ನೂ ಕುರಿತು ತಾನು ಆಯ್ದು ತಂದ ಕಲ್ಲನ್ನು ಮತ್ತೊಂದು ಕಲ್ಲಿಗೆ ಹದವರಿತು ವಡೆದು ತಾನು ರೂಪಿಸಿಕೊಂಡ ಆಕಾರಕ್ಕೆ ಅದನ್ನು ತರುತ್ತಿದ್ದನು. ಈ ಕೆಲಸದ ಸಮಯದಲ್ಲಿ ಪ್ರಾಯಶಃ ನೆರಳಿಗೊಸ್ಕರ ಹಿಂಬದಿಯಲ್ಲಿ ಓರೆಯಾಗಿ ತಟ್ಟಿಯನ್ನು ಕಟ್ಟಿಕೊಂಡಿದ್ದಿರಬೇಕು. ಆ ತಟ್ಟಿಯ ಬುಡಕ್ಕೆ ಆಧಾರವಾಗಿ ವೃತ್ತಾಕಾರದಲ್ಲಿ ಕಲ್ಲುಗುಂಡುಗಳನ್ನು ಇಟ್ಟಿರಬಹುದಾಗಿದೆ ಎಂದು ಉತ್ಖನನಕಾರರು ಸಮಂಜಸವಾಗಿ ತರ್ಕಿಸಿದ್ದಾರೆ. ಈ ತರ್ಕ ಸರಿಯಾಗಿದ್ದಲ್ಲಿ ಕರ್ನಾಟಕದಲ್ಲಿ ನಿರ್ಮಿತಗಳ ಸೃಷ್ಟಿಯಲ್ಲಿ ಇದೇ ಅತ್ಯಂತ ಪ್ರಥಮವೆಂದು ಹೇಳಬಹುದು. ಇವುಗಳ ಜೊತೆಗೆ ಕೆಮ್ಮಣ್ಣಿನ ಗಟ್ಟಿಗಳು ಇವೆ. ಇವುಗಳು ಅಲ್ಲಿ ದೊರೆಯುವುದಿಲ್ಲ. ಇವು ದೊರೆಯುವ ಅತ್ಯಂತ ಸಮೀಪ ಪ್ರದೇಶವು ಸುಮಾರು ೨೦ ಕಿ. ಮೀ ದೂರದಲ್ಲಿದೆ. ಆದ್ದರಿಂದ ಪ್ರಾಗ್ ಇತಿಹಾಸ ಮಾನವನು ಅತ್ಯಂತ ಬುದ್ಧಿ ಪೂರ್ವಕವಾಗಿಯೇ ಇವುಗಳನ್ನು ತಂದಿರಬೇಕೆಂದು ಹೇಳಲಾಗಿದೆ. ತಾನು ಸಿದ್ಧ ಮಾಡಿದ ಉಪಕರಣಗಳನ್ನು ಕೆಮ್ಮಣ್ಣು ಬಣ್ಣದಿಂದ ಬಳಿಯುವ ಉದ್ದೇಶವಿದ್ದಿತೇನೋ? ಈ ಪ್ರದೇಶದಲ್ಲಿ ದೊರೆತ ಸಸ್ಯರೇಣುಗಳ ವೈಜ್ಞಾನಿಕ ವಿಶ್ಲೇಷಣೆಗಳಿಂದ ಆ ಕಾಲದ ವಾಯುಗುಣವು ಈಗಿನದಿಕ್ಕಿಂತ ಸ್ವಲ್ಪ ಭಿನ್ನವಾಗಿದ್ದು ಈಗಿನಷ್ಟು ಉಷ್ಣವಾತಾವರಣವಿದ್ದಂತೆ ಕಾಣುವುದಿಲ್ಲ. ಜೊತೆಗೆ ಈ ಪ್ರದೇಶದಲ್ಲಿ ದೊರೆತ ಪ್ರಾಣಿಗಳ ಎಲುಬುಗಳ ಪಳೆಯುಳಿಕೆಗಳು

ದೊರೆತಿವೆ. ಪ್ರಾಗ್ ಇತಿಹಾಸದ ಮಾನವನು ಗೂಳಿ, ಎಮ್ಮೆ ಮೊದಲಾದ ಪ್ರಾಣಿಗಳನ್ನು ತನ್ನ ಆಹಾರಕ್ಕೋಸ್ಕರ ಬೇಟೆಯಾಡುತ್ತಿದ್ದನೆಂದು ಕಾಣುತ್ತದೆ. ಒಟ್ಟಿನಲ್ಲಿ ಕಲ್ಲಿನ ಉಪಕರಣಗಳ ಪ್ರಕಾರಗಳು ಮತ್ತು ಅವುಗಳನ್ನು ತಯಾರಿಸಲು ಉಪಯೋಗಿಸಿದ ತಂತ್ರ ವಿಧಾನಗಳು ಹಾಗೂ ಕಲ್ಲುಗಳ ವಿಷಯಗಳಷ್ಟೇ ಅಲ್ಲದೇ ಈ ಜನರ ಕುತೂಹಲಕಾರಿಯಾದ ಇನ್ನೂ ಎರಡು ಅಂಶಗಳು ತಿಳಿದುಬರುತ್ತವೆ.

ಕೃಷ್ಣಾ ಸೇತುವೆಯ ಬಳಿ, ಮಳಖೇಡ ಹಾಗೂ ಇತರ ನೆಲೆಗಳಲ್ಲಿ ಮಧ್ಯ ಹಳೇ ಶಿಲಾಯುಗದ ಜನರ ಕಲ್ಲಿನ ಉಪಕರಣಗಳು ಮಾತ್ರ ದೊರೆತಿವೆ. ಈ ಕಲ್ಲಿನ ಉಪಕರಣಗಳು ಈಗಿನ ಒಂದು ರೂಪಾಯಿ ನಾಣ್ಯದಷ್ಟು ಸಾಮಾನ್ಯವಾಗಿ ದೊಡ್ಡದಾಗಿವೆ. ಇವುಗಳನ್ನು ಉತ್ತಮ ಜಾತಿಯ ಕಲ್ಲುಗಳಾದ ಹಸಿರು-ಕಗ್ಗೆಂಪಿನ ಜಾಸ್‌ಫರ್ ಚರ್ಟ್ ಕಲ್ಲುಗಳಲ್ಲಿ ಮಾಡಲಾಗಿದೆ. ಇವುಗಳ ಬಾಯಿಯನ್ನು ಅತಿ ಸೂಕ್ಷ್ಮವಾಗಿ ಸಣ್ಣ ಸಣ್ಣ ಚಕ್ಕೆಗಳನ್ನೆಬ್ಬಿಸಿ ಕತ್ತರಿಸಲು ಹೆರೆಯಲು ಪರಿಣಾಮಕಾರಿಯನ್ನಾಗಿ ಮಾಡಿವೆ. ಇವುಗಳನ್ನು ಮಾಡಿದ ತಂತ್ರ ವಿಧಾನಗಳೇ ಬೇರೆ ಬಹು ಮಟ್ಟಿಗೆ ಪರಿಸರವು ಅಂದರೇ ವಾಯುಗುಣ, ಪ್ರಾಣಿ ಮತ್ತು ಸಸ್ಯ ಸಂಪತ್ತು ಇವುಗಳು ತುಂಬಾ ಬದಲಾವಣೆಯಾಗಿರುವುದರಿಂದ ಜನರು ಹಿಂದೆ ಮಾಡುತ್ತಿದ್ದ ಕಲ್ಲಿನ ಉಪಕರಣಗಳು ಮತ್ತು ಅವುಗಳನ್ನು ಮಾಡುವ ತಂತ್ರ ವಿಧಾನಗಳು ಈಗ ಅನುಪಯುಕ್ತವಾಗಿ ಕಂಡು ಬಂದಿರುವುದರಿಂದ ಹಾಗೂ ಹೊಸ ವಾತಾವರಣಕ್ಕೆ ಅನುಕೂಲವಾಗುವಂತೆ ಬೇರೆ ಕಲ್ಲುಗಳನ್ನು ಆಯ್ದುಕೊಂಡು ತಂತ್ರಗಳನ್ನೂ ಕಂಡು ಕೊಳ್ಳಲಾಯಿತು. ಹೊಸ ಮಾದರಿಯ ಉಪಕರಣಗಳನ್ನು ಮಾಡಿಕೊಳ್ಳಲಾಯಿತು. ಈ ಹಂತ ಹಾಗೂ ಇವುಗಳ ಅನಂತರದ ಹಂತಗಳಾದ ಅಂತ್ಯ ಹಳೇ ಶಿಲಾಯುಗಗಳ, ಸೂಕ್ಷ್ಮಶಿಲಾಯುಗದ ಬಗೆಗೆ ಶೋಧನೆಗಳೂ ಹಾಗೂ ಅಧ್ಯಯನಗಳು ಆಗಬೇಕಾಗಿವೆ. ಕೊಡೇಕಲ್ ಮತ್ತು ಬೂದಿಹಾಳ ನಿವೇಶನಗಳ ಉತ್ಖನನಗಳಿಂದ ನೂತನ ಶಿಲಾಯುಗದ ಜೀವನ ಶೈಲಿಯ ಬಗೆಗೆ ಕೆಲವೊಂದು ಸಾಮಾನ್ಯ ಅಂಶಗಳು ತಿಳಿದಿವೆ. ಸಾಮಾನ್ಯವಾಗಿ ನೀರಿನ ಹಳ್ಳಗಳ ದಂಡೆಗಳ ಮೇಲೆ ಇವರ ವಸತಿ ನೆಲೆಗಳಿವೆ. ಬಹುಮಟ್ಟಿಗೆ ವಾಸಕ್ಕೆ ವೃತ್ತಾಕಾರದ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಬೇಟೆಯಾಡುವುದಕ್ಕೆ ಕಾಳುಕಡ್ಡಿಗಳನ್ನು ತಕ್ಕ ಪ್ರಮಾಣದಲ್ಲಿ ಬೆಳೆದುಕೊಳ್ಳುವ ಕೆಲಸಗಳಿಗೆ ಬೇಕಾಗುವ ಉಪಕರಣಗಳನ್ನು ಹೆಚ್ಚಾಗಿ ಕಲ್ಲಿನಲ್ಲಿಯೇ ಮಾಡಿಕೊಳ್ಳುತ್ತಿದ್ದರು. ಈ ಉಪಕರಣಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೇ ತ್ರಿಕೋನಾಕೃತಿಯ ಎರಡು ಬದಿಗಳಲ್ಲಿ ಸ್ವಲ್ಪ ಉಬ್ಬಿದ ಚೂಪು ತುದಿಯ ಹರಿತವಾದ ಅರ್ಧಚಂದ್ರಾಕೃತಿ ಇಲ್ಲವೇ ನೇರವಾದ ಬಾಯಿಯುಳ್ಳ ಕಲ್ಲಿನ ಕೊಡಲಿಯು ಇದ್ದು, ಇದರ ಮೈ ಕಲ್ಲಿನ ಬಂಡೆಯ ಮೇಲೆ ಉಜ್ಜಿದ್ದರಿಂದ ಸಮತರವಾಗಿದೆ. ಬಾಯಿಯ ಭಾಗವನ್ನು ಬುದ್ಧಿಪೂರ್ವಕವಾಗಿ ಚೆನ್ನಾಗಿ ಉಜ್ಜಿರುವುದರಿಂದ ನುಣುಪಾಗಿರುವುದು ಅಷ್ಟೇ ಅಲ್ಲ ಅದಕ್ಕೆ ಹೊಳಪು ಬಂದಿದೆ. ಕೆಲವೊಂದನ್ನು ಇಡಿಯಾಗಿ ಕಲ್ಲಿಗೆ ತಿಕ್ಕಿ ಹೊಳಪು ಬರುವಂತೆ ಮಾಡಲಾಗಿದೆ. ಈ ಕೊಡಲಿಗೆ ಮರದ ಕಾವನ್ನು ಕಟ್ಟಿ ಸಣ್ಣ ಸಣ್ಣ ಮರಗಳನ್ನು ಕಡಿಯಲು ಉಪಯೋಗಿಸಲಾಗುತ್ತಿತ್ತು. ಇವರು ಇನ್ನೊಂದು ಪ್ರಕಾರದ ಕಲ್ಲಿನ ಉಪಕರಣಗಳನ್ನು ಮಾಡಿಕೊಳ್ಳುತ್ತಿದ್ದರು. ಚರ್ಟ್ ಅಥವಾ ಜಾಸ್‌ಫರ್ ಕಲ್ಲುಗಳಿಂದ ಮಾಡಿದ ಒಂದು ವಿಶಿಷ್ಟ ತಂತ್ರದಿಂದ ನೀಳವಾದ ಚಕ್ಕೆಯನ್ನು ಎಬ್ಬಿಸಿ ಅವುಗಳನ್ನು ವಿವಿಧ ರೀತಿಯಲ್ಲಿ ಉಪಯೋಗಿಸಲಾಗುತ್ತಿತ್ತು. ನೇರವಾದ ಒಂದು ಉದ್ದನೇ ಕಟ್ಟಿಗೆ ತುಂಡಿನ ಅರ್ಧಭಾಗದಲ್ಲಿ ಉದ್ದಕ್ಕೂ ಕೊರೆದು ಈ ನೇರ ಚಕ್ಕೆಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಕೊರೆದ ಭಾಗದಲ್ಲಿ ಸೇರಿಸಿ ಗಿಡದ ಅಂಟಿನಿಂದ ಗಟ್ಟಿ ಮಾಡಲಾಗುತ್ತಿತ್ತು. ಇದು ಒಂದು ಚಾಕುವಿನಂತ ಉತ್ತಮ ಸಾಧನ. ಹೀಗೆಯೇ ಜಿಂಕೆಯ ಕೊಂಬಿನ ಒಳಭಾಗದಲ್ಲಿ ಉದ್ದಕ್ಕೆ ಕೊರೆದು ಈ ನೀಳ ಚಕ್ಕೆಗಳನ್ನು ಉದ್ದಕ್ಕೆ ಮಾಡಿ ಆ ತುಂಡುಗಳನ್ನು ಒಂದರ ಪಕ್ಕಕ್ಕೆ ಒಂದರಂತೆ ಸೇರಿಸಿ ಎಥಾಪ್ರಕಾರ ಗಿಡದ ಅಂಟಿನಿಂದ ಗಟ್ಟಿ ಮಾಡಲಾಗುತ್ತಿತ್ತು. ಇದು ಕುಡಗೋಲಿನಂತ ಒಂದು ಉಪಕರಣ. ಇವಲ್ಲದೇ ವೃತ್ತಾಕಾರದ ಚಪ್ಪಟೆಕಲ್ಲಿನಲ್ಲಿ ಎರಡೂ ಬದಿಗಳ ಮಧ್ಯದಲ್ಲಿ ಕೊರೆದು ರಂಧ್ರವನ್ನು ಮಾಡಿ ಆ ರಂಧ್ರದಲ್ಲಿ ಒಂದು ಉದ್ದನೆಯ ಕೋಲನ್ನು ಸಿಗಿಸಲಾಗುತ್ತಿತ್ತು. ಇದನ್ನು ಭೂಮಿಯನ್ನು ಕೊಚ್ಚಲು ಉಪಯೋಗಿಸಲಾಗುತ್ತಿತ್ತು. ಇದನ್ನು ಕೆಲವೊಂದು ಆದಿವಾಸಿಗಳು ಕೃಷಿ ಕೆಲಸಕ್ಕೆ ಉಪಯೋಗಿಸುತ್ತಾರೆ. ಬೇಟೆಯಾಡಲು ದುಂಡಾಕೃತಿಯ ಕಲ್ಲಿನ ಚಂಡನ್ನು ಕವಣಿ ಕಲ್ಲನ್ನಾಗಿ ಉಪಯೋಗಿಸಲಾಗುತ್ತಿತ್ತು, ಹೀಗೆ ಕೆಲವೇ ಪ್ರಾಕಾರದ ಕಲ್ಲಿನ ಉಪಕರಣಗಳನ್ನು ತಮ್ಮ ನಿತ್ಯಕೆಲಸಗಳಿಗೆ ಅಂದರೆ ಕೃಷಿ ಬೇಟೆ ಮರಗೆಲಸಗಳಿಗೆ ಉಪಯೋಗಿಸುತ್ತಿದ್ದರು. ತುಂಬಾ ಅಪರೂಪವಾಗಿ ತಾಮ್ರದ ಚಪ್ಪಟೆಯ ಕೊಡಲಿಗಳನ್ನು ಮಾಡಿಕೊಳ್ಳುತ್ತಿದ್ದರು. ತಿಂಥಣಿ ಪ್ರದೇಶದಲ್ಲಿ ತಾಮ್ರದ ಅದಿರನ್ನು ಸಂಗ್ರಹಿಸಿ ಅದನ್ನು ಲೋಹವನ್ನಾಗಿ ಪರಿವರ್ತಿಸುತ್ತಿದ್ದ ಪ್ರಾಚೀನ ಕುರುಹುಗಳಿವೆ.

ಇವರು ಬೆಳೆದ ಅಥವಾ ಸಂಗ್ರಹಿಸಿದ ದವಸ ದಾನ್ಯಗಳನ್ನು ಶೇಖರಿಸಿಡಲು ವಿವಿಧ ಮಣ್ಣಿನ ಪಾತ್ರೆಗಳನ್ನು ಮಾಡಿಕೊಳ್ಳುತ್ತಿದ್ದರು. ಈ ಪಾತ್ರೆಗಳನ್ನು ಗಟ್ಟಿಮಾಡಲು ಆವಿಗೆಯನ್ನು ಸುಡಲಾಗುತ್ತಿತ್ತು. ಈ ಪಾತ್ರೆಗಳ ಮೇಲೆ ನೇರಳೇ ಬಣ್ಣದ ಅಪರೂಪವಾಗಿ ರೇಖಾ ಚಿತ್ರಗಳಿವೆ. ಈ ಚಿತ್ರಗಳನ್ನು ಮಡಿಕೆಗಳನ್ನು ಸುಡುವ ಪೂರ್ವದಲ್ಲೇ ರಚಿಸಲಾಗುತ್ತಿತ್ತು. ಇದಲ್ಲದೇ ಒಂದು ಚೂಪಾದ ಕಡ್ಡಿಯಿಂದ ಪಾತ್ರೆ ಇನ್ನೂ ಹಸಿಯಿರುವಾಗಲೇ ರೇಖಾ ಚಿತ್ರಗಳನ್ನು ಕೊರೆಯಲಾಗುತ್ತಿತ್ತು. ಮೂರನೆಯದಾಗಿ ದೊಡ್ಡದೊಡ್ಡ ಪಾತ್ರೆಗಳ ಭುಜದ ಮೇಲೆ ಮಣ್ಣಿನ ಸರಮಾಲೆಯನ್ನು ಮಾಡಿ ಅವುಗಳ ಮೇಲೆ ಬೆರಳುಗಳಿಂದ ಒತ್ತಿ ಅವನ್ನು ಮಡಿಕೆಗಳ ಭುಜದ ಮೇಲೆ ಅಂಟಿಸಲಾಗುತ್ತಿತ್ತು. ಹೀಗೆ ತಮ್ಮ ಪಾತ್ರೆಗಳನ್ನು ಕೆಲವೊಂದು ವಿಶಿಷ್ಟ ಕೆಲಸಗಳಿಗೆ ಅಲಂಕರಿಸುತ್ತಿದ್ದರು. ಇವರು ಗೋಧಿ ಜೋಳ, ಮೊದಲಾದ ದವಸಗಳನ್ನು ತಮ್ಮ ಅವಶ್ಯಕತೆಗಳಿಗಿಂತ ಹೆಚ್ಚಾಗಿ ಬೆಳೆಯುತ್ತಿದ್ದರೆಂಬುದಕ್ಕೆ ಇತರೆಡೆಗಳಲ್ಲಿ ಪುರಾವೆಗಳು ದೊರೆತಿವೆ. ದನ, ಎಮ್ಮೆ ಎತ್ತು, ಕುರಿ ಮೊದಲಾದ ಪ್ರಾಣಿಗಳನ್ನು ಸಾಕುತ್ತಿದ್ದರು. ಜಿಂಕೆ, ಮೊಲ ಮೊದಲಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಕಲ್ಲಿನ ಮಣ್ಣಿನ, ಶಂಖದ ಮಣಿಗಳ ಸರಗಳನ್ನು ಬಳೆಗಳನ್ನು ತೊಡುತ್ತಿದ್ದರು. ಇವುಗಳನ್ನು ತಯಾರು ಮಾಡುವ ಒಂದು ಸಣ್ಣ ಕೈಗಾರಿಕೆಯನ್ನೇ ಇವರು ನಡೆಸುತ್ತಿದ್ದರು. ಅಪರೂಪವಾಗಿ ತಾಮ್ರದ ಬಳೆಗಳಿಂದಲೂ ತಮ್ಮನ್ನು ಅಲಂಕರಿಸುತ್ತಿದ್ದರು. ಸತ್ತವರನ್ನು ಸಂಪ್ರಾದಾಯ ರೀತಿಯಲ್ಲಿ ತಮ್ಮ ಸಂಪ್ರದಾಯದಂತೆ ಉತ್ತರಾಭಿಮುಖವಾಗಿಯೇ ಅಥವಾ ಪೂರ್ವಾಭಿಮುಖವಾಗಿ ದೇಹಗಳನ್ನು ಅಥವಾ ಅಸ್ಥಿಗಳನ್ನು ಅಗೆದ ಗುಂಡಿಗಳಲ್ಲಿಟ್ಟು ಆಹಾರ ಮತ್ತು ಅಲಂಕಾರ ವಸ್ತುಗಳೊಡನೆ ಸಂಸ್ಕಾರ ಮಾಡುತ್ತಿದ್ದರೆಂಬುದಕ್ಕೆ ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ) ಪಿಕ್ಕಲಿಹಾಳ (ರಾಯಚೂರು ಜಿಲ್ಲೆ) ಮೊದಲಾದ ಎಡೆಗಳಲ್ಲಿಯ ಉತ್ಖನನಗಳಿಂದ ತಿಳಿದು ಬಂದಿದೆ. ಈ ಜನರ ಇನ್ನೊಂದು ವಿಶಿಷ್ಟ ಚಟುವಟಿಕೆಯಿಂದಲೇ ಕಲ್ಲಾಸರೆಗಳಲ್ಲಿ ಅಥವಾ ಗವಿಗಳಲ್ಲಿ ಕೆಮ್ಮಣ್ಣಿನ ಬಣ್ಣಗಳಲ್ಲಿ ನಾನಾ ರೀತಿಯ ಚಿತ್ರಗಳನ್ನು ಬರೆಯುತ್ತಿದ್ದರು. ಇಂಥಹ ವರ್ಣಚಿತ್ರಗಳುಳ್ಳ ಒಂದು ದೊಡ್ಡ ಕಲ್ಲಾಸರೆಯು ಬಲಚಕ್ರ (ಯಾದಗಿರಿ ತಾಲೂಕು)ದಲ್ಲಿದೆ. ಇಲ್ಲಿಯ ವರ್ಣಚಿತ್ರಗಳು ತುಲನಾತ್ಮಕವಾಗಿ ತುಂಬಾ ಅಪರೂಪದ ಮಾದರಿಯವು. ಹೀಗಾಗಿ ಇವುಗಳ ಕಾಲಮಾನವನ್ನು ನಿರ್ಧರಿಸುವುದು ಸ್ವಲ್ಪ ಕಷ್ಟ.

ಈ ಜನರ ಇನ್ನೊಂದು ವಿಶಿಷ್ಟ ಚಟುವಟಿಕೆಯಂದರೇ ಬಹು ದೊಡ್ಡ ಪ್ರಮಾಣದಲ್ಲಿ ಸಗಣಿಯನ್ನು ರಾಶಿ ಹಾಕಿ ಸುಡುವುದು. ಕಕ್ಕೇರ, ಬೂದಿಹಾಳ ಮೊದಲಾದೆಡೆಗಳಲ್ಲಿಯ ಬೂದಿ ಗುಡ್ಡಗಳು ಹೀಗೆ ಸುಟ್ಟಿದ್ದರಿಂದಲೇ ಆಗಿರುವುದೆಂದೂ ಮತ್ತು ಇವು ಈ ನೂತನ ಶಿಲಾಯುಗದ ಕಾಲದ್ದೆಂದು ವೈಜ್ಞಾನಿಕವಾಗಿ ಸಿದ್ಧವಾಗಿವೆ. ಇವುಗಳನ್ನು ಏತಕ್ಕೋಸ್ಕರ ಹೀಗೆ ಸುಡಲಾಗುತ್ತಿತ್ತೆನ್ನುವುದು ತುಂಬಾ ಜಿಜ್ಞಾಸೆಯಿದೆ. ದನಗಳ ಹಟ್ಟಿಗಳಲ್ಲಿ ಹೀಗೆ ಬಹಳಷ್ಟು ಸಗಣಿ ಶೇಖರಣೆಯಾದ ಮೇಲೆ ತಮ್ಮ ಕಟ್ಟಳೆಯಂತೆ ಇದನ್ನು ಆಗಾಗ್ಗೆ ಸುಡುತ್ತಿದ್ದರೆಂಬುದು ಒಂದು ಅಭಿಪ್ರಾಯ. ಈ ಪದ್ಧತಿಯು ಹೋಳಿ, ದೀಪಾವಳಿಯಲ್ಲಿ ಬೆರಣಿಯನ್ನು (ಕುರುಳ) ಸುಡುವ ಸಂಪ್ರದಾಯದಲ್ಲಿ ಇಂದಿಗೂ ಕಾಣಬಹುದು ಮತ್ತು ಹೀಗೆ ಉಳಿದು ಬಂದಿದೆ ಎಂಬುದು ಇನ್ನೊಂದು ತಜ್ಞವರ್ಗದವರ ಅಭಿಪ್ರಾಯ. ಮತ್ತೆ ಕೆಲವರು, ಕಬ್ಬಿಣದ ಅದಿರನ್ನು ಲೋಹವನ್ನಾಗಿ ಪರಿವರ್ತಿಸುವ ಕುಲುಮೆಗಳಿಗೆ ಉಪಯೋಗಿಸಿ ಸುಟ್ಟ ಬೆರಣಿ(ಕುರುಳ) ಬೂದಿಗುಡ್ಡಗಳೆಂಬುದು ಇನ್ನೊಂದು ಅಭಿಪ್ರಾಯ. ಆದರೆ, ಇತ್ತೀಚೆಗೆ ಈ ಅಭಿಪ್ರಾಯವು ಅಷ್ಟೊಂದು ಸರಿಯಲ್ಲವೆಂದು ಕಾಣುತ್ತದೆ. ಇತ್ತೀಚಿನ ಬೂದಿಹಾಳದಲ್ಲಿಯ ಬೂದಿಗುಡ್ಡಗಳ ಉತ್ಖನನದಿಂದ ಕಂಡುಬಂದ ಫಲಿತಾಂಶವು ಮೊದಲ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತದೆ ಎಂದು ಹೇಳಲಾಗಿದೆ. ಇದರಿಂದ ಸಾಕುಪ್ರಾಣಿ ಹಾಗೂ ಜನರನ್ನು ರಕ್ಷಿಸಿಲು ಪ್ರಾಯಶಃ ಭಯಂಕರವಾದ ಹುಲಿ, ಚಿರತೆ ಮೊದಲಾದ ಪ್ರಾಣಿಗಳನ್ನು ಬೆದರಿಸಲು ಇದು ಅನುಕೂಲವಾಗಿತ್ತೆಂದು ಅಭಿಪ್ರಾಯಪಡಲಾಗಿದೆ. ಬೂದಿ ಹಾಳದಲ್ಲಿ ಇನ್ನೊಂದು ಗಮನಾರ್ಹ ಅಂಶವು ಬೆಳಕಿಗೆ ಬಂದಿದೆ. ಅಲ್ಲಿಯ ಜನರ ವಾಸಸ್ಥಾನದ ಬದಿಯಲ್ಲಿಯೇ ಅವರು ಬೇಟೆಯಾಡಿದ ಅಥವಾ ಸಾಕಿದ ಪ್ರಾಣಿಗಳನ್ನು ತಮ್ಮ ಆಹಾರಕ್ಕೋಸ್ಕರ ಕತ್ತರಿಸಿ ಮಾಂಸವನ್ನು ಸ್ವಚ್ಛಮಾಡುತ್ತಿದ್ದ ಪ್ರತ್ಯೇಕ ಕಸಾಯಿಖಾನೆಗಳ ಕುರುಹುಗಳಿವೆ. ಈ ಜನ ಜೀವನದ ಕಾಲಮಾನವು ಇಂಗಾಲ -೧೪ ಎಂಬ ವೈಜ್ಞಾನಿಕ ತಂತ್ರದಿಂದ ಸುಮಾರು ಕ್ರಿ. ಪೂ. ೨೪೦೦-೧೦೦೦ ದವರೆಗಿನದು ಎಂದು ನಿರ್ಧರಿಸಲಾಗಿದೆ.

ಉಡಚಣದಲ್ಲಿಯ ಶಿಲಾ -ತಾಮ್ರ ಯುಗದ ಸಂಸ್ಕೃತಿಯು ಕೊಡೇಕಲ್ ಬೂದಿಹಾಳ ಪ್ರದೇಶಗಳಲ್ಲಿ ನೂತನ ಶಿಲಾಯುಗದ ಸಂಸ್ಕೃತಿಗಿಂತಲೂ ಸ್ವಲ್ಪ ಮಟ್ಟಿಗೆ ಭಿನ್ನವಾಗಿದೆ. ಈ ಜನರಲ್ಲಿ ಉಜ್ಜಿದ ಕಲ್ಲಿನ ಕೊಡಲಿಗಳಿಗಿಂತ ತಾಮ್ರದ ಚಪ್ಪಟೆಕೊಡಲಿಗಳ ಬಳಕೆ ಹೆಚ್ಚಿತ್ತೆಂದು ತೋರುತ್ತದೆ. ಇವರು ಕೂಡ ವರ್ಣ ಚಿತ್ರಿತ ಮೃತ್‌ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು.

ಆದರೆ ಇವುಗಳಲ್ಲಿ ಕೆಲವು ತುಂಬಾ ವಿಶಿಷ್ಟವಾಗಿದ್ದು ಸುರಪುರ ಸಂಗಮ ಸಂಸ್ಕೃತಿಯದವುಗಳಿಗಿಂತ ಭಿನ್ನವಾಗಿವೆ. ಬಹುಮಟ್ಟಿಗೆ ಈ ಸಂಸ್ಕೃತಿಯು ಭಿನ್ನ ಜನವರ್ಗದ್ದೆಂದು ತಿಳಿಯಬಹುದೇನೋ. ಈ ವಿಶಿಷ್ಟ ಕೇಂದ್ರ ಪ್ರದೇಶವು ಮಹಾರಾಷ್ಟ್ರ ಪ್ರದೇಶದ ಗೋದಾವರಿ ಪ್ರದೇಶವಾಗಿದೆ. ಈ ಜನರು ಕ್ರಮೇಣ ಭೀಮಾನದಿ ಮಾರ್ಗವಾಗಿ ಕೃಷ್ಣಾನದಿ ಪ್ರದೇಶಕ್ಕೆ ಸುಮಾರು ಕ್ರಿ. ಪೂ. ೧೩೦೦-೮೦೦ರ ಸಮಯದಲ್ಲಿ ಬಂದಿರಬಹುದೆಂದು ಅ.ಸುಂದರ ಅವರು ಭೀಮಾನದಿಯ ಪ್ರದೇಶದಲ್ಲಿಯ ತಮ್ಮ ಸಂಶೋಧನೆಗಳಿಂದ ಸಿದ್ಧಪಡಿಸಿದ್ದಾರೆ.

ಜೇವರ್ಗಿ ಅಂದೋಲ, ರಾಜನಕೋಳೂರು, ಹಗರಟಗಿಗಳಲ್ಲಿಯ ಕಬ್ಬಿಣ ಯುಗದ ಬೃಹದ ಶಿಲಾ ಸಂಸ್ಕೃತಿಯ ಕೆಲವೊಂದು ಕಲ್ಗೋರಿಗಳನ್ನು ಮೆಡೋಸ್ ಟೈಲ್ ಅವರು ತುಂಬಾ ಎಚ್ಚರಿಕೆಯಿಂದ ಅಗೆದು ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. ಇಂಥಹ ಕಲ್ಗೋರಿಗಳ ನೆಲೆಗಳು ದಕ್ಷಿಣ ಭಾರತದಲ್ಲೆಲ್ಲಾ (ವಿಧರ್ಭವು ಸೇರಿದಂತೆ) ೨,೦೦೦ ಕ್ಕೂ ಹೆಚ್ಚು ಶೋಧವಾಗಿವೆ. ಈ ಕಲ್ಗೋರಿಗಳು ಆಯಾಯ ಪ್ರದೇಶಗಳಲ್ಲಿ ಭಿನ್ನ ಭಿನ್ನ ಪ್ರಕಾರವಾಗಿವೆ. ಗುಲಬರ್ಗಾ ಪ್ರದೇಶಗಳಲ್ಲಿ ನಾಲ್ಕು ಮುಖ್ಯ ಪ್ರಕಾರಗಳು ಕಂಡು ಬಂದಿವೆ. ಕಲ್ಲುವೃತ್ತಗಳು, ವೃತ್ತಾಕಾರದ ಕಲ್ಲುಗುಡ್ಡೆಗಳು, ಕಂಡಿಕೋಣೆ ಗೋರಿಗಳು, ದಾರಿಸಹಿತ ಕಂಡಿಕೋಣೆ ಗೋರಿಗಳು ಇವೆ. ಮೊದಲ ಎರಡು ಪ್ರಕಾರಗಳು ಜೇವರ್ಗಿ ಆಂದೋಲಗಳಲ್ಲಿವೆ. ಮೂರನೆಯದು ರಾಜನಕೋಳೂರಿನಲ್ಲಿಯೂ ಹಾಗೂ ನಾಲ್ಕನೆಯದು ಹಗರಟಗಿಯಲ್ಲಿಯೂ ಇದೆ. ಮೊದಲನೆಯದು ಹೀಗಿದೆ. ಒಂದು ದೊಡ್ಡ ಆಳದ ಗುಂಡಿಯನ್ನು ತೋಡಿ ತಳದಲ್ಲಿ ದೊಡ್ಡ -ದೊಡ್ಡ ಕಲ್ಲು ಚಪ್ಪಡಿಗಳಿಂದ ಆಯಾತಾಕಾರದ ಪೆಟ್ಟಿಗೆಯನ್ನು ಮಾಡಿ ಅದರ ಒಳಗೂ ಕೆಲವೊಮ್ಮೆ ಹೊರಗೂ ಅಸ್ಥಿ ಅವಶೇಷಗಳನ್ನು ಇರಿಸಿ,ಹೆಚ್ಚಿನ ಮಣ್ಣಿನ ಪಾತ್ರೆಗಳನ್ನು ಕಬ್ಬಿಣದ ಈಟಿ ಮೊದಲಾದ ಶಸ್ತ್ರಗಳನ್ನು ಮೂರು ಕಾಲಿನ ಅಡ್ಡಣಿಗೆ ಚಂಬು (ತಂಬಿಗೆ) ದೀಪದ ಹಣತೆ ಮೊದಲಾದ ವಸ್ತುಗಳನ್ನು ಇಟ್ಟು ಮೊದಲು ಮಣ್ಣಿನಿಂದ ಮುಚ್ಚಿ ಮೇಲೆ ಕಲ್ಲು ತುಂಡುಗಳ ರಾಶಿಯನ್ನು ಹಾಕಿ ಮತ್ತು ಇವುಗಳು ಚದುರದಂತೆ ಸುತ್ತಲೂ ಕಲ್ಲುಗುಂಡುಗಳ ವೃತ್ತವನ್ನು ನಿರ್ಮಿಸುತ್ತಿದ್ದರು. ಅಪರೂಪವಾಗಿ ರಾಶಿಯ ಮಧ್ಯದಲ್ಲಿ ಎರಡು ಉದ್ದನೇ ಕಲ್ಲು ಚಪ್ಪಡಿಗಳನ್ನು ಸ್ವಲ್ಪ ಅಂತರವಿಟ್ಟು ಅಪೂರ್ಣವಾಗಿ ಹೂಳುತ್ತಿದ್ದರು. ಪ್ರಾಯಶಃ ಇದು ಗುಂಡಿಯ ತಳದಲ್ಲಿರುವ ಕಲ್ಗೋರಿಯನ್ನು ಸೂಚಿಸುವುದೇನೋ? ರಾಜನಕೋಳೂರಿನಲ್ಲಿ ಬಹುಮಟ್ಟಿಗೆ ನೆಲದ ಮೇಲೆಯೇ ನಾಲ್ಕು ದೊಡ್ಡ ದೊಡ್ಡ ಚಪ್ಪಡಿಕಲ್ಲುಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಒಂದು ಗೋಡೆಯಂತೆ ಅಡ್ಡಲಾಗಿಟ್ಟು ಒಂದು ಕೋಣೆಯನ್ನು ನಿರ್ಮಿಸುವುದು. ಇದರ ಮೇಲೆ ಅಡ್ಡಲಾಗಿ ಅತಿ ದೊಡ್ಡ ಚಪ್ಪಡಿಯನ್ನು ಮುಚ್ಚುವುದು. ಯಾವುದಾದರೋ ಒಂದು ಬದಿಯ ಕಲ್ಲಿನ ಗೋಡೆಯ ಮಧ್ಯದಲ್ಲಿ ಒಂದು ರಂಧ್ರವನ್ನು ಕೊರೆಯುವುದು. ಈ ರಂಧ್ರದ ಅಕ್ಕಪಕ್ಕದಲ್ಲಿ ಎರಡು-ದೊಡ್ಡ ಚಪ್ಪಡಿಗಳನ್ನಿಟ್ಟು ದಾರಿ ಮಾಡುವುದು. ಕೋಣೆಯ ಹೊರ ಬದಿಯಲ್ಲಿ ಸುತ್ತಲೂ ಮಾಡಿನ ತನಕ ಕಲ್ಲಿನ ತುಂಡುಗಳನ್ನು ರಾಶಿ ಹಾಕುವುದು ಹಾಗೂ ಈ ರಾಶಿಯ ಸುತ್ತಲೂ ಕಲ್ಲು ಚಪ್ಪಡಿಗಳ ಇಲ್ಲವೇ ಗುಂಡುಗಳ ಒಂದು ವೃತ್ತವಿರಬಹುದು. ಹೀಗೆ ಕಲ್ಮನೆಗಳನ್ನು ನಿರ್ಮಿಸಲಾಗುತ್ತಿತ್ತು. ಈ ಕೋಣೆಯ ಒಳಗೆ ಮಾನವನ ಅಸ್ಥಿ ಅವಶೇಷಗಳನ್ನೂ ಮಣ್ಣಿನ ಪಾತ್ರೆಗಳನ್ನೂ ಮತ್ತು ಕಬ್ಬಿಣದ ವಸ್ತುಗಳನ್ನು ಇಡಲಾಗುತ್ತಿತ್ತು. ಕಾಲಾಂತರದಲ್ಲಿ ಈ ಗೋರಿಗಳಲ್ಲಿ ಗುಪ್ತವಾಗಿ ಧನಕನಕಗಳನ್ನು ಇಡಲಾಗಿದೆ. ಎಂಬ ಕುರುಡು ನಂಬಿಕೆಯ ಕಾರಣ ಬಹಳಷ್ಟು ಕಲ್ಮನೆಗಳನ್ನು ಅಗಿದು ಹಾಕಲಾಗಿದೆ. ಆದ್ದರಿಂದ ಈಗ ಈ ಕೋಣೆಗೋರಿಗಳ ಸುತ್ತಲೂ ಕಲ್ಲುಗುಂಡುಗಳ ರಾಶಿ ಇರುವುದಿಲ್ಲ ಹಾಗೂ ದುಸ್ಥಿತಿಯಲ್ಲಿರುತ್ತದೆ. ಈ ಕೋಣೆ ಗೋರಿಗಳಿಗೆ ಕಲ್ಲು ವೃತ್ತಗಳಿಗೆ ಉಪಯೋಗಿಸಿದ ಎಲ್ಲ ಕಲ್ಲುಗಳೂ ನಿಸರ್ಗದಲ್ಲಿ ಸಿಕ್ಕಂತೆಯೇ ಒರಟಾಗಿದ್ದು ಉಳಿಯ ಕೆತ್ತನೆಯ ಕೆಲಸವು ಕಂಡುಬರುವುದಿಲ್ಲ. ಆದರೇ ಹುಣಸಗಿಯಲ್ಲಿ ಇಂಥ ಕಲ್ಗೋರಿಗಳಿದ್ದೂ ಅವೆಲ್ಲವೂ ಹಾಳಾಗಿಹೋಗಿವೆ. ಹಾಗೆ ಹಾಳಾಗಿ ಹೋದ ಒಂದರಲ್ಲಿ ವೃತ್ತದ ಒಂದು ಕಲ್ಲಿನ ಹೊರಬದಿಯನ್ನು ಉಳಿಯಿಂದ ಚೆನ್ನಾಗಿ ಶುದ್ಧಮಾಡಿದ ಲಕ್ಷಣಗಳಿವೆ. ಸಾಮಾನ್ಯವಾಗಿ ಇಂಥ ಗೋರಿಗಳಲ್ಲಿ ಒಬ್ಬ ವ್ಯಕ್ತಿಗಿಂತ ಹೆಚ್ಚಿನ ವ್ಯಕ್ತಿಯ ಅಸ್ಥಿ ಅವಶೇಷಗಳು ವಿಶೇಷವಾಗಿ ತಲೆ ಬುರುಡೆಗಳು ಇವೆ. ಆದ್ದರಿಂದ ಮೊದಲ ಶವವನ್ನು ಪದ್ಧತಿ ಪ್ರಕಾರ ಒಂದು ಕಡೆಗೆ ಹುಗಿಯಲಾಗುತ್ತಿತ್ತು. ಕೆಲವು ಕಾಲದ ನಂತರ ಇಂಥಹ ಒಂದು ಪ್ರಕಾರದ ಕಲ್ಗೋರಿಗಳನ್ನು ನಿರ್ಮಿಸಿ ಮೊದಲನೇ ಗುಂಡಿಯಿಂದ ಲಭ್ಯವಿದ್ದ ಅಸ್ಥಿಗಳನ್ನು ಸಂಗ್ರಹಿಸಿ ಈ ಕಲ್ಗೋರಿಗಳಲ್ಲಿ ಸಂಪ್ರದಾಯದಂತೆ ಎರಡನೇ ಭಾರಿ ಇಡಲಾಗುತ್ತಿತ್ತು. ಇವುಗಳಲ್ಲಿ ದೊರೆತ ಕಬ್ಬಿಣದ ಉಪಕರಣಗಳು ನಾನಾಪ್ರಕಾರಗಳದ್ದಾಗಿವೆ. ಬಲ್ಲೆ, ಕತ್ತಿ, ತ್ರಿಶೂಲ ಮೊದಲಾದ ಶಸ್ತ್ರಗಳು, ಕಬ್ಬಿಣದ ನಾಲಿಗೆಯುಳ್ಳ ಕಂಚಿನ ಸಣ್ಣ ಸಣ್ಣ ಗಂಟೆಗಳು ಹಿಡಿಕೆಯುಳ್ಳ ಬಾದಾಮಿ ಆಕಾರದ ಹಣತೆಗಳು, ಸಣ್ಣಸಣ್ಣ ತಟ್ಟೆಗಳು ಮೊದಲಾದವುಗಳು ಇವೆ. ಆದ್ದರಿಂದ ಬೇಟೆಯಾಡುವುದಲ್ಲದೇ

ಕ್ಷಾತ್ರ ಧರ್ಮವೂ ಆ ಕಾಲದಲ್ಲಿ ಬೆಳೆದಿತ್ತೆಂದೂ ಹೇಳಬಹುದು. ಮತ್ತು ವಿಶಿಷ್ಟ ಧಾರ್ಮಿಕ ಪದ್ಧತಿಗಳು ಬೆಳೆದಿದ್ದವು. ಎನ್ನಬಹುದು. ಬಹುಶಃ ಶೈವಧರ್ಮದ ಪ್ರಾಚೀನ ಉಪಹಂತಗಳಲ್ಲಿ ಒಂದನ್ನು ಇಲ್ಲಿ ಕಾಣಬಹುದೇನೋ ಒಟ್ಟಿನಲ್ಲಿ ಈ ಜನವರ್ಗದವರು ಪೂರ್ವಭಾವಿ ಇತಿಹಾಸದ ಹಂತದಿಂದ ಬಂದ ಪೌರಾಣಿಕ ಧರ್ಮಗಳಲ್ಲಿ ಕೆಲವುದರ ಅನುಯಾಯಿಗಳಾಗಿದ್ದರೆಂದು ತೋರುತ್ತದೆ. ಮುಖ್ಯವಾಗಿ ಈ ಕಲ್ಗೋರಿಗಳ ನಿರ್ಮಿತವು ಕರ್ನಾಟಕ ವಾಸ್ತು ನಿರ್ಮಿತಗಳ ಪ್ರಾಯಶಃ ಬೀಜಾಕ್ಷರಗಳನ್ನು ಈ ನಿರ್ಮಿತಗಳಲ್ಲಿ ಕಾಣಬಹುದು, ಏಕೆಂದರೆ ಈ ನಿರ್ಮಿತಗಳಲ್ಲಿ ವಾಸ್ತು ಕುಶಲತೆಯನ್ನು ಕಾಣಬಹುದಾಗಿದೆ. ದಕ್ಷಿಣ ಭಾರತದ ಎಲ್ಲಾ ಪ್ರಕಾರಗಳ ಕಲ್ಗೋರಿಗಳಲ್ಲಿ ಎರಡು ಪ್ರಮುಖವಾದುವು ಒಂದು ದಾರಿ ಕೋಣೆ ಗೋರಿ, ಮತ್ತೊಂದು ಕಂಡಿಕೋಣೆಗೋರಿ. ಹಗರಟಗಿಯಲ್ಲಿರುವುದು ಇವೆರಡೂ ಲಕ್ಷಣಗಳನ್ನು ಉಳ್ಳದ್ದಾಗಿ ಇವೆರಡೂ ಪ್ರಕಾರಗಳ ಮಧ್ಯದ ಕೊಂಡಿಯಂತಿದೆ ಎಂದು ಅ. ಸುಂದರ ಅವರು ತರ್ಕಿಸಿದ್ದಾರೆ. ಆದ್ದರಿಂದ ಹಗರಟಗಿಯಲ್ಲಿ ಈಗಿರುವ ಒಂದೇ ಒಂದು ಆಗಿದ್ದರೂ ಈ ಕೋಣೆಗೋರಿಗಳ ನಿರ್ಮಾಣದ ಹಂತದಲ್ಲಿ ಒಂದು ಮಹತ್ವದ ಘಟ್ಟವನ್ನು ಸೂಚಿಸುತ್ತದೆ.

ಹೀಗೆ ನಾಗರಿಕತೆಯ ಬೆಳವಣಿಗೆಯಲ್ಲಿ ರಾಜ್ಯಾಡಳಿತ, ಆರ್ಥಿಕ ನಿಯಂತ್ರಣಾ ಬರವಣಿಗೆ ಮತ್ತು ಸಾಹಿತ್ಯಕ್ಕೆ ಎಡೆಮಾಡಿಕೊಡುವ ಇದು ಒಂದು ಪ್ರಮುಖ ಘಟ್ಟವಾಗಿದೆ. ಇದರ ಮುಂದಿನದೇ ಮೌರ್ಯರ ಕಾಲದ ಇತಿಹಾಸ. ಈ ಜನರ ಜೀವನ ಶೈಲಿಯ ಬಗ್ಗೆ ಈ ಪ್ರದೇಶದಿಂದ ಅಷ್ಟಾಗಿ ತಿಳಿದುಬಂದಿಲ್ಲ, ಏಕೆಂದರೆ ಇದಕ್ಕೆ ಹೆಚ್ಚಿನ ಪ್ರಮಾಣದ ಉತ್ಖನನವು ಮಾಡಬೇಕಾಗುತ್ತದೆ. ಆ ಕಾರ್ಯವು ಇಲ್ಲಿ ಆಗಿಲ್ಲ. ಆದರೇ ಕರ್ನಾಟಕ ಇತರೆಡೆಗಳ ಉತ್ಖನನದ ಫಲಿತಾಂಶಗಳಿಂದ ಸ್ಥೂಲ ಜೀವನದ ಚಿತ್ರವನ್ನು ಪುನರ್‌ರಚಿಸಲಾಗಿದೆ. (ಇದರ ವಿವರಗಳನ್ನು ರಾಜ್ಯ ಗ್ಯಾಸೆಟಿಯರ್‌ನ ಭಾಗ - ಒಂದರಲ್ಲಿ ಕೊಡಲಾಗಿದೆ).

## ಮೌರ್ಯರು ಮತ್ತು ಶಾತವಾಹನರು

ಈಗಾಗಲೇ ತಿಳಿದಂತೆ ಗುಲಬರ್ಗಾ ಜಿಲ್ಲೆಯ ದಕ್ಷಿಣಕ್ಕೆ ಒಂದರ ಪಕ್ಕದಲ್ಲೊಂದಿರುವ ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ರಮವಾಗಿ ಕೊಪ್ಪಳ (ಎರಡು), ಮಸ್ಕಿ (ಒಂದು), ನಿಟ್ಟೂರು, ಉದೆಗೊಳಂ (ಎರಡೆರಡು) ಮತ್ತು ಬ್ರಹ್ಮಗಿರಿ, ಸಿದ್ದಾಪುರ, ಜಟ್ಟಿಂಗ ರಾಮೇಶ್ವರ (ಒಂದೊಂದು) ದಲ್ಲಿ ಮೌರ್ಯ ಚಕ್ರವರ್ತಿ ಅಶೋಕನ (ಸು. ಕ್ರಿ.ಪೂ. ೨೭೪-೨೩೩) ಲಘು ಪ್ರಸ್ತದ ಶಾಸನಗಳಿವೆ. ಇವುಗಳು ಈಗಾಗಲೇ ಪ್ರಸಿದ್ಧವಾಗಿವೆ. ಇವುಗಳ ನೆಲೆಗಳ ಆಧಾರದ ಮೇಲೆ ಚಿತ್ರದುರ್ಗ ಜಿಲ್ಲೆಯಲ್ಲಿ ಮೊಳಕಾಲ್ಮೂರು ತಾಲೂಕಿನಲ್ಲಿಯ ಬ್ರಹ್ಮಗಿರಿಯವರೆಗೂ ಅಶೋಕನ ಸಾಮ್ರಾಜ್ಯವು ವಿಸ್ತರಿಸಿತ್ತೆಂದು ಖಚಿತವಾಗಿದೆ. ಇದರೊಳಗೆ ಗುಲಬರ್ಗಾ ಜಿಲ್ಲಾ ಪ್ರದೇಶವೂ ಸೇರಿರುವುದು ಸ್ಪಷ್ಟವಾಗುತ್ತದೆ. ಇಲ್ಲಿಂದ ಆರಂಭವಾಗುತ್ತದೆ ಗುಲಬರ್ಗಾ ಜಿಲ್ಲಾ ಪ್ರದೇಶದ ಇತಿಹಾಸ, ಇದೇ ಸಮಯದಲ್ಲಿ ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯು ಕೊನೆಯ ಭಾಗದಲ್ಲಿತ್ತು.

೧೯೮೯ನೇ ವರ್ಷವು ಗುಲಬರ್ಗಾ ಜಿಲ್ಲೆಯ ಇತಿಹಾಸ ಸಂಶೋಧನೆಯಲ್ಲಿ ಒಂದು ಮಹತ್ವದ ಕಾಲ ಮತ್ತು ಘಟ್ಟ. ಈಗಾಗಲೇ ಶಾತವಾಹನ ಅರಸರ ಕಾಲದ ಬೌದ್ಧ ಸ್ತೂಪ, ಶಿಲ್ಪ ಹಾಗೂ ಶಾಸನಗಳಿಗೆ ಪ್ರಸಿದ್ಧವಾಗಿರುವ ಸನ್ನತಿಯಲ್ಲಿ ಅಶೋಕ ಸಾಮ್ರಾಟನ ಬೃಹತ್ ಬಂಡೆ ಶಾಸನಗಳ ಮಾಲಿಕೆಯಲ್ಲಿ ೧೩ ಹಾಗೂ ೧೪ ಮತ್ತು ಒರಿಸ್ಸಾ (ಕಳಿಂಗ)ದಲ್ಲಿಯ ಧೌಳಿ (ಪುರಿ ಜಿಲ್ಲೆ) ಮತ್ತು ಜೌಗಡ (ಗಂಜಾಂ. ಜಿ.)ದ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳು ಆಕಸ್ಮಿಕವಾಗಿ ಬೆಳಕಿಗೆ ಬಂದವು. ಅಶೋಕನ ಈ ಪ್ರಕಾರದ ಶಾಸನಗಳು ದಖನ್ ಪ್ರಸ್ಥಭೂಮಿಯು ಸೇರಿದಂತೆ ದಕ್ಷಿಣ ಭಾರತದಲ್ಲಿ ಸಿಗುತ್ತಿರುವುದು ಇದೇ ಮೊದಲು. ಆದುದರಿಂದ ಆದಿ ಇತಿಹಾಸ ಕಾಲದ ಅಧ್ಯಯನದಲ್ಲಿ ಈ ಪ್ರದೇಶವು ಈಗ ಪ್ರಮುಖವಾಗಿದೆ. ಈ ಶಾಸನಗಳ ಸಾರಾಂಶವು ಹೀಗಿದೆ.

## ಬೃಹತ್ ಬಂಡೆ ಶಾಸನ ೧೩

ತನ್ನ ಪಟ್ಟಾಭಿಷೇಕವಾಗಿ ಎಂಟು ವರ್ಷದ ನಂತರ, ರಾಜಾ ದೇವಾನಾಂಪ್ರಿಯ, ಪ್ರಿಯದರ್ಶಿಯು ಕಳಿಂಗ ರಾಜ್ಯವನ್ನು ಗೆದ್ದಿದ್ದಾನೆ. ಯುದ್ಧದಲ್ಲಿ ಪುರುಷರು, ಪ್ರಾಣಿಗಳು ಸುಮಾರು ಒಂದು ಲಕ್ಷದಷ್ಟು ಬಂಧನಕ್ಕೊಳಗಾಗಿದ್ದಾರೆ.

ಅನೇಕ ನೂರು ಸಾವಿರದಷ್ಟು ಸತ್ತಿದ್ದಾರೆ. ಇದಕ್ಕೋಸ್ಕರ ರಾಜನು ಅತೀವ ಪಶ್ಚಾತ್ತಾಪ ಪಡುತ್ತಾನೆ. ಇದೊಂದು ಶೋಚನೀಯ ಕಾರ್ಯವೆಂದು ಬಗೆಯುತ್ತಾನೆ. ಆದ್ದರಿಂದ ಇಂದಿನಿಂದ ಮುಂದೆ ಸಾಧು ಕಾರ್ಯಗಳಲ್ಲಿಯೇ ಹೆಚ್ಚಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ.

ಆ ದೇಶದ ಬ್ರಾಹ್ಮಣರು, ಶ್ರಮಣರು ವಿವಿಧ ಪಂಥಗಳ ಅನುಯಾಯಿಗಳು, ಗೃಹಸ್ಥರು ಮೊದಲಾದವರು ತಂದೆ-ತಾಯಿಗಳನ್ನು, ಹಿರಿಯರನ್ನೂ, ಗುರುಗಳನ್ನೂ ಗೌರವ ಭಕ್ತಿಯಿಂದ ನೋಡಿಕೊಳ್ಳುತ್ತಾರೆ. ಸ್ನೇಹಿತರಲ್ಲಿ, ಸಂಬಂಧಿಕರಲ್ಲಿ, ಒತ್ತೆಯಾಳುಗಳಲ್ಲಿ, ಸೇವಕರಲ್ಲಿ ಸೌಜನ್ಯತೆಯಿಂದ ವರ್ತಿಸುತ್ತಾರೆ ಮತ್ತು ತಮಗೆಲ್ಲ ಅನುಕೂಲತೆಗಳಿದ್ದರೂ ಕೂಡ ಪರಿಚಯಸ್ಥರ, ಸ್ನೇಹಿತರ ಮೊದಲಾದವರ ನೋವು, ವಧೆ ಅಥವಾ ದೇಶಭ್ರಷ್ಟರಾಗುವುದು, ತಮ್ಮದೆಂದು ಭಾವಿಸುವರು, ಜನಸಮುದಾಯದಲ್ಲಿ ವ್ಯಕ್ತಿಗಳು ಒಂದಲ್ಲ ಒಂದು ಧಾರ್ಮಿಕ ಪಂಥದವರಾಗಿರುತ್ತಾರೆ. ಕೊಲ್ಲುವುದು, ಸಾವು, ದೇಶಭ್ರಷ್ಟತೆ ಇಂಥವು ನೂರರಲ್ಲಿ, ಸಾವಿರದಲ್ಲಿ ಒಬ್ಬರಿಗಾದರೂ ಆದಲ್ಲಿ ಅದನ್ನು ದೇವಾನಾಂಪ್ರಿಯನು ತುಂಬಾ ಶೋಚನೀಯವೆಂದು ಭಾವಿಸುತ್ತಾನೆ. ಸಾಧ್ಯವಾದಲ್ಲಿ ತಪ್ಪುಗಳನ್ನು ಕ್ಷಮಿಸಬೇಕೆಂದು ಅವನು ಯೋಚಿಸುತ್ತಾನೆ, ತನ್ನ ಹೊಸದಾಗಿ ಗೆದ್ದ ರಾಜ್ಯದಲ್ಲಿಯ ಕಾಡು ಜನಾಂಗದವರಲ್ಲಿ ಹೀಗೆ ಹೃತ್ಪೂರ್ವಕ ವಿನಂತಿ ಮಾಡಿಕೊಳ್ಳುತ್ತಾನೆ ಮತ್ತು ಕಳಕಳಿಯಿಂದ ಹೇಳುತ್ತಾನೆ. ಅವರೆಲ್ಲರನ್ನು ತಾನು ಗೆದ್ದಿದ್ದರೂ ಕೂಡಾ ಮತ್ತು ಅವರನ್ನು ಶಿಕ್ಷಿಸಲು ಸಾಧ್ಯವಿದ್ದರೂ ಕೂಡಾ ಅವರು ಕೆಟ್ಟ ಮಾರ್ಗದಿಂದ ವಿಮುಖರಾಗಿ ಕರ್ತವ್ಯ ನಿಷ್ಠರಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತಾನೆ. ಅವರ ತಪ್ಪುಗಳಿಗೆ ಅವರನ್ನು ಕೊಲ್ಲಬಾರದೆಂಬ ಆಸೆ, ದೇವಾನಾಂಪ್ರಿಯನು ಎಲ್ಲ ಪ್ರಾಣಿಗಳಿಗೂ ನೋವಾಗದಂತೆ ಸಂಯಮದಿಂದ ನಿಷ್ಪಕ್ಷಪಾತದಿಂದ ಒಳ್ಳೆಯದನ್ನೇ ಆಶಿಸುತ್ತಾನೆ. 'ದೇವಾನಾಂಪ್ರಿಯನು ಧರ್ಮವಿಜಯವೇ' ಅತ್ಯಂತ ಶ್ರೇಷ್ಠವೆಂದು ಭಾವಿಸುತ್ತಾನೆ. ಇದನ್ನು ತನ್ನ ರಾಜ್ಯದಲ್ಲೂ ಸಾಧಿಸಿದ್ದಾನೆ ಮತ್ತು ತನ್ನ ರಾಜ್ಯದ ಗಡಿಯಿಂದ ಆಚೆ ೬೦೦ ಯೋಜನಗಳ ದೂರದಲ್ಲಿ ಯವನ ರಾಜ ಅಂತಿಯೋಕ ಮತ್ತು ಅವನ ನೆರೆಹೊರೆಯಲ್ಲಿರುವ ತುರಮಾಯ, ಅಂತಿಕಿಣಿ, ಮಕ, ಅಲಿಕ ಸುಂದರ, ಮೊದಲಾದ ಇವರ ರಾಜ್ಯಗಳಲ್ಲಿಯೂ ಹಾಗೂ ಈ ದೇಶದ ದಕ್ಷಿಣದಲ್ಲಿಯ ಚೋಡ (ಚೋಳ), ಪಾಂಡ್ಯ ಮತ್ತು ದೂರದಲ್ಲಿರುವ ತಾಮ್ರಪರ್ಣಿ (ಶ್ರೀಲಂಕಾ)ದಲ್ಲಿಯೂ ಇದು ಸಾಧನೆಯಾಗುವಂತೆ ಪ್ರಯತ್ನಿಸಿದ್ದಾನೆ. ತನ್ನ ಸಾಮ್ರಾಜ್ಯದಲ್ಲಿರುವ ಯವನರು, ಕಾಂಬೋಜರು, ನಾಭಕರು, ನಾಭಪಂಕ್ತಿಗಳು ಭೋಜರು, ಪೈತ್ರಣಿಕರು, ಆಂಧ್ರರು ಮತ್ತು ಪುಳಿಂದರು ಕೂಡ, ಎಲ್ಲಿ ನನ್ನ ದೂತರು ಹೋಗಲು ಸಾಧ್ಯವಿಲ್ಲವೋ, ಅಲ್ಲಿಯೂ ಇವರು ಇವನ ಘೋಷಣೆಗಳನ್ನು ಕೇಳಿ ಧರ್ಮವನ್ನು ಆಚರಿಸುತ್ತಿದ್ದಾರೆ. ಈ ಧರ್ಮ ಯಾತ್ರೆಯು ಗೆದ್ದವರಲ್ಲಿ ಮತ್ತು ಸೋತವರಲ್ಲಿ ಒಂದು ಸಮಾಧಾನವನ್ನು ತರುತ್ತಿದೆ. ನನ್ನ ಮಕ್ಕಳು, ಮರಿಮಕ್ಕಳೂ ಕೂಡ ಯುದ್ಧವನ್ನು ಯೋಚಿಸಬಾರದೆಂದು ಒಂದು ವೇಳೆ ಯುದ್ಧ ನಡೆದದ್ದೇ ಆದಲ್ಲಿ ಸೋತ ಜನರನ್ನು ತಾಳ್ಮೆಯಿಂದ ಮತ್ತು ಧರ್ಮದಿಂದ ನೋಡಿಕೊಳ್ಳಬೇಕೆಂದು ಈ ಘೋಷಣೆಯನ್ನು ಕಲ್ಲಿನ ಮೇಲೆ ಕೆತ್ತಿಸಲಾಗಿದೆ. ಈ ರೀತಿಯ ಪ್ರಯತ್ನವು ಈ ಲೋಕದಲ್ಲಿಯೂ ಮುಂದಿನ ಲೋಕದಲ್ಲಿಯೂ ಸುಖವನ್ನು ತರುತ್ತದೆ. ಪ್ರತಿಯೊಂದು ಸುಖ ಸಂತೋಷಗಳಲ್ಲಿಯೂ ಧರ್ಮವಿರಲಿ.

೧೪ನೇ ಶಾಸನದಲ್ಲಿ ಅಂತಹ ಗಮನಾರ್ಹವಾದ ವಿಷಯವೇನೂ ಇಲ್ಲ. ಕಳಿಂಗದ ಶಾಸನಗಳಲ್ಲಿ ವಿಷಯವು ಇಂತಿದೆ. ನ್ಯಾಯಾಂಗದ ಅಧಿಕಾರಿಗಳಾದ ತೊಗಲಿಯ ಮಹಾಮಾತ್ರರಿಗೆ ದೇವಾನಾಂಪ್ರಿಯನು ಈ ರೀತಿ ತಿಳಿಸುತ್ತಾನೆ. ಸರಿಯಾದ ಮಾರ್ಗದಲ್ಲಿ ಕಾರ್ಯದ ಮೂಲಕ ಒಳ್ಳೆಯದನ್ನು ಮಾಡಲು ಇಚ್ಛಿಸುತ್ತಾನೆ. ಅವರನ್ನು ಸಾವಿರಾರು ಜನರ ಮೇಲೆ ಅವರ ಪ್ರೀತಿಯನ್ನು ಸಂಪಾದಿಸಲು ನೇಮಿಸಿದ್ದಾನೆ.

'ಎಲ್ಲ ಪ್ರಜೆಗಳೂ ಅವನ ಮಕ್ಕಳಂತೆ' ("ಸವೆ ಮುನಿಸೆ ಪಜಾಮಮ ಸರ್ವ ಮನುಷ್ಯಃ ಪ್ರಜಾಮಮ") ಅವನ ಮಕ್ಕಳಿಗೆ ದೊರೆಯುವಂತೆ ಅವರಿಗೆ ಎಲ್ಲ ವಿಧದ ಹಿತ ಸುಖ ಈ ಲೋಕದಲ್ಲಿ ಮತ್ತು ಪರ ಲೋಕದಲ್ಲಿ ಸಿಗುವಂತಾಗಬೇಕು, ಅವನ ಆಸೆ ಎಷ್ಟರ ಮಟ್ಟಿಗೆ ಇದೆ ಎಂದು ಅಧಿಕಾರಿಗಳಿಗೆ ತಿಳಿಯದೇ ಹೋಗಬಹುದು, ಅವರು ಎಷ್ಟೇ ಉತ್ತಮ ಸ್ಥಾನದಲ್ಲಿರಬಹುದು. ಆದರೆ ಅವರು ಈ ವಿಷಯಗಳಿಗೆ ಗಮನವನ್ನು ಕೊಡಲೇಬೇಕು. ಕೆಲವು ವೇಳೆ ನ್ಯಾಯ ತೀರ್ಮಾನದಲ್ಲಿ ಕೆಲವರಿಗೆ ಕಠಿಣ ಶಿಕ್ಷೆ, ಕಾರಾಗೃಹ ವಾಸವಾಗಬಹುದು ಮತ್ತೆ ಕೆಲವರಿಗೆ ಕಾರಾಗೃಹ ಶಿಕ್ಷೆಯನ್ನು ರದ್ದು ಮಾಡಬಹುದು ಮತ್ತೆ ಕೆಲವರಿಗೆ ಬಹಳ ಸಮಯದವರೆಗೂ ಶಿಕ್ಷೆ ಮುಂದುವರಿಯಬಹುದು. ನ್ಯಾಯಮೂರ್ತಿಗಳು ನಿಷ್ಪಕ್ಷಪಾತವಾಗಿ ಇವೆಲ್ಲವೂ ಆಗುವಂತೆ ಯೋಚಿಸಬೇಕು. ಕೆಲವೊಂದು ವೇಳೆ ಒಬ್ಬ ಅಧಿಕಾರಿಯು ಹೊಟ್ಟೆಕಿಚ್ಚು, ಸಿಟ್ಟು, ಕ್ರೂರತನ,

ಅವಸರ, ಅಸಹನೆ, ಸೋಮಾರಿತನ, ಬಳಲಿಕೆಯಿಂದ ನಿಷ್ಪಕ್ಷಪಾತವಾಗಿ ತನ್ನ ಕರ್ತವ್ಯವನ್ನು ಮಾಡಲಾಗದಿರಬಹುದು. ಆದ್ದರಿಂದ ಇಂಥವುಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕು. ನ್ಯಾಯ ತೀರ್ಮಾನದಲ್ಲಿ ದುಡುಕು, ಕೋಪವಿರಬಾರದು. ಬೇರೆ ವಿಷಯಗಳಿಂದ ಪ್ರಭಾವಿತರಾಗಬಾರದು. ಇವು ರಾಜನ ಆಜ್ಞೆ.ಇವುಗಳನ್ನು ಪಾಲಿಸುವುದರಿಂದ ಒಳ್ಳೆಯ ಫಲಿತಾಂಶಗಳು ಸಿಗುತ್ತವೆ. ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸಿದಲ್ಲಿ ಅವರಿಗೂ ಸ್ವರ್ಗಸುಖ ಉಂಟಾಗುತ್ತದೆ. ಮತ್ತು ರಾಜ ಋಣವನ್ನು ತೀರಿಸಿದಂತಾಗುತ್ತದೆ. ಅರಸನ ಆಜ್ಞೆಯನ್ನು ಪುಷ್ಯ (ಇದು ಬಹುಶಃ ಅಶೋಕನ ಜನ್ಮ ನಕ್ಷತ್ರವಿರಬೇಕು) ನಕ್ಷತ್ರದಂದು ಘೋಷಿಸಬೇಕು ಮತ್ತು ಓದಬೇಕು. ಇದರಿಂದ ಅವರಿಗೆ ಘೋಷಣೆಗಳು ಮತ್ತೆ ಮತ್ತೆ ನೆನಪಿಗೆ ಬಂದು ಸರಿಯಾಗಿ ನಡೆದುಕೊಳ್ಳಲು ಅನುಕೂಲವಾಗುವುದು. ಆದ್ದರಿಂದ ರಾಜನ ಮಹಾಮಾತ್ರರು ತೀರ ಕಠೋರ ಅಥವಾ ಕಠಿಣವಾಗಿ ಜನರನ್ನು ಅನಾವಶ್ಯಕವಾಗಿ ಕಾರಾಗೃಹಕ್ಕೆ ತಳ್ಳುವುದಾಗಲಿ ಅಥವಾ ಕಿರುಕುಳ ಕೊಡಬಾರದು. ಮಹಾಮಾತ್ರರು ಮೊದಲು ಐದು ವರ್ಷಕ್ಕೊಮ್ಮೆ ಅನಂತರ ಪ್ರತಿ ವರ್ಷಕ್ಕೊಮ್ಮೆ (ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ) ಎಲ್ಲೆಡೆಯಲ್ಲಿ ಪ್ರವಾಸ ಹೋಗಿ ರಾಜನ ಧ್ಯೇಯಗಳು ಈಡೇರುವಂತೆ ಮಾಡಬೇಕು.

ಕಳಿಂಗ ಶಾಸನಗಳ ಪ್ರತಿಗಳು ಈ ಪ್ರದೇಶದಲ್ಲಿ ದೊರಕಿರುವುದು ಕುತೂಹಲಕಾರಿಯಾಗಿದೆ. ಇದುವರೆಗೆ ತಿಳಿದ ಮಟ್ಟಿಗೆ, ಮೌರ್ಯ ಅರಸು ಮನೆತನದ ಅಶೋಕನು ಸಾಮ್ರಾಟನಾದನಂತರ ಅವನು ಒಂದು ದೇಶದ ಮೇಲೆ ಯುದ್ಧ ಮಾಡಿದುದು ಒಂದೇ ಒಂದು. ಅದು ಕಳಿಂಗ ಯುದ್ಧ. ಆ ಯುದ್ಧದಲ್ಲಿ ಆದ ವರ್ಣಿಸಲಾಗದ ರಕ್ತಪಾತ, ಸಾವು ನೋವುಗಳು ಅಸಂಖ್ಯಾತ ಮಕ್ಕಳು, ಸ್ತ್ರೀಯರು ನಿರ್ಗತಿಕರಾದುದನ್ನು ನೋಡಿ ಸಾಮ್ರಾಟನು ತನ್ನ ಅಗಾಧ ತಪ್ಪಿನ ಅರಿವಾಗಿ ಪಶ್ಚಾತ್ತಾಪದಿಂದ ಬೆಂದು ಹೋಗಿ - ಅಂದಿನಿಂದ ಮುಂದೆ ಎಂದೂ ಇಂಥ 'ವಿಜಯ ಯಾತ್ರೆ'ಯನ್ನು ಮಾಡುವುದಿಲ್ಲವೆಂದು, ಅದರ ಬದಲು ತನ್ನ ದೇಶದ ಪ್ರಜೆಗಳ ಉನ್ನತಿಗೋಸ್ಕರ ಸಾಮ್ರಾಜ್ಯದಲ್ಲೆ ಧರ್ಮ ನೀತಿ ಪ್ರಚಾರ ಮಾಡುತ್ತ 'ಧರ್ಮ ಯಾತ್ರೆ'ಯನ್ನು ಮಾಡುವುದಾಗಿ ಪಣ ತೊಟ್ಟನು. ನೋವಿನಿಂದ ಬಳಲಿದ ಅನಾಥ ಜನರಿಗೆ ಸಾಂತ್ವನವನ್ನು ಹೇಳಿದನು. ಇವೆಲ್ಲ ವಿಷಯವನ್ನೊಳಗೊಂಡ ಎರಡು ಶಾಸನಗಳನ್ನು ಸನ್ನತಿಯಲ್ಲಿ ನೆಡಸಿದನು.

ಈ ಹಿನ್ನೆಲೆಯಲ್ಲಿ ಮತ್ತು ಈ ಅರಸನ ಅಜ್ಜ ಚಂದ್ರಗುಪ್ತ ಮೌರ್ಯನ ಕಾಲದಲ್ಲಿಯೇ ಅಥವಾ ಇನ್ನೂ ಮುಂಚೆ ನಂದರ ಆಡಳಿತ ಕಾಲದಲ್ಲಿಯೆ ಈ ಭಾಗ ಅವನ ರಾಜ್ಯಕ್ಕೆ ಸೇರಿತ್ತೆಂಬ, ಮಧ್ಯಯುಗೀನ ಕೆಲವೊಂದು ಕನ್ನಡ ಶಾಸನಗಳ ಸಾಹಿತ್ಯದ ಉಲ್ಲೇಖಗಳ ಆಧಾರದ ಮೇಲೆ, ಬಲವಾದ ಅಭಿಪ್ರಾಯವಿದೆ. ಈಗ ತಿಳಿದಂತೆ ಅಶೋಕ ಸಾಮ್ರಾಟನ ಕಳಿಂಗ ಯುದ್ಧವು ಮೊದಲನೆಯ ಮತ್ತು ಕೊನೆಯದಾಗಿದ್ದರೆ ಸನ್ನತಿಯಲ್ಲಿ ಕಳಿಂಗ ಶಾಸನಗಳ ಪ್ರತಿಗಳನ್ನಿರಿಸುವ ಅವಶ್ಯಕತೆಯೇನಿತ್ತು? ಈ ಪ್ರಶ್ನೆಯ ಪ್ರಚಲಿತ ಅಭಿಪ್ರಾಯವನ್ನು ಮತ್ತೆ ಈಗಿನ ಪ್ರಮಾಣಗಳಿಂದಲೂ ವಿಮರ್ಶಿಸಬೇಕಾಗುತ್ತದೆ. ಪ್ರಾಯಶಃ ಸನ್ನತಿಯೂ ಸೇರಿದಂತೆ ಚಿತ್ರದುರ್ಗದವರೆಗಿನ ಭಾಗವನ್ನು ಅಶೋಕನೇ ಗೆದ್ದುಕೊಂಡಿರಬಹುದು.

ಈಗ ತಿಳಿದ ಮಟ್ಟಿಗೆ ಕಳಿಂಗ ಯುದ್ಧವು ಎರಡನೆಯದಾಗಿದ್ದು ಇದರಲ್ಲಿ ಅವನ ಮನಸ್ಸು ಪರಿವರ್ತನೆಯಾಗಿ, ತಾನು ಗೆದ್ದ ಪ್ರದೇಶದಲ್ಲಿಯ ದುಃಖಿತ ಜನರಿಗೆ ತನ್ನ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ, ಅವರಿಗೆ ಸಾಂತ್ವನವನ್ನು ಹೇಳಿ ಅವರನ್ನು ತನ್ನ ಮಕ್ಕಳೋಪಾದಿಯಲ್ಲಿ ರಕ್ಷಿಸುವ ಭರವಸೆಯನ್ನು ಕೊಡುವ ಈ ಶಾಸನಗಳನ್ನು ತಾನು ಗೆದ್ದ ಪ್ರದೇಶಗಳಲ್ಲೆಲ್ಲಾ ಹಾಕಿಸಿದನೆಂಬ ಅಭಿಪ್ರಾಯಕ್ಕೂ ಎಡೆ ಮಾಡಿಕೊಡುತ್ತದೆ. ಈ ವಿಷಯದಲ್ಲಿ ಗಂಭೀರವಾದ ಅಧ್ಯಯನವು ಆಗಬೇಕಾಗಿದೆ.

ಸದ್ಯಕ್ಕೆ ಸನ್ನತಿಯು ಅಶೋಕನ ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿಯ ಒಂದು ಪ್ರಮುಖ ಪಟ್ಟಣವಾಗಿದ್ದಿತ್ತೆಂಬುದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ ಪ್ರಮುಖ ಆಡಳಿತ ಕೇಂದ್ರವೂ ಆಗಿದ್ದಿರಬಹುದು. ಮೇಲೆ ಹೇಳಿದಂತೆ ಈ ನೆಲೆಯಲ್ಲಿ ಕರ್ನಾಟಕ ಹಾಗೂ ಕೇಂದ್ರ ಸರ್ಕಾರಗಳ ಪುರಾತತ್ವ ಇಲಾಖೆಗಳು ೧೯೮೬ರಿಂದ ಉತ್ಖನನಗಳನ್ನು ನಡೆಸಿದರು ಮತ್ತು ಈ ನೆಲೆಯಲ್ಲಿ ೭೦ಕ್ಕೂ ಹೆಚ್ಚು ಪ್ರಾಕೃತ ಭಾಷೆ ಮತ್ತು ಬ್ರಾಹ್ಮಿ ಲಿಪಿಯ ಶಾಸನಗಳು, ನೂರಾರು ಶಿಲ್ಪಾವಶೇಷಗಳು ದೊರೆತಿವೆ. ಒಂದು ಸಂಸ್ಕೃತ ಭಾಷೆಯಲ್ಲಿಯ ಶಾಸನವೂ ಸಿಕ್ಕಿದೆ. ಇವೆಲ್ಲವೂ ಸು.ಕ್ರಿ.ಪೂ. ೧ನೇ ಶತಮಾನದಿಂದ ಕ್ರಿ.ಶ. ೨ನೇ ಶತಮಾನದವರೆಗಿನವು.

ಉತ್ಖನನದಲ್ಲಿ ಅಪರೂಪವಾದ ಹಾಗೂ ವಿರಳವಾಗಿ ಮೌರ್ಯ ಕಾಲದ ಒಂದು ಸಚಿತ್ರ ವೃತ್ತ ಶಿಲಾಫಲಕವೂ ಮತ್ತು ಝುಗಝುಗಿಸುವ ಕಪ್ಪು ಲೇಪವುಳ್ಳ ಮೃತ್* ಪಾತ್ರೆಗಳ ಅವಶೇಷಗಳೂ ದೊರೆತಿವೆ.

ಉತ್ತರ ಕರ್ನಾಟಕವೂ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದರೂ ಕೂಡ ಮೌರ್ಯ ಕಾಲದ್ದೆಂದು ಖಚಿತವಾಗಿ ಹೇಳಬಹುದು. ಯಾವುದೇ ಪ್ರಕಾರದ ಶಾಸನಗಳು ಹೊರತಾಗಿ, ವಸ್ತು ಅವಶೇಷಗಳು ದೊರೆತಿರಲಿಲ್ಲ. ಆದ್ದರಿಂದ ಸನ್ನತಿಯಲ್ಲಿ ದೊರೆತ ಮೌರ್ಯರ ಕಾಲದ ಪ್ರಮಾಣಗಳು ಅತ್ಯಂತ ಮಹತ್ವದ್ದು. ಪ್ರಾಯಶಃ ಸನ್ನತಿಯಲ್ಲಿ ಮೌರ್ಯ ಸಾಮ್ರಾಜ್ಯದ ಒಬ್ಬ ಉನ್ನತ ಆಡಳಿತಾಧಿಕಾರಿ ಇದ್ದಿರಬೇಕೆಂದು ಕಾಣುತ್ತದೆ. ಮತ್ತು ಆ ಕಾಲದಿಂದಲೇ ಈ ಪ್ರದೇಶದಲ್ಲಿ ಬೌದ್ಧ ಧರ್ಮ ಪ್ರಚಾರವಾಗಿದ್ದಿರಬಹುದು.

ಸನ್ನತಿಯಲ್ಲಿ ಶಾತವಾಹನ ಅರಸರ ಕಾಲದ ಮೇಲೆ ಹೇಳಿದ ಅವಶೇಷಗಳು ತುಂಬಾ ಇವೆ. ಉತ್ಖನನದಲ್ಲಿಯೂ ಕೂಡಾ ಸುಮಾರು ಎರಡು ಮೀಟರ್‌ನಷ್ಟು ಆಳದ ಶಾತವಾಹನರ ಕಾಲದ ಜನವಸತಿಯ ವಸ್ತು ಅವಶೇಷಗಳಿವೆ. ಮತ್ತು ಇಡೀ ನೆಲೆಯ ಸುತ್ತ ಆ ಕಾಲದ ಇಟ್ಟಿಗೆ ರಕ್ಷಣಾ ಗೋಡೆ ಇದೆ. ಪ್ರಾಯಶಃ ಮೂಲದಲ್ಲಿ ಇದು ಮೌರ್ಯರ ಕಾಲದಲ್ಲಿ ಆರಂಭವಾಗಿ ಶಾತವಾಹನರ ಕಾಲದಲ್ಲಿ ವಿಸ್ತಾರವಾಯಿತೆಂದು ಕಾಣುತ್ತದೆ. ಕೋಟೆಯ ಭಾಗದ ಉತ್ಖನನದಿಂದ ಇದನ್ನು ತಿಳಿಯಲು ಸಾಧ್ಯ ಮತ್ತು ಕೋಟೆಯೊಳಗಿನ ನೆಲೆಯಲ್ಲಿ ಆ ಕಾಲದ ನಗರವಿದ್ದ ಕುರುಹುಗಳಿವೆ. ಉತ್ಖನನದಲ್ಲಿ ನದಿಯ ದಂಡೆಯ ಮೇಲಿದ್ದ ಒಂದು ಉಗ್ರಾಣವೆನ್ನಬಹುದಾದ ಇಟ್ಟಿಗೆಯ ಕಟ್ಟಡವು ಬೆಳಕಿಗೆ ಬಂದಿದೆ. ರಕ್ಷಣಾ ಗೋಡೆಯ ಹೊರಗಡೆ ಸ್ವಲ್ಪ ದೂರದಲ್ಲಿ ಬೌದ್ಧ ಸ್ತೂಪಗಳಿದ್ದವು. ಇವೆಲ್ಲವೂ ಹಾಳಾಗಿ ಹೋಗಿವೆ. ಸ್ತೂಪದ ಮೈಮೇಲಿನ ಅಲಂಕೃತ ಫಲಕಗಳು ಕೂಡಾ ಇಲ್ಲಿವೆ. ಇವುಗಳಲ್ಲಿ ದೊಡ್ಡದ್ದನ್ನು ಉತ್ಖನನ ಮಾಡಲಾಗಿ ಅದರಲ್ಲಿ ಸ್ತೂಪ ಇಟ್ಟಿಗೆ ತಳಪಾಯವು ತುಕ್ಕು ಹಿಡಿದ ತಾಮ್ರದ ನಾಣ್ಯಗಳು ಅಲ್ಪಸ್ವಲ್ಪ ಮಡಿಕೆ ಚೂರುಗಳು ಮಾತ್ರ ದೊರಿತಿವೆ. ಇದರ ಸಮೀಪದಲ್ಲಿಯೇ ಕಣಗಿನಹಾಳ ಎಂಬಲ್ಲಿ ಸ್ತೂಪದ ಶಿಲಾತಳಪಾಯವು ಕಾಣಿಸುತ್ತಿತ್ತು.* ಇತ್ತೀಚೆಗೆ ಅಣಬಿ (ಸುರಪುರ ತಾ.), ಜೇವರ್ಗಿ ಹಸರಗುಂಡಗಿ ಮೊದಲಾದೆಡೆಗಳಲ್ಲಿ, ಶಾತವಾಹನ ಕಾಲದ ಶಾಸನ ಸಹಿತ ಸ್ಮಾರಕ ಶಿಲೆಗಳು ಶೋಧವಾಗಿವೆ.

ಶಾಸನಗಳಲ್ಲಿ ನಾಲ್ಕು ನೇರವಾಗಿ ಶಾತವಾಹನ ಅರಸರಿಗೆ ಸಂಬಂಧಪಟ್ಟವು. ಈ ಅರಸು ಮನೆತನದಲ್ಲಿ ಪ್ರಸಿದ್ಧರಾದ ಗೌತಮಿ ಪುತ್ರ ಶಾತಕರ್ಣಿ ಮತ್ತು ವಾಸಿಷ್ಠಿ ಪುತ್ರ ಪುಳುಮಾವಿ ಇವರನ್ನು ಉಲ್ಲೇಖಿಸುತ್ತವೆ. ಬಹುಶಃ ಈ ಪ್ರದೇಶವು ನೇರವಾಗಿ ಅವರ ಆಡಳಿತಕ್ಕೆ ಒಳಪಟ್ಟಿತ್ತೆಂದು ಕಾಣುತ್ತದೆ. ಮತ್ತು ಈ ಸ್ಥಳವು ಅವರ ಕಾಲದಲ್ಲಿಯೂ ಒಂದು ಪ್ರಮುಖ ಪಟ್ಟಣವಾಗಿತ್ತು. ಶಾಸನವುಳ್ಳ ಫಲಕಗಳಲ್ಲಿ ವಾಸಿಷ್ಠಿ ಪುತ್ರ ಪುಲುಮಾವಿ ಕಾಲದ ಶಾಸನವುಳ್ಳ ಒಂದು ಶಿಲಾ ಫಲಕವು ಮಹತ್ವದ್ದಾಗಿದೆ. ಇದರಲ್ಲಿ ಒಬ್ಬ ರಾಜನು ಮಂಚದ ಮೇಲೆ ಮಲಗಿದ್ದು ಶೋಕತಪ್ತರಾದ ಅರಮನೆ ಸ್ತ್ರೀಯರು ಮತ್ತು ಇತರರು ನಾನಾ ಭಂಗಿಯಲ್ಲಿ ಸುತ್ತಲೂ ಕುಳಿತಿದ್ದಾರೆ. ಇದು ಬಹುಶಃ ವಾಸಿಷ್ಠಿ ಪುತ್ರ ಪುಳುಮಾವಿಯ ತಂದೆಯಾದ ಗೌತಮಿ ಪುತ್ರ ಶಾತಕರ್ಣಿಯ ಮರಣವನ್ನು ಸೂಚಿಸುತ್ತದೆ ಎಂದು ತೋರುತ್ತದೆ. ಶಾಸನದಲ್ಲಿ ಈ ಅರಸನ ವಿಜಯಯಾತ್ರೆ ಎಂದು ಸಂಕ್ಷಿಪ್ತವಾಗಿ ನಿರೂಪಿಸಿದೆ. ನಾಸಿಕದಲ್ಲಿಯ (ಮಹಾರಾಷ್ಟ್ರ) ಈ ಅರಸನ ಇದೇ ತರಹದ ಒಂದು ಶಾಸನವನ್ನು ನೆನಪಿಗೆ ತರುತ್ತದೆ. ದೃಶ್ಯಾವಳಿಯು ಕೂಡ ದುಃಖತಪ್ತ ಶಿಷ್ಯರಿಂದ ಸುತ್ತುವರೆಯಲ್ಪಟ್ಟ ನಿರ್ವಾಣವೊಂದರ ಬುದ್ಧನ ಶಿಲ್ಪವೊಂದನ್ನು ತಟ್ಟನೆ ನೆನಪಿಗೆ ತರುತ್ತದೆ.

---

* ಇಂಥ ವಿಶಿಷ್ಯ ಪಾತ್ರೆಗಳನ್ನು ಔತ್ತರೇಯ ಹೊಳಪಿನ ಮೃತ್ ಪಾತ್ರೆಗಳೆಂದು (Northern black polished pottery = NBP) ಪುರಾತತ್ವ ಅಧ್ಯಯನದಲ್ಲಿ ವರ್ಣಿಸಲಾಗಿದೆ. ಸುಮಾರು ೧೯೭೫ರ ತನಕವೂ ಈ ವಿಶೇಷ ಪಾತ್ರೆಯೂ ಉತ್ತರ ಭಾರತದ ಗಂಗಾನದಿ ಬಯಲಿನಲ್ಲಿ ಮೌರ್ಯ ಪೂರ್ವ ಮೌರ್ಯ ಕಾಲದ (ಸು. ೬೦೦-೩೦೦ ಕ್ರಿ.ಪೂ.) ಮಾತ್ರ ಬಳಕೆಯಲ್ಲಿದ್ದಲ್ಲಿ ಉತ್ಖನನದಿಂದ ತಿಳಿದು ಬಂದಿದ್ದುದರಿಂದ ದಕ್ಷಿಣದ ಬೃಹತ್ ಶಿಲಾ ಸಂಸ್ಕೃತಿಯ ಕಪ್ಪು ವರ್ಣದ ಹೊಳಪಿನ ಪಾತ್ರೆಗಳಿಂದ ಭಿನ್ನವಾಗಿದ್ದ ಗಂಗಾ ಬಯಲಿನಲ್ಲಿ ಈ ವಿಶಿಷ್ಟ ಪಾತ್ರೆಯನ್ನು ಔತ್ತರೇಯ ತೇಜೋಮಯ ಪಾತ್ರೆ ಎಂದು ಕರೆದದ್ದು ಉಚಿತವಾಗಿತ್ತು. ಆದರೆ ಇಂಥ ಪಾತ್ರೆಗಳು ಇತ್ತೀಚಿನ ಉತ್ಖನನಗಳಲ್ಲಿ ಸನ್ನತಿಯು ಸೇರಿದಂತೆ ಅಮರಾವತಿ ಮತ್ತು ಅತ್ಯಂತ ದಕ್ಷಿಣಕ್ಕಿರುವ ಶ್ರೀಲಂಕಾ ದ್ವೀಪದ ಅಮರಾಪುರದಲ್ಲಿಯೂ ಇವೆ. ಆದ್ದರಿಂದ ಈ ವಿಶಿಷ್ಟ ಪಾತ್ರೆಯಲ್ಲಿಯೂ (Northern black polished pottery) ಅಥವಾ ಔತ್ತರೇಯ ತೇಜೋಮಯ ಪಾತ್ರೆ ಎಂದು ಕರೆಯುವುದರಲ್ಲಿ ಔಚಿತ್ಯವಿದೆಯೆಂದು ಪ್ರಶ್ನೆ ಎದ್ದಿದೆ.

* ಈ ಸ್ತೂಪವಿರುವ ನಿವೇಶನವನ್ನು ಕೇಂದ್ರ ಪುರಾತತ್ವ ಇಲಾಖೆಯು ಇತ್ತೀಚಿಗೆ ಉತ್ಖನನ ಮಾಡಿದ್ದು, ಶಾತವಾಹನರ ಕಾಲದ ಹಲವು ಅಪರೂಪ ಶಿಲ್ಪ ಸಂಪತ್ತು ಹಾಗೂ ವಾಸ್ತುಕಲೆ  ಬೆಳಕಿಗೆ ಬಂದಿವೆ.

ಇಲ್ಲಿಯ ಶಿಲ್ಪಾವಶೇಷಗಳನ್ನು ವರ್ಗಗಳಾಗಿ ಮಾಡಬಹುದು. ಬೌದ್ಧ, ಜನಪ್ರಿಯ ಕಟ್ಟು ಕಟ್ಟಳೆಯ ಮತ್ತು ಲೌಕಿಕ ಮೊದಲನೆ ವರ್ಗದ ಶಿಲ್ಪಗಳಲ್ಲಿ ಜೋಡಿ ಬುದ್ಧ ಪಾದ, ಪಾದ ಸಹಿತ, ವಜ್ರಾಸನ, ಮುಚಲಿಂದನಾಗ ಮೊದಲಾದವು. ಯಕ್ಷ ಮೊದಲಾದ ಶಿಲ್ಪಿಗಳು ಜನ ಸಾಮಾನ್ಯರ ಕಟ್ಟು ಕಟ್ಟಳೆಗೆ ಸಂಬಂಧಿಸಿದ್ದು ಲೌಕಿಕ ಶಿಲ್ಪಗಳಲ್ಲಿ ಎರಡು ಉಪವರ್ಗಗಳನ್ನಾಗಿ ಮಾಡಬಹುದು. ದಾನ ಫಲಕಗಳು ಸ್ಮಾರಕ ಶಿಲೆಗಳು. ದಾನ ಫಲಕಗಳಲ್ಲಿ ಸ್ತೂಪ ನಿರ್ಮಾಣ ಕಾರ್ಯದಲ್ಲಿ ಅದಕ್ಕೆ ಹೊದಿಸಲು ಶಿಲ್ಪ ಫಲಕಗಳ ಮಾಡಿಸಿಕೊಟ್ಟವರ ಹೆಸರುಗಳಿರುತ್ತವೆ. ಇಂತಹ ಶಿಲ್ಪಗಳು ನಾನಾ ಪ್ರಕಾರಗಳಾಗಿವೆ. ಮರಣ ಹೊಂದಿದ ಗಣ್ಯವ್ಯಕ್ತಿಗಳ ಸ್ಮಾರಕ ಶಿಲ್ಪಗಳು. ಹೀಗೆ ಶಾತವಾಹನರ ಕಾಲದಲ್ಲಿ ಈ ಪ್ರದೇಶವು ಕಲೆಯಲ್ಲಾಗಲಿ, ಧರ್ಮದಲ್ಲಿಯಾಗಲಿ ಸುಪ್ರಸಿದ್ಧವಾಗಿತ್ತು. "ಇಡೀ ಕರ್ನಾಟಕದಲ್ಲಿಯೇ ಶಾತವಾಹನ ಕಲೆ ಅದರಲ್ಲೂ ವಿಶೇಷವಾಗಿ ಬೌದ್ಧ ಪಂಥ ಕಲೆಗೆ ಅತೀ ಮಹತ್ವದ ಏಕೈಕ ಸ್ಥಳವೆಂದರೆ, ಗುಲಬರ್ಗಾ ಪ್ರದೇಶ ಸನ್ನತಿ". ದಖನ್ನಿನಲ್ಲಿ ಶಾತವಾಹನರ ಆಳ್ವಿಕೆಯು ಸ್ವಲ್ಪ ಹೆಚ್ಚು ಕಡಿಮೆ ಎರಡನೇ ಶತಮಾನದ ಕೊನೆ ಅಥವಾ ಮೂರನೆಯ ಶತಮಾನದ ಆರಂಭದಲ್ಲಿ ಕೊನೆಗೊಂಡಿತು. ಅನಂತರ ಶಾತವಾಹನರ ಮಾಂಡಲೀಕರಾದ ಮಹಾರಥಿಗಳು ಗುಲಬರ್ಗಾ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಪ್ರದೇಶವನ್ನು, ಚೂಟುಗಳು ಉತ್ತರ ಕನ್ನಡ ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಆಳುತ್ತಿದ್ದರು. ಇವರ ಕಾಲದ ನಾಣ್ಯಗಳು ರಾಯಚೂರು, ಚಿತ್ರದುರ್ಗ ಪ್ರದೇಶದಲ್ಲಿ ದೊರೆತಿವೆ.

ಸುಮಾರು ಕ್ರಿ.ಶ. ೪ನೇ ಶತಮಾನದ ೨-೩ನೇ ದಶಕದ ಹೊತ್ತಿಗೆ ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಪ್ರದೇಶದಲ್ಲಿ ಒಂದು ಸ್ವತಂತ್ರ ಕನ್ನಡ ರಾಜ್ಯವು ಉದಯವಾಯಿತು. ಇದರ ಸಂಸ್ಥಾಪಕ ಕದಂಬ ಮಯೂರಶರ್ಮ. ಈ ಕದಂಬ ಅರಸು ಮನೆತನ ಉಚ್ಛ್ರಾಯ ಕಾಲದಲ್ಲಿ ಈಗಿನ ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗದಿಂದ ಹಿಡಿದು ಶ್ರೀಶೈಲದವರೆಗೂ, ದಕ್ಷಿಣದಲ್ಲಿ ಹಾಸನ, ತುಮಕೂರು ಜಿಲ್ಲೆಗಳ ಉತ್ತರ ಭಾಗ, ಪಶ್ಚಿಮಕ್ಕೆ ಅರಬ್ಬೀ ಸಮುದ್ರದವರೆಗೂ ವಿಸ್ತರಿಸಿತು. ಈ ವಂಶದ ಪ್ರಬಲ ಹಾಗೂ ಪ್ರಸಿದ್ಧ ಅರಸು ರವಿವರ್ಮನು ನರ್ಮದಾ ನದಿಯವರೆಗೂ ತನ್ನ ವಿಜಯಯಾತ್ರೆಯನ್ನು ನಡೆಸಿದ್ದನಂತೆ. ಇತ್ತೀಚೆಗೆ ಬೆಳಗಾವಿ ಜಿಲ್ಲೆಯ ಉತ್ತರ ಭಾಗದ ಬೇಡಿಕೆಹಾಳದಲ್ಲಿ (ಚಿಕ್ಕೋಡಿ ತಾ.) ಆದಿ ಕದಂಬರ ಕೆಲವು ಮಹತ್ವದ ವಿಷಯಗಳನ್ನು ತಿಳಿಸುವ ಸು. ೧೧ನೇ ಶತಮಾನದ ಒಂದು ಕನ್ನಡ ಲಿಪಿಯಲ್ಲಿಯ ಆದಿ ಕದಂಬ ಶಾಸನವು ಸಿಕ್ಕಿದೆ. ಪ್ರಾಯಶಃ ಇದು ಕೂಟ ಶಾಸನವೆಂಬ ಅನುಮಾನ ಇದೆ. ಆದರೂ ಇದರಲ್ಲಿ ಕೆಲವೊಂದು ಸತ್ಯಾಂಶಗಳಿರಬಹುದು. ಇದರ ಪ್ರಕಾರ ಶಾಂತಿವರ್ಮನೆಂಬ ಅರಸು ಬೆಡಿಕೆಹಾಳದ ಸುತ್ತಮುತ್ತಲಿನ ಪ್ರದೇಶದ ಭೂಮಿಯನ್ನು ದಾನ ಕೊಟ್ಟ ವಿಷಯವಿದೆ. ಇದರಲ್ಲಿ ಉಲ್ಲೇಖವಾದ ದಿನಾಂಕವನ್ನು ಗಮನಿಸಿದಾಗ ಇನ್ನೂ ನೂರು ವರ್ಷಗಳ ಹಿಂದೆಯೇ ಆದಿ ಕದಂಬ ರಾಜ್ಯ ಸ್ಥಾಪನೆ ಆಯಿತೆಂಬ ಅಭಿಪ್ರಾಯಕ್ಕೆ ಎಡೆಮಾಡಿಕೊಡುತ್ತದೆ. ಹೀಗೆ ರವಿವರ್ಮನ ವಿಜಯಯಾತ್ರೆ ಹಾಗೂ ಬೇಡಿಕೆಹಾಳದ ತಾಮ್ರಪಟದ ವಿಷಯವನ್ನು ಗಮನಿಸಿದಾಗ ಇವರ ರಾಜ್ಯವು ಉತ್ತರದಲ್ಲಿ ಕೃಷ್ಣಾ ನದಿಯಿಂದ ಸ್ವಲ್ಪ ಉತ್ತರ ಭಾಗದವರೆಗೂ ವಿಸ್ತರಿಸಿದ್ದ ಸಾಧ್ಯತೆ ಇದೆ. ಆದುದರಿಂದ ಗುಲಬರ್ಗಾ ಪ್ರದೇಶವು ಮುಖ್ಯವಾಗಿ ಇದರ ದಕ್ಷಿಣ ಭಾಗವು ಕದಂಬ ರಾಜ್ಯದಲ್ಲಿ ಇದ್ದು ಅವರ ಆಡಳಿತಕ್ಕೆ ಒಳಪಟ್ಟಿತೆಂದು ಹೇಳಬಹುದು. ಆದರೆ, ಗುಲಬರ್ಗಾ ಪ್ರದೇಶದಲ್ಲಿ ಆ ಅರಸುಮನೆತನದ ಇಲ್ಲವೆ ಆ ಕಾಲದ ವಿಶಿಷ್ಟವಾದ ಯಾವುದೇ ಪುರಾತತ್ವ ಅವಶೇಷಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಹೇಗೆ ಆಕಸ್ಮಿಕವಾಗಿ ಸನ್ನತಿಯಲ್ಲಿ ಅತೀ ಮಹತ್ವದ ಅಶೋಕ ಸಾಮ್ರಾಟನ ಶಾಸನವು ಶೋಧವಾಗಿ ಆ ಕಾಲದ ಕರ್ನಾಟಕದ ಇತಿಹಾಸದಲ್ಲಿ ಕೆಲವೊಂದು ಮಹತ್ವದ ಅಂಶಗಳು ಬೆಳಕಿಗೆ ಬಂದಿತೋ ಹಾಗೆ ಕದಂಬರ ಕಾಲದ್ದು ವ್ಯಾಪಕ ಹಾಗೂ ಕೂಲಂಕಷ ಸಂಶೋಧನೆ ಮಾಡಿದರೆ ಸಿಗಬಹುದು. ಸದ್ಯಕ್ಕೆ ಗುಲಬರ್ಗಾ ಪ್ರದೇಶಕ್ಕೆ ಸಮೀಪದ ಆದಿ ಕದಂಬರ ಶಾಸನವೆಂದರೆ, ಚಿತ್ರದುರ್ಗ ನಗರದ ಹೊರವಲಯದಲ್ಲಿರುವ ಚಂದ್ರವಳ್ಳಿಯ ಮಯೂರವರ್ಮನ ಸಂಸ್ಕೃತ ಶಾಸನ. ಮೊದಲು ಇದು ಮಯೂರಶರ್ಮನ ಪ್ರಾಕೃತ ಶಾಸನವೆಂದು ಇದರಲ್ಲಿ ಅವು ಗೆದ್ದುಕೊಂಡ ಇಲ್ಲವೆ ಸೋಲಿಸಿದ ರಾಜ್ಯಗಳ ಪಟ್ಟಿಯಿದೆಯೆಂದು ಪ್ರಸಿದ್ಧವಾಗಿದೆ. ಆದರೆ ಇತ್ತೀಚೆಗೆ ಚಿತ್ರದುರ್ಗದ ಬಿ. ರಾಜಶೇಖರಪ್ಪನವರು ಇದನ್ನು ಮತ್ತೆ ಕೂಲಂಕಷವಾಗಿ ಓದಿ ಇದು ಮಯೂರವರ್ಮನ ಸಂಸ್ಕೃತ ಶಾಸನವೆಂದು ಮತ್ತು ಇದರಲ್ಲಿ ಅಲ್ಲಿದ್ದ ಒಂದು ಕೆರೆಯನ್ನು ದುರಸ್ತಿ ಮಾಡಿಸಿದ ವಿಷಯವಿದೆಯೆಂದು ಪ್ರಕಟಿಸಿದ್ದಾರೆ. ಇದನ್ನು ವಿದ್ವಾಂಸರು ಒಪ್ಪಿದ್ದಾರೆ. ಹೀಗೆ ಗುಲಬರ್ಗಾ ಪ್ರದೇಶದಲ್ಲಿ ಕದಂಬರ ಕಾಲದ ಸದ್ಯಕ್ಕೆ ಯಾವುದೇ ವಿಷಯಗಳು ತಿಳಿದು ಬರುತ್ತಿಲ್ಲ.

## ಬಾದಾಮಿ ಚಾಳುಕ್ಯರು

ಕದಂಬರ ಪತನಾವಾದ ಮೇಲೆ ಬಾದಾಮಿ ಚಾಳುಕ್ಯರು ಪ್ರಬಲರಾಗಿ ಕ್ರಿ. ಶ. ೫೪೦ರಿಂದ ೭೫೭ರವರೆಗೆ ಕರ್ನಾಟಕವನ್ನು ಏಕೈಕ ಆಡಳಿತಕ್ಕೆ ಒಳಪಡಿಸಿದರು. ಕಾವೇರಿ ಇಂದ ನರ್ಮದೆವರೆಗೆ ವ್ಯಾಪಕವಾಗಿದ್ದ ಪ್ರದೇಶದಲ್ಲಿ ಅವರ ಸಾಮ್ರಾಜ್ಯವು ಹರಡಿದ್ದು, ಇಂದಿನ ಕರ್ನಾಟಕ, ಮಹಾರಾಷ್ಟ್ರ, ಗೋವಾ ಮತ್ತು ಗುಜರಾತಿನ ಕೆಲವು ಭಾಗಗಳು, ಮಧ್ಯಪ್ರದೇಶ, ಒರಿಸ್ಸಾ, ಆಂಧ್ರ ಮತ್ತು ತಮಿಳುನಾಡಿನ ಹಲವು ಭಾಗಗಳಲ್ಲಿ ಇವರ ಅಧಿಪತ್ಯವು ಆವರಿಸಿತ್ತು.

ಗುಲಬರ್ಗಾ ಜಿಲ್ಲೆಯು ಅಪರೋಕ್ಷವಾಗಿ ಬಾದಾಮಿ ಚಾಳುಕ್ಯರ ಆಡಳಿತದ ಹತೋಟಿಗೆ ಒಳಪಟ್ಟಿದ್ದರೂ ಅವರ ಕಾಲದ ಶಾಸನಗಳಾಗಲಿ ಅಥವಾ ಯಾವುದೇ ಅವಶೇಷಗಳಾಗಲಿ ಲಭ್ಯವಾಗಿಲ್ಲ, ಗುಲಬರ್ಗಾದಿಂದ ವರದಿಯಾಗಿರುವ ಚಾಳುಕ್ಯ ವಿನಯಾದಿತ್ಯನ ಕಾಲದ ತಾಮ್ರ ಶಾಸನವು ಕೂಟ ಶಾಸನವಾಗಿರುವುದರಿಂದ ಅಗಣ್ಯವೆನಿಸುತ್ತದೆ. ನಿಂಬರಗಿಯ ೧೧೩೪ರ ಶಾಸನವು ಕಲ್ಯಾಣದ ಚಾಳುಕ್ಯ ಅರಸು ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಬಾದಾಮಿ ಚಾಳುಕ್ಯ ಅರಸು ವಿನಯಾದಿತ್ಯನಿಂದ ನಿಂಬರಗಿ ಗ್ರಾಮವನ್ನು ಊರೊಡೆಯ ಕಲಿದೇವನ ಪೂರ್ವಜನಾದ ನಾರಾಯಣಚಾರ್ಯನು ದತ್ತಿಯಾಗಿ ಪಡೆದಿದ್ದ ಅಂಶವನ್ನು ಸಾಂದರ್ಭಿಕವಾಗಿ ತಿಳಿಸುತ್ತದೆ. ಬಾದಾಮಿ ಚಾಳುಕ್ಯರು ಭವ್ಯವಾದ ಸಾಮ್ರಾಜ್ಯವನ್ನು ನಿರ್ಮಿಸಿ ಸುಮಾರು ೬೦,೦೦೦ ಗ್ರಾಮಗಳುಳ್ಳ ಮೂರು ಮಹಾರಾಷ್ಟ್ರಕಗಳಿದ್ದುವೆಂದು ಐಹೊಳೆ ಶಾಸನ ತಿಳಿಸುತ್ತದೆ. ಗಂಗ, ಸೇಂದ್ರಕ, ಅಳುಪ, ಗುಜರಾತಿನ, ಬೋಧನದ ಮತ್ತು ವೆಂಗಿಯ ಚಾಳುಕ್ಯ (ಕೊನೆಯವರು ಮುಂದೆ ಸ್ವತಂತ್ರವಾದರು) ಬಾಣ, ಬೋಜ, ಹೀಗೆ ಅನೇಕ ಮಾಂಡಳಿಕ ಅರಸರು ಇವರ ಆಧೀನದಲ್ಲಿ ಇದ್ದರು. ಮಹಾರಾಷ್ಟ್ರ, ರಾಷ್ಟ್ರ, ಮಂಡಲ, ವಿಷಯ, ಭೋಗ, ಗ್ರಾಮ ಮುಂತಾದ ಆಡಳಿತ ಘಟಕಗಳ ಉಲ್ಲೇಖಗಳು ಚಾಳುಕ್ಯರ ಶಾಸನಗಳಲ್ಲಿ ಕಂಡುಬರುತ್ತವೆ. ದಕ್ಷಿಣ ಭಾರತ ವಾಸ್ತು ಶೈಲಿಯಲ್ಲಿ ಬಾದಾಮಿ ಚಾಳುಕ್ಯರ ಶೈಲಿಗೆ ಪ್ರತ್ಯೇಕ ಸ್ಥಾನವನ್ನು ನೀಡಲಾಗಿದೆ. ಐಹೊಳೆಯನ್ನು 'ಹಿಂದೂ ದೇವಾಲಯ ಶೈಲಿಯ ತೊಟ್ಟಿಲೆಂದು' ಪ್ರಸಿದ್ಧ ಕಲಾತಜ್ಞ ಪರ್ಸಿಬ್ರೌನ್ ಅಭಿಪ್ರಾಯಪಡುತ್ತಾನೆ. ಇವರು ಮೂಲತಃ ವೈದಿಕಧರ್ಮವನ್ನು ಅವಲಂಬಿಸಿದ್ದರೂ ಜೈನ, ಬೌದ್ಧ ಶೈವ ಹಾಗೂ ವೈಷ್ಣವ ಪಂಥಗಳಿಗೆ ಪ್ರತ್ಯೇಕ ಗುಹಾಲಯಗಳನ್ನು ಬಾದಾಮಿಯಲ್ಲಿ ನಿರ್ಮಿಸಿರುವುದು ಇವರ ಧಾರ್ಮಿಕ ಸಹಿಷ್ಣುತೆಗೆ ಉತ್ತಮ ನಿದರ್ಶನವಾಗಿದೆ. ಮುಂದೆ ಕರ್ನಾಟಕವನ್ನಾಳಿದ ಮಳಖೇಡದ ರಾಷ್ಟ್ರಕೂಟರು ಚಾಳುಕ್ಯರ ಆಡಳಿತ ಪದ್ಧತಿಗಳನ್ನು ಮುಂದುವರೆಸಿದರು.

## ಮಳಖೇಡದ ರಾಷ್ಟ್ರಕೂಟರು

ದಂತಿದುರ್ಗನು ಕ್ರಿ. ಶ. ೭೫೭ರಲ್ಲಿ ಬಾದಾಮಿ ಚಾಳುಕ್ಯರ ಆಡಳಿತವನ್ನು ತೊರೆದು ಹಾಕಿ ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದನು. ರಾಷ್ಟ್ರಕೂಟ ಎಂಬುದು ಮೊದಲು ಅದಿಕಾರ ಹುದ್ದೆಯಾಗಿದ್ದು ಕಾಲಕ್ರಮೇಣ ಒಂದು ಕುಟುಂಬದ ಹೆಸರಾಯಿತೆಂದು ಪಿ. ಬಿ. ದೇಸಾಯಿಯವರು ತಿಳಿಸುತ್ತಾರೆ. ಇದಕ್ಕೆ ಪುಷ್ಟಿಕೊಡುವಂತೆ ಮೌರ್ಯರ ಶಾಸನಗಳಲ್ಲಿ ಕಂಡುಬರುವ (ರಾಷ್ಟ್ರೀಕ ಎಂಬ ಅಧಿಕಾರ ಹುದ್ದೆಯೇ ಕಾಲಾನುಕಾಲಕ್ಕೆ 'ರಾಷ್ಟ್ರಕೂಟ' ಎಂದು ರೂಡಿಗೆ ಬಂದಿರಬಹುದು). ಬಾದಾಮಿ ಚಾಳುಕ್ಯರ ತಾಮ್ರಪಟ ಒಂದರಲ್ಲಿ ಕಂಡುಬರುವ ರಾಷ್ಟ್ರಕೂಟ ಎಂಬ ಅಧಿಕಾರ ಹುದ್ದೆಯೇ ಈ ಪದದ ಅತ್ಯಂತ ಪ್ರಾಚೀನ ಉಲ್ಲೇಖವಾಗಿದೆ. 'ರಾಷ್ಟ್ರಕೂಟ' ಎಂಬುದು ಒಂದೇ ಕುಟುಂಬವಾಗಿರದೇ ಹಲವಾರು ಭಾಗಗಳಲ್ಲಿ ವಿವಿಧ ಹೆಸರುಗಳಿಂದ ವ್ಯಕ್ತವಾಗುತ್ತದೆ.

ರಾಷ್ಟ್ರಕೂಟರ ಒಂದು ಕುಟುಂಬವು 'ಮಾನಪುರ' ಎಂಬಲ್ಲಿತ್ತೆಂದು ತಿಳಿದುಬರುತ್ತದೆ. ಕ್ರಿ. ಶ. ಏಳನೇ ಶತಮಾನದ ಶಾಸನ ಒಂದರಲ್ಲಿ ಇವರ ವಂಶವೃಕ್ಷವನ್ನು 'ಮಾನಂಕ' ಅವನ ಮಗ ದೇವರಾಜ ಭವಿಷ್ಯ ಹಾಗೂ ಅಭಿಮನ್ಯು ಎಂದು ಉಲ್ಲೇಖಿಸುತ್ತದೆ. ಮಧ್ಯಪ್ರದೇಶದ ಹೋಶಂಗಾಬಾದ್ ಜಿಲ್ಲೆ ಇವರ ಮೂಲಸ್ಥಾನವೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟರೆ ಮತ್ತೆ ಹಲವರು ಮಹಾರಾಷ್ಟ್ರದ ಸಾತಾರ ಜಿಲ್ಲೆಯ 'ಮಾನ್' ಇವರ ಮೂಲ ಕೇಂದ್ರವೆನ್ನುತ್ತಾರೆ. ಇವರದು 'ಗರುಡ' ಲಾಂಛನವಾಗಿದ್ದುದರಿಂದ ಇವರು ಕರ್ನಾಟಕ ರಾಷ್ಟ್ರಕೂಟರ ಸಂಬಂಧಿಗಳಿರಬೇಕೆಂದು ಕೆಲವರು ಹೇಳುತ್ತಾರೆ. ಆದರೆ ಅಮೋಘವರ್ಷನ ಕ್ರಿ. ಶ. ೮೬೬ ಸಿರೂರು ಪ್ರಶಸ್ತಿಯಲ್ಲಿ ರಾಷ್ಟ್ರಕೂಟ 'ರಟ್ಟ' ವಂಶದ ಮೂಲದವರೆಂದೂ ತನ್ನನ್ನು 'ರಟ್ಟವಂಶೋದ್ಭವ' ಎಂದು ಕರೆದು ಕೊಂಡಿರುವುದರಿಂದ 'ರಟ್ಟವಂಶವೇ' ರಾಷ್ಟ್ರಕೂಟರ ಮೂಲವೆಂಬ ವಾದವಿದೆ.

ಹಾಗೂ ಅವರು 'ಲಟ್ಟಾಲೂರು ಪುರವರಾಧೀಶ್ವರರು' ಎಂದು ತಿಳಿದುಬರುತ್ತದೆ. ಡಾ. ಫ್ಲೀಟ್ ಅವರು ಇಂದಿನ ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯಲ್ಲಿರುವ ಲಾಟೂರು ಇವರ ಶಾಸನೋಕ್ತ 'ಲಟ್ಟಾಲೂರು' ಎಂದು ಸ್ಪಷ್ಟವಾಗಿ ಗುರುತಿಸಿದ್ದಾರೆ. ಬಹುಶಃ ಆ ಕಾಲದಲ್ಲಿ ಈ ಭಾಗವೆಲ್ಲವು ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದ ಪ್ರದೇಶವಾಗಿತ್ತು. ಕಂಬರಸ, ಅಸಗವ್ವೆ, ರೇವಕ್ಕ, ಅಬಲಬ್ಬೆ ಮುಂತಾದ ರಾಷ್ಟ್ರಕೂಟರ ಹೆಸರುಗಳು ಕನ್ನಡ ಕುಟುಂಬದ ನಾಮ ಸಂಕೇತಗಳಾಗಿವೆ. ಗುಜರಾತಿನಲ್ಲಿ ನೇಮಕಗೊಂಡ ರಾಷ್ಟ್ರಕೂಟ ರಾಜ್ಯಪಾಲರುಗಳು ಸಂಸ್ಕೃತ ಶಾಸನದಲ್ಲೂ ಕನ್ನಡ ಹಸ್ತಾಕ್ಷರಗಳನ್ನು ಹಾಕಿರುವುದು ಇವರು ಮೂಲತಃ ಕನ್ನಡಿಗರೆಂಬ ವಾದಕ್ಕೆ ಪುಷ್ಟಿ ಕೊಡುತ್ತದೆ. ರಾಷ್ಟ್ರಕೂಟರು ಗುಲಬರ್ಗಾ ಜಿಲ್ಲೆಯ ಮಳಖೇಡವನ್ನು ತಮ್ಮ ದ್ವಿತೀಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂಬ ವಾದಕ್ಕೆ ಬಹುತೇಕವಾಗಿ ಯಾವುದೇ ಐತಿಹಾಸಿಕ ಪುರಾವೆಗಳಿಲ್ಲ. ಅವರ ಹಲವೇ ಶಾಸನಗಳಲ್ಲಿ ಕಂಡುಬರುವ 'ಮಾನ್ಯಖೇಟ' ಅಥವಾ 'ಮಾನ್ಯಪುರ'ವು ಗುಲಬರ್ಗಾ ಜಿಲ್ಲೆಯ ಕಾಗಿಣಾ ನದಿಯ ತಟಾಕದಲ್ಲಿರುವ ಮಳಖೇಡವೆಂದು ಪುಷ್ಟಿಕೊಡುವ ಯಾವುದೇ ಆಧಾರಗಳು ಕಂಡುಬರುವುದಿಲ್ಲ. ಗುಲಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಕಾಲದ ಶಾಸನಗಳು, ಇದುವರೆಗೂ ಪತ್ತೆಯಾಗಿರುವುದು ಕೆಲವು ಮಾತ್ರ. ಜಿಲ್ಲೆಯಲ್ಲಿ ದೊರೆತ ಶಾಸನಗಳಾಗಲಿ ಅಥವಾ ಬೇರೆ ಪ್ರದೇಶಗಳಲ್ಲಿ ದೊರೆತಿರುವ ಶಾಸನಗಳಾಗಲಿ 'ಮಳಖೇಡ' ಅಥವಾ 'ಮಾನ್ಯಖೇಟ'ಗಳೆರಡೂ ಒಂದೇ ಎಂಬ ಅಭಿಪ್ರಾಯವನ್ನು ಸಮರ್ಥಿಸುವುದಿಲ್ಲ. ಸಾಹಿತ್ಯಾಧಾರಗಳನ್ನು ಗಮನಿಸಿದರೆ ಪೂರ್ವಪುರಾಣ, ಆದಿಪುರಾಣ ಮತ್ತು ವಡ್ಡಾರಾಧನೆ ಕೃತಿಗಳಲ್ಲಿ ಉಲ್ಲೇಖಿಸಿರುವ ಜನಪದದ ಗಡಿ ವಿವರಣೆಯ ಪ್ರಕಾರ* 'ಖೇಟಾ' ರಾಜಧಾನಿಯು 'ಕಾಗಿಣಿ' ಅಥವಾ 'ಕಾಕುರವೇಣಿ' ತಟಾಕದಲ್ಲಿರುವುದು ವ್ಯಕ್ತವಾಗುತ್ತದೆ. ಅದರಲ್ಲಿರುವ ವಿವರಣೆಯಂತೆ 'ಬಾಲಘಾಟ್' ಪಶ್ಚಿಮಘಟ್ಟ ಶ್ರೇಣಿಯ ಅರಣ್ಯಾವಲಯವು 'ಮಳಖೇಡದ' ಸಮೀಪ ಕೊನೆಗೊಳ್ಳುತ್ತದೆ. ಅವರೇ ತಿಳಿಸಿರುವಂತೆ ಮಾಡಂಬ ಎಂಬ ಆಡಳಿತ ವಿಭಾಗದ ೫೦೦ ಗ್ರಾಮಗಳು ರಾಷ್ಟ್ರಕೂಟ ಮತ್ತು ನೊಳಂಬ ಗಡಿಗಳಲ್ಲಿ ವ್ಯಾಪಿಸಿದ್ದವು. ಸಂಜನ್ (ಮಹಾರಾಷ್ಟ್ರ) ಎಂಬ ಸ್ಥಳದಲ್ಲಿ ದೊರೆತ ತಾಮ್ರ ಶಾಸನದಲ್ಲಿ ಅಮೋಘವರ್ಷನ ಆಳ್ವಿಕೆಯಲ್ಲಿ ೧೬ ರಾಜ್ಯಗಳು (ಪ್ರಾಂತ್ಯಗಳು) ಇದ್ದರೆಂದು ಉಲ್ಲೇಖಿಸಲಾಗಿದೆ. ಅಮೋಘವರ್ಷ ನೃಪತುಂಗನ ಕಾಲದಲ್ಲಿ ರಚಿತವಾದ 'ಕವಿರಾಜಮಾರ್ಗ'ದಲ್ಲಿ ಕನ್ನಡ ದೇಶದ ವರ್ಣನೆಯ ಪ್ರಕಾರ ಕಾವೇರಿಯಿಂದ ಗೋದಾವರಿಯ ನಡುವೆ ಚಾಚಿಕೊಂಡಿರುವ ವಿಶಾಲವಾದ ಪ್ರದೇಶವನ್ನು ವ್ಯಾಪಿಸಿತ್ತೆಂಬ ಉಲ್ಲೇಖವಿದೆ. ಆದರೆ ಈ ಕೃತಿಯಲ್ಲಿ 'ಕಾಗಿಣಿ' ನದಿಯ ಬಗೆಗೆ ಯಾವುದೇ ಉಲ್ಲೇಖವೂ ಕಂಡುಬರುವುದಿಲ್ಲ. ಡಾ. ಫ್ಲೀಟ್ ಅವರ ಅಭಿಪ್ರಾಯದಂತೆ ಮಾನ್ಯಖೇಟವು ಅಮೋಘವರ್ಷನಿಗೂ ಮೊದಲೇ ರಾಜಧಾನಿಯಾಗಿತ್ತೆಂದು ತಿಳಿದು ಬರುತ್ತದೆ. ಏಕೆಂದರೆ ದಂತಿದುರ್ಗನ ದಾಯಾದಿಯಾದ ಮೊದಲನೇ ಕೃಷ್ಣನ ಕಾಲದ 'ಕಥಾಲೋಕ' ಎಂಬ ಕೃತಿಯ ಮೂಲ ಹಸ್ತ ಕೃತಿಯಲ್ಲಿ 'ಸುಂದರವಾದ ಮಾನ್ಯಖೇಟದಲ್ಲಿ ಸುಭೋತುಂಗನೆಂಬ ಪ್ರಬಲ ರಾಜನಿದ್ದನು' ಎಂದು ಕಂಡುಬಂದಿರುವುದು ಗಮನೀಯವಾಗಿದೆ. ಅವರ ಪ್ರಕಾರ ಮೊದಲನೇ ಕೃಷ್ಣನಿಗೆ 'ಸುಭೋತುಂಗ' ಬಿರುದು ಇತ್ತೆಂದು ವ್ಯಕ್ತವಾಗುತ್ತದೆ. 'ಸುಭೋತುಂಗ' ಎಂಬ ಬಿರುದು ಅಮೋಘವರ್ಷನ ತರುವಾಯ ಆಳಿದ ಎರಡನೇ ಕೃಷ್ಣನ ಬಿರುದೆಂದು ಡಾ. ಅಲ್ಟೇಕರ್ ಹಾಗೂ ಇತರೆ ವಿದ್ವಾಂಸರುಗಳು ಅಭಿಪ್ರಾಯಪಡುವುದರಿಂದ ಫ್ಲೀಟ್ ಅವರ ವಾದವು ದುರ್ಬಲಗೊಳ್ಳುತ್ತದೆ. ನಂತರದ ಶಾಸನಗಳಲ್ಲಿ ಮಾನ್ಯ ಖೇಟಾ - ೬೦೦೦ ವೆಂಬ ಆಡಳಿತ ವಿಭಾಗದ ಉಲ್ಲೇಖ ಕಂಡು ಬರುತ್ತದೆ. ಆದುದರಿಂದ ಮೂರನೇ ಗೋವಿಂದನು ಎಲ್ಲಾ ದಿಕ್ಕುಗಳಿಗೆ ಅದರಲ್ಲೂ ದಕ್ಷಿಣಕ್ಕೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದಾಗ ಆಡಳಿತ ದೃಷ್ಟಿಯಿಂದ ಕರ್ನಾಟಕದಲ್ಲಿ ಒಂದು ರಾಜಧಾನಿಯನ್ನು ಸ್ಥಾಪಿಸಲು ಯೋಚಿಸಿ ಗುಲಬರ್ಗಾ ಜಿಲ್ಲೆಯ 'ಮಾನ್ಯಖೇಟ' (ಈಗಿನ ಮಳಖೇಡ)ವನ್ನು ಆರಿಸಿಕೊಂಡನೆಂದು ಅಭಿಪ್ರಾಯವಿದೆ. ಈತನ ಉತ್ತಾರಾಧಿಕಾರಿಯಾದ ಅಮೋಘವರ್ಷನು (೮೧೪) ಮಾನ್ಯಖೇಟವನ್ನು ರಾಜಧಾನಿ ನಗರವನ್ನಾಗಿ ನಿರ್ಮಿಸುವ ಕಾರ್ಯವನ್ನು ತನ್ನ ಕಾಲದಲ್ಲಿ ಪೂರ್ಣಗೊಳಿಸಿದನೆಂದು ಹೇಳಲಾಗುವುದು ಇದಕ್ಕೆ ಪೂರಕವಾಗಿ ಎರಡನೇ ಕರ್ಕನ ಕರಾಡಿನ (ನವಸಾರಿ) ತಾಮ್ರ ಶಾಸನದಲ್ಲಿ (೮೧೬) ಉಲ್ಲೇಖಿಸಿರುವಂತೆ 'ಅಮೋಘವರ್ಷನ' ಮಾನ್ಯಖೇಟವು ಇಂದ್ರನ (ಅಮರಾವತಿ) ರಾಜಧಾನಿಗಿಂತಲೂ ಅಮೋಘವಾಗಿತ್ತೆಂದು ವಿವರಿಸಲಾಗಿದೆ. ಆದರೆ, ಈಗಿನ ಮಳಖೇಡ ಗ್ರಾಮದ ಪರಿಸರವನ್ನು ಶೋಧಿಸಿರುವ ವಿದ್ವಾಂಸರ ಪ್ರಕಾರ ಈ ಸ್ಥಳವು ರಾಷ್ಟ್ರಕೂಟರ ರಾಜಧಾನಿಯಾಗಿತ್ತೆಂಬ ವಾದಕ್ಕೆ ಪೂರಕವಾದ ಅವಶೇಷಗಳಾಗಲಿ ಅಥವಾ ದಾಖಲೆಗಳಾಗಿ ಇನ್ನೂ ದೊರೆತಿಲ್ಲವೆಂಬ ಸ್ಪಷ್ಟ ಅಭಿಪ್ರಾಯವನ್ನು ತಳೆದಿರುತ್ತಾರೆ. ಈಗ ಕಂಡುಬರುವ ಜೈನ ಬಸದಿಯ ಹಾಗೂ

---

* 'ರಾಷ್ಟ್ರಕೂಟ ರಾಜ್ಯ' ಶಾಮಲ ರತ್ನಕುಮಾರಿ ಅವರ (ಅಪ್ರಕಟಿತ) ಪ್ರೌಢಪ್ರಬಂಧ, ೧೯೯೨.

ಕೋಟೆಯ ಪರಿಸರಗಳಲ್ಲಿ ಉತ್ಖನನ ಕೈಗೊಂಡರೆ ಯಾವುದಾದರೂ ಅಪೂರ್ವ ದಾಖಲೆಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ ಎಂದು ಈ ವಿದ್ವಾಂಸರುಗಳು ಅಭಿಪ್ರಾಯಪಡುತ್ತಾರೆ.

**ಅಮೋಘವರ್ಷ**

ಅಮೋಘವರ್ಷ ನೃಪತುಂಗನು ತನ್ನ ಆಸ್ಥಾನಕ್ಕೆ ವಿವಿಧ ಮತಗಳ ಪಂಡಿತರನ್ನೂ ಕವಿಗಳನ್ನೂ ಬರಮಾಡಿಕೊಂಡನು. ಈತನು ವಿದ್ಯಾಪಕ್ಷಪಾತಿಯೂ, ಧಾರ್ಮಿಕನೂ ಆಗಿದ್ದನು. ಇವನ ಆಶ್ರಯದಲ್ಲಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳು ವರ್ಧಿಸಿದವು ಇವನು ಎಲ್ಲಾ ಧರ್ಮಗಳನ್ನು ಒಂದೇ ವಿಧವಾಗಿ ಪುರಸ್ಕರಿಸಿದನು. ಖ್ಯಾತ ವಿದ್ವಾಂಸರೂ ಜೈನ ಸಂನ್ಯಾಸಿಗಳೂ ಆಗಿದ್ದ ವೀರಸೇನ, ಜಿನಸೇನ, ಗುಣಭದ್ರ ಹಾಗೂ ವೈಯ್ಯಾಕರಣಿ ಶಾಕಟಾಯನ ಇವನ ಆಸ್ಥಾನದಲ್ಲಿದ್ದರು. ಗಣಿತ ಪಂಡಿತ ಮಹಾವೀರಾಚಾರ್ಯ, ಕವಿರಾಜಮಾರ್ಗದ ಕರ್ತೃ ಶ್ರೀವಿಜಯ ಇವನ ಆಸ್ಥಾನಿಕರು. ಅಮೋಘವರ್ಷನು ಮಾನ್ಯಖೇಟ ಪಟ್ಟಣವನ್ನು ಕಟ್ಟಿ ಅದು ಸಾಮ್ರಾಜ್ಯದ ರಾಜಧಾನಿಯ ಅರ್ಹತೆಯ ಪಡೆಯುವಂತೆ ಮಾಡಿದನು. ಮಾನ್ಯಖೇಟವು (ಮಳಖೇಡ) ರಾಷ್ಟ್ರಕೂಟರ ರಾಜಧಾನಿಯೆಂದು ಪ್ರಥಮತಃ ದೃಢಪಡುವುದು ಈ ಅರಸನ ಆಳ್ವಿಕೆಯ ದಾಖಲೆಗಳಿಂದಲೇ ಅರಬ್ ಗ್ರಂಥಕರ್ತೃ ಸುಲೇಮಾನನು ಅಮೋಘವರ್ಷನನ್ನು ಪ್ರಪಂಚದ ದೊಡ್ಡ ಸಾಮ್ರಾಟರೊಂದಿಗೆ. ಅಂದರೆ ಚೀನಾ, ಬಾಗ್ದಾದ್ ಮತ್ತು ಕಾನ್‌ಸ್ಟಾಂಟಿನೋಪಲ್ ರಾಜರುಗಳ ಸಹಪಂಕ್ತಿಯಲ್ಲಿ ಈತನನ್ನು ಹೋಲಿಸಿದ್ದಾನೆ. ಮಾನ್ಯಖೇಟದ ವರ್ಣನೆಗಳನ್ನು ನೈಜತೆಯಿಂದ ಮಾಡಿರುವ ಮತ್ತೊಬ್ಬ ಪಂಡಿತನೆಂದರೆ ಜೈನ ಮಹಾಪುರಾಣವನ್ನು ರಚಿಸಿದ ಹಾಗೂ ಮೂರನೇ ಕೃಷ್ಣನ ಸಮಕಾಲೀನನಾಗಿದ್ದ ಪ್ರಸಿದ್ಧ ಜೈನ ಕವಿ ಪುಷ್ಪದಂತ. ಆತನು ಈ ನಗರವನ್ನು ವರ್ಣಿಸುತ್ತಾ, "ಮಾನ್ಯಖೇಟವು ದೀನ ಮತ್ತು ಅನಾಥರ ಧನವಾಗಿತ್ತು. ಅಲ್ಲಿ ಯಾವಗಲೂ ಅರಳಿದ ಹೂ ಗಳಿಂದ ಕೂಡಿದ ಉದ್ಯಾನವನಗಳಿದ್ದವು. ಅವುಗಳಲ್ಲಿ ಅನೇಕ ಜನರು ವಿಹರಿಸುತ್ತಿದ್ದರು. ಆದ್ದರಿಂದ ಅದು ಇಂದ್ರಪುರಿಯಂತೆ ಸುಂದರವಾಗಿತ್ತು. ಇಂಥಾನಗರವು ಧಾರಾನಾಥನ ಕೋಪಾಗ್ನಿಯಿಂದ ದಗ್ಧವಾಗಿಹೋಯಿತು. ಇನ್ನು ಪುಷ್ಪದಂತನು ಎಲ್ಲಿ ವಾಸಿಸಿಯಾನು ಎಂದು ತನ್ನ ಅಳಲನ್ನು ತೋಡಿಕೊಂಡಿದ್ದಾನೆ." ಮಾನ್ಯಖೇಟವು ಸಾಮ್ರಾಜ್ಯದ ಮುಖ್ಯ ಸ್ಥಳವೆನಿಸಿ ವಿಶಾಲವಾದ ದೊಡ್ಡ ಪಟ್ಟಣವಾಗಿ ಬೇಗ ಬೆಳೆದಂತೆ ಕಂಡುಬರುತ್ತದೆ. ಕಾಗಿಣಾ ನದಿಯ ಎದುರುದಂಡೆಯಲ್ಲಿ ದಂಡೋತಿ ಎಂಬ ಪ್ರದೇಶದಲ್ಲಿ ರಾಷ್ಟ್ರಕೂಟರ ಸೈನ್ಯದಬೀಡು ಇತ್ತೆಂದು ತಿಳಿದುಬರುತ್ತದೆ. ಆ ಸ್ಥಳದ ದಂಡೋತಿ ಎಂಬುದು ದಂಡು ಸೇನೆಯ ಬಿಡಾರ ಎಂಬ ಪದದಿಂದ ಬಂದಿದೆ. ಎಂದು ಊಹಿಸಲಾಗಿದೆ. ಅಮೋಘವರ್ಷನು ತನ್ನ ರಾಜ್ಯಕ್ಕೆ ಧಾರುಣ ಸಾಂಕ್ರಾಮಿಕ ರೋಗ ಹರಡಿದಾಗ ಅದರ ಪರಿಹಾರಾರ್ಥ ದೇವರಲ್ಲಿ ಮೊರೆಯಿಟ್ಟು ಕೊಲ್ಲಾಪುರದ ಮಹಾಲಕ್ಷ್ಮಿಗೆ ತನ್ನ ಬೆರಳನ್ನು ಮುಡುಪಾಗಿ ಅರ್ಪಿಸಿದನೆಂದು ಪ್ರತೀತಿಯಿದೆ. ಈತನೊಬ್ಬ ತತ್ವಜ್ಞಾನಿ ರಾಜನಾಗಿದ್ದನು. ಅಮೋಘವರ್ಷನು ೮೭೮ರಲ್ಲಿ ನಿಧನನಾದಾಗ ಅವನ ಮಗ ಇಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು. ಇವನು ಪೂರ್ವದ ಚಾಳುಕ್ಯರು ಗೂರ್ಜರು ಪ್ರತೀಹಾರರು ಮತ್ತು ಚೋಳರ ಮೇಲೆ ಕರಾಳ ಹಾಗೂ ದೀರ್ಘವಾದ ಯುದ್ಧಗಳನ್ನು ಮಾಡಬೇಕಾಯಿತು. ಈತನ ಆಳ್ವಿಕೆಯು ೯೧೪ರಲ್ಲಿ ವಿಷಾದಕರವಾಗಿಯೇ ಕೊನೆಗೊಂಡಿತು. ಇಮ್ಮಡಿ ಕೃಷ್ಣನ ಮಗ ಜಗತ್ತುಂಗನು ತನ್ನ ತಂದೆಗಿಂತ ಮೊದಲೇ ತೀರಿಕೊಂಡಿದ್ದುದರಿಂದ ಇವನ ನಂತರ ಇವನ ಮೊಮ್ಮಗ್ಗ ಮುಮ್ಮಡಿ ಇಂದ್ರನು (೯೨೮) ಅಧಿಕಾರಕ್ಕೆ ಬಂದನು. ಇಂದ್ರನಿಗೆ ಸರ್ವಜನಿತವಾದ ನಿತ್ಯವರ್ಷನೆಂಬ ಬಿರುದು ಇದ್ದಿತು. ಈತನ ಆಳ್ವಿಕೆಯ ಅತ್ಯಂತ ಮುಖ್ಯವಾದ ಸಾಧನೆ ಎಂದರೇ ಇವನ ಉತ್ತರ ಭಾರತದ ದಂಡಯಾತ್ರೆ ಇವನು ಪ್ರಭುತ್ವಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ ನಿಧನನಾದನು. ಇವನ ನಂತರ ಇಮ್ಮಡಿ ಅಮೋಘವರ್ಷನು ಉತ್ತರಾಧಿಕಾರಿಯಾದನು. ತರುವಾಯ ಮುಮ್ಮಡಿ ಅಮೋಘವರ್ಷನು ಅಧಿಕಾರಕ್ಕೆ ಬರುವ ವೇಳೆಗೆ ಹೆಚ್ಚು ವಯಸ್ಕನಾಗಿದ್ದ ಧಾರ್ಮಿಕ ಪ್ರವೃತ್ತಿಯುಳ್ಳವನಾಗಿದ್ದನು. ಇದರಿಂದಾಗಿ ಆಡಳಿತದ ಹೊಣೆ ಇವನ ಬಲಿಷ್ಟ ಉತ್ತರಾಧಿಕಾರಿಯಾದ ಮುಮ್ಮಡಿ ಕೃಷ್ಣನ ಮೇಲೆಬಿದ್ದು ಅವನು ಉತ್ತರದ ಮತ್ತು ದಕ್ಷಿಣದ ನೆರೆಹೊರೆಯವರ ರಾಜಕೀಯದಲ್ಲಿ ಹಸ್ತಕ್ಷೇಪಮಾಡಿದನು. ಈತನು ತನ್ನ ತಂದೆ ಮುಮ್ಮಡಿ ಅಮೋಘವರ್ಷನು ೯೩೯ ರಲ್ಲಿ ನಿಧನನಾದ ಮೇಲೆ ಆಡಳಿತ ಸೂತ್ರಗಳನ್ನು ಸಂಪೂರ್ಣವಾಗಿ ತನ್ನ ಕೈಯಲ್ಲಿ ಹಿಡಿದನು. ಮೂರನೇ ಕೃಷ್ಣನು ಪಟ್ಟಕ್ಕೆ ಬಂದ ಮೇಲೆ ರಾಷ್ಟ್ರಕೂಟ ಸಾಮ್ರಾಜ್ಯವು ಮತ್ತೊಮ್ಮೆ ಭಾರತದ ರಾಜಕೀಯ ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆಯಿತು. ಗಂಗವಾಡಿಯಲ್ಲಿ ರಾಚಮಲ್ಲನನ್ನು ಅಧಿಕಾರದಿಂದ ತೆಗೆದುಹಾಕಿ ಅವನ ಸೋದರನಾದ ಇಮ್ಮಡಿ ಬೂತುಗನನ್ನು ಸಿಂಹಾಸನಕ್ಕೆ ತರುವ ಮೂಲಕ ಗಂಗವಂಶದವರು ಮಾಂಡಲಿಕರಾದರು. ಮುಮ್ಮಡಿ ಕೃಷ್ಣನ ಸೋದರಿಯನ್ನು ಮದುವೆಯಾಗಿದ್ದ ಈ ಬೂತುಗನು ತನ್ನ ಬಂಧುವೂ ಹಾಗೂ

ರಾಜನೂ ಆದ ಈ ದೊರೆಯ ಆಕಾಂಕ್ಷೆಗಳನ್ನು ಈಡೇರಿಸುವುದರಲ್ಲಿ ಸಹಕರಿಸಿದನು. ಕೃಷ್ಣನು ೯೪೩ರಲ್ಲಿ ತಮಿಳುನಾಡಿನ ಮೇಲೆ ದಂಡೆತ್ತಿಹೋಗಿ ಅದರ ಎರಡು ಮುಖ್ಯ ಪಟ್ಟಣಗಳಾದ ಕಂಚಿ ಮತ್ತು ತಂಜಾವೂರುಗಳನ್ನು ವಶಪಡಿಸಿಕೊಂಡನು. ಆಗ ಚೋಳರ ರಾಜ ಪರಾಂತಕನು ತನ್ನ ರಾಜ್ಯದಿಂದ ಶತ್ರುಗಳನ್ನು ಹೊರದೂಡುವ ಪ್ರಯತ್ನದಲ್ಲಿ ಶೋಚನೀಯವಾಗಿ ಪರಾಭವಗೊಂಡನು. ನಂತರ ೯೪೭ರಲ್ಲಿ ನಡೆದ ಹೆಸರಾಂತ ತಕ್ಕೋಲಂ ಯುದ್ಧದಲ್ಲಿ (ಕಂಚಿಯ ಹತ್ತಿರವಿರುವ ಸ್ಥಳ) ಪರಾಂತಕನು ಘೋರವಾಗಿ ಸೋಲನ್ನನುಭವಿಸಿದನು. ಇವರನ ಮಗ ಹಾಗೂ ಕಿರೀಟಕ್ಕೆ ಉತ್ತರಾಧಿಕಾರಿಯಾಗಿದ್ದ ರಾಜಾದಿತ್ಯನು ಗಂಗರ ಇಮ್ಮಡಿ ಬೂತುಗನಿಂದ ಹತನಾದನು. ಈ ಸೋಲು ಬಲಿಷ್ಠವಾಗಿ ಮುಂದುವರೆಯುತ್ತಿದ್ದ ಚೋಳರಿಗೆ ಕುಠಾರಪ್ರಾಯವಾಗಿ ಪರಿಣಮಿಸಿತು. ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ವಿಜಯಯಾತ್ರೆಯು ದಕ್ಷಿಣದ ಅಂಚಿನಲ್ಲಿರುವ ರಾಮೇಶ್ವರದವರೆಗೂ ತನ್ನ ಜಯಬೇರಿ ಹೊಡೆದು ಅಲ್ಲಿ ಒಂದು ಜಯಸ್ಥಂಭವನ್ನು ನಿಲ್ಲಿಸಿದನು. ಕೃಷ್ಣನು ತಾನು ಯುವರಾಜನಾಗಿದ್ದಾಗಲೇ ಆರಂಭ ಮಾಡಿದ್ದ ಉತ್ತರದ ದಾಳಿಗಳಲ್ಲಿಯೂ ಅಷ್ಟೇ ಯಶಸ್ವಿಯಾದನು. ಗೂರ್ಜರ ಪ್ರತೀಹಾರ ಸೈನ್ಯಗಳು ಸೋಲಿಸಲ್ಪಟ್ಟವು. ಮುಮ್ಮಡಿ ಕೃಷ್ಣನು ಈ ರಾಜವಂಶದ ಕೊನೆಯ ಮಹಾರಾಜನಾಗಿದ್ದನು. ಇವನ ಆಳ್ವಿಕೆಯ ಅವಧಿಯಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯವು ವ್ಯಾಪಕಗೊಂಡು ಅತಿ ದೂರದ ಗಡಿಗಳನ್ನು ಮುಟ್ಟಿತು. ಮಧ್ಯಪ್ರದೇಶದ ಜಬ್ಬಲಪುರದ ಬಳಿ ಜೂರದಲ್ಲಿ ಸಿಕ್ಕಿರುವ ಕನ್ನಡ ಶಾಸನವು ಈತನ ಸಾಹಸ ಕೃತ್ಯಗಳನ್ನು ಆಕರ್ಷಕ ಪದ್ಯಶೈಲಿಯಲ್ಲಿ ವರ್ಣಿಸಿರುವುದು ಗಣನೀಯವಾಗಿದೆ. ಈತನು ಅಕಾಲವರ್ಷನೆಂಬ ಬಿರುದನ್ನು ತಳೆದಿದ್ದನು. ಮುಮ್ಮಡಿ ಕೃಷ್ಣನು ೯೬೭ರಲ್ಲಿ ನಿಧನನಾದನು, ಇದರ ಪರಿಣಾಮವಾಗಿ ರಾಷ್ಟ್ರಕೂಟ ರಾಜವಂಶದ ಆಳ್ವಿಕೆಯ ಪತನ ಪ್ರಾರಂಭವಾಯಿತು. ಈ ಸನ್ನಿವೇಶದಿಂದ ಬಲಾಢ್ಯರಾಗುತ್ತಿದ್ದ ಶತ್ರುಗಳಿಗೆ ಪ್ರೋತ್ಸಾಹ ಸಿಕ್ಕಿತು. ಕೊಟ್ಟಿಗನ ಆಳ್ವಿಕೆಯ ಕಡೆಯ ವರ್ಷಗಳಲ್ಲಿ ಪರಮಾರ ಪ್ರಭು ಸೀಯಕನು ರಾಷ್ಟ್ರಕೂಟ ಪ್ರಾಂತ್ಯಗಳ ಮೇಲೆ ದಾಳಿ ಮಾಡಿ ಸಾಮ್ರಾಜ್ಯದ ಮುಖ್ಯ ನಗರವಾಗಿದ್ದ ಮಾನ್ಯಖೇಟವನ್ನು ಸೂರೆಗೊಂಡು ಸಾಮ್ರಾಜ್ಯದ ಮುಂದುವರಿಕೆಯ ಮೇಲೆ ಬೀಕರ ಪರಿಣಾಮವನ್ನುಂಟು ಮಾಡಿದನು. ಇಮ್ಮಡಿ ಕರ್ಕನ ದುರ್ಬಲ ಆಡಳಿತವು ಅಂತ್ಯಗೊಂಡಿತು.

ಗುಲಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟವಂಶದ ಮುಮ್ಮಡಿ ಕೃಷ್ಣನ ಕಾಲದ ಮೂರು ಶಾಸನಗಳು ಮಾತ್ರ ಕಾಣಸಿಗುತ್ತವೆ. ಶಹಾಪುರ ತಾಲೂಕಿನ ಸಿರಿವಾಳದಲ್ಲಿ ದೊರೆತಿರುವ ೯೩೯ರ ಅಕಾಲವರ್ಷ ಮುಮ್ಮಡಿ ಕೃಷ್ಣನ ಶಾಸನದಲ್ಲಿ ಸಗರನಾಡಿನ ಉಲ್ಲೇಖವಿದೆ. ಜೇವರ್ಗಿ ತಾಲೂಕಿನ ಅಂದೋಲಾದಲ್ಲಿರುವ ೯೫೮ರ ಶಾಸನದಲ್ಲಿ ಕನ್ನರದೇವ ಅಕಾಲವರ್ಷನು (ಕೃಷ್ಣನು) ನವಖಂಡ ಪೃಥ್ವಿಯನ್ನು ಆಳುತ್ತಿದ್ದನೆಂಬ ಉಲ್ಲೇಖವಿದೆ. ಆ ಸಂದರ್ಭದಲ್ಲಿ ಗುಂಡಿಗೆಯ್ಯನ ಮಗ ಕೇಶಿಮಯ್ಯನೆಂಬ ಅಧಿಕಾರಿಯು ಗುಂಡೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ ಬಗೆಗೆ ಇದೇ ಶಾಸನವು ತಿಳಿಸುತ್ತದೆ. ಮುಮ್ಮಡಿ ಕೃಷ್ಣನ (೯೫೪) ಮೂರನೆಯ ಶಾಸನವು ಚಿಂಚೋಳಿ ತಾಲೂಕಿನ ನಿಡುಗುಂದದಲ್ಲಿ ದೊರೆತಿದ್ದು ಅಸ್ಪಷ್ಟವಾಗಿದೆ. ರಾಷ್ಟ್ರಕೂಟರ ಆಡಳಿತದ ಬಗೆಗೆ ಬೇರೆಯಾವುದೇ ಶಾಸನಾಧಾರಗಳು ಈ ಜಿಲ್ಲೆಯಲ್ಲಿ ಲಭ್ಯವಿಲ್ಲವಾಗಿದೆ.

## ಕಲ್ಯಾಣದ ಚಾಳುಕ್ಯರು

ಕಲ್ಯಾಣದ ಚಾಳುಕ್ಯರ ನೂರಾರು ಶಾಸನಗಳು ಗುಲಬರ್ಗಾ ಜಿಲ್ಲೆಯಲ್ಲಿ ದೊರೆತಿದ್ದು ಅವರ ಆಡಳಿತ ಪ್ರಭಾವವು ಜಿಲ್ಲೆಯಾದ್ಯಂತ ಕಂಡು ಬರುವುದು. ಚಾಳುಕ್ಯರ ಶಾಖೆಯ ಇಮ್ಮಡಿ ತೈಲನಿಂದ ರಾಷ್ಟ್ರಕೂಟರ ಇಮ್ಮಡಿ ಕರ್ಕನು ಸುಮಾರು ೯೭೩ರಲ್ಲಿ ಪರಾಜಯಗೊಂಡ ನಂತರ ಒಂದು ಕಾಲದಲ್ಲಿ ಪ್ರಭಲರಾಗಿದ್ದ ರಾಷ್ಟ್ರಕೂಟ ಸಾಮ್ರಾಜ್ಯವು ಕ್ಷೀಣಿಸಿತು. ಇಮ್ಮಡಿ ಕರ್ಕನ ಮೊದಲಿಗನಾಗಿದ್ದ ಖೊಟ್ಟಿಗನನ್ನು ಮಾಳವದ ರಾಜ ಸೀಯಕ ಹರ್ಷನು ಸೋಲಿಸಿದಾಗಲೇ ರಾಷ್ಟ್ರಕೂಟ ಸಾಮ್ರಾಜ್ಯದ ತಳಹದಿಯು ತಲ್ಲಣಗೊಂಡಿತು. ರಾಷ್ಟ್ರಕೂಟರ ಆಡಳಿತವನ್ನು ತೊರೆದು ಹಾಕಿದ ಎರಡನೇ ತೈಲನು ಕ್ರಿ. ಶ. ೯೭೩ರಲ್ಲಿ ಮಾನ್ಯಖೇಟದಲ್ಲಿ ಅಧಿಕಾರ ಗ್ರಹಣ ಮಾಡಿದನು. ಕಲ್ಯಾಣದ ಚಾಳುಕ್ಯರೆಂದು ಕರೆದುಕೊಳ್ಳುವ ಈ ವಂಶದವರು ಬಾದಾಮಿಯ ಚಾಳುಕ್ಯರ ವಂಶಜರೆಂದು ಹೇಳಿಕೊಂಡಿದ್ದಾರೆ. ಬಾದಾಮಿ ಚಾಳುಕ್ಯರ ದೊರೆ ಎರಡನೇ ವಿಕ್ರಮಾದಿತ್ಯನ ಸೋದರನಾಗಿದ್ದ ಭೀಮನ ಮಗನಾದ ಕೀರ್ತಿವರ್ಮನು ಈ ವಂಶದ ಮೂಲ ರಾಜನೆಂದು ತಿಳಿದುಬರುತ್ತದೆ. ಈತನ ಪುತ್ರ ಎರಡನೇ ಭೀಮನ ಮಗನಾದ ಅಯ್ಯಣನ ಮಗನೇ ನಾಲ್ಕನೇ ವಿಕ್ರಮಾದಿತ್ಯ. ಈ ವಿಕ್ರಮಾದಿತ್ಯನ ಮಗನಾದ ಇಮ್ಮಡಿ ತೈಲಪನು ಈ ಸಾಮ್ರಾಜ್ಯದ ಸಂಸ್ಥಾಪಕನೆಂದು ಶಾಸನಾಧಾರಗಳಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಹೀಗೆ ಒಂದನೇ

ಭೀಮನು ತರುವಾಯ ಸುಮಾರು ಏಳು ತಲೆ ಮಾರುಗಳ ಕಾಲ ಅಧಿಕಾರವಿಲ್ಲದೇ ಚಾಳುಕ್ಯರು ಉಳಿಯಬೇಕಾಯಿತು. ವಾರಂಗಲ್ ಜಿಲ್ಲೆಯ ಕಾಜಿಪೇಟ್‌ನ ಶಾಸನವೊಂದು ಅಮೋಘವರ್ಷನ ಮಹಾಸಾಮಂತಾಧಿಪತಿ ಸತ್ಯಾಶ್ರಯ ಶ್ರೀ ಭೀಮರಸನನ್ನು ಹೆಸರಿಸುತ್ತದೆ. 'ಸತ್ಯಾಶ್ರಯ' ಎಂಬ ಬಿರುದು ಭೀಮರಸನು ಕಲ್ಯಾಣ ಚಾಳುಕ್ಯ ಮೂಲದವನಿರ ಬಹುದೆಂದು ಕೆ. ಆರ್. ಗಣೇಶ ಅವರು ಅಭಿಪ್ರಾಯಪಡುತ್ತಾರೆ. ಅಹವಮಲ್ಲ ತೈಲನು ೯೯೭ರಲ್ಲಿ ನಿಧನನಾದ ತರುವಾಯ ಅವನ ಜೇಷ್ಠ ಪುತ್ರ ಸತ್ಯಾಶ್ರಯನು ಪಟ್ಟವೇರಿದನು. ಇಮ್ಮಡಿ ತೈಲನು ಚೋಳರ ಶಾಸನವೊಂದರಲ್ಲಿ ಉಕ್ತವಾಗಿರುವಂತೆ ರಟ್ಟಪಾಡಿ ಏಳೂವರೆ ಲಕ್ಷ ದೇಶವೆಂದು ಹೆಸರಾಗಿದ್ದ ಸಾಮ್ರಾಜ್ಯವೆಲ್ಲವನ್ನೂ ಕೈವಶ ಪಡಿಸಿಕೊಂಡಿದ್ದನೆಂದು ಪ್ರತೀತಿಯಿದೆ. ಈತನು ಮಾಳವದ ವಾಕ್ಪತಿ ಮುಂಜನನ್ನು ಸೋಲಿಸಿ ಕೊಂದು, ಮಳಖೇಡವನ್ನು ಸೂರೆಗೊಂಡು ರಾಷ್ಟ್ರಕೂಟ ರಾಜ್ಯದ ಖೊಟ್ಟಿಗನನ್ನು ಸೋಲಿಸಿದ್ದ ಸೀಯಕ ಹರ್ಷನ ತರುವಾಯದಲ್ಲಿ ಪಟ್ಟಕ್ಕೆ ಬಂದನೆಂಬ ಅಭಿಪ್ರಾಯವಿದೆ. ಮುಂಜನ ವಿರುದ್ಧ ಯುದ್ಧದಲ್ಲಿ ದೇವಗಿರಿಯ ಮಾಂಡಲಿಕ ಸೇವುಣ (ಯಾದವ) ಎರಡನೇ ಭಿಲ್ಲಮನು ತೈಲನಿಗೆ ನೆರವಾದನು. ಸತ್ಯಾಶ್ರಯನು ೯೯೭ರಿಂದ ೧೦೦೮ರವರೆಗೆ ರಾಜ್ಯವಾಳಿದನು. ಈತನಿಗೆ 'ಅಕಳಂಕ ಚರಿತ' ಮತ್ತು 'ಇರಿವ ಬೆಡಂಗ' ಎಂಬ ಬಿರುದುಗಳಿದ್ದವು. ಇಮ್ಮಡಿ ತೈಲನು ಆಳುತ್ತಿದ್ದ ಎಲ್ಲ ಪ್ರದೇಶಗಳೂ ಈತನ ವಶಕ್ಕೆ ಬಂದವು. ಇವನ ಮಹಾಸಾಮಂತನಾಗಿದ್ದ ಸೋಭನರಸನು ಕ್ರಿ. ಶ. ೧೦೦೨ರಲ್ಲಿ ಬೆಳವೊಳ-೩೦೦ ಪುಲಿಗೆರೆ-೨೦೦ ಕುಂದೂರು-೫೦೦ ಮತ್ತು ಕುಕ್ಕನೂರು-೩೦ ಈ ನಾಡುಗಳನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ದಕ್ಷಿಣಶಾಖೆಯ ಶಿಲಾಹಾರ ರಾಜ ಮಾಂಡಳಿಕ ರಟ್ಟರಾಜನು ಕೊಂಕಣ ಪ್ರದೇಶವನ್ನು ಆಳುತ್ತಿದ್ದು ಇವನ ಅಧಿಪತ್ಯಕ್ಕೆ ಒಳಪಟ್ಟಿದ್ದನು. ಇಮ್ಮಡಿ ತೈಲನು ಅಸಮ ಸಾಹಸಿಯಾಗಿದ್ದು ರಾಷ್ಟ್ರಕೂಟರನ್ನು ಸೋಲಿಸಿದ್ದೇ ಅಲ್ಲದೆ ನಂತರ ತನ್ನನ್ನು ಎದುರಿಸಿದ ಎಲ್ಲಾ ಮಾಂಡಳಿಕರನ್ನು ಹಾಗೂ ನೆರೆಯ ರಾಜರುಗಳನ್ನು ಬಗ್ಗುಬಡಿದು ಗುಜರಾತಿನವರೆಗೂ ದಂಡಯಾತ್ರೆ ನಡೆಸಿದನು. ಸತ್ಯಾಶ್ರಯನು ರಾಜರಾಜ ಕೇಸರಿವರ್ಮನೆಂಬ ಚೋಳರಾಜನೊಂದಿಗೆ ಯುದ್ಧವೆಸಗಿ ರಾಜೇಂದ್ರ ಚೋಳನನ್ನು ಪರಾಭವಗೊಳಿಸಿದನು. ಬಹುಶಃ ಈ ಯುದ್ಧವು ಕ್ರಿ. ಶ. ೧೦೦೭-೦೮ರಲ್ಲಿ ತಾವರೆಯ ಘಟ್ಟದಲ್ಲಿ ಸಂಭವಿಸಿರಬೇಕು. ಕನ್ನಡ ತ್ರಿರತ್ನ ಕವಿಗಳಲ್ಲಿ ಪ್ರಸಿದ್ಧನೆನಿಸಿರುವ ರನ್ನನು ಇರಿವಬೆಡಂಗ ಸತ್ಯಾಶ್ರಯನ ಆಸ್ಥಾನದಲ್ಲಿ ಶೋಭಿಸಿದ್ದನು. ಈತನ ಕಾಲದಲ್ಲಿ ಕನ್ನಡ ಸಾಹಿತ್ಯವು ಸರ್ವತೋಮುಖ ಪ್ರಗತಿಯನ್ನು ಹೊಂದಿತು.

ಐದನೇ ವಿಕ್ರಮಾದಿತ್ಯನ ತರುವಾಯ ಆತನ ತಮ್ಮ ಇಮ್ಮಡಿ ಜಯಸಿಂಹ ೧೦೧೮ರಲ್ಲಿ ಪಟ್ಟಕ್ಕೆ ಬಂದನು. ಈತನು ಜಗದೇಕಮಲ್ಲನೆಂದು ಪ್ರಸಿದ್ಧನಾಗಿದ್ದನು. ಈತನ ಹೆಂಡತಿ ಸುಗ್ಗಲಾದೇವಿಯು ವಚನಕಾರ ದೇವರ ದಾಸಿಮಯ್ಯನ ಶಿಷ್ಯೆಯಾಗಿದ್ದಳು. ಜಯಸಿಂಹನಿಗೆ ಹಮ್ಮಾ ಅಥವಾ ಅವ್ವಲ ದೇವಿಯೆಂಬ ಮಗಳಿದ್ದಳೆಂಬುದು ವ್ಯಕ್ತವಾಗುತ್ತದೆ. ಸೇವುಣ ದೇಶದರಸು ಮುಮ್ಮಡಿ ಬಿಲ್ಲಮನನ್ನು ಈಕೆ ಮದುವೆಯಾಗಿದ್ದಳೆಂದು ಪ್ರತೀತಿಯಿದೆ. ಜಯಸಿಂಹನಾಳ್ವಿಕೆಯ ಕಾಲದ ಹಲವಾರು ಶಿಲಾಶಾಸನಗಳು ತಾಮ್ರಪಟಗಳು ಉಪಲಬ್ಧವಿದ್ದು ೧೦೧೮ರಿಂದ ೧೦೪೨ರವರೆಗಿನವುಗಳಾಗಿವೆ. ಮುಂಜನ ತಮ್ಮನ ಮಗ, ಧಾರಾರಾಜ್ಯದ ಪರಮಾರ ಭೋಜರಾಜನ ಖ್ಯಾತಿಯನ್ನು ಜಯಸಿಂಹನು ಹರಣ ಮಾಡಿದ್ದನೆಂದು ಬಣ್ಣಿಸಲಾಗಿದೆ. ಈತನು ಚೋಳ ಮತ್ತು ಚೇರರನ್ನು ಗೆದ್ದು ಮಾಳವರ ಸಕಲ ಸೈನ್ಯ ಶಕ್ತಿಯನ್ನು ಸೈನ್ಯಕೂಟ ರಚಿಸಿ ದುರ್ಬಲ ಗೊಳಿಸಿದನೆಂದು ವರ್ಣಿಸಲಾಗಿದೆ.

ಜಯಸಿಂಹನ ಆಸ್ಥಾನದಲ್ಲಿ ಹಿರಿಯ ಅಧಿಕಾರಿಯಾಗಿದ್ದ (ಸಂಧಿವಿಗ್ರಹಿ) ದುರ್ಗಸಿಂಹನು ಕನ್ನಡ ಪಂಚತಂತ್ರವನ್ನು ಬರೆದನು. ಎರಡನೇ ಚಾವುಂಡರಾಯ ಎಂದು ಖ್ಯಾತನಾಗಿರುವ ಲೇಖಕನಿಂದ 'ಲೋಕೋಪಕಾರ' ಎಂಬ ಉದ್‌ಗ್ರಂಥವು ಕನ್ನಡದಲ್ಲಿ ರಚಿತವಾಗಿದ್ದು ಇದು ಜ್ಯೋತಿಶಾಸ್ತ್ರ ಆಯುರ್ವೇದ ಪಾಕಶಾಸ್ತ್ರ ವಾಸ್ತುವಿದ್ಯೆ ಮುಂತಾದ ವಿಷಯಗಳಿಗೆ ಸಂಬಂಧಿಸಿದೆ. ೧೦೪೨ರಲ್ಲಿ ಇಮ್ಮಡಿ ಜಯಸಿಂಹನ ತರುವಾಯ ಆತನ ಮಗ ಮೊದಲನೇ ಸೋಮೇಶ್ವರ ಅಧಿಕಾರಕ್ಕೆ ಬಂದನು. ಈತನಿಗೆ ತೈಲೋಕ್ಯಮಲ್ಲ ಮತ್ತು ಅಹವಮಲ್ಲ ಎಂಬ ಬಿರುದುಗಳಿದ್ದವು. ಇವನಾಳ್ವಿಕೆಯ ಶಾಸನಗಳಲ್ಲಿ ಈತನಿಗೆ ನಾಲ್ವರು ರಾಣಿಯರಿರುವುದು ವ್ಯಕ್ತವಾಗುತ್ತದೆ. ಹಾಗೂ ಇಮ್ಮಡಿ ಸೋಮೇಶ್ವರ ಆರನೇ ವಿಕ್ರಮಾದಿತ್ಯ ಮತ್ತು ಮುಮ್ಮಡಿ ಜಯಸಿಂಹ ಇವರುಗಳು ಈತನ ಮೊದಲ ರಾಣಿ ಬಾಚಲಾದೇವಿಯ ಮಕ್ಕಳೆಂದು ಉಲ್ಲೇಖಿಸಲಾಗಿದೆ. ಚಂದಲಾದೇವಿ ಅಥವಾ ಚಂದ್ರಿಕಾದೇವಿ ಎಂಬುವ ರಾಣಿಯು ಪಿರಿಯರಸಿ ಎಂದು ಕರೆಯಲ್ಪಟ್ಟಿದ್ದಾಳೆ. ನಂತರ ಬರುವ ಚಾಳುಕ್ಯ ರಾಣಿ ಮೈಳಲಾದೇವಿಯೆಂಬುವಳನ್ನೂ ಪಿರಿಯರಿಸಿ ಎಂದು ಕರೆಯಲಾಗಿದೆ. ಮೊದಲನೇ ಸೋಮೇಶ್ವರನ

ಆಳ್ವಿಕೆಯ ಹಲವಾರು ಶಾಸನಗಳು (೯೬೦ ರಿಂದ ೯೯೦) ಉಪಲಬ್ಧವಿದೆ. ಇವನ ನಂತರ ಎರಡನೇ ಸೋಮೇಶ್ವರನು (೧೦೬೮-೭೦) ಸೋಮೇಶ್ವರನ ಹಿರಿಯ ಮಗನಾಗಿದ್ದು ತನ್ನ ತಂದೆಯ ಕಾಲದಲ್ಲೇ ಬೆಳ್ವೊಲ ಪುಲಿಗೆರ ಪ್ರದೇಶಗಳ ಆಡಳಿತಾಧಿಕಾರಿಯಾಗಿದ್ದನು. ಈತನು ೧೦೬೮ರಲ್ಲಿ ಪಟ್ಟಕ್ಕೆ ಬಂದನು ಹಾಗೂ ಈತನು ಭುವನೈಕಮಲ್ಲ ನೆಂಬ ಬಿರುದನ್ನು ಹೊಂದಿದ್ದನು. ಇಮ್ಮಡಿ ಸೋಮೇಶ್ವರನು ಅಧಿಕಾರ ಲಲಾಸೆಯಿಂದ ಉನ್ಮತ್ತನಾಗಿ ಜನ ಕಲ್ಯಾಣವನ್ನು ಕಡೆಗಾಣಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಈತನ ತಮ್ಮ ವಿಕ್ರಮಾದಿತ್ಯನು ಈತನನ್ನು ಯುದ್ಧದಲ್ಲಿ ಸೋಲಿಸಿ ಸಾರ್ವಭೌಮಾಧಿಕಾರವನ್ನು ವಹಿಸಿಕೊಂಡ. 'ವಿಕ್ರಮಾಂಕ ದೇವಚರಿತಾ' ದಲ್ಲಿ ಬಿಲ್ಹಣನು ಇದನ್ನು ಅನುಮೋದಿಸುತ್ತಾನೆ.

ಇಮ್ಮಡಿ ಸೋಮೇಶ್ವರನ ತರುವಾಯ ೧೦೭೬ರಲ್ಲಿ ಆರನೇ ವಿಕ್ರಮಾದಿತ್ಯನು ಕಲ್ಯಾಣನಗರದಲ್ಲಿ ಪಟ್ಟಾಭಿಷಿಕ್ತನಾದನು. ೧೦೭೬ರಲ್ಲಿ ತನ್ನದೊಂದು (ವಿಕ್ರಮಶಕೆ) ಶಕೆಯನ್ನೇ ಪ್ರಾರಂಭಿಸಿದನು. ಬಿಲ್ಹಣನು ಈತನನ್ನು ತನ್ನ ಕೃತಿಯಲ್ಲಿ ಪರಮರ್ಧಿ ಎಂದು ಕರೆದಿರುವನು ಈತನಿಗೆ ತ್ರಿಭುವನಮಲ್ಲ ಪೆರ್ಮಾಡಿದೇವ ಎಂಬ ಬಿರುದುಗಳಿದ್ದವು. ವಿಕ್ರಮಾದಿತ್ಯನು ಕರ್ನಾಟಕದ ಹೆಮ್ಮೆಯ ಚಕ್ರವರ್ತಿ ದೀರ್ಘಕಾಲ (೧೦೭೬-೧೧೨೭) ಆಳ್ವಿಕೆ ಮಾಡಿದನು. ಅನೇಕ ಯುದ್ಧಗಳನ್ನು ನಡೆಸಿ ಇವನು ಸಾಮ್ರಾಜ್ಯದ ವಿಸ್ತರಣೆಯನ್ನು ಕೈಗೊಂಡನು. ವೆಂಗಿ ಚಾಳುಕ್ಯರಿಗೆ ಸೇರಿದ ಅನೇಕ ಪ್ರದೇಶಗಳನ್ನು ಗೆದ್ದುಕೊಂಡನು. ಆದರೆ ಪ್ರಮುಖವಾಗಿ ಶಾಂತಿ ಪ್ರಿಯನಾಗಿದ್ದುದರಿಂದ ಈತನ ಕಾಲದಲ್ಲಿ ಅನೇಕ ಜಲಾಶಯಗಳು ದೇವಾಲಯಗಳು ಮತ್ತು ಅಗ್ರಹಾರಗಳು ಸ್ಥಾಪನೆಯಾದುವು. ಈತನ ಆಸ್ಥಾನಕವಿ ಬಿಲ್ಹಣನು ವಿಕ್ರಮನ ವೈಭವೋಪೇರಿತ ಆಳ್ವಿಕೆಯನ್ನು ಬಣ್ಣಿಸಿದ್ದಾನೆ. ಮೂಲತಃ ಕಾಶ್ಮೀರದವನಾಗಿದ್ದ ಬಿಲ್ಹಣನು ರಚಿಸಿರುವ 'ವಿಕ್ರಮಾಂಕ ದೇವಚರಿತ'ದ ನಾಯಕನೇ ವಿಕ್ರಮಾದಿತ್ಯನೆಂಬುದು ಶಾಸನಾಧಾರಗಳಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಹಿಂದೂ ಕಾನೂನಿಗೆ ಆಧಾರಭೂತ ಕೃತಿಯಾದ 'ಮಿತಾಕ್ಷರ' ವನ್ನು ಈತನ ಆಸ್ಥಾನದಲ್ಲಿದ್ದ ಹಾಗೂ ಇದೇ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮರ್ತೂರಿಗೆ ಸೇರಿದ ವಿಜ್ಞಾನೇಶ್ವರನು ರಚಿಸಿದನು. ಈತನ ಪ್ರಕಾರ "ಕಲ್ಯಾಣದಂಥಾನಗರ ಹಿಂದಿರಲಿಲ್ಲ ಮುಂದಿರಲಾರದು. ವಿಕ್ರಮಾದಿತ್ಯನಂತ ಪ್ರಭು ಹಿಂದಿರಲಿಲ್ಲ ಹಾಗೂ ಮುಂದೆ ಬರಲಾರನೆಂದು ಪ್ರತ್ಯಕ್ಷವಾಗಿ ಕಂಡು ವರ್ಣಿಸಿರುವನು." ಈತನು ಚೋಳರನ್ನು ಮತ್ತೆ ಮತ್ತೆ ಸೋಲಿಸಿ ಕಂಚೀನಗರವನ್ನು ಸೂರೆಗೊಂಡಿದ್ದನು. ತ್ರೀಭುವನಮಲ್ಲನ ಮೂರನೇ ದಂಡಯಾತ್ರೆ ನಡೆದುದು ೧೦೯೭ರಲ್ಲಿ ಪರಮಾರ ನರವರ್ಮನ ಮೇಲೆ ನರವರ್ಮನ ಸಹೋದರನಾದ ಜಗ್ಗದೇವನಿಗೆ ತ್ರಿಭುವನ ಮಲ್ಲನು ರಕ್ಷಣೆಯನ್ನು ನೀಡಿ ಆಂಧ್ರಪ್ರದೇಶದ ಕೊಲ್ಲಿಪಾಕೆ ನಾಡನ್ನು ದತ್ತಿಯಾಗಿ ನೀಡಿದನೆಂದು ೧೧೦೭ರ ಕೊಲ್ಲಿಪಾಕದ ಶಾಸನವು ಉಲ್ಲೇಖಿಸುತ್ತದೆ. ಕಂಚಿಯರಸರನ್ನು ಸೆದೆಬಡಿದು ತನ್ನ ಆಕ್ರಮಣವನ್ನು ಬಂಗಾಳ ಅಸ್ಸಾಮಗಳವರೆಗೆ ವಿಸ್ತರಿಸಿದ್ದನು. ದಕ್ಷಿಣಾಪಥವನ್ನೆಲ್ಲಾ ಆಕ್ರಮಣಮಾಡಿ ಕೇರಳದರಸನನ್ನು ಸೋಲಿಸಿದ್ದ ಕಾಕತೀಯ ದೊರೆಗಳು ತ್ರಿಭುವನಮಲ್ಲನಿಗೆ ಮಹಾ ಮಂಡಳೇಶ್ವರರಾಗಿದ್ದರು. ಚಕ್ರವರ್ತಿಯಾಗುವುದಕ್ಕೆ ಮುಂಚಿತವಾಗಿ ೧೦೭೪ರಲ್ಲಿ ತ್ರಿಭುವನಮಲ್ಲನು ಗೊಂದವಾಡಿಯ ನೆಲವೀಡಿನಲ್ಲಿ ಆಳುತ್ತಿದ್ದನೆಂದು ರಾಯದುರ್ಗ (ಆಂಧ್ರಪ್ರದೇಶ) ತಾಲೂಕಿನ ಶಾಸನವು ತಿಳಿಸುತ್ತದೆ ಎಂದು ಕೆ. ಆರ್. ಗಣೇಶ್ ಅವರು ಅಭಿಪ್ರಾಯ ಪಡುತ್ತಾರೆ. ವಿಕ್ರಮನ ತಮ್ಮ ಜಯಸಿಂಹನು ಬನವಾಸಿ-೧೨೦೦೦, ಸಾಂತಲಿಗೆ -೧೦೦೦, ಬೆಳವೊಲ-೩೦೦, ಮುಂತಾದ ಪ್ರಾಂತ್ಯಗಳಿಗೆ ಮಹಾಮಂಡಳೇಶ್ವರನಾಗಿ -೧೦೮೩ರವರೆಗೆ ರಾಜ್ಯಭಾರ ನಡೆಸಿದನು. ಆದರೆ ನಂತರ ಇವನ ಹೆಸರು ಎಲ್ಲೂ ಕಂಡುಬರುವುದಿಲ್ಲ ಕಾರಣ ವಿಕ್ರಮಾದಿತ್ಯನ ವಿರುದ್ಧ ಈತನು ದಂಗೆಯಬ್ಬಿಸಿದನೆಂದು ಬಿಲ್ಹಣನ ಹೇಳಿಕೆಯನ್ನು ಒಪ್ಪಬಹುದಾಗಿದೆ. ಕರ್ನಾಟಕದ ಶಾಸನಾಧಾರಗಳ ಪ್ರಕಾರ ಜಯಸಿಂಹನು ೧೦೯೬ರಲ್ಲಿ ಏನಾದ ಎಂಬುದು ತಿಳಿಯದ ಪ್ರಶ್ನೆಯಾಗಿದೆ. ಆದರೆ ಹೈದರಾಬಾದಿನ ವಸ್ತುಸಂಗ್ರಹಾಲಯದಲ್ಲಿರುವ ಶಾಸನದ ಪ್ರಕಾರ ಹಾಗೂ ಶ್ರೀ ಮಲ್ಲಂಪಲ್ಲಿ ಸೋಮೇಶೇಖರ ಶರ್ಮ ಅವರ ಅಭಿಪ್ರಾಯದಂತೆ ತನ್ನ ವಿರುದ್ಧ ದಂಗೆ ಎದ್ದ ಜಯಸಿಂಹನನ್ನು ದೂರದ ವೆಂಗಿ ದೇಶಕ್ಕೆ ಅದಿಕಾರಿಯಾಗಿ ನೇಮಿಸಿ ಮಹತ್ವಾಕಾಂಕ್ಷಿ ಸೋದರನನ್ನು ವಿಕ್ರಮಾದಿತ್ಯನು ರಾಜಧಾನಿಯಿಂದ ದೂರವಿಟ್ಟನೆಂದು ತಿಳಿಸುತ್ತಾರೆ. ಈತನು ಲೋಂಬಳಿಕೆ-೭೦ ಅನ್ನು ಆಳುತ್ತಿದ್ದನೆಂದು ಶಾಸನವು ತಿಳಿಸುತ್ತದೆ. ಬಾ. ರಾ. ಗೋಪಾಲ್ ಅವರು ಶರ್ಮ ಅವರ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ. ಆದರೆ ಕೆ. ಆರ್. ಗಣೇಶ್ ಅವರ ಪ್ರಕಾರ ಶಾಸನದಲ್ಲಿ ಹೇಳಿರುವಂತೆ ಲೊಂಬಳಿಕೆ-೭೦ ಅನ್ನು ಮಹಾವೆಂಗಿ ಮಂಡಳಾಧೀಶ್ವರನು ಆಳುತ್ತಿದ್ದನೆಂಬುದು ಹೊಂದಾಣಿಕೆಯಾಗುವುದಿಲ್ಲ. ಮಹಾವೆಂಗಿ ಮಂಡಳಾಧೀಶ್ವರನಿಗೂ ಕುಮಾರ ವೃತ್ತಿಯಿಂದ ಲೋಂಬಳಿಕೆ-೭೦ ಅನ್ನು ಆಳುತ್ತಿದ್ದ ಮಹಾಮಂಡಳೇಶ್ವರ ಕುಮಾರ ಜಯಸಿಂಹನಿಗೂ ನಂಟು ಇರಬಹುದು. ಆದರೆ ಅವರು ಅಭಿನ್ನರಲ್ಲ. ವಿಕ್ರಮಾದಿತ್ಯನ ೧೦೮೮-೮೯ರ ನಿಂಬರಗಿಯ

ಶಾಸನದಲ್ಲಿ ಆತನು ನರ್ಮದಾ ನದಿಯನ್ನು ದಾಟಿಹೋಗಿ ಆ ನದಿಯ ಆಚೆಯ ದಡದ ರಾಜರನ್ನು ಗೆದ್ದನೆಂದು ತಿಳಿಸುತ್ತದೆ. ಆತನಿಗೆ ಜಯಕರ್ಣ ಮತ್ತು ಸೋಮೇಶ್ವರ ಎಂಬಿಬ್ಬರು ಗಂಡುಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳೂ ಇದ್ದರು ತನ್ನ ಮಗಳಾದ ಮೈಳಲಾದೇವಿಯನ್ನು ಈತನು ಇಮ್ಮಡಿ ಜಯಕೇಶಿಗೆ ಮದುವೆ ಮಾಡಿಕೊಟ್ಟಿದ್ದನು. ಈತನು ಸುಮಾರು ಐವತ್ತು ವರುಷಗಳ ಕಾಲದ ವೈಭವೋಪೇತ ಆಳ್ವಿಕೆಯ ತರುವಾಯ ಪಕ್ವವಾದ ವೃದ್ಧಾಪ್ಯದಲ್ಲಿ ನಿಧನನಾದನು. ವಿಕ್ರಮಾದಿತ್ಯನ ನಂತರ ಆತನ ಎರಡನೇ ಮಗನಾದ ಮುಮ್ಮಡಿ ಸೋಮೇಶ್ವರನು ೧೧೨೬ರಲ್ಲಿ ಅಧಿಕಾರಕ್ಕೆ ಬಂದನು. ಈತನು ಭೂಲೋಕಮಲ್ಲನೆಂಬ ಬಿರುದು ಧರಿಸಿ ಸರ್ವಜ್ಞ ಚಕ್ರವರ್ತಿ ಎಂದು ಜನಪ್ರಿಯನಾದನು. ಕರ್ನಾಟಕಾದ್ಯಂತ ಈತನಾಳ್ವಿಕೆಯ ಹಲವಾರು ಶಾಸನಗಳು ದೊರೆಯುತ್ತವೆ. ಸೋಮೇಶ್ವರನ ಆಳ್ವಿಕೆಯ ಅವಧಿಯಲ್ಲಿ ರಾಜಕೀಯ ಶಾಂತಿಯನ್ನು ಸ್ಥಾಪಿಸಿದ ಕಾರಣ ಸಾಂಸ್ಕೃತಿಕ ಸಾಧನೆಗಳಿಗೆ ಸಾಧ್ಯವಾಯಿತು. ಈತನು ಸ್ವತಃ ಉದ್ದಾಮ ಪಂಡಿತನಾಗಿದ್ದು ತನ್ನ ಆಳ್ವಿಕೆಯ ನಾಲ್ಕನೇ ವರುಷದಲ್ಲಿ 'ಅಭಿಲಾಷಿತಾರ್ಥಚಿಂತಾಮಣಿ' ಅಥವಾ 'ಮಾನಸೋಲ್ಲಾಸ' ಎಂಬ ಜ್ಞಾನಕೋಶವನ್ನು ರಚಿಸಿದನು. ಈತನು ದಕ್ಷಿಣಾಪಥದ ದಿಗ್ವಿಜಯ ಕೈಗೊಂಡನೆಂದು ಬಳ್ಳಿಗಾವೆಯ ಶಾಸನವೊಂದು ಉಲ್ಲೇಖಿಸುತ್ತದೆ. ಈತನಿಗೆ ಪೆರ್ಮಾ ಅಥವಾ ಹೆಮ್ಮಾಡಿ ಮತ್ತು ತೈಲಪ ಎಂಬಿಬ್ಬರು ಗಂಡು ಮಕ್ಕಳಿದ್ದರು. ಮುಮ್ಮಡಿ ಸೋಮೇಶ್ವರನು ೧೧೩೮ರಲ್ಲಿ ನಿಧನನಾಗಿರಬೇಕೆಂದು ತಿಳಿದುಬರುತ್ತದೆ. ಈತನ ತರುವಾಯ ಇವನ ಹಿರಿಯ ಮಗ ಪೆರ್ಮಾ ಇಮ್ಮಡಿ ಜಗದೇಕಮಲ್ಲನೆಂಬ ಬಿರುದಾಂಕಿತನಾಗಿ ಪಟ್ಟಕ್ಕೆ ಬಂದನು. ಈತನ ಶಾಸನಗಳು ಇವನನ್ನು ಪ್ರತಾಪ ಚಕ್ರವರ್ತಿ ಎಂದು ವರ್ಣಿಸಿವೆ. ಇಮ್ಮಡಿ ಜಗದೇಕಮಲ್ಲನ ತರುವಾಯ ಈತನ ತಮ್ಮ ಮುಮ್ಮಡಿ ತೈಲನು ಪಟ್ಟಕ್ಕೆ ಬಂದನು. ಮುಮ್ಮಡಿ ತೈಲ (೧೧೪೯-೧೧೬೨) ಹಾಗೂ ಜಗದೇಕಮಲ್ಲನ ಮಗ ನಾಲ್ಕನೇ ಸೋಮೇಶ್ವರ ಈತನ ಜೊತೆ ಜಂಟಿಯಾಗಿ ಆಳ್ವಿಕೆ ಮಾಡಿದನು. ಕಲಚೂರಿ ಬಿಜ್ಜಳನು ಈ ಸಮಯದಲ್ಲೇ ಅದಿಕಾರ ಗ್ರಹಣದಲ್ಲಿ ತೊಡಗಿದ್ದನು. ತೈಲಪನು ಕೆಲವುಕಾಲ ಆತನೊಂದಿಗೆ ಸೌಹಾರ್ದದಿಂದಿದ್ದು ಕಲ್ಯಾಣದಿಂದಲೇ ೧೧೫೫ರವರೆಗೆ ರಾಜ್ಯಬಾರ ನಡೆಸಿದ ೧೧೫೫ರಿಂದ ತೈಲಪನ ಪ್ರಭಾವ ದುರ್ಬಲಗೊಳ್ಳುತ್ತ ಹೋಯಿತು. ಚಾಳುಕ್ಯ ಸಾಮ್ರಾಜ್ಯದ ಮಂಡಳೇಶ್ವರರಲ್ಲಿ ಅಧಿಕಾರ ವರ್ಗಗಳಲ್ಲಿ ಅನೇಕರು ಬಿಜ್ಜಳನೇ ತಮ್ಮ ಸಾರ್ವಭೌಮನೆಂದು ಪರಿಗಣಿಸತೊಡಗಿದರು. ಇನ್ನೂ ನಿಷ್ಟೆ ತೋರಿಸುತ್ತಿದ್ದ ಹಲವು ಅಧಿಕಾರಿಗಳಿದ್ದರು. ಮುಮ್ಮಡಿ ತೈಲನ ಮರಣಾನಂತರ ಬಿಜ್ಜಳನು ಸ್ವತಂತ್ರ ಸಾರ್ವಭೌಮತ್ವವನ್ನು ಹೊಂದುವಂತಾಯಿತು. ಸ್ವಲ್ಪ ಕಾಲದಲ್ಲೇ ಹಂತ ಹಂತವಾಗಿ ಚಾಳುಕ್ಯ ಸಾಮ್ರಾಜ್ಯದ ಎಲ್ಲ ಪ್ರದೇಶಗಳ ಮೇಲೂ ತನ್ನ ಹಕ್ಕನ್ನು ಸ್ಥಾಪಿಸಿದನು. ಕೊನೆಗೆ ಇವನು ಈತನ ಮಕ್ಕಳೂ ೧೧೮೩ರವರೆಗೆ ಚಾಳುಕ್ಯರನ್ನು ಪೂರ್ವವಾಗಿ ಪದಚ್ಯುತಗೊಳಿಸಿ ಅದಿಕಾರದ ಪಟ್ಟವನ್ನು ಹಿಡಿದರು.

ಗುಲಬರ್ಗಾ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ನೂರಾರು ಶಿಲಾಶಾಸನಗಳು ಲಭ್ಯವಿದ್ದು ಅವುಗಳಲ್ಲಿ ಉಲ್ಲೇಖಿತ ಅಂಶಗಳನ್ನು ಇಲ್ಲಿ ಸ್ಥೂಲವಾಗಿ ಪರಿಚಯ ಮಾಡಲಾಗಿದೆ. ಚಾಳುಕ್ಯರ ಪ್ರಾರಂಭಕಾಲದ ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಿಲ್ಲ. ಆದರೆ ಈ ಕಾಲದ ಕೆಲವು ಮುಖ್ಯವಾದ ಆಡಳಿತ ವಿಭಾಗಗಳೆಂದರೆ ಸಗರ-೫೦೦, ಪೂರ್ವ ಪಶ್ಚಿಮಗಳಲ್ಲಿ ಅರಲು-೩೦೦ ಹಾಗೂ ವಿಜಾಪುರ ಜಿಲ್ಲೆ ಉತ್ತರ ದಕ್ಷಿಣದಲ್ಲಿ ಕೃಷ್ಣೆ-ಭೀಮೆಯರ ಮೇರೆಯಲ್ಲಿ ಸಗರನಾಡು ವ್ಯಾಪಿಸಿದ್ದಿತು. ಇದರಲ್ಲಿ ಕೆಂಭಾವಿ-೨೪ ನೆರೆಯುಂಬೊಳೆ-೭೦ ಮುಂತಾದ ಆಡಳಿತ ಘಟಕಗಳಲ್ಲದೆ ಏವೂರು, ಮುದನೂರು ಎಳೆರಾವೆ, ಕುಳಘೇರಿ, ಅಂದೇಲಿ, ಕೊಂಡಗುಳಿ, ಸಗರ, ಸಿರವಾಳ, ಇವು ಪ್ರಸಿದ್ಧ ಅಗ್ರಹಾರ ಮತ್ತು ನಖರ ಪಟ್ಟಣಗಳಾಗಿದ್ದವು. ಕಾಲಕಾಲಕ್ಕೆ ಈ ನಾಡಿನ ಆಡಳಿತ ಘಟಕಗಳಲ್ಲಿ ವ್ಯತ್ಯಾಸಗಳಾದಂತೆ ಕಂಡುಬರುತ್ತದೆ. ೧೦೭೭ ಹಾಗೂ ೧೧೦೬ ರ ಅವಧಿಯ ಏವೂರು, ಕೆಂಬಾವಿ ಶಾಸನಗಳಲ್ಲಿ ಸಗರ-೫೦೦ ಎಂದಿದೆ. ಸಗರ ನಾಡಿನ ಐತಿಹಾಸಿಕ ಘಟಕ ಕುರಿತು ಈ ಹಿಂದೆ ಫ್ಲೀಟ್ ಅವರು ಬರೆದಿರುವುದಲ್ಲದೆ ಇತರ ಐತಿಹಾಸಿಕ ಗ್ರಂಥಗಳಲ್ಲಿಯೂ ಪ್ರಕಟವಾಗಿದೆ. ಸುರಪುರ ತಾಲೂಕಿನ ದಕ್ಷಿಣಕ್ಕೆ ಕೃಷ್ಣಾನದಿಯ ಮೇರೆಯಾಗಿ ಹಗರಟಗಿ-೩೦೦ರ ನಾಡು ಚಾಳುಕ್ಯರಿಂದ ಯಾದವರ ಕಾಲದವರೆಗೆ ಅಸ್ತಿತ್ವದಲ್ಲಿತ್ತು. ಇದೊಂದು ನಖರಪಟ್ಟಣವಾಗಿದ್ದು ಅಗ್ರಹಾರವೆಂಬ ಖ್ಯಾತಿಯನ್ನು ಪಡೆದಿತ್ತು. ಗುಲಬರ್ಗಾ ಜಿಲ್ಲೆಯ ಅರಲು-೩೦೦ ಇಂದಿನ ಚಿತ್ತಾಪುರ ಹಾಗೂ ಸೇಡಂ ತಾಲೂಕುಗಳ ಪ್ರದೇಶವಾಗಿತ್ತು. ಅಲ್ಲೂರು ಎಂಬ ಈಗಿನ ಗ್ರಾಮವೇ ಅರಲು ಎಂದು ಗುರುತಿಸಲಾಗಿದೆ. ಜೇವರ್ಗಿ ತಾಲೂಕಿನ ಅಂದೇಲಿಯಲ್ಲಿ ದೊರೆತಿರುವ ಶಾಸನವು ಆಹವಮಲ್ಲ ಮೊದಲನೇ ಸೋಮೇಶ್ವರನ ಕಾಲಕ್ಕೆ (೧೦೫೦) ಸೇರಿದ್ದು ಚೆನ್ನಮಾಧವ ದೇವಾಲಯಕ್ಕೆ ಆತನು ನೀಡಿದ ದತ್ತಿಯನ್ನು ದಾಖಲಿಸುತ್ತದೆ. ಈತನ ಕಾಲದ (೧೦೫೩) ಇನ್ನೊಂದು ಶಾಸನವು ಕೆಂಭಾವಿ (ಸುರಪುರ ತಾಲೂಕು) ಯ ಸಿದ್ಧೇಶ್ವರ ದೇವಾಲಯದಲ್ಲಿದೆ.

ಮಾಹೀಷ್ಮತೀ ಪುರವರೇಶ್ವರ ಬಿರುದಾಂಕಿತನಾದ ರೇವರಸ ಮಹಾಮಂಡಲೇಶ್ವರನ ರಾಣಿ ಮಾಲಿಯಬ್ಬರಸೆಯು ಕೈಗೊಂಡ ಮಾಲಿಭೇಶ್ವರ ದೇವರ ಪ್ರತಿಷ್ಠಾಪನೆಯ ಬಗೆಗೆ ತಿಳಿಸುತ್ತದೆ. ಕೆಂಭಾವಿಯು ಸೋಮೇಶ್ವರನ ಕಾಲದ ಕೆಂಭಾವಿ-೨೪ ಎಂಬ ಮುಖ್ಯವಾದ ಆಡಳಿತ ಘಟಕವಾಗಿತ್ತು. ಇದೇ ಅರಸನ ಚಿತ್ತಾಪುರ ತಾಲೂಕಿನ ದಿಗ್ಗಾವಿಯಲ್ಲಿ ದೊರೆತ ಶಾಸನವು (೧೦೫೪) ತ್ರೈಲೋಕ್ಯಮಲ್ಲನ ಮಹಾಮಂಡಲೇಶ್ವರನಾದ ಬಾಚರಸ ಹಾಗೂ ಮಹಾಸಾಮಂತ ಯರಗರಸನು ಸ್ವಯಂಭೂ ಸೋಮೇಶ್ವರ ದೇವರಿಗೆ ನೀಡಿದ ದತ್ತಿ ಹಾಗೂ ದಿಗ್ಗಾವಿಯನ್ನು -೩೦೦ ಬ್ರಾಹ್ಮಣ ಪಂಡಿತರುಗಳಿದ್ದ ದಿಗ್ಗುವಿಗೆ (ದಿಗ್ಗಾವಿ) ಅಗ್ರಹಾರವೆಂದು ಉಲ್ಲೇಖಿಸುತ್ತದೆ. ಈ ಶಾಸನದ ಪ್ರಾರಂಭದಲ್ಲಿ ಚಾಳುಕ್ಯ ವಂಶಾವಳಿಯನ್ನು ಕೊಡಲಾಗಿದೆ.

ಸೋಮೇಶ್ವರನ (ಚಿತ್ತಾಪುರ ತಾಲೂಕು) ನಾಗಾಯಿ ಶಾಸನವು (೧೦೫೮) ಸ್ಥಳೀಯ ೬೦ ಕಂಬದ ದೇವಾಲಯದ ಮುಂಭಾಗದಲ್ಲಿದೆ. ಸುದೀರ್ಘವಾದ ಈ ಶಾಸನದಲ್ಲಿ ನಾಗಾವಿಯ ಅಗ್ರಹಾರದ ಘಟಿಕಾಸ್ಥಾನಕ್ಕೆ ಮಧುಪ ಅರಸ ದಣ್ಣಾಯಕನು ದತ್ತಿಬಿಟ್ಟ ವಿಚಾರವಿದೆ. ಇದೊಂದು ಪ್ರಾಚೀನ ವಿದ್ಯಾಕೇಂದ್ರವೆಂದು ವೇದಶಾಸ್ತ್ರ, ತರ್ಕ, ನ್ಯಾಯ ಮುಂತಾದ ವಿಷಯಗಳಲ್ಲಿ ವಿಶೇಷ ವಿದ್ಯಾರ್ಜನೆಗೆ ಅವಕಾಶವಿತ್ತೆಂದು ಶಾಸನವು ತಿಳಿಸುತ್ತದೆ. (ವಿವರಕ್ಕೆ ಅಧ್ಯಾಯ ೧೬ ನೋಡುವುದು) ಆರನೇ ವಿಕ್ರಮಾದಿತ್ಯನ ಅಥವ ತ್ರಿಭುವನಮಲ್ಲನ ಕಾಲದ ಶಾಸನಗಳು ಜಿಲ್ಲೆಯಾದ್ಯಂತ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಸುರಪುರ ತಾಲೂಕಿನ ಏವೂರಿನ ೧೦೭೮ರ ಶಾಸನವು ಮೂಲತಃ ತಾಮ್ರ ಶಾಸನವಾಗಿದ್ದು ಆನಂತರ ಕಲ್ಲಿನ ಮೇಲೆ (ನಕಲು) ಕೆತ್ತಲಾಗಿದೆ. ಇದರಲ್ಲಿ ಏವೂರಿನಲ್ಲಿ ವಿಕ್ರಮಾದಿತ್ಯನ ಹೇರಿಲಾಳ ಸಂಧಿವಿಗ್ರಹಿ ದಂಡನಾಯಕ ರವಿಯಣಭಟ್ಟನು ನಿರ್ಮಿಸಿದ ಸ್ವಯಂಭೂ ದೇವಾಲಯದ ಅಂಗ-ರಂಗಭೋಗ ವಿದ್ಯಾರ್ಥಿ ತಪೋಧನರಿಗೆ ಭೂಮಿಯನ್ನು ದತ್ತಿ ನೀಡಿದ ಬಗೆಗೆ ಉಲ್ಲೇಖವಿದೆ. ಈ ಶಾಸನದ ಉತ್ತರಭಾಗದಲ್ಲಿ ವಿಕ್ರಮಾದಿತ್ಯನ ಆಳ್ವಿಕೆಯ ಬಗೆಗೆ ಪ್ರಶಂಸನೀಯ ಚರಣಗಳಿವೆ. ರವಿದೇವ ಚಮೂಪತಿಯ ಆದೇಶದಂತೆ ಏವೂರಿನಲ್ಲಿನ ಸ್ವಯಂಭೂ ಸೋಮೇಶ್ವರ ದೇವಾಲಯವನ್ನು ಪೆರ್ಗ್ಗಡೆ ನಾಗವರ್ಮನಿಗೆ ವಹಿಸಿಕೊಟ್ಟ ವಿಷಯವು ಕಂಡುಬರುತ್ತದೆ. ಈಗ ತಾಲೂಕು ಕೇಂದ್ರವಾಗಿರುವ ಆಳಂದದಲ್ಲಿ ದೊರೆತಿರುವ ೧೧೮೨ರ ತ್ರಿಭುವನಮಲ್ಲನ ಕಾಲದ ಶಾಸನವು ಯುವರಾಜ ಮಲ್ಲಿಕಾರ್ಜುನನು ಅಲಂದೆ ಸಾಸಿರನಾಡಿನ ಅದಿಪತಿಯಾಗಿದ್ದಾಗ ಅವನ ಕೈಕೆಳಗಿನ ಪೆರ್ಗಡೆ ದಂಡನಾಯಕ ನಾಚರಸ ಹಾಗೂ ಸಾಮಂತ ಕಾಳಿದಾಸರು ಸ್ವಯಂಭೂ ಸೋಮೇಶ್ವರ ದೇವರಿಗೆ ಅಲ್ಲಿನ ಸ್ಥಾನಪತಿಗಳಾದ ಸೂರೇಶ್ವ ಪಂಡಿತರಿಗೆ ನೀಡಿದ ಹಲವು ದತ್ತಿಗಳನ್ನು ವಿವರಿಸುತ್ತದೆ. ಸುರಪುರ ತಾಲೂಕಿನ ಬೈಚಬಾಳದ ೧೦೭೪ರ ಆರನೇ ವಿಕ್ರಮಾದಿತ್ಯನ ಶಾಸನವು ಆತನ ದಂಡನಾಯಕನಾದ ಸಿಂಗರಸ ತನ್ನ ತಂದೆ ರೇಬ್ಬಣಯ್ಯನ ಪರೋಕ್ಷ ವಿನಯ ನಿಮಿತ್ತನಾಗಿ ಕಚ್ಚಿಗನೂರು ಬಸವನ ಕೆರೆಯ ಏರಿಯ ಮೇಲೆ ರೆಬ್ಬೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಎಳಮಲೆ ಸಿಂಹಘರ್ಷನ್ಮಂಡಲಿಯ ಮಲೆಯಾಳ ದೇವರ ಪ್ರಸಿದ್ಧ ಶಿಷ್ಯರಾದ ತೇಜೋರಾಶಿ ಪಂಡಿತರಿಗೆ ಕೆಂಭಾವಿ-೧೨ ವಿಭಾಗದಲ್ಲಿರುವ ಬೈಸಂಬಾಳ (ಬೈಚಬಾಳ) ಗ್ರಾಮವನ್ನು ದತ್ತಿಬಿಟ್ಟ ಬಗೆಗೆ ಉಲ್ಲೇಖಿಸುತ್ತದೆ.

ಸುರಪುರ ತಾಲೂಕಿನ ಮುದನೂರಿನಲ್ಲಿ ಆರನೇ ವಿಕ್ರಮಾದಿತ್ಯನ ಕಾಲದ ಐದು ಶಾಸನಗಳು ಕಂಡುಬರುತ್ತವೆ. ಮುದನೂರು ಶ್ರೀರಾಮದತ್ತಿ ಆಗ್ರಹಾರವೆಂದು ಪ್ರಸಿದ್ಧವಾಗಿತ್ತು. ಸಿಂಧವಂಶದ ಜೋಗಮರಸ (೧೧೦೫) ಗೋಮದೇವರಸ ಹಾಗೂ ಆಯ್ಯಣಾಮಾತ್ಯರು ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಮಹಾಮಂಡಲೇಶ್ವರರಾಗಿದ್ದರೆಂದು ಶಾಸನದಲ್ಲಿ ಉಲ್ಲೇಖಗೊಂಡಿದೆ. ಮೆಕೆನ್ಜಿ ಸಂಗ್ರಹದಲ್ಲಿರುವ ಶಾಸನವೊಂದರಲ್ಲಿ ಕಪ್ಪದೇವರಸನ ತಂದೆಯಾದ ಲಕ್ಷರಸನು ತ್ರಿಭುವನ ಮಲ್ಲನ ಮಹಾಮಂಡಳೇಶ್ವರನಾಗಿದ್ದ ವಿಚಾರ ತಿಳಿಯುತ್ತದೆ. ಚಿಕ್ಕಮುದನೂರಿನ ಭೃಂಗಗುಡಿಯ ಮುಂದಿರುವ ತ್ರಿಭುವನಮಲ್ಲನ ಶಾಸನವು ಅಗ್ರಹಾರ ಮುದಿನೀರ ಊರಿನ ಹಿರಿಯರು -೫೦೦ ಮಹಾಜನಗಳ ಸಮ್ಮುಖದಲ್ಲಿ ಕುಮಾರಸ್ವಾಮಿ ದಂಡನಾಯಕನು ಕುಮಾರೇಶ್ವರ ದೇವರನ್ನು ಪ್ರತಿಷ್ಠಾಪಿಸಿದ್ದನ್ನು ಉಲ್ಲೇಖಿಸುತ್ತದೆ. ಇದರ ಸಮೀಪದಲ್ಲಿರುವ ಹಿರೇಮುದನೂರಿನ ರಾಮನಾಥ ದೇವಾಲಯದಲ್ಲಿಯ ಇನ್ನೊಂದು ಶಾಸನವು ಮಹಾಮಂಡಲೇಶ್ವರ ಗೋಮದೇವರಸ ಹಾಗೂ ಮುದಿನೀರ ಮಹಾಜನರು ಅಗಸ್ತೇಶ್ವರ ದೇವರಿಗೆ ಸೇವೆಗಾಗಿ ಸ್ಥಾನಾಚಾರ್ಯ ತೇಜೋರಾಶಿ ಪಂಡಿತರಿಗೆ ನೀಡಿರುವ ಭೂದತ್ತಿಯನ್ನು ವಿವರಿಸುತ್ತದೆ. ಯಡ್ರಾಮಿ, ಮುದನೂರು, ಏವೂರು ಮುಂತಾದುವುಗಳು ಎಳಮೆಲೆ ಸಿಂಹಪರ್ಷೆಗಳ ಪ್ರಮುಖ ಶೈವ ಕೇಂದ್ರಗಳಾಗಿದ್ದವೆಂದು ತಿಳಿದುಬರುವುದು.

ಆರನೇ ವಿಕ್ರಮಾದಿತ್ಯ (೧೧೧೧)ನ ಆಡಳಿತಾವಧಿಯಲ್ಲಿ ಮಧುವಣಭಟ್ಟನ ಮಗ ಆದಿತ್ಯಭಟ್ಟನು ದಂಡಾಧೀಶನಾಗಿದ್ದನೆಂದು ಹಾಗೂ ಈತನು ಆದಿತ್ಯೇಶ್ವರ ದೇವಾಲಯವನ್ನು ಕಟ್ಟಿಸಿ ಹಲವು ದತ್ತಿಗಳನ್ನು ನೀಡಿದ ವಿವರಗಳನ್ನು ಯಡ್ರಾಮಿಯ ಶಾಸನ ಒಂದರಲ್ಲಿ ದಾಖಲಿಸಲಾಗಿದೆ. ಇದಲ್ಲದೇ ಈತನು ಲಕ್ಷ್ಮಣೇಶ್ವರ ತೀರ್ಥದ ಪಶ್ಚಿಮ ದಿಕ್ಕಿನಲ್ಲಿ 'ತ್ರಿಕೂಟ' ದೇವಾಲಯವನ್ನು ರಚಿಸಿದ ವಿಷಯವು ಸುಮಾರು ೧೨ನೇ ಶತಮಾನದ ಶಾಸನದಲ್ಲಿ ಉಲ್ಲೇಖಗೊಂಡಿದೆ. ವಿಕ್ರಮಾದಿತ್ಯನ ಕಾಲದ ಯಡ್ರಾಮಿಯ ಬಸವಣ್ಣನ ಗುಡಿಯ ಮುಂದಿರುವ ಶಾಸನವು ಸಗರನಾಡಿನ ಮಹಾಮಂಡಲೀಶ್ವರರಾದ ಹೇಹಯವಂಶದವರ ವಂಶಾವಳಿಯನ್ನು ವಿವರವಾಗಿ ನೀಡುತ್ತದೆ. ನಂತರ ೧೨ಜನ ಬ್ರಾಹ್ಮಣ ವಿದ್ವಾಂಸರ ಭೋಜನ ವ್ಯವಸ್ಥೆಗಾಗಿ ಎಳರಾಮೆಯ -೩೦೦ ಮಹಾಜನರು ಹೆಗ್ಗಡೆ ದಾಸಿ ರಾಜನಿಗೆ ನೀಡಿದ ಆರ್ಥಿಕ ನೆರವಿನ ಬಗೆಗೆ ಉಲ್ಲೇಖಿಸುತ್ತದೆ. ಇದೇ ಸ್ಥಳದಲ್ಲಿರುವ ವಿಕ್ರಮಾದಿತ್ಯನ ಕಾಲದ ಇನ್ನೊಂದು ಶಾಸನವು ಮಹಾಮಂಡಲೇಶ್ವರ ದೇವರಸನು ಜನ್ನದಬಾವಿಯ ಸ್ವಯಂಭೂ ದೇವಾಲಯಕ್ಕೆ ನೀಡಿದ ಹಲವು ದತ್ತಿಗಳನ್ನು ವಿವರಿಸುತ್ತದೆ. ಸುರಪುರದ ಶಾಸನಗಳಲ್ಲಿ ವಿಕ್ರಮಾದಿತ್ಯನ ರಾಣಿಯರ ಉಲ್ಲೇಖವಿದ್ದು, ಪಿರಿಯರಸಿ ಪಟ್ಟಮಹಾದೇವಿ, ಮಲಯಮತೀದೇವಿ, ಸ್ವಯಂವರದಲ್ಲಿ ವಿಕ್ರಮಾದಿತ್ಯನನ್ನು ವರಿಸಿದ ಶಿಲಾಹಾರ ರಾಜುಪುತ್ರಿ ಪಿರಿಯರಸಿ ಚಂದಲಾದೇವಿ, ಹಾಗೂ ತ್ರಿಭುವನಮಲ್ಲನ ಪ್ರಿಯಳಾದ ಧಾರಲಾದೇವಿ ಮುಂತಾದವರು. ಹುಣಸಗಿಯ ೧೧೨೦ರ ಶಾಸನದಲ್ಲಿ ಪಿರಿಯರಸಿ ಮಲಯಮತೀದೇವಿಯ ಪ್ರಶಂಸನೀಯ ಸೌಂದರ್ಯದ ಹಾಗೂ ದಾನಗುಣಗಳ ಉಲ್ಲೇಖವಿದೆ. ರಾಜನ ಕೋಳೂರಿನ ೧೦೯೧-೯೨ರ ಶಾಸನಗಳಲ್ಲಿ 'ತ್ರಿಭುವನಮಲ್ಲನ' ವಿಶಾಲ ವಕ್ಷಸ್ಥಳದ ನಿವಾಸಿ ಎಂದು ಚಂದಲಾದೇವಿಯ ಉಲ್ಲೇಖವಿದೆ. ಬೊಮ್ಮನಹಳ್ಳಿಯ ೧೧೦೭ರ ಶಾಸನದಲ್ಲಿ ಧಾರಲಾದೇವಿಯು ಜೈನಧರ್ಮದವಳೆಂದೂ, 'ಮಹಾಸತಿ ತಿಳಕೆ' ಎಂಬ ಬಿರುದು ಇದ್ದುದು ವ್ಯಕ್ತವಾಗುತ್ತದೆ. ಇದೇ ಶಾಸನದಲ್ಲಿ ಮಹಾಮಂಡಲೇಶ್ವರ ದೇವರಸನ ಉಲ್ಲೇಖವಿದೆ. ಏವೂರಿನ ಬಸವಣ್ಣ ದೇವರ ಗುಡಿಯ ಬಳಿಯಿರುವ ಶಾಸನವು (೧೧೦೮) ವಿಕ್ರಮಾದಿತ್ಯನ ದಂಡನಾಯಕ ಮುದ್ದರಸನು ಸ್ಥಳೀಯ ಸ್ವಯಂಭೂ ಸೋಮೇಶ್ವರ ದೇವಾಲಯಕ್ಕೆ ಹಲವು ಸುಂಕ ರಿಯಾಯಿತಿಯನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ. ಗುಲಬರ್ಗಾ ತಾಲೂಕಿನ ಮರ್ತೂರಿನ ೧೧೨೩ರ ತ್ರಿಭುವನಮಲ್ಲನ ಶಾಸನವು 'ಮಿತಾಕ್ಷರ' ವನ್ನು ಬರೆದ ವಿಜ್ಞಾನೇಶ್ವರ ಭಟ್ಟಾರಕನ ಮಗ ಪೆರ್ಗಡೆ ಬೀಚರಾಜನು ಮರಿತೂರಲು (ಮರ್ತೂರು) ಕೇಶವ ದೇವರನ್ನು ಪ್ರತಿಷ್ಠಾಪಿಸಿದ ಬಗೆಗೆ ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ವಿಜ್ಞಾನೇಶ್ವರನ ಉಲ್ಲೇಖವಿರುವುದರಿಂದ ಇದೊಂದು ಮುಖ್ಯವಾದ ದಾಖಲೆಯಾಗಿದೆ ಎಂದು ಹೇಳಲಾಗುತ್ತದೆ.

## ಕಲ್ಯಾಣದ ಕಲಚೂರಿಗಳು

ಈ ವಂಶದವರನ್ನು ಕಲಚೂರಿ ಎಂದು ಕರೆದರೂ ಕೂಡ 'ಕೇಟಚೂರಿ', 'ಕಲಟ್‌ಚೂರಿ', 'ಕಲಿಚೂರಿ' ಎಂಬ ಪದಗಳೂ ಶಾಸನಗಳಲ್ಲಿ ಕಂಡುಬರುತ್ತವೆ. ಇವರು ಮೂಲತಃ ಮಧ್ಯಭಾರತದಿಂದ ಬಂದವರೆಂದೂ 'ಯದು' ಮತ್ತು 'ಸಹಸ್ರಚಿತ್' (ಕಾರ್ತಿವೀರ್ಯ) ಅವರ ವಂಶಜರೆಂದು ಕರೆದು ಕೊಳ್ಳುತ್ತಾರೆ. ಇವರು ಹೈಹಯ (ಚೇದಿ) ಕುಟುಂಬದವರೆಂದೂ ಕರೆಯಲಾಗುತ್ತದೆ. ಇವರು ಮೊದಲು 'ಕಾಲಂಜರಾ' (ಬುಂಡೇಲ್‌ಖಂಡದ ಬಂಡಾ ಜಿಲ್ಲೆಯಲ್ಲೆ) ದಿಂದ ಆಳುತ್ತಿದ್ದು ಮಾಳವ, ಗುಜರಾತ್, ಕೊಂಕಣ ಮತ್ತು ಮಹಾರಾಷ್ಟ್ರಗಳಲ್ಲಿ ಇವರ ಶಾಖೆಗಳಿದ್ದವೆಂದು ತಿಳಿದುಬರುತ್ತದೆ. ಶಿವಮೊಗ್ಗ ಜಿಲ್ಲೆಯ ಬಂದಳಿಕೆಯ ೧೧೭೪ರ ಶಾಸನದಲ್ಲಿ 'ಕಲಚೂರಿ' ಎಂಬ ಪದವು ಹೇಗೆ ಬಂದಿತೆನ್ನುವುದಕ್ಕೆ ಒಂದು ವಿವರಣೆಯಿದೆ. ದ್ರೋಣಾಚಾರ್ಯರ ಮಗ ಅಶ್ವತ್ಥಾಮನ ಅನುಯಾಯಿ ಅಥವಾ ಶಿಷ್ಯ ಸೋಮನೆಂಬಾತನು ಈ ಸಂತತಿಯ ಸ್ಥಾಪಕನೆಂದು ತಿಳಿದುಬರುತ್ತದೆ. ರಾಯಮುರಾರಿ ಸೋವಿದೇವನ ೧೧೭೦ರ ಶಾಸನದಲ್ಲಿ ಶಿವನಿಂದ ಈ ಸಂತತಿ ಉದ್ಭವಿಸಿತು ಎಂದು ತಿಳಿದು ಬಂದಿದೆ. ಕಲಚೂರಿಗಳು ಶಿವನಿಂದಲೇ (ಶಿವಾಂಶ ಸಂಭೂತ) ಉದ್ಭವಿಸಿದರೆಂದು ಅವರ ಶಾಸನಗಳಲ್ಲಿ ವಿವರಿಸಲ್ಪಟ್ಟಿದೆ. ಕರ್ನಾಟಕವನ್ನಾಳಿದ 'ಕಲಚೂರಿಗಳು' ಕಾಲಂಜರಾ ಪುರವರಾಧೀಶ್ವರರೆಂದು ತಮ್ಮನ್ನು ತಾವು ಕರೆದುಕೊಂಡಿರುತ್ತಾರೆ. ಈ ಬಿರುದು ಅವರು ಕೇಂದ್ರಭಾರತದ ಮೂಲನಿವಾಸಿಗಳೆಂಬ ವಾದಕ್ಕೆ ಪುಷ್ಟಿಕೊಡುತ್ತದೆ. ಇವರು ತಮ್ಮ ಲಾಂಛನವನ್ನಾಗಿ 'ಸುವರ್ಣವೃಷಭ' ನಂದಿಯನ್ನು ಸ್ವೀಕರಿಸಿದ್ದರು. ಉತ್ತರ ಭಾರತದ ಗೋರಖ್‌ಪುರ ಮತ್ತು ತ್ರಿಪುರಿಯ ಕಲಚೂರಿಗಳೂ ಸಹ ನಂದಿಯನ್ನು ತಮ್ಮ ಲಾಂಛನವನ್ನಾಗಿ ಮಾಡಿಕೊಂಡುದು ಇಲ್ಲಿ ಗಮನೀಯವಾಗಿದೆ. ಕಲ್ಯಾಣಿ ಚಾಳುಕ್ಯರ ಮಂಡಳಿಕರೂ ಬೀಗರೂ ಆದ ಕಲಚೂರಿಗಳು ಕ್ರಿ. ಶ. ೧೧೬೨ರಲ್ಲಿ ರಾಜ್ಯ ಗ್ರಹಣ ಮಾಡಿದರು. ಉಚ್ಚಿತ, ಬಿಜ್ಜಳ, ಕರ್ಣ, ಜೋಗಮ ಇವರೆಲ್ಲ ಅನುಕ್ರಮವಾಗಿ ಆಳಿದ ಈ ವಂಶದ ಮಾಂಡಳಿಕರಾಗಿದ್ದು ತರಿಕಾಡುನಾಡು

ಪ್ರದೇಶವನ್ನು ಮಂಗಳವೇಡೆಯಿಂದ ಆಳುತ್ತಿದ್ದ ಜೋಗಮನ ಮಗ ಪೇರ್ಮಾಡಿಯು ಆರನೇ ವಿಕ್ರಮಾದಿತ್ಯನ ಮಗಳು ಸಾವಳಾದೇವಿಯನ್ನು ವರಿಸಿದ್ದನು. ಸಾವಳದೇವಿಯ ಮಗನಾದ ಎರಡನೇ ಬಿಜ್ಜಳ ೧೧೨೯ರ ಸುಮಾರಿಗೆ ತರಿಕಾಡುನಾಡು, ಕರಾಡ-೪೦೦೦ ಹಾಗೂ ತರ್ದವಾಡಿ-೧೦೦೦ ಮಾಂಡಳಿಕನಾಗಿ ೧೧೫೬ರಲ್ಲಿ ಸ್ವತಂತ್ರನಾಗಿ ಘೋಷಿಸಿಕೊಂಡು ಆಳ್ವಿಕೆ ಮಾಡಲಾರಂಭಿಸಿದನು. ಬಿಜ್ಜಳನು 'ಮಹಾರಾಜಾಧಿಕಾರ' 'ಕಾಲಂಜ ಪುರವರಾಧೀಶ್ವರ' 'ಸುವರ್ಣವೃಷಭಧ್ವಜ' ಮುಂತಾದ ಬಿರುದುಗಳನ್ನು ಧರಿಸಿದ್ದನೆಂದು ಶಾಸನಗಳು ತಿಳಿಸುತ್ತವೆ.

ಇಮ್ಮಡಿ ಬಿಜ್ಜಳನು (೧೧೨೯-೧೧೬೮) ಸಮರ್ಥ ಅರಸನಾಗಿದ್ದು ತನ್ನ ಮಾಂಡಳಿಕರನ್ನೆಲ್ಲಾ ಹತೋಟಿಯಲ್ಲಿಟ್ಟಿದ್ದನು. ಮೂರನೇ ತೈಲನು ೧೧೬೨ರಲ್ಲಿ ನಿಧನ ಹೊಂದಿದಾಗ ಕಲ್ಯಾಣದ ಚಕ್ರವರ್ತಿಯಾದನು. ಬಿಜ್ಜಳನು ಬಂಡೆದ್ದ ಹೊಯ್ಸಳ ನರಸಿಂಹ ಹಾಗೂ ಉಚ್ಚಂಗಿಯ ವಿಜಯ ಪಾಂಡ್ಯನನ್ನು ಬಗ್ಗಿಸಿದನು. ಇದಲ್ಲದೇ ಸೇವುಣರು, ಚೋಳರು, ಆಂಧ್ರದ ಚೋಡರು ಹಾಗೂ ಕಳಿಂಗದ ಗಂಗ ರಾಘವನನ್ನೂ ಮತ್ತು ಗುಜರಾತಿನ ಚಾಳುಕ್ಯ ಕುಮಾರಪಾಲನನ್ನು ಸೋಲಿಸಿದನು. ಬಿಜ್ಜಳನಿಗೆ ಬಿಜ್ಜ, ವಿಜ್ಜಳ ಮತ್ತು ಬಿಜ್ಜಣ ಎಂಬ ಹೆಸರುಗಳಿದ್ದವು. ಅವನ ಹೆಸರು ಮೊದಲು ೧೧೪೨ರ ವಿಜಾಪುರದ ಶಾಸನದಲ್ಲಿ 'ಬಿಜ್ಜಳ ಕೋಣೆಪಾಲ' ಎಂದು ಸೂಚಿಸಲ್ಪಟ್ಟಿದೆ. ತರ್ದವಾಡಿಯನ್ನು ಆಳಲು ನೇಮಿಸಲ್ಪಟ್ಟ ಮೈತರಯ್ಯನೆಂಬ ಅಧಿಕಾರಿಯ ಹೆಸರಿನ ಜೊತೆ ಈ ಉಲ್ಲೇಖವಿದೆ. ಬಿಜ್ಜಳನನ್ನು ಮಹಾಮಂಡಳೇಶ್ವರನೆಂದು ಕರೆಯುತ್ತಿದ್ದುದು ವ್ಯಕ್ತವಾಗುತ್ತದೆ. ಆದರೆ, ಅನಂತರ ಅವನನ್ನು ದಂಡನಾಯಕ ಮತ್ತು ಮಹಾಪ್ರಧಾನನೆಂದು ಕರೆಯಲಾಗಿದೆ. ಸುಮಾರು ೧೧೫೦ರಲ್ಲಿ ಮೂರನೇ ತೈಲಪನು ಕಲ್ಯಾಣದ ಚಕ್ರವರ್ತಿ ಜಗದೇಕಮಲ್ಲನ ಮರಣಾನಂತರ ಸಿಂಹಾಸನವನ್ನೇರಿದನು. ಅಷ್ಟರಲ್ಲಿ ಬಿಜ್ಜಳನು ಪ್ರಭಾವಶಾಲಿಯಾಗಿದ್ದನೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ವೀರಶೈವ ಧರ್ಮ ಪ್ರವರ್ತಕರು ಮತ್ತು ಸಾಮಾಜಿಕ ಸುಧಾರಕ ಬಸವಣ್ಣನವರು ಬಿಜ್ಜಳನ ಭಂಡಾರಿಯೂ ಆಗಿದ್ದರು. ಬಸವಣ್ಣನವರು ವಿಜಾಪುರ ಜಿಲ್ಲೆಯ (ಅಗ್ರಹಾರ) ಬಾಗೇವಾಡಿಯಲ್ಲಿ (ಬಸವನ ಬಾಗೇವಾಡಿ) ಮಾದರಸ ಮತ್ತು ಮಾದಲಾಂಬಿಕೆಯ ಪುತ್ರರಾಗಿ ಶೈವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರು ಸುಮಾರು ೧೧೦೫ರಿಂದ ೧೧೬೭ರ ವರೆಗೆ ಜೀವಿಸಿದ್ದರೆಂಬ ಅಭಿಪ್ರಾಯವನ್ನು ಬಹುಜನ ವಿದ್ವಾಂಸರು ಒಪ್ಪಿದ್ದಾರೆ. ಆದರೆ ಇತ್ತೀಚೆಗೆ ಜಿ. ಎಸ್. ದೀಕ್ಷಿತ್‌ರವರು ತೆಲಗು ಭಾಷೆಯಲ್ಲಿರುವ ಪಂಡಿತಾರಾಧ್ಯ ಚರಿತ್ರೆ ಹಾಗೂ ಕರ್ನೂಲು ಜಿಲ್ಲೆಯ ಸಂಗಮೇಶ್ವರ ಶಾಸನವನ್ನು ಆಧರಿಸಿ ಬಸವಣ್ಣನವರು ಸುಮಾರು ೧೧೮೪ರ ವರೆಗೆ ಜೀವಿಸಿದ್ದರೆಂದು ಅಭಿಪ್ರಾಯಪಡುತ್ತಾರೆ. ವೀರಶೈವ ಅಥವಾ ಲಿಂಗಾಯತ ಧರ್ಮವು ಇವರ ಕಾಲದಲ್ಲಿ ಹೆಚ್ಚು ಜನಪ್ರಿಯವಾಯಿತು.

ಬಿಜ್ಜಳನ ಭಂಡಾರಿ ಬಸವಣ್ಣನವರ ನೇತೃತ್ವದಲ್ಲಿ ಆದ ವೀರಶೈವ ಜಾಗೃತಿ ಕಲ್ಯಾಣಕ್ಕೆ ದೂರದಿಂದ ಶಿವಶರಣರನ್ನು ಆಕರ್ಷಿಸಿ ಅಲ್ಲಿ ಅನುಭವ ಮಂಟಪದ ಸ್ಥಾಪನೆಗೂ ನಾಂದಿಯಾಯಿತು. ಬಸವಣ್ಣನವರು ಜಾತಿ ಭೇದ ಮೇಲು ಕೀಳು ಮುಂತಾದ ಭಾವನೆಗಳನ್ನು ತೊರೆದು ಹಾಕಿದರು. ಕಾಯಕದ ಮಹತ್ವವನ್ನು ಅರುಹಿ ಸತ್ಯಶುದ್ಧಕಾಯಕ ಪ್ರತಿಪಾದಿಸಿದರು. ಶರಣರೆಲ್ಲಾ ಒಂದೇ ಎಂಬ ವಾದವನ್ನು ಪ್ರತಿಪಾದಿಸಿ ಅಸ್ಪೃಶ್ಯ ಜಾತಿಯ ತರುಣನ ಜೊತೆ ಬ್ರಾಹ್ಮಣ ತರುಣಿಯೋರ್ವಳ ವಿವಾಹವನ್ನು ಬಸವಣ್ಣನವರು ಏರ್ಪಡಿಸಿದಾಗ ವರ್ಣಾಶ್ರಮ ಧರ್ಮಕ್ಕೆ ಚ್ಯುತಿಯಾಯಿತೆಂಬ ಕಾರಣದಿಂದ ಸನಾತನಿಗಳು ಮತ್ತು ಸಂಪ್ರದಾಯಸ್ಥ ಶರಣರು ಬಿಜ್ಜಳನಿಗೆ ದೂರಿಟ್ಟು ವರ್ಣಾಶ್ರಮಧರ್ಮ ರಕ್ಷಣೆ ರಾಜನ ಕರ್ತವ್ಯವೆಂದು ಒತ್ತಾಯ ಮಾಡಿದಾಗ ಮದುವೆ ನಡೆಸಿದ ವಧೂವರರ ತಂದೆ ಹರುಳಯ್ಯ ಹಾಗೂ ಮದುವಯ್ಯರಿಗೆ ಬಿಜ್ಜಳನು ಮರಣದಂಡನೆ ನೀಡಿದನು. ಕಲ್ಯಾಣದ ಕ್ಷೋಭೆಯಿಂದ ನೊಂದ ಬಸವಣ್ಣನವರು ರಾಜಧಾನಿ ತ್ಯಜಿಸಿ ಕಪ್ಪಡಿ (ಕೂಡಲ) ಸಂಗಮಕ್ಕೆ ತೆರಳಿ ಅಲ್ಲಿ ಐಕ್ಯರಾದರು. ಕಲ್ಯಾಣದಲ್ಲಿ ಭಾರೀ ಕೋಲಾಹಲವಾಗಿ ಬಿಜ್ಜಳನ ಕೊಲೆಯಾಯಿತು. ಈ ಕೊಲೆಗೆ ಜಗದೇವ, ಮಲ್ಲಿದೇವ ಕಾರಣರಾದರೆಂಬ ಅಭಿಪ್ರಾಯವಿದೆ. ಇದನ್ನೇ ಕಾರಣವಾಗಿಟ್ಟುಕೊಂಡು ಬಿಜ್ಜಳನ ಸೈನ್ಯವು ಶರಣರ ಬೇಟೆಗೆ ತೊಡಗಲು ಶರಣರು ಕಲ್ಯಾಣ ಬಿಟ್ಟು ವಚನ ಸಾಹಿತ್ಯದೊಂದಿಗೆ ದೂರದ ಸ್ಥಳಗಳಿಗೆ ಚದುರಿ ಹೋದರು. ಆಗ ಬಸವಣ್ಣನ ಸೋದರಳಿಯ ಚನ್ನಬಸವಣ್ಣ ಹಾಗೂ ಸೋದರಿ ಅಕ್ಕನಾಗಮ್ಮ ಇತರ ಶರಣರೊಂದಿಗೆ ಧಾರವಾಡ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮಾರ್ಗವಾಗಿ ಉಳವಿಗೆ ಹೋದರೆಂದು ಪ್ರತೀತಿಯಿದೆ.

ಬಿಜ್ಜಳನು ತಾನು ಜೀವಂತವಿದ್ದಾಗಲೇ ೧೧೬೭ರಲ್ಲಿ ತನ್ನ ಹಿರಿಮಗ ಸೋವೀದೇವನಿಗೆ ಅಧಿಕಾರವಿತ್ತಿದ್ದನು. ಅವನನ್ನು ಸೋಮೇಶ್ವರ ಮತ್ತು ರಾಯಮುರಾರಿ ಸೋಯಿದೇವ ಎಂದು ಕರೆಯುತ್ತಿದ್ದರು. ಅವನ ಶಾಸನಗಳು ಕಲ್ಯಾಣದಿಂದ ಬಳ್ಳಿಗಾವೆವರೆಗಿನ ವಿಸ್ತಾರ ಪ್ರದೇಶದಲ್ಲಿ ದೊರೆತಿವೆ.

ಸೋವಿದೇವನ ನಂತರ ಅವನ ಕಿರಿಯ ಸಹೋದರ ಸಂಕಮನು ಅಧಿಕಾರಕ್ಕೆ ಬಂದು ಸೋವಿದೇವನ ಬಿರುದುಗಳನ್ನೆಲ್ಲಾ ಪಡೆದನು. ನಿಶ್ಶಂಕಮಲ್ಲನೆಂಬುದು ಅವನ ಒಂದು ಬಿರುದಾಗಿತ್ತು. ಸಂಕಮನ ನಂತರ ಆತನ ಕಿರಿಯ ಸೋದರನು ಅಧಿಕಾರಕ್ಕೆ ಬಂದನು. ಅವು ಅಹವಮಲ್ಲ ವೀರನಾರಾಯಣ ಎಂಬ ಬಿರುದಿನಿಂದಷ್ಟೇ ಪರಿಚಿತನಾಗಿದ್ದನು. ಅವನ ಶಾಸನಗಳ ಪ್ರಕಾರ ಅವನು ತನ್ನ ಪೂರ್ವಜರ ಎಲ್ಲ ಬಿರುದುಗಳನ್ನೂ ಧರಿಸಿದ್ದನು. ಅವನು ಸುಮಾರು ೧೧೮೦ರ ಅಂತ್ಯದ ವೇಳೆಗೆ ಅಧಿಕಾರಕ್ಕೆ ಬಂದನೆಂದು ತಿಳಿದು ಬರುತ್ತದೆ. ಅವನು ತನ್ನ ಸಹೋದರನ ಜೊತೆಗೆ ಆಡಳಿತದಲ್ಲಿ ಸಹಭಾಗಿಯಾಗಿದ್ದಿರಬೇಕು. ಅಹವಮಲ್ಲನ ಕಿರಿಯ ಸಹೋದರ ಸಿಂಗಣನು ಅಣ್ಣನ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು, ತನ್ನ ಹಿಂದಿನ ಸಾಮ್ರಾಜ್ಯದ ಬಿರುದುಗಳನ್ನೆಲ್ಲ ಧರಿಸಿದ್ದನು. ಈತನ ವಿಚಾರವು ಹೆಚ್ಚಿಗೆ ತಿಳಿದು ಬರುವುದಿಲ್ಲ. ೧೧೮೩ರಲ್ಲಿ ದಂಡನಾಯಕ ಬರ್ಮ ಅಥವಾ ಬರ್ಮರಸರಿಂದ ಅಧಿಕಾರವೆಲ್ಲವೂ ಕಲ್ಯಾಣ ಚಾಳುಕ್ಯರ ವಂಶದ ನಾಲ್ಕನೇ ಸೋಮೇಶ್ವರನಿಗೆ ವಹಿಸಲ್ಪಟ್ಟಿತು. ಹೀಗೆ ಕಲಚೂರ್ಯರ ಆಳ್ವಿಕೆಯು ಕೇವಲ ೨೬ ವರ್ಷಗಳ ಸಂಕ್ಷಿಪ್ತ ಅವಧಿಯಾಗಿದ್ದರೂ ಕೂಡ ದಕ್ಷಿಣ ಭಾರತದ ಇತಿಹಾಸದಲ್ಲಿ ಅದು ಮಹತ್ವಪೂರ್ಣವಾದುದೂ, ಉಲ್ಲೇಖನೀಯವಾದುದೂ ಆಗಿದೆ. ಕಲಚೂರ್ಯರ ಪ್ರಾಬಲ್ಯವು ಚಾಳುಕ್ಯರ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು. ವೀರಶೈವ ಧರ್ಮದ ಜನಪ್ರಿಯತೆ ಬೌದ್ಧ ಮತ್ತು ಜೈನಧರ್ಮಗಳ ಉನ್ನತಿಗೆ ಕಾರಣವಾಯಿತು. ವೀರಶೈವಧರ್ಮವು ಸಮಾಜೋ - ಧಾರ್ಮಿಕ ಧೋರಣೆಯಿಂದಾಗಿ ಜನಪ್ರಿಯ ಪಂಥವಾಗಿ ಅನೇಕ ಶತಮಾನಗಳ ಕಾಲ ಜನ ಸಾಮಾನ್ಯರ ಹೃದಯದಲ್ಲಿ ಸ್ಥಾನ ಪಡೆಯಿತು. ಇದೇ ಕಾಲದಲ್ಲಿ ಮೂಡಿ ಬಂದ ವಚನ ಸಾಹಿತ್ಯ, ಕನ್ನಡ ಸಾಹಿತ್ಯದಲ್ಲೂ ಒಂದು ಹೊಸ ಆಯಾಮವಾಗಿ ಬೆಳೆದು ಬಂತು.

ಗುಲಬರ್ಗಾ ಜಿಲ್ಲೆಯಲ್ಲಿ ಕಲಚೂರಿಗಳ ಕಾಲದ ಸುಮಾರು ೫೦ ಶಾಸನಗಳು ಇಲ್ಲಿಯವರೆಗೂ ಲಭ್ಯವಿದ್ದು ಅವುಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಸೇಡಂ ತಾಲೂಕಿನ ಅಡಕಿ ಗ್ರಾಮದ ರಾಯಮುರಾರಿ ಸೋವಿದೇವನ ೧೧೭೫ರ ಶಾಸನವು ಮಹಾಪ್ರಧಾನ ದಂಡನಾಯಕ ಏಚರಸನು ಹಾಗೂ ಬಾಚಿದೇವರಸನೂ ಅಡಕಿಯ ಚೆನ್ನ ಪಾರ್ಶ್ವನಾಥ ಜಿನಾಲಯಕ್ಕೆ ನೀಡಿದ ಹಲವು ದತ್ತಿಗಳನ್ನು ಉಲ್ಲೇಖಿಸುತ್ತದೆ. ಕಳಚೂರಿ ಅರಸರ ಕಾಲದ ಜೈನ ಶಾಸನಗಳೇ ಈ ಜಿಲ್ಲೆಯಲ್ಲಿ ವಿರಳವಾಗಿರುವಾಗ ಈ ಶಾಸನವು ಬಹು ಮುಖ್ಯವಾದುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಫಜಲ್‌ಪುರ ತಾಲೂಕಿನ ಚಿನಮಳ್ಳಿಯಲ್ಲಿ ದೊರೆತಿರುವ ೧೧೭೭ರ ಶಾಸನವು ಕಲಚೂರಿ ರಾಯಮುರಾರಿ ಸೋವಿದೇವನ ಕಾಲದ್ದಾಗಿದ್ದು ಅತ್ತನೂರಿನ ಕುಲಗಾವುಂಡ ರಾಮರಸ, ಅಂಕುಲಿಗೆಯ ಶೋಭರಸ, ಸಿಂಧನೂರಿನ ಕಲ್ಲರಸು ಮಹಾಮಂಡಳೇಶ್ವರ ಮನ್ನೆಯ ಅಹವಮಲ್ಲರ ಸಮಕ್ಷಮದಲ್ಲಿ ಚೆನ್ನಮಲೆಯ ಮಲ್ಲಿಕಾರ್ಜುನ ದೇವರಿಗೆ ಬಿಸಿರಜವಾಡ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಸುರಪುರ ತಾಲೂಕಿನ ಹಗರಟಗಿಯ ೧೧೭೭ರ ಕಳಚೂರ್ಯ ಸಂಕಮನ ಶಾಸನವು ಸರ್ವಸಮಸ್ಯದ ಹಗರಿಟ್ಟಗೆಯ ಅಗ್ರಹಾರದ ಮಹಾಜನರು, ವರ್ತಕರು, ಮತ್ತಿತರ ಪ್ರಮುಖರು ತ್ರಿಕೂಟೇಶ್ವರ ದೇವರಿಗೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. ವಿಶೇಷವೆಂದರೆ, ಸಂತೆಗಾಗಿ ಬರುವ ವರ್ತಕರು ಎತ್ತು, ಕತ್ತೆ ಹಾಗೂ ಕೋಣಗಳ ಹೇರಿನ ಮೇಲೆ ವೀಳೆಯವರ ಅಡಕೆಗಳನ್ನು ದೇವರಿಗೆ ನೀಡುತ್ತಿದ್ದುದು ದಾಖಲಾಗಿರುವುದು ಗಮನೀಯವಾಗಿದೆ. ಸುರಪುರ ತಾಲೂಕಿನ ಚಿಕ್ಕಮುದನೂರಿನ ೧೧೭೭-೭೮ರ ಶಾಸನವು ಬಿಜ್ಜಳನ ಆಳ್ವಿಕೆಯಲ್ಲಿ ಸ್ಥಳೀಯ ಮಹಾಜನಗಳು ಹಾಗೂ ಮುದೇನೂರು ದಾಸಯ್ಯಗಳು ಅಲ್ಲಿಯ ಲಕ್ಷ್ಮಣೇಶ್ವರ ದೇವರಿಗೆ ಬಲ್ಲಯ ಜೀಯ್ಯಗಳ ಸಮ್ಮುಖದಲ್ಲಿ ನೀಡಿದ ಭೂಮಿ ದತ್ತಿಯ ಬಗೆಗೆ ತಿಳಿಸುತ್ತದೆ.

ಸುರಪುರ ತಾಲೂಕಿನ ಚಿಕ್ಕಮುದನೂರಿನ ೧೧೭೦ರ ಶಾಸನದಲ್ಲಿ ರಾಯಮುರಾರಿ ಸೋಯಿದೇವರಸನ ದಂಡನಾಯಕ ಬರ್ಮ ದೇವರಸನು ಲಕ್ಷ್ಮಣೇಶ್ವರ ದೇವರಿಗೆ ಬಿಟ್ಟ ದತ್ತಿಯನ್ನು ಹಾಗೂ ಮುದನೂರು ಶ್ರೀರಾಮದತ್ತಿ ಸರ್ವೇನಮಸ್ಯಗ್ರಹಾರವೆಂದೂ ಕರೆಯಲಾಯಿತೆಂದು ತಿಳಿಸುತ್ತದೆ. ಚಿತ್ತಾಪುರ ತಾಲೂಕಿನ ಕಾಳಿಗೆಯ ೧೧೭೩ರ ಶಾಸನವು ರಾಯಮುರಾರಿ ಸೋವಿದೇವನು ಮೊದಿಗನೂರು ನೆಲೆವೀಡಿನಲ್ಲಿರುವಾಗ ದಂಡನಾಯಕ ಮಾಧವಯ್ಯನ ಆಡಳಿತದ ಬಗೆಗೆ ಪ್ರಸ್ತಾಪಿಸುತ್ತದೆ ಮತ್ತು ಕಾಳಿಗೆಯನ್ನು ರಾಜಧಾನಿ ಕಾಳುಗೆ ಎಂದು ಉಲ್ಲೇಖಿಸುತ್ತದೆ.

ಸೇಡಂ ತಾಲೂಕಿನ ಮುಳಖೇಡದ ಕಳಚೂರ್ಯ ಸಂಕಮದೇವನ ೧೧೭೭ರ ಶಾಸನವು ಹೈಹಯವಂಶದ ವೀರ ಬಿಜ್ಜರಸನು ಹಿರಿಯ ದಂಡನಾಯಕ ಲಕ್ಷ್ಮೀದೇವನ ಮಗ ಹಾಗೂ ಇತರೆ ಮಹಾಜನಗಳ ಸಮ್ಮುಖದಲ್ಲಿ ಮಳೆಯಖೇಡ

ಅಗ್ರಹಾರದ ಅಭಿವೃದ್ಧಿಗಾಗಿ ನೀಡಿದ ದತ್ತಿಯನ್ನು ಉಲ್ಲೇಖಿಸುತ್ತದೆ. ಅಫಜಲ್‌ಪುರ ತಾಲೂಕಿನ ಗೊಬ್ಬೂರು ಶಾಸನವು (೧೧೮೦) ಕಳಚೂರಿ ರಾಯಮುರಾರಿ ಸೋವಿದೇವ (ಸಂಕಮದೇವ)ನ ಆಳ್ವಿಕೆಯಲ್ಲಿ ಅಲಂದೆ ವೆಡಂಗ ಬಿರುದಾಂಕಿತ ಮಹಾಮಂಡಲೇಶ್ವರ ಮಲ್ಲಿದೇವ ಹಾಗೂ ರಾಮದೇವರಸ ಮೂಲಿಗರು ಪಂಚಲಿಂಗಕಲೆ ದೇವಾಲಯಕ್ಕೆ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಆಳಂದ ತಾಲೂಕಿನ ಊಡಲು ಗ್ರಾಮದ ೧೧೮೧ರ ಶಾಸನವು ಸಂಕಮದೇವ (ಐದನೇ ವರುಷದಲ್ಲಿ) ಹಾಗೂ ಯಾದವ ಸಿಂಗಣನ ಕಾಲದಲ್ಲಿ ಹೂಡಲ ಗ್ರಾಮದ ಪ್ರಸನ್ನ ರಾಮನಾಥ ದೇವರಿಗೆ ನೀಡಿದ ಆರು ದತ್ತಿಗಳನ್ನು ತಿಳಿಸುತ್ತದೆ. ಅರಿದೇ ಅಯ್ಯಾ ಹೊಳೆ ಐನೂರ್ವರು ಗೊಂಕನಾಡು ೧೨೦ ಅಲಂದೆವೆಂಡಂಗ ಬಿರುದಾಂಕಿತ ಮಲ್ಲಿದೇವರಸನು ರೇಮಗಾವುಂಡನ ನೈತೃತ್ವದಲ್ಲಿ ಪ್ರಸನ್ನ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿಸುತ್ತದೆ. ಗುಲಬರ್ಗಾ ತಾಲೂಕಿನ ಕೆಲ್ಲೂರಿನ ೧೧೮೨ರ ಶಾಸನವು ಚಾಳುಕ್ಯ ಪ್ರತಾಪ ಚಕ್ರವರ್ತಿ ಸೋಮೇಶ್ವರನ ಕಾಲದಲ್ಲಿ ಅವರಾದಿಯ ಅಗ್ರಹಾರ ೪೨ ಮಹಾಜನಗಳ ಸಮ್ಮುಖದಲ್ಲಿ ಮಹಾ ಮಂಡಲೇಶ್ವರ ಅಲ್ಲಹುಲಿದೇವನು ಮಹಾಶೇವರ ದೇವರಿಗೆ ಬಿಟ್ಟ ದತ್ತಿಯನ್ನು ದಾಖಲಿಸುತ್ತದೆ.

ಸುರಪುರ ತಾಲೂಕಿನ ಹೆಮ್ಮಡಗಿಯ ತ್ರಿಭುವನಮಲ್ಲ ವೀರಸೋಮೇಶ್ವರನ ಕಾಲದ ೧೧೮೨ರ ಶಾಸನವು ದಂಡನಾಯ್ಕ ಬೊಮ್ಮರಸನು ಪರಮ ಮಾಹೇಶ್ವರನಾದುದರಿಂದ ಎಮ್ಮವಾಡಿಗೆಯ ಪ್ರಭು ಪಂದಿರಾಜ ಕಟ್ಟಿಸಿದ ಪಂದೇಶ್ವರ ದೇವಾಲಯ ಕಟ್ಟಿಸಿ ಚಾಮುಂಡರಾಸಿ ಪಂಡಿತರಿಗೆ ಮತ್ತು ಅಮಿತರಾಸಿ ಪಂಡಿತರಿಗೆ ಕಂನಡನೂರು ಮತ್ತು ಹಾಲಂಗೆರೆಗಳನ್ನು ದತ್ತಿ ಬಿಟ್ಟದ್ದನ್ನು ಉಲ್ಲೇಖಿಸುತ್ತದೆ. ಇದರಲ್ಲಿ ಕಲ್ಯಾಣ ಚಾಳುಕ್ಯರ ಹಾಗೂ ಬಂಮರಸನ ವಂಶಾವಳಿಗಳ ಬಗೆಗೆ ಉಲ್ಲೇಖಿಸಿದೆ. ಗುಲಬರ್ಗಾ ತಾಲೂಕಿನ ಹರಸೂರಿನ ೧೧೮೬ರ ಚಾಳುಕ್ಯ ಮೂರನೇ ಜಗದೇಕಮಲ್ಲನ ಶಾಸನವು 'ಶಾಲೆಯ ಶೀಮಳದ' ಬಾಲೇಶ್ವರ ದೇವರಿಗೆ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಹಾಗೂ ಹರಸೂರಿಗೆ ಹಿಂದೆ ಶಾಲೆಯ ಸೀಮಳವೆಂದು ಹೆಸರಿದ್ದು ಅಂದಿನ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತೆಂಬ ಅಂಶವು ಹರಸೂರಿನ ಬೇರೆ ಶಾಸನಗಳಿಂದಲೂ ತಿಳಿದು ಬರುತ್ತದೆ. ಜೇವರಗಿ ತಾಲೂಕಿನ ಯಡ್ರಾಮಿಯ ೧೨೦೦ರ ಚಾಳುಕ್ಯ ತ್ರೈಲೋಕ್ಯಮಲ್ಲ ನೂರ್ಮಡಿ ಮೂರನೇ ತೈಲಪನ ಶಾಸನವು ಮಹಾ ಸಾಮಂತ ಏಚರಸ ಹಾಗೂ ಚಂದಭೂಪರೆಂಬ ಅಧಿಕಾರಿಗಳು ಎಳಮೇಲೆ ಸಿಂಹ ಪರಿಷೆಯ ಪಂಡಿತರಿಗೆ ಎರವೋಲ-೩೦೦ ಮತ್ತರು ಭೂಮಿಯನ್ನು ಹಾಗೂ ಕುಕ್ಕನೂರು ಗ್ರಾಮವನ್ನು ತೀರ್ಥದ ದೇವರಿಗೆ ದತ್ತಿಯಾಗಿ ನೀಡಿದುದನ್ನು ಉಲ್ಲೇಖಿಸುತ್ತದೆ. ಎಳಮೇಲು ಸಿಂಹ ಪರಿಷನ್ಮಂಡಳಿಯ ಪ್ರಖ್ಯಾತಿಯಿಂದ ಯಡ್ರಾಮಿಯು ಶೈವ ಕಾಳಾಮುಕ ಪಂಥದ ಪ್ರಮುಖ ಕೇಂದ್ರವಾಗಿರುವುದು ಗಮನೀಯ ಅಂಶವಾಗಿದೆ. ಈ ವಂಶದ ಗುರು ಪರಂಪರೆಯ ವಂಶಾವಳಿಯನ್ನು ವಿವರವಾಗಿ ಈ ಶಾಸನದಲ್ಲಿ ನೀಡಲಾಗಿದೆ.

**ದೇವಗಿರಿಯ ಸೇವುಣರು**

ದೇವಗಿರಿಯ ಯಾದವರ ಇತಿಹಾಸವು, ಕಲ್ಯಾಣದ ಚಾಳುಕ್ಯರು ಮತ್ತು ಕಲಚೂರಿಗಳ ಅಧಿಪತ್ಯವು ಕೊನೆಗೊಂಡ ನಂತರ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಐದನೇ ಬಿಲ್ಲಮನು (೧೧೮೫-೧೧೯೩) ಕಲಚೂರಿಯರನ್ನು ಮತ್ತು ಕಲ್ಯಾಣಿ ಚಾಳುಕ್ಯರನ್ನು ಸೋಲಿಸಿದ ನಂತರ ಅಲ್ಲಿಂದ ಮುಂದಕ್ಕೆ ಈ ವಂಶದ ಹೆಸರು ದೇವಗಿರಿಯ ಯಾದವರು ಅಥವಾ ಸೇವುಣರೆಂದೇ ಬಳಕೆಗೆ ಬಂದಿತು. ಭಿಲ್ಲಮನ ಕಾಲದ ಶಾಸನಗಳಲ್ಲಿ ಅವನು ಹಳೆಯ ಜತ್ (ಮಹಾರಾಷ್ಟ್ರ) ಸಂಸ್ಥಾನದ ಬೆಳವೊಲ, ತರ್ದವಾಡಿ ಮತ್ತು ಮದ್ಗಿಹಾಳ್‌ಗಳ ಮೇಲೆ ಆಧಿಪತ್ಯ ಸ್ಥಾಪಿಸಿದ ಉಲ್ಲೇಖವಿದೆ. ಅವನು ತನ್ನ ರಾಜ್ಯಭಾರದ ಕೊನೆಯ ಕಾಲಕ್ಕೆ ಹೊಯ್ಸಳರೊಂದಿಗೆ ಘೋರ ಕದನದಲ್ಲಿ ನಿರತನಾದನು. ಎರಡನೇ ಬಲ್ಲಾಳನು ಯಾದವರ ಮೇಲೆ ಉಗ್ರ ದಂಡಯಾತ್ರೆ ಮಾಡಿ ಹಾನಗಲ್, ಗುತ್ತಿ ಮತ್ತು ರಟ್ಟವಳ್ಳಿ ದುರ್ಗಗಳನ್ನು ವಶಪಡಿಸಿಕೊಂಡನು. ಅನಂತರ ಹೊಯ್ಸಳ ಸೇನೆಯು ಸೊರಟೂರು ಕೋಟೆಯನ್ನು ಮುತ್ತಿದಾಗ ಭಿಲ್ಲಮನ ದಂಡನಾಯಕ ಚೈತ್ರ ಸಿಂಹನು ಬಲವಂತವಾಗಿ ಕಾಲ್ತೆಗೆಯ ಬೇಕಾಯಿತು. ಸೊರಟೂರಿನ ಜಯದ ತರುವಾಯ ಗದುಗಿನ ಸಮೀಪ ಲೊಕ್ಕಿಗುಂಡಿ (ಲಕ್ಕುಂಡಿ) ಕೋಟೆಯಲ್ಲಿ ಆಶ್ರಯ ಪಡೆದಿದ್ದ ಯಾದವ ಸೇನಾ ನಾಯಕನು ಹೊಯ್ಸಳರ ಕೈಸೆರೆಯಾದನು. ಬಲ್ಲಾಳನು ಎರಂಬರಗೆ (ಎಲಬುರಗಿ) ಕಡೆಗೆ ನುಗ್ಗಿ ಹುಲಿಗೆರೆ, ಬೆಳವೊಲ, ಕಿಸುಕಾಡು ಮತ್ತು ಕೃಷ್ಣಾ (ಹೆದ್ದೊರೆ) ನದಿಯವರೆಗಿನ ಪ್ರದೇಶಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡನು. ಬಲ್ಲಾಳನು ಎರಂಬರಗೆಯನ್ನು ತನ್ನ ಉತ್ತರದ ರಾಜಧಾನಿಯನ್ನಾಗಿ ಮಾಡಿಕೊಂಡನು. ಸುಮಾರು ೧೧೯೬ರಲ್ಲಿ ಆತನು

ಅಲ್ಲಿಯೇ ವಾಸ ಮಾಡಿರಬೇಕು ಎಂಬ ಅಭಿಪ್ರಾಯವಿದೆ. ತನ್ನ ಸಾವಿನ ಸೂಚನೆಯಿದ್ದ ಕಾರಣ ಭಿಲ್ಲಮನು ತನ್ನ ಮಗ ಜೈತುಗಿಗೆ ೧೧೯೧ರಲ್ಲಿ ರಾಜ್ಯಭಾರವನ್ನು ವಹಿಸಿಕೊಟ್ಟನು. ಭಿಲ್ಲಮನು ೧೧೯೩ರಲ್ಲಿ ನಿಧನನಾದಾಗ ಜೈತುಗಿಯು ಸಿಂಹಾಸನವನ್ನೇರಿದನು. ಈತನ ತರುವಾಯ ಚೈತ್ರಪಾಲನ ಮಗ ಸಿಂಘಣನು ೧೨೦೦ರಲ್ಲಿ ಪಟ್ಟಕ್ಕೆ ಬಂದನು. ಯಾದವ ಸಿಂಘಣನು ಈ ವಂಶದ ಅತ್ಯಂತ ಜನಪ್ರಿಯ ದೊರೆಯಾಗಿದ್ದನು. ಇವನ ಆಳ್ವಿಕೆಯ (೧೨೦೦-೧೨೪೭) ಅವಧಿಯಲ್ಲಿ ಸೇವುಣರು ದಖನ್ನಿನಲ್ಲಿ ಶಕ್ತರೂ ಪ್ರಬಲರೂ ಆದರು. ಇವನು ಹೊಯ್ಸಳರನ್ನು ಸೋಲಿಸಿ, ಅವರು ತಮ್ಮ ತಾತನಿಂದ ಗೆದ್ದುಕೊಂಡಿದ್ದ ರಾಜ್ಯದ ಭಾಗಗಳನ್ನೆಲ್ಲಾ ಹಿಂದಕ್ಕೆ ಪಡೆದನು. ದಕ್ಷಿಣದಲ್ಲಿ ತನ್ನ ವಂಶದ ಏಕೈಕ ಆಧಿಪತ್ಯವನ್ನು ಸ್ಥಾಪಿಸಿದನು. ಇವನ ಆಸ್ಥಾನದಲ್ಲಿ ಜ್ಯೋತಿಷ್ಯರಾದ ಚಂಗದೇವ, ಅನಂತದೇವ ಹಾಗೂ ಶಾರ್ಙ್ಗದೇವನೆಂಬುವರು 'ಸಂಗೀತ ರತ್ನಾಕರ' ಎಂಬ ಗ್ರಂಥವನ್ನು ರಚಿಸಿದರು. ಈತನ ರಾಜ್ಯಭಾರ ೩೭ ವರ್ಷಗಳಷ್ಟು ದೀರ್ಘಕಾಲದ್ದಾಗಿತ್ತು. ಸಿಂಘಣನ ತರುವಾಯ ೧೨೪೭ರಲ್ಲಿ ಜೈತುಗಿಯ ಮಗ ಕೃಷ್ಣನು ಪಟ್ಟಕ್ಕೆ ಬಂದನು. ಕೃಷ್ಣ(೧೨೪೭-೬೦) ಮತ್ತು ಮಹಾದೇವ(೧೨೬೦-೭೧) (ಸಿಂಘಣನ ಮೊಮ್ಮಕ್ಕಳು) ಇವರು ಒಬ್ಬರ ತರುವಾಯ ಒಬ್ಬರು ಸಾಮ್ರಾಜ್ಯವನ್ನು ಆಳಿದರು. ಇವರುಗಳು ಆಡಳಿತವನ್ನು ವ್ಯವಸ್ಥೆಯಲ್ಲಿಟ್ಟು ದಕ್ಷಿಣ ಮತ್ತು ಉತ್ತರಗಳ ನೆರೆ ರಾಜರೊಡನೆ ಹಾಗೂ ದಖನ್ನಿನ ಸಣ್ಣಪುಟ್ಟ ನಾಯಕರೊಡನೆಯೂ ಯುದ್ಧದಲ್ಲಿ ಯಶಸ್ವಿಯಾದರು. ಕೃಷ್ಣ ಅನೇಕ ಯಜ್ಞಗಳನ್ನು ನಡೆಸಿದನು. ವ್ರತಖಂಡದಲ್ಲಿ ಹೇಳಿರುವಂತೆ ಇದರಿಂದ ಬಹುಕಾಲದಿಂದಲೂ ಜನರ ಮನಸ್ಸಿನ ಮೇಲಿನ ಪ್ರಭಾವ ಕಳೆದುಕೊಂಡಿದ್ದ ವೈದಿಕ ಕರ್ಮಗಳಿಗೆ ಪುಷ್ಟಿ ದೊರೆಯುವಂತಾಯಿತು.

'ಸೂಕ್ತಿ ಮುಕ್ತಾವಳಿಯ' ಗ್ರಂಥ ಕರ್ತೃ ಬಿಲ್ಲಣನು ಕೃಷ್ಣನ ಸಲಹೆಗಾರನೂ, ಸೈನ್ಯದ ನಾಯಕನಾಗಿದ್ದನೆಂದು ತಿಳಿದು ಬರುತ್ತದೆ. ಮಹಾದೇವನ ಪ್ರಸಿದ್ಧ ಮಂತ್ರಿಯಾಗಿದ್ದ ಹೇಮಾದ್ರಿಯು ತನ್ನ ಸ್ವಂತ ಆಶ್ರಯದಲ್ಲಿ ಅನೇಕ ವಿದ್ವಾಂಸರಿಗೆ ಉತ್ತೇಜನ ನೀಡುತ್ತಿದ್ದನೆಂದು ವ್ಯಕ್ತವಾಗುತ್ತದೆ. ಇವನು ಬರೆದಿರುವ 'ಚತುರ್ವರ್ಗ ಚಿಂತಾಮಣಿ' ಎಂಬ ಗ್ರಂಥವು ವ್ರತಖಂಡ, ದಾನಖಂಡ, ತೀರ್ಥಖಂಡ ಮತ್ತು ಮೋಕ್ಷಖಂಡಗಳೆಂಬ ನಾಲ್ಕು ಸಂಪುಟಗಳ ಭಾಗಗಳಾಗಿವೆ. ಇದಕ್ಕೆ ವಿಶಿಷ್ಟವಾದ 'ಪರಿಶಿಷ್ಟ ಖಂಡ'ವೆಂಬ ಸಂಪುಟದಲ್ಲಿ ಬ್ರಾಹ್ಮಣರ ದೈನಂದಿನ ಕರ್ಮಾನುಷ್ಠಾನಗಳ ಬಗೆಗೆ ವಿವರವಾದ ವಿಶ್ಲೇಷಣೆಯನ್ನು ನೀಡಲಾಗಿದೆ. ಈತನ ಆಶ್ರಯದಲ್ಲಿದ್ದ ಭೂಪದೇವನೆಂಬ ವೈದ್ಯಶಾಸ್ತ್ರ ಪಂಡಿತನು 'ಮುಕ್ತಾಫಲ'ವೆಂಬ ಕೃತಿಯನ್ನು ರಚಿಸಿರುವನು. ಹೇಮಾದ್ರಿಯ ನಿಜವಾದ ಹೆಸರು 'ಹೇಮಾಡಿ'. ಇವನು ಹಲವಾರು ದೇವಾಲಯಗಳನ್ನು ವಿಶಿಷ್ಟ ಶೈಲಿಯಲ್ಲಿ ಕಟ್ಟಿಸಿದ ಕಾರಣ ಇವನು ಸೃಷ್ಟಿಸಿದ ವಾಸ್ತು ಪಂಥಕ್ಕೆ 'ಹೇಮಾದ್ರಿ ಪಂಥ'ವೆಂಬ ಅನ್ವರ್ಥನಾಮವಾಗಿದೆ. ಸುಪ್ರಸಿದ್ಧ ಮರಾಠಿ ಸಂತ ಜ್ಞಾನದೇವನು ಇವನ ಆಶ್ರಯದಲ್ಲಿ ಇದ್ದನೆಂದು ಪ್ರತೀತಿಯಿದೆ.

ಮಹಾದೇವನ ಪತನಾನಂತರ ಯಾದವ ರಾಮಚಂದ್ರ ಅಥವಾ ರಾಮದೇವನು ಸಿಂಹಾಸನಕ್ಕೆ ಬಂದನು. ಇವನೇ ಈ ವಂಶದ ಕೊನೆಯ ದೊರೆ. ಇವನು ಸಣ್ಣ ಪುಟ್ಟ ನಾಯಕರನ್ನು ಗೆದ್ದರೂ, ದೋರಸಮುದ್ರ ಹಾಗೂ ಗುಜರಾತಿನ ಮೇಲೆ ಮಾಡಿದ ದಂಡಯಾತ್ರೆಗಳು ವಿಫಲವಾದುವು. ಇವನ ಕಾಲದಲ್ಲಿ ೧೨೯೬ರಲ್ಲಿ ದಂಡೆತ್ತಿ ಬಂದ ಅಲ್ಲಾವುದ್ದೀನನು ದೇವಗಿರಿಯನ್ನು ಕೊಳ್ಳೆ ಹೊಡೆದನು. ರಾಮಚಂದ್ರನು ಬಲಾತ್ಕಾರದಿಂದ ಅಪಮಾನಕರ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಈ ದಾಳಿಯು ದಖನ್ನಿನ ಸಾಮ್ರಾಜ್ಯಗಳ ಮೇಲೆ ದೆಹಲಿಯ ಸುಲ್ತಾನರು ನಡೆಸಿದ ಪ್ರಾರಂಭಿಕ ದಾಳಿಯಾಗಿತ್ತು. ಆದರೆ ಕಪ್ಪಕಾಣಿಕೆಯನ್ನು ರಾಮಚಂದ್ರನು ಸಲ್ಲಿಸದಿದ್ದ ಕಾರಣ ೧೩೦೭ರಲ್ಲಿ ಮಲ್ಲಿಕ್ ಕಾಫರನು ಎರಡನೆ ಬಾರಿ ಸೇವುಣ ರಾಜ್ಯದ ಮೇಲೆ ದಂಡೆತ್ತಿ ಬಂದು ರಾಮಚಂದ್ರನನ್ನು ಸೆರೆಹಿಡಿದು ದಿಲ್ಲಿಗೆ ಕರೆದೊಯ್ದನು. ನಂತರ ಬಿಡುಗಡೆ ಹೊಂದಿದ ರಾಮಚಂದ್ರನು ದಿಲ್ಲಿಯ ಅಧೀನ ರಾಜನಾಗಿರಲು ಒಪ್ಪಿಕೊಂಡು ತನ್ನ ರಾಜ್ಯದ ಆಡಳಿತ ನಡೆಸಿದನು. ಐದು ವರ್ಷಗಳ ತರುವಾಯ ಆತನ ಮಗ ಎರಡನೆ ಸಿಂಘಣನು ತಾನೇ ಸ್ವತಃ ಸ್ವಾತಂತ್ರ್ಯ ಘೋಷಣೆ ಮಾಡಿಕೊಳ್ಳಲು, ಮಲ್ಲಿಕ್ ಕಾಫರನು ಪುನಃ (೧೩೧೮) ದಂಡೆತ್ತಿ ಬಂದು ಅವನನ್ನು ಸೋಲಿಸಿ ಯುದ್ಧದಲ್ಲಿ ಕೊಂದು ಹಾಕಿದನು. ನಂತರ ದೇವಗಿರಿ ಮುಸ್ಲಿಮರ ಪ್ರಾಂತವಾಯಿತು.

ಗುಲಬರ್ಗಾ ಜಿಲ್ಲೆಯಲ್ಲಿ ಸೇವುಣರ ಕಾಲದ ಹಲವಾರು ಶಾಸನಗಳು ಲಭ್ಯವಿದ್ದು, ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಶಹಾಪುರ ತಾಲೂಕಿನ ಸಿರವಾಳದ ಭಿಲ್ಲಮನ ೧೧೮೯ರ ಶಾಸನವು ಅವನಿಗೆ ಅಧೀನರಾದ ತರ್ದವಾಡಿ ಶಾಖೆಯ ಶಿಲಾರ ವಂಶದ ಎಳಮೇಲೆ ಸಿಂಗಿದೇವರಸನ ತಾಯಿ

ನಾಗಲಾದೇವಿ, ಮಹಾಪಸಾಯಿಕ ಭಿಲ್ಲಮದೇವನ ಅಧಿಕಾರಿ ಪಯ್ಯನಾಯಕ, ಘಟ್ಟಿಯ ಕೇತಯನಾಯಕ ಮುಂತಾದವರು ಎಳಮೇಲೆ ೫೦೦ರ ಬಳಿಯ ಪ್ರಸಿದ್ಧ ಸಿರಿವೊಳಲ(ಶಿರವಾಳ) ಸಿದ್ಧನಾಥೇಶ್ವರ ದೇವರಿಗೆ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಇದರಲ್ಲಿ ಉಲ್ಲೇಖಿಗೊಂಡಿರುವ ಶಾಸ್ತಿಮಯ್ಯ ಹಾಗೂ ಆತನ ಪುತ್ರ ಸಿದ್ಧರೇವಣ ಇವರು ಪವಾಡ, ನೃತ್ಯ, ಸಂಗೀತಾದಿ ಕಲೆಗಳಲ್ಲಿ ಪ್ರಖ್ಯಾತಿ ಪಡೆದಿದ್ದರೆಂದು ವ್ಯಕ್ತವಾಗುತ್ತದೆ. ಇದರಿಂದ ಸಿರಿವಾಳವು ಹಿಂದಿನಿಂದಲೂ ಶೈವ ಕೇಂದ್ರವಾಗಿತ್ತೆಂದು ಸ್ಪಷ್ಟವಾಗಿ ಗೋಚರವಾಗುತ್ತದೆ. ಚಿತ್ತಾಪುರ ತಾಲೂಕಿನ ಇಂಗಳಿಗೆಯ ಯಾದವ ಸಿಂಘಣನ ೧೨೧೦ರ ಶಾಸನವು ಮಹಾಮಂಡಳೇಶ್ವರ ಬಿಜ್ಜರಸ, ಇಂಗಳಿಗೆ ಪ್ರಭು ನಾಗರಸ, ಪೆರ್ಗ್ಗಡೆ ಬಸವಯ್ಯ ಹಾಗೂ ಅಲ್ಲಿನ ಪಂಚಮಠದವರು ಮೂಲಸ್ಥಾನ ದೇವರಿಗೆ ಬಿಟ್ಟ ಭೂದತ್ತಿಯ ಬಗೆಗೆ ಉಲ್ಲೇಖಿಸುತ್ತದೆ. ಸುರಪುರ ತಾಲೂಕಿನ ಹಗರಿಟಿಗೆಯ ಸಿಂಘಣನ ೧೨೩೧ರ ಶಾಸನವು ಹಗರಟಿಗೆಯ ರಾಮೇಶ್ವರ, ಬಾಚೇಶ್ವರ, ಕೇತೇಶ್ವರ ಹಾಗೂ ಚೌಡೇಶ್ವರಿ ದೇವತೆಗಳಿಗೆ ಜಾಡಹಠಕಾರರು ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಇದರಲ್ಲಿ ಕಂಡುಬರುವ ವಿಶೇಷ ಅಂಶವೆಂದರೆ ಹಗರಟಗಿ-೨೦೦ ಎಂಬ ಆಡಳಿತ ಘಟಕ ಹಾಗೂ ವೀರಬಣಂಜು ಶೆಟ್ಟಿ ವ್ಯಾಪಾರಿಗಳಿಗೆ ಸಂಬಂಧಿಸಿದ ಉಲ್ಲೇಖವಿದೆ. ಸುರಪುರ ತಾಲೂಕಿನ ಯಾಳಿಗೆಯ ಯಾದವ ಮಹಾದೇವನ ೧೨೬೮ರ ಶಾಸನವು ಯಾಳಿಗೆಯ ಗಣಪತಿ ರೆಡ್ಡಿಯು ಚನ್ನಕೇಶವ ದೇವರಿಗೆ ನೀಡಿದ ಹಲವು ದತ್ತಿಯನ್ನು ಉಲ್ಲೇಖಿಸುತ್ತದೆ. ಸಗರನಾಡು ಇತರೆ ಹಲವಾರು ಶಾಸನಗಳಲ್ಲಿ ಸಗರ-೩೦೦ ಎಂದು ಉಲ್ಲೇಖಿಗೊಂಡಿದ್ದು ಈ ಶಾಸನದಲ್ಲಿ ಸಗರ-೫೦೦ರ ಆಡಳಿತ ಘಟಕವು ಯಾದವರ ಕಾಲದಲ್ಲಿ ಅಸ್ತಿತ್ವದಲ್ಲಿದ್ದುದನ್ನು ಉಲ್ಲೇಖಿಸುತ್ತದೆ. ಜೇವರ್ಗಿ ತಾಲೂಕಿನ ಆಂದೋಲದ ಯಾದವ ರಾಮಚಂದ್ರನ ೧೨೩೮ರ ಶಾಸನವು ಈತನ ಆಳ್ವಿಕೆಯಡಿಯಲ್ಲಿ ಮಹಾಮಾಂಡಳಿಕ ಮನ್ನೆಯ ಮಲ್ಲಿದೇವರಸನು ಸಗರ-೫೦೦ರ ಸಮೀಪವಿರುವ ಆನೆದೆಲಿ(ಅಂದೋಲ)ಯಲ್ಲಿ ಸಕಲ ಪ್ರಾಣಿಗಳ ಹಿತಾರ್ಥವಾಗಿ ನಾಗರಕೆರೆಯನ್ನು ತೋಡಿಸಲು ಕೈಗೊಂಡ ಕ್ರಮದ ಬಗೆಗೆ ತಿಳಿಸುತ್ತದೆ. ಅಫಜಲ್‌ಪುರ ತಾಲೂಕಿನ ಚಿನಮಳ್ಳಿಯ ರಾಮಚಂದ್ರ ದೇವನ ೧೨೯೨ರ ಶಾಸನವು ಭೀಮರಥೀ ನದಿಯ ತಟಾಕದಲ್ಲಿ ಆತನು ತನ್ನ ವಿಜಯದ ಸಂಕೇತವಾಗಿ ರಾಜವಂಶದ ಇತರರೊಡನೆ ಚಿಲ್ಲಮೆಳೆ ಎಂಬ ದಕ್ಷಿಣ ಕೈಲಾಸವೆಂದು ಹೆಸರಾಗಿರುವ ಮಲ್ಲಿಕಾರ್ಜುನನನ್ನು ವಿಶೇಷ ಪೂಜೆ ಮಾಡಿದ ವಿವರ ಹಾಗೂ ಸ್ಥಳದ ಪಂಡಿತರಿಗೆ ಕೊಟ್ಟ ದಾನದ ಬಗೆಗೆ ವಿವರಗಳು ದೊರೆಯುತ್ತವೆ. ದೇವಗಿರಿಯ ಯಾದವ ಸಾಮ್ರಾಜ್ಯವು ಮುಸ್ಲಿಮರ ದಾಳಿಗೆ ತುತ್ತಾಗಿ ಪತನವಾದ ನಂತರ ಕರ್ನಾಟಕವು ರಾಜಕೀಯವಾಗಿ ಹರಿದು ಹಂಚಿ ಹೋಯಿತು.

## ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯವು ೧೩೩೬ರಲ್ಲಿ ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರಾಯರಿಂದ ತುಂಗಭದ್ರಾ ನದಿ ದಂಡೆಯಲ್ಲಿರುವ ಪಂಪಾಕ್ಷೇತ್ರವೆಂದು ಪ್ರಸಿದ್ಧಿಯಾಗಿರುವ ಹಂಪಿಯಲ್ಲಿ ಸ್ಥಾಪಿಸಿದರು. ಈ ಸಾಮ್ರಾಜ್ಯ ಸ್ಥಾಪನೆಯ ಮುಖ್ಯ ಉದ್ದೇಶ ಮುಸ್ಲೀಮರ ದಾಳಿಗಳಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ, ಪೋಷಿಸುವುದಾಗಿತ್ತು. ಈ ಸಾಮ್ರಾಜ್ಯ ಸ್ಥಾಪನೆಗೆ ವಿವಿಧ ಧರ್ಮಗುರುಗಳು ನೆರವಾಗಿದ್ದರು. ಗುಲಬರ್ಗಾ ಪ್ರದೇಶಕ್ಕೆ ಸಂಬಂಧಪಟ್ಟಂತೆ ಈ ಮಹಾನ್ ಸಾಮ್ರಾಜ್ಯದ ಅರಸರನ್ನು ಉಲ್ಲೇಖಿಸುವ ಶಾಸನಗಳು ಕೃಷ್ಣದೇವರಾಯನ(೧೫೦೯-೧೫೨೯) ಆಳ್ವಿಕೆಯ ಕಾಲದವರೆಗೆ ಲಭ್ಯವಿರುವುದಿಲ್ಲ. ಕೃಷ್ಣದೇವರಾಯನ ಕಾಲದ್ದೆಂದು ಹೇಳಲಾಗುವ ತಾಮ್ರ ಶಾಸನವು ಶಹಾಪುರದ ವಿಶ್ವಕರ್ಮರ ಏಕದಂಡಿ ಮಠದಲ್ಲಿದೆ ಎಂದು ವರದಿಯಾಗಿದೆ.

ಕೃಷ್ಣದೇವರಾಯನು ಅಪ್ರತಿಮ ಸಾಮರ್ಥ್ಯವನ್ನು ಹೊಂದಿದ್ದು ಈ ಸಾಮ್ರಾಜ್ಯದ ಒಬ್ಬ ಜನಪ್ರಿಯ ರಾಜನೆಂದು ಹೆಸರು ಗಳಿಸಿರುವನು. ಈತನು ಪಟ್ಟಕ್ಕೆ ಬಂದ ಕೂಡಲೇ ಗಜಪತಿಯನ್ನು ಸೋಲಿಸಿ ಆದಿಲ್‌ಖಾನನನ್ನು ಡೋಣಿ, ಕೋವಿಲಕೊಂಡಗಳಲ್ಲಿ ಪರಾಭವಗೊಳಿಸಿ ಈ ವಿಜಯದ ನಂತರವೇ ೧೫೧೦ರಲ್ಲಿ ಪಟ್ಟಾಭಿಷೇಕ ಮಾಡಿಸಿಕೊಂಡನು. ಅನಂತರ ಶಿವನಸಮುದ್ರ, ಉಮ್ಮತ್ತೂರು, ಮಂಗಳೂರುಗಳಲ್ಲಿ ಕಾಣಿಸಿದ್ದ ಬಂಡಾಯಗಳನ್ನು ಹತ್ತಿಕ್ಕಿದನು. ವಿಜಾಪುರದ ವಶದಲ್ಲಿದ್ದ ಗೋವೆಯನ್ನು ಗೆಲ್ಲಲು ಪೋರ್ಚುಗೀಸರಿಗೆ ನೆರವಾದನು. ಬರ್ಬೋಸ, ಡೋಮಿಂಗೋ ಪಾಯಿಸ್ ಮುಂತಾದ ಪೋರ್ಚುಗೀಸ್ ಪ್ರವಾಸಿಗಳು ಈತನ ಸಾಮ್ರಾಜ್ಯಕ್ಕೆ ಬಂದು ಅದರ ವೈಭವವನ್ನು ಮನಸಾರೆ ಹೊಗಳಿದ್ದಾರೆ. ಈತನು ಗಜಪತಿಯನ್ನು ಸೋಲಿಸಿದ ನಂತರ ಅವನ ರಾಜಧಾನಿಯಾಗಿದ್ದ ಕಟಕ್‌ವರೆಗೂ ವಿಜಯಶಾಲಿಯಾಗಿ ಸಾಗಿದ. ಅದೇ

ರೀತಿ ವಿಜಾಪುರದ ಅರಸನನ್ನು ಸೋಲಿಸಿ ೧೫೨೦ರಲ್ಲಿ ನಾಲ್ಕು ದಿನ ವಿಜಾಪುರದ ರಾಜಧಾನಿಯಲ್ಲೇ ತಳವೂರಿದನು. ರಾಯಚೂರು ದೋ-ಆಬ್‌ಅನ್ನು ತನ್ನ ವಶಕ್ಕೆ ತೆಗೆದುಕೊಂಡನು. ಗುಲಬರ್ಗಾ, ಬೀದರ್(ಆಗ ಬಹಮನಿಗಳ ರಾಜಧಾನಿಯಾಗಿದ್ದರೂ ಬರೀದ್ ಷಾಹಿಗಳ ವಶವಾಗಿತ್ತು)ಗಳನ್ನು ವಿಜಯಶಾಲಿಯಾಗಿ ಪ್ರವೇಶಿಸಿದನು. ಕೃಷ್ಣದೇವರಾಯನು ೧೫೨೩ರಲ್ಲಿ ಗುಲಬರ್ಗಾವನ್ನು ತನ್ನ ಸೈನ್ಯದೊಡನೆ ಪ್ರವೇಶಿಸಿದ ಮೇಲೆ ಮೂರನೇ ಮಹಮ್ಮದನ ಮೊಮ್ಮಕ್ಕಳಾದ ಮೂರನೇ ಅಲ್ಲಾ ಉದ್ ದೀನ ವಲಿಉಲ್ಲಾ ಮತ್ತು ಕಲೀಮುಲ್ಲಾಗಳನ್ನು (ಅಮೀರರುಗಳು ಬಂಧಿಸಿದ್ದರು) ಬಿಡುಗಡೆ ಮಾಡಿ, ಅನಂತರ ಹಿರಿಯ ಮಗನಾದ ಮೂರನೇ ಅಲ್ಲಾ ಉದ್ ದೀನನನ್ನು ಗುಲಬರ್ಗಾದ ಸುಲ್ತಾನನ್ನಾಗಿ ನೇಮಿಸಿ ವಲಿಉಲ್ಲಾ ಮತ್ತು ಕಲೀಮುಲ್ಲಾಗಳನ್ನು ತನ್ನೊಡನೆ ವಿಜಯನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸುರಕ್ಷಿತವಾಗಿಟ್ಟು, ಆದರದಿಂದ ನೋಡಿಕೊಂಡನೆಂದು ತಿಳಿದು ಬರುತ್ತದೆ. ಈ ರೀತಿ ಗುಲಬರ್ಗಾದಲ್ಲಿ ಸುಲ್ತಾನನ ಆಳ್ವಿಕೆಯನ್ನು ಪುನಶ್ಚೇತನಗೊಳಿಸಿ ಮುಸ್ಲಿಮರ ಚಕ್ರಾಧಿಪತ್ಯದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿದನು. ಈ ರಾಜಕೀಯ ಸಾಧನೆಯಿಂದಾಗಿ ಕೃಷ್ಣದೇವರಾಯನಿಗೆ 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದು ಇತ್ತು.

ಈತನ ತರುವಾಯ ಅಚ್ಯುತರಾಯನು(೧೫೨೯-೪೨) ಅಧಿಕಾರಕ್ಕೆ ಬಂದನು. ಇವನು ಪಟ್ಟವೇರುವ ಕಾಲಕ್ಕೆ ಆದ ಗೊಂದಲದ ಲಾಭ ಪಡೆದು ವಿಜಾಪುರದ ಆದಿಲಾ ಷಾಹಿಗಳು ರಾಯಚೂರನ್ನು ಗೆದ್ದಿರಲು ಇವನು ಅದನ್ನು ಪುನಃ (೧೫೩೫ರಲ್ಲಿ) ಗೆದ್ದುಕೊಂಡನು. ಆತ ಸಮರ್ಥ ದೊರೆಯಾದರೂ ಸಾಮ್ರಾಜ್ಯದಲ್ಲಿ ಅನೇಕ ಬಂಡಾಯಗಳನ್ನು ಎದುರಿಸಬೇಕಾಯಿತು. ನುನಿಸ್ ಎಂಬ ಪೋರ್ಚುಗೀಸ್‌ರ ಪ್ರವಾಸಿ ಇವನ ಆಸ್ಥಾನಕ್ಕೆ ಭೇಟಿ ಕೊಟ್ಟಿದ್ದನು. ಅಚ್ಯುತರಾಯನ ತರುವಾಯ ಪಟ್ಟಕ್ಕೆ ಬಂದವನು ಇವನ ಸೋದರನ ಪುತ್ರನಾದ ಸದಾಶಿವರಾಯ(೧೫೪೨). ಆದರೆ ಈತನು ನಾಮಮಾತ್ರ ಅರಸನಾಗಿದ್ದು ಆಡಳಿತವೆಲ್ಲಾ ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಯಲ್ಲಿ ಇತ್ತು. ಆಗ ದಖನ್‌ನಲ್ಲಿ ಬಹಮನಿ ರಾಜ್ಯ ಒಡೆದು ಹುಟ್ಟಿಕೊಂಡ ಐದು ಷಾಹಿ ರಾಜ್ಯಗಳ (ವಿಜಾಪುರ, ಗೋಲ್ಕೊಂಡ, ಅಹಮ್ಮದ್‌ನಗರ ಬಿರಾರ ಮತ್ತು ಬೀದರ್) ಒಳಜಗಳದ ಲಾಭ ಪಡೆದು ರಾಮರಾಯನು ರಾಜ್ಯವನ್ನು ಕೃಷ್ಣೆಯ ಆಚೆಗೆ ವಿಸ್ತರಿಸಿದನು. ಆದರೆ, ೧೫೬೫ರಲ್ಲಿ ರಕ್ಕಸಗಿ-ತಂಗಡಗಿಯಲ್ಲಿ ಸಂಭವಿಸಿದ ನಿರ್ಣಾಯಕ ಯುದ್ಧದಲ್ಲಿ ವಿಜಯನಗರ ಸೇನೆಗೆ ಸೋಲುಂಟಾಯಿತು. ಅಳಿಯ ರಾಮರಾಯನನ್ನು ಸೆರೆಹಿಡಿದು ಅನಂತರ ಆತನಿಗೆ ತಲೆದಂಡ ವಿಧಿಸಲಾಯಿತು. ಈ ತಲೆದಂಡ ಮಾಡಿದ್ದು ಗುಲಬರ್ಗಾ ಜಿಲ್ಲೆಯ ಬನ್ನಟ್ಟಿಯಲ್ಲಿ ಎಂಬ ಅಸ್ಪಷ್ಟ ಅಭಿಪ್ರಾಯವಿದೆ. (ಪಿ.ಎಂ. ಜೋಷಿ ಅವರ 'The History of Medieval Deccan' ಉಧ್‌ಗ್ರಂಥ, ಎ. ಕೃಷ್ಣ, 'ಸಗರನಾಡ ದರ್ಶನ' ೧೯೮೫.) ಅವನ ಸೋದರ ಅಳಿಯ ತಿರುಮಲ ಸದಾಶಿವರಾಯನೊಂದಿಗೆ ಪೆನುಗೊಂಡೆಗೆ ಪಲಾಯನ ಮಾಡಿದನು. ವಿಜಯನಗರದ ಸಾಮ್ರಾಜ್ಯವು ಮತ್ತೆ ಹಲವು ದಶಕಗಳ ಕಾಲ ಮುಂದುವರಿದರೂ ಗುಲಬರ್ಗಾ ಜಿಲ್ಲೆಯ ಮೇಲೆ ಅವರ ಪ್ರಭಾವವು ಯಾವುದೇ ರೀತಿಯಲ್ಲೂ ಉಂಟಾಗಲಿಲ್ಲ. ವಿಜಾಪುರದ ಆದಿಲ್ ಷಾಹಿಗಳು ಈ ಭಾಗವನ್ನು ತಮ್ಮ ವಶಕ್ಕೆ ಪೂರ್ಣವಾಗಿ ತೆಗೆದುಕೊಂಡರು.

## ಮುಸ್ಲಿಂ ದಾಳಿಗಳು ಮತ್ತು ಬಹಮನಿ ಸುಲ್ತಾನರು

ಸುಮಾರು ಹನ್ನೆರಡನೇ ಶತಮಾನದ ಅಂತ್ಯದ ವೇಳೆಗೆ ದೆಹಲಿ ಸುಲ್ತಾನರ ಸಾಮ್ರಾಜ್ಯವು ಸ್ಥಾಪಿತವಾದ ಮೇಲೆ ಮುಂದಿನ ಸುಮಾರು ನೂರು ವರ್ಷಗಳವರೆಗೂ ಈ ಸಾಮ್ರಾಜ್ಯವು ಕೇವಲ ಉತ್ತರ ಭಾರತದ ವ್ಯಾಪ್ತಿಗೆ ಒಳಪಟ್ಟಿತ್ತು. ಮಲ್ಲಿಕ್ ಕಾಫರನ ದಕ್ಷಿಣದ ದಂಡಯಾತ್ರೆಗಳು ಕೇವಲ ದಾಳಿಗಳಾಗಿದ್ದವೇ ಹೊರತು ರಾಜ್ಯವನ್ನು ಕಟ್ಟುವ ಆಕಾಂಕ್ಷೆಯಿಂದ ಕೂಡಿರಲಿಲ್ಲ. ದಖನ್ ಪ್ರದೇಶವನ್ನು ತಮ್ಮ (ಮುಸ್ಲಿಂ) ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಹಂಬಲ ಖಿಲ್ಜಿ ಸಂತತಿಯಿಂದ ಆರಂಭವಾಯಿತು. ಅಲ್ಲಾವುದ್ ದೀನ ಖಿಲ್ಜಿಯು ೧೩೦೭ರಲ್ಲಿ ತನ್ನ ನೆಚ್ಚಿನ ಸೇನಾಧಿಪತಿ ಮಲ್ಲಿಕ್ ಕಾಫರನನ್ನು ದೇವಗಿರಿಯ ರಾಮಚಂದ್ರದೇವನಿಂದ (ಮೂರು ವರ್ಷಗಳವರೆಗೆ ಕೊಡದಿದ್ದ) ಕಪ್ಪ ವಸೂಲಿ ಮಾಡುವ ನೆಪದಿಂದ ತನ್ನ ರಾಯಭಾರಿಯನ್ನಾಗಿ ಕಳುಹಿಸಿದನು. ಮಲ್ಲಿಕ್ ಕಾಫರನು ಖ್ವಾಜಾ ಹಾಜಿ ಎಂಬ ಮತ್ತೊಬ್ಬ ಸೇನಾಧಿಕಾರಿಯ ಸಹಾಯದಿಂದ ಮಾಳ್ವದ ಮೂಲಕ ದೇವಗಿರಿಯನ್ನು ಪ್ರವೇಶಿಸಿ ಸೇವುಣ ರಾಮಚಂದ್ರ ದೇವನು ಶಾಂತಿಯುತವಾಗಿ ಶರಣಾಗುವಂತೆ ಮಾಡಿದನು. ಅನಂತರ ರಾಮಚಂದ್ರದೇವನು ದೆಹಲಿಯ ಸುಲ್ತಾನರ ಅಧೀನ ರಾಜನಾಗಿ ಆಳ್ವಿಕೆ ಮಾಡಿದನು. ಪುನಃ ೧೩೧೮ರಲ್ಲಿ ದೇವಗಿರಿಯನ್ನು ಪೂರ್ಣವಾಗಿ ತನ್ನ ಅಧೀನಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಅಲ್ಲಾವುದ್ದೀನನು ದಾಳಿಮಾಡಿ

ಯಶಸ್ವಿಯಾದನು. ಹೀಗೆ ದೇವಗಿರಿ ತನ್ನ ಹಿಂದೂ ಸಾಮ್ರಾಜ್ಯದ ಅಸ್ತಿತ್ವ ಕಳೆದುಕೊಂಡು ಮುಂದೆ ದೌಲತಾಬಾದ್ ಎಂಬ ಹೆಸರನ್ನು ತಳೆದು ಪ್ರಸಿದ್ಧಿ ಪಡೆಯಿತು. ನಂತರ ಮಹಮದ್ ಬಿನ್ ತುಘಲಕನು ೧೩೨೫ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ದಖನ್ನಿನ ರಾಜಕೀಯ ಇತಿಹಾಸದಲ್ಲಿ ಈ ಗಮನಾರ್ಹ ಬದಲಾವಣೆಗಳು ಕಂಡು ಬರುತ್ತದೆ. ಈತನು ದಕ್ಷಿಣಾ ಪಥದಲ್ಲಿದ್ದ ಸಣ್ಣ ಪುಟ್ಟ ರಾಜರುಗಳನ್ನು ತನ್ನ ಪೂರ್ಣ ಹತೋಟಿಗೆ ಹಾಗೂ ಮಾಂಡಳೀಕರನ್ನಾಗಿ ಮಾಡಿಕೊಳ್ಳುವ ಉದ್ದೇಶವನ್ನು ಹೊಂದಿದ್ದನು. ಈ ವೇಳೆಗಾಗಲೇ ಮರಾಠವಾಡಾ ಮತ್ತು ತೆಲಂಗಾಣ ಪ್ರದೇಶಗಳು ದೆಹಲಿಯ ಸುಲ್ತಾನರ ಆಳ್ವಿಕೆಗೆ ಅಪರೋಕ್ಷವಾಗಿ ಒಳಪಟ್ಟಿದ್ದವು. ಆದರೆ ಹಿಂದೂ ಸಾಮ್ರಾಜ್ಯಗಳಾಗಿದ್ದ ಕಾಂಥ್ಯಾಯನ, ಕಂಪಿಲಿ ಮತ್ತು ದ್ವಾರಸಮುದ್ರಗಳು ದೆಹಲಿ ಸುಲ್ತಾನರ ಸಾರ್ವಭೌಮತ್ವ ಪ್ರಶ್ನಿಸಿದ್ದೇ ಅಲ್ಲದೆ ಸ್ವತಂತ್ರ ಸಂಸ್ಥಾನಗಳಾಗಲು ಹವಣಿಸುತ್ತಿದ್ದವು. ಅಧಿಕಾರಕ್ಕೆ ಬಂದ ಎರಡು ವರ್ಷದಲ್ಲೇ ಸುಲ್ತಾನನು ದಖನ್ನಿನಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ಆರಂಭವಾದ ಬಂಡಾಯಗಳನ್ನು ಎದುರಿಸಬೇಕಾಯಿತು. ಆಗ ಸುರಪುರ ತಾಲೂಕಿನ ಸಗರನಾಡಿನ ಭಾಗವನ್ನು ಮಹಮ್ಮದ್ ಬಿನ್ ತುಘಲಕನ ದಾಯಾದಿ ಘಯಾಸುದ್ದೀನ್‌ನನ ಅಕ್ಕನ ಮಗನಾದ ಬಹು ಉದ್ ದೀನ್ ಗುರಷಾಸ್ಪನು ರಾಜ್ಯಪಾಲನಾಗಿ ಆಳ್ವಿಕೆ ಮಾಡುತ್ತಿದ್ದನು. ದೆಹಲಿಯ ತುಘಲಕ್ ಸುಲ್ತಾನನ ಅಧಿಕಾರದ ವಿರುದ್ಧ ಬಂಡೆದ್ದವರಲ್ಲಿ ಈತನೇ ಪ್ರಮುಖನಾದವನು. ಈತನು ತನ್ನ ಪ್ರಬಲವಾದ ಸೈನ್ಯ ಶಕ್ತಿಯೊಂದಿಗೆ ಸಣ್ಣಪುಟ್ಟ ಪ್ರಾಂತ್ಯಗಳನ್ನು ಒಂದಾದ ಮೇಲೆ ಒಂದರಂತೆ ತನ್ನ ವಶಕ್ಕೆ ತೆಗೆದುಕೊಂಡು ದೆಹಲಿಯ ಸುಲ್ತಾನನಿಗೆ ಆತಂಕವನ್ನುಂಟುಮಾಡಿದ್ದನು. ಸುರಪುರ ತಾಲೂಕಿನ ಸಗರ ನಾಡನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ಮಾಡುತ್ತಿದ್ದ ಬಹು-ಉದ್-ದೀನ್‌ನನು ತಾನೇ ಸ್ವಾತಂತ್ರ್ಯ ಘೋಷಿಸಿಕೊಂಡನು. ಮಹಮದ್-ಬಿನ್-ತುಘಲಕನು ತನಗೆ ಯಾವುದೇ ರೀತಿಯ ರಾಜಕೀಯ ಸ್ಥಾನಮಾನಗಳನ್ನು ನೀಡದಿದ್ದುದು ಈತನ ಅತೃಪ್ತಿಗೆ ಕಾರಣವೆಂದು ಹೇಳಲಾಗುತ್ತದೆ. ಈತನು ತನ್ನ ರಾಜತಂತ್ರದ ಮೂಲಕ ಕಂಪಿಲಿಯ ಕಂಪಿಲರಾಯನೊಡನೆ ಸ್ನೇಹ-ಸಹಕಾರವನ್ನು ಬೆಳೆಸಿಕೊಂಡಿದ್ದನು.

ಬಹು-ಉದ್-ದೀನ್‌ನ ಸಂಚನ್ನು ಮೊದಲೇ ಅರಿತುಕೊಂಡ ತುಘಲಕನು ಗುಜರಾತಿನ ರಾಜ್ಯಪಾಲನಾಗಿದ್ದ ಮಲ್ಲಿಕ್ ಜಾದಾ ಅಹಮದ್‌ನನ್ನು ನೇಮಿಸಿ ಈತನನ್ನು ಹತ್ತಿಕ್ಕಲು ಕಳುಹಿಸಿದನು. ಗೋದಾವರಿ ನದಿಯ ತೀರದಲ್ಲಿ ಮಲ್ಲಿಕ್ ಅಹಮದ್‌ನ ಪಡೆಯು ಬಹು-ಉದ್-ದೀನ್‌ನ ಸೈನ್ಯದ ಮೇಲೆ ಎರಗಿದಾಗ ಭಾರಿ ಯುದ್ಧವು ನಡೆಯಿತು. ಮೊದಲ ದಾಳಿಯನ್ನು ಬಹು-ಉದ್-ದೀನನೇ ಮಾಡಿ ತುಘಲಕ್‌ನ ರಾಯಭಾರಿ ಸೇನೆಗೆ ಭಾರಿ ನಷ್ಟವನ್ನುಂಟು ಮಾಡಿದನು. ಈತನ ಸೇನೆಯ ಮುಖ್ಯ ದಂಡನಾಯಕನಾಗಿದ್ದ ಖಿಜರ್ ಬದರಮ್‌ನು ಯುದ್ಧ ಭೂಮಿಯಿಂದ ಪಲಾಯನ ಮಾಡಿ ವಿರೋಧಿ ಮಲ್ಲಿಕ್ ಜಾದಾ ಸೇನೆಯನ್ನು ಕೂಡಿದನು. ಈ ಸಮಯದ ಅಪಾಯಕರ ಪರಿಸ್ಥಿತಿಯನ್ನು ಅರಿತು ಬಹು-ಉದ್-ದೀನನು ಕ್ಷಣ ಮಾತ್ರದಲ್ಲೇ ಯುದ್ಧಭೂಮಿಯಿಂದ ತಪ್ಪಿಸಿಕೊಂಡು ಕಂಪಲಿಯ ಕಂಪಿಲಿರಾಯನಲ್ಲಿ ರಕ್ಷಣೆ ಪಡೆದನು. ಕಂಪಿಲಿಯ ಸಾಮ್ರಾಜ್ಯವು ಈಗಿನ ರಾಯಚೂರು, ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳು ಹಾಗೂ ಅನಂತಪುರದ ಕೆಲವು ಭಾಗಗಳನ್ನೊಳಗೊಂಡಿತ್ತು. ಮುಮ್ಮಡಿ ಸಿಂಘಣನು ಸ್ಥಾಪಿಸಿದ್ದ ಈ ಸಾಮ್ರಾಜ್ಯಕ್ಕೆ ೧೩೧೩ರಲ್ಲಿ ಆತನ ಮಗ ಕಂಪಿಲರಾಯನು ಪಟ್ಟಕ್ಕೆ ಬಂದನು. ಈತನು ಅತ್ಯಂತ ಸಮರ್ಥ ರಾಜನಾಗಿದ್ದುದೇ ಅಲ್ಲದೇ ಹೊಯ್ಸಳರ ಮೂರನೇ ಬಲ್ಲಾಳನ ವಿರುದ್ಧ ಹೋರಾಡಿದ ದೇವಗಿರಿಯ ರಾಮದೇವನಿಗೆ ಸಹಕಾರವನ್ನು ನೀಡಿದ್ದನು. ಕಂಪಿಲರಾಯನ ಮಗನಾಗಿದ್ದ ಕುಮಾರರಾಮನು ಸ್ವಲ್ಪ ಕಾಲ ಸಗರನಾಡಿನಲ್ಲಿ ಸಮರ್ಥ ಅಧಿಕಾರಿಯಾಗಿದ್ದನೆಂದು ಪ್ರತೀತಿಯಿದೆ. ಕಂಪಿಲನು ಮುಸ್ಲಿಮರ ದಾಳಿಗಳನ್ನು ವಿರೋಧಿಸುವ ದಕ್ಷಿಣದ ಮುಖ್ಯ ಶಕ್ತಿಯಾಗಿದ್ದನು. ಮಲ್ಲಿಕ್ ಕಾಫರನು ದಕ್ಷಿಣದ ಮೇಲೆ ದಾಳಿ ಮಾಡಿದಾಗ ಆತನ ಕ್ರಮವನ್ನು ವಿರೋಧಿಸಿದನು. ಆದರೆ, ಬಹು-ಉದ್-ದೀನನಿಗೆ ರಕ್ಷಣೆ ನೀಡಿದ ಕಾರಣ ಕಂಪಿಲನು ತುಘಲಕ್‌ನ ವೈಷಮ್ಯಕ್ಕೆ ಗುರಿಯಾಗಬೇಕಾಯಿತು. ಇದರ ಜೊತೆಗೆ ಕಂಪಿಲರಾಯನ ನಿರಂತರ ವಿರೋಧಿಗಳಾಗಿದ್ದ ವಾರಂಗಲ್‌ನ ಮತ್ತು ದ್ವಾರಸಮುದ್ರದ ಅರಸರುಗಳೊಡನೆ ಶತೃತ್ವದಿಂದಾಗಿ ಈತನ ಆಸೆ ಆಕಾಂಕ್ಷೆಗಳು ಕೈಗೂಡಲಿಲ್ಲ. ಕಂಪಿಲಿಯ ವಿರುದ್ಧ ಕ್ರಮ ಕೈಗೊಳ್ಳಲು ಮಹಮ್ಮದ್ ಬಿನ ತುಘಲಕ್‌ನು ತಾನೇ ಸ್ವತಃ ಭಾರಿ ಸೈನ್ಯದೊಂದಿಗೆ ೧೩೨೭ರಲ್ಲಿ ದಕ್ಷಿಣ ಭಾರತಕ್ಕೆ ಬಂದನು. ದೆಹಲಿಯಲ್ಲಿ ತಾನು ಉಳಿದು, ತನ್ನ ಸೇನಾ ಮುಖ್ಯಸ್ಥನಾಗಿದ್ದ ಮಲ್ಲಿಕ್ ರುಖ್ನುದ್ದೀನ್‌ನನ್ನು ಕಂಪಿಲಿಯ ಮೇಲೆ ಎರಗಲು ಕಳುಹಿಸಿದನು. ಈತನು ಹೊಸಪೇಟೆಯ ಸಮೀಪವಿರುವ ಕಮ್ಮಟ್ರ ದುರ್ಗವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದನು. ಆದರೆ, ಕಂಪಿಲನ ಮಗ ಕಾತನು ಬಹು-ಉದ್-ದೀನನ ಸಹಾಯದಿಂದ ಪ್ರಬಲ ವಿರೋಧವನ್ನು ಒಡ್ಡಿದಾಗ ತುಘಲಕ್‌ನ ಸೈನ್ಯವು ಎಲ್ಲಾ ದಿಕ್ಕುಗಳಿಗೂ ಪಲಾಯನ ಮಾಡಬೇಕಾಯಿತು. ಈ ಸೋಲಿನಿಂದ ಅವಮಾನಿತನಾದ

ಸುಲ್ತಾನನು ಸ್ವಲ್ಪ ಸಮಯದ ತರುವಾಯ ಮಲ್ಲಿಕ್ ಜಾದ್‌ನ ನಾಯಕತ್ವದಲಿ ಪ್ರಬಲ ಸೈನ್ಯವನ್ನು ಕಳುಹಿಸಿದಾಗ ಕಂಪಿಲರಾಯನು ಬಹು-ಉದ್-ದೀನನ ಸಂಗಡ ಕಮ್ಮಟ್ಟ ದುರ್ಗದಿಂದ ನಿರ್ಗಮಿಸಿ ಹೊಸದುರ್ಗದ ಕೋಟೆಯಲ್ಲಿ ರಕ್ಷಣೆ ಪಡೆದನು. ಇಲ್ಲಿಯೂ ಸಹ ತುಘಲಕ್‌ನ ಸೇನೆಯು ಬೆನ್ನಟ್ಟಲು ಪರಿಸ್ಥಿತಿಯ ತೀವ್ರತೆಯನ್ನು ಅರಿತುಕೊಂಡು ಬಹು-ಉದ್-ದೀನ್ ತನ್ನ ಪರಿವಾರದೊಡನೆ ದ್ವಾರಸಮುದ್ರದ ಮೂರನೇ ಬಲ್ಲಾಳನಲ್ಲಿ ರಕ್ಷಣೆ ಪಡೆದನು. ನಂತರ ಕೊನೆಯ ಹೋರಾಟಕ್ಕೆ ಸಿದ್ಧನಾದನು. 'ಇಸ್ಲಾಮಿಕ್' ಕ್ರಾನಿಕಲ್‌ಗಳಲ್ಲಿ (ರಾಜವಂಶದ ಘಟನಾವಳಿ) ಕಂಪಿಲರಾಯನು ಬಹು-ಉದ್-ದೀನ್‌ನಿಗೆ ನೀಡಿದ ಆಶ್ರಯ ಹಾಗೂ ಸಹಕಾರದ ಬಗೆಗೆ ಬಹಳವಾಗಿ ಕೊಂಡಾಡಲಾಗಿದೆ. ಆದರೆ, ತುಘಲಕ್‌ನಿಗೆ ನಿಷ್ಠೆಯುಳ್ಳವನಾಗಿದ್ದ ಮಲ್ಲಿಕ್ ಜಾದ್‌ನು ದ್ವಾರಸಮುದ್ರಕ್ಕೆ ಹೋದಾಗ ಮೂರನೇ ಬಲ್ಲಾಳನು ಬಹು-ಉದ್-ದೀನ್ ಮತ್ತು ಆತನ ಕುಟುಂಬವನ್ನು ಆತನಿಗೆ ಒಪ್ಪಿಸಿದನು. ಬಹು-ಉದ್-ದೀನ್‌ನನ್ನು ಸೆರೆಹಿಡಿದು ದೆಹಲಿಗೆ ಕರೆದೊಯ್ದು ಅತ್ಯಂತ ಹೀನಾಯಮಾನವಾಗಿ ಹಿಂಸಿಸಿ ಕೊಲ್ಲಲಾಯಿತು. ತುಘಲಕ್‌ನ ಆಳ್ವಿಕೆಯ ಪ್ರಭಾವದಿಂದಾಗಿ ಸುರಪುರವನ್ನು ಶೋರಾಪುರವೆಂದು ಬದಲಾಯಿಸಲಾಯಿತು. ಹಾಗೂ ಶಹಾಪುರವನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಳ್ಳಲಾಯಿತು. ಗೋಗಿಯಲ್ಲಿ ದೊರೆತಿರುವ ಮಹಮ್ಮದ್ ಬಿನ್ ತುಘಲಕನ ಕ್ರಿ.ಶ. ೧೩೧೬ರ ಶಾಸನವು ಉಸ್ತಾದಾಬಾದ್ (ಬಹುಶಃ ಶಾಹಪುರ) ಎಂಬ ಕೋಟೆಯನ್ನು ಕಟ್ಟಿಸಿದ ಬಗೆಗೆ ಉಲ್ಲೇಖಿಸುತ್ತದೆ. ಈ ಕೋಟೆಗೆ ಎತ್ತರವಾದ ಇಂಡೋ - ಇಸ್ಲಾಮಿಕ್ ಗೋಪುರಗಳಿರುವ ಪ್ರವೇಶದ್ವಾರವನ್ನು ಕಟ್ಟಲಾಗಿದೆ. ದಖನ್ನಿನಲ್ಲಿ ತುಘಲಕನಿಗೆ ವಿರೋಧ ವ್ಯಕ್ತಪಡಿಸಿದ ಇತರರೆಂದರೆ ಕಂಪಿಲಿಯ ಕಂಪಿಲರಾಯ, ವಾರಂಗಲ್‌ನ ಪ್ರತಾಪರುದ್ರ ಹಾಗೂ ಮಾಬರ್‌ನ ವೀರಪಾಂಡ್ಯ ಮೂವರು ಪ್ರಬಲ ಅರಸರುಗಳು. ತನ್ನ ಆರಂಭದ ದಿನಗಳಲ್ಲೇ ದಖನ್ನಿನ ಭಾಗದಲ್ಲಿ ತೀವ್ರ ವಿರೋಧವನ್ನು ಎದುರಿಸಬೇಕಾಗಿ ಬಂದುದರಿಂದ ಆತನು ತನ್ನ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದಿಗೆ ವರ್ಗಾಯಿಸಿದನು. ಉತ್ತರದಲ್ಲಿ ಅಸ್ಥಿರತೆ ಉಂಟಾದ ಕಾರಣ ಪುನಃ ದೌಲತಾಬಾದಿನಿಂದ ದೆಹಲಿಗೆ ಸ್ಥಳಾಂತರಿಸಿದನು. ಸುರಪುರ ಹಾಗೂ ಶಹಾಪುರದ ಅನೇಕ ಭಾಗಗಳಲ್ಲಿ ಈತನ ದಾಳಿಗಳು ಅಚ್ಚಳಿಯದ ಪ್ರಭಾವವನ್ನುಂಟುಮಾಡಿದವು.

**ಬಹಮನಿಯ ಸಾಮ್ರಾಜ್ಯ** (೧೩೪೭-೧೫೨೭)

ಮಹಮ್ಮದ್ ಬಿನ್ ತುಘಲಕ್‌ನ ವಿರುದ್ಧ ಸ್ಫೋಟಗೊಂಡ ವಿವಿಧ ಪ್ರಾಂತ್ಯಗಳ ಬಂಡಾಯದ ಪ್ರಮುಖ ಪರಿಣಾಮವೆಂದರೆ ಗುಲಬರ್ಗಾದಲ್ಲಿ ಬಹಮನಿ ಷಾಹಿಗಳ ಸಾಮ್ರಾಜ್ಯದ ಸ್ಥಾಪನೆಯೆಂದು ಹೇಳಲಾಗುತ್ತದೆ. ಮಹಮ್ಮದ್ ಬಿನ್ ತುಘಲಕ್‌ನ ವಿರುದ್ಧ ಬಂಡಾಯವೆದ್ದ ಅನೇಕ ರಾಜರುಗಳಲ್ಲಿ ಮತ್ತು ಮುಖ್ಯವಾಗಿ ದೌಲತಾಬಾದ್‌ನ ಪತನಕ್ಕೆ ಕಾರಣರಾದ ದಕ್ಷಿಣಾಪಥದ ಅಮೀರರ ನಾಯಕನೇ ಆಫಗನ್ ರಾಜನಾದ ಇಸ್ಮಾಯಿಲ್ ಮುಖ್ ಅಥವಾ ನಾಸಿರ್ ಉದ್ ದೀನ್ ಷಾ. ಇವನು ತನ್ನ ನಂತರ ಸಮರ್ಥ ಅಧಿಕಾರಿಯಾಗಿದ್ದ ಹಸನ್ ಗಂಗು ಎಂಬುವವನಿಗೆ ನಾಯಕತ್ವವನ್ನು ಬಿಟ್ಟುಕೊಟ್ಟನು. ಈತನ ಅನುಯಾಯಿಗಳು ೧೩೪೭ರಲ್ಲಿ ಹಸನ್‌ನನ್ನು ರಾಜನನ್ನಾಗಿ ಮಾಡಿದರು. ಇವನ ಪೂರ್ಣ ಹೆಸರು ಅಲ್ಲಾ ವುದ್ ದೀನ ಹಸನ್ ಬಹಮನ್ ಷಾ. ನಂತರ ಇವನು ಗುಲಬರ್ಗಾವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಬಹಮನಿ ಸಾಮ್ರಾಜ್ಯವೆಂದು ಇತಿಹಾಸದಲ್ಲಿ ಪ್ರಸಿದ್ಧವಾಗಿರುವ ರಾಜ್ಯವನ್ನು ಸ್ಥಾಪಿಸಿದನು. ಗುಲಬರ್ಗಾದ ಮಸೀದಿಯೊಂದರಲ್ಲಿರುವ ಪರ್ಷಿಯನ್ ಶಾಸನವು ಈತನಿಗೆ "ಸಿಖಂದರ್-ಇ-ಸಾನಿ ಅಲ್ಲಾ-ಉದ್-ದೀನ ಹಸನ್ ಬಹಮನ್ ಷಾ-ಅಲ್-ವಲಿ" ಎಂಬ ಬಿರುದು ಇತ್ತೆಂದು ಉಲ್ಲೇಖಿಸುತ್ತದೆ. 'ಬಹಮನ್ ಷಾ' ಎಂಬುದು ಈತನ ವಂಶದ ಮೂಲದವನೆಂದು (ಪೌರಾಣಿಕ ವ್ಯಕ್ತಿ) ಹೇಳಲಾಗುವ ಪರ್ಷಿಯಾದ ಬಹಮನ್ ಎಂಬ ವ್ಯಕ್ತಿಯ ಹೆಸರಿನಿಂದ ಬಂದಿರುವುದರಿಂದ ಈ ಅಭಿಪ್ರಾಯವಿದೆ. ಆದರೆ, ಫರಿಷ್ತಾನ ಹೇಳಿಕೆಯ ಪ್ರಕಾರ ಬ್ರಾಹ್ಮಣನೊಬ್ಬನಲ್ಲಿ ಅಲ್ಲಾ-ಉದ್-ದೀನ್‌ನನು ಸೇವಕನಾಗಿದ್ದುದರಿಂದ ಮಾಲೀಕನ ಸ್ಮರಣೆಗಾಗಿ ತನ್ನನ್ನು ತಾನು 'ಗಂಗೂ ಬಹಮನಿ' ಎಂದು ಕರೆದುಕೊಂಡನೆಂದು ವ್ಯಕ್ತವಾಗುತ್ತದೆ. ಆದರೆ ಬರ್ಹಾನ್-ಇ-ಮಸಿದ್ ಹಾಗೂ ತಬಾಕತ್-ಇ-ಅಕ್ಬರ್ ಗ್ರಂಥದ ಕರ್ತೃವಾದ ನಿಜಾಮ ಉದ್ದೀನ್ ಅಹಮದ್ ಮತ್ತು ಪ್ರಸಿದ್ಧ ಅರಬ್ ಇತಿಹಾಸಕಾರರುಗಳು ಬ್ರಾಹ್ಮಣ ಜ್ಯೋತಿಷ್ಯರ ವಿಚಾರವನ್ನು ಪ್ರಸ್ತಾಪಿಸಿರುವುದಿಲ್ಲ. ಈತನು ಸುಮಾರು ಹನ್ನೊಂದು ವರ್ಷಗಳ ಕಾಲ (೧೩೪೭-೫೮) ಆಳ್ವಿಕೆ ಮಾಡಿದ್ದರೂ, ಹೆಚ್ಚಿನ ಕಾಲವನ್ನು ಯುದ್ಧಗಳಲ್ಲಿ ಅಥವಾ ಸಂಧಾನದ ಮಾತುಕತೆಗಳಲ್ಲೇ ಕಳೆದನೆಂದು ತಿಳಿದು ಬರುತ್ತದೆ. ತಾನು ಅಧಿಕಾರಕ್ಕೆ ಬಂದ ಮೂರು ತಿಂಗಳಲ್ಲೇ ಒಂದು ಪ್ರಬಲ ಸೈನ್ಯವನ್ನು ಪ್ರಸ್ತಾಪಿಸಿದನು. ಈತನು ಮಹಮ್ಮದ್ ಬಿನ್ ತುಘಲಕನ ವಿರುದ್ಧದ ದಾಳಿಗಳಲ್ಲೂ ಸಕ್ರಿಯವಾಗಿ

ನೆರವಾದ ಕಾರಣ ಸಾಕಷ್ಟು ವೃದ್ಧಾಪ್ಯದಲ್ಲಿದ್ದ ಹಾಗೂ ವಿಶ್ರಾಂತಿಯನ್ನು ಬಯಸಿದ್ದ. ದೌಲತಾಬಾದ್‌ನ ನಾಸಿಕ್-ಉದ್-ದೀನ ಇಸ್ಮಾಯಿಲ್ ಷಾ ತಾನೇ ಸ್ವತಃ ಹಸನ್ ಗಂಗುವಿಗೆ ೧೩೪೭ರಲ್ಲಿ ಸಿಂಹಾಸನವನ್ನು ತೆರವು ಮಾಡಿಕೊಟ್ಟನು.

ಹಸನ್ ಗಂಗು ಗುಲಬರ್ಗಾಕ್ಕೆ ತನ್ನ ರಾಜಧಾನಿಯನ್ನು ಬದಲಿಸಿದಾಗ ಅಲ್ಲಿ ಆಗ ಪೋಚರೆಡ್ಡಿ ಎಂಬ ಹಿಂದೂ ಬಂಡಾಯಗಾರನೊಬ್ಬನು ನಾಯಕನಾಗಿದ್ದನು. ಈತನು ತುಘಲಕ್‌ನಿಗೆ ನಿಷ್ಠಾವಂತನಾಗಿದ್ದ ಕಾರಣ ಹಸನ್ ಗಂಗುವಿಗೆ ಮುಖ್ಯ ಸಮಸ್ಯೆಯೊಡ್ಡಿದನು. ಗುಲಬರ್ಗಾಕ್ಕೆ ರಾಜಕೀಯವಾಗಿ ತನ್ನ ರಾಜಧಾನಿಯನು ಸ್ಥಳಾಂತರಿಸಿದ್ದರೂ ಆತನ ಆಸ್ಥಾನವು ಸ್ವಲ್ಪ ಕಾಲದವರೆಗೆ ದೌಲತಾಬಾದಿನಲ್ಲೇ ಮುಂದುವರೆಯುವಂತಾಯಿತು. ಇದೇ ಅಭಿಪ್ರಾಯವನ್ನು ಶೇರವಾಣಿಯವರು ತಮ್ಮ ಗ್ರಂಥದಲ್ಲಿ ದಾಖಲಿಸಿದ್ದಾರೆ. ಹಸನ್ ಗಂಗು ತನ್ನ ಸೈನ್ಯ ಬಲ ಹಾಗೂ ಶಾಂತಿ ಮಾತುಕತೆ ಎರಡೂ ಮಾರ್ಗಗಳನ್ನು ಬಳಸಿ, ಸ್ಥಳೀಯ ಆಳ್ವಿಕೆಯ ಸೂತ್ರಧಾರರಾಗಿದ್ದ ಅಮೀರರುಗಳನ್ನು ಸ್ತಬ್ಧಗೊಳಿಸಿದನು. ಈತನ ದೌಲತಾಬಾದ್‌ನ ಪರ್ಷಿಯನ್ ಶಾಸನದಲ್ಲಿ ಹಸನ್ ಗಂಗುವನ್ನು 'ಸುಲ್ತಾನ್ ಅಬುಲ್ ಮುಸಾಫರ್ ಅಲ್ಲಾ-ಉದ್-ದೀನ್ ಬಹಮನ್ ಷಾ' ಎಂದು ಹೆಸರಿಸಲಾಗಿದೆ.

ಸುಲ್ತಾನ್ ಅಲ್ಲಾ-ಉದ್-ದಿನ್ ಬಹಮನ್ ಷಾನು ತನ್ನ ಕೈಗೆ ಅಧಿಕಾರ ಬಂದ ಹಲವೇ ತಿಂಗಳಲ್ಲಿ ದೌಲತಾಬಾದಿನಿಂದ ಗುಲಬರ್ಗಾಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದನು. ಅಧಿಕಾರಕ್ಕೆ ಬಂದ ಕ್ಷಣವೇ ಈತನು ಹಲವು ಸ್ಥಳೀಯ ಅಮೀರರುಗಳ ಹಾಗೂ ತುಘಲಕ್‌ನ ಅನುಯಾಯಿಗಳಿಂದ ಪ್ರಬಲ ವಿರೋಧವನ್ನು ಎದುರಿಸಬೇಕಾಗಿ ಬಂದಿತು. ಸುಮಾರು ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ಮಾಡಿದ ಬಹಮನ್ ಷಾ ವಾರಂಗಲ್‌ನ ಕಾಪಯ ನಾಯಕನನ್ನು ತನ್ನ ಮಾಂಡಳಿಕನನ್ನಾಗಿರುವಂತೆ ಮಾಡಿದನು. ಹಾಗೆಯೇ ೧೩೪೯ರಲ್ಲಿ ವಿಜಯನಗರದ ಗಡಿಗಳ ಮೇಲೆ ದಾಳಿ ಮಾಡಿ ರಾಯಚೂರನ್ನು ತನ್ನ ವಶಕ್ಕೆ ತೆಗೆದುಕೊಂಡನು. ಐದು ವರ್ಷಗಳ ನಂತರ ತನ್ನ ಸಂಬಂಧಿಯಾಗಿದ್ದ ಮಥುರೆಯ ಸುಲ್ತಾನನ ಸಹಾಯ ಪಡೆದು ವಿಜಯನಗರದ ಮೇಲೆ ಎರಡನೇ ಬಾರಿಗೆ ಎರಗಿದನು. ಮುಸ್ಲಿಮ್ ಆಧಾರಗಳ ಪ್ರಕಾರ ಬಹಮನ್ ಷಾ ತುಂಗಭದ್ರಾ ನದಿಯವರೆಗೂ ತನ್ನ ದಾಳಿಯನ್ನು ಮುಂದುವರೆಸಿದನೆಂದು ತಿಳಿದಿರುತ್ತದೆ. ಆದರೆ, ಹಿಂದೂ ಆಧಾರಗಳು ಮೊದಲನೇ ಹರಿಹರನು ಬಹಮನ್ ಷಾನ ಸೈನ್ಯದ ಮೇಲೆ ಜಯಸಾಧಿಸಿದನೆಂದು ಹೇಳಿಕೊಳ್ಳುತ್ತವೆ. ಈ ವಿವರಣೆಗಳು ಏನೇ ಇದ್ದರೂ ತಾನು ಸಾಯುವ ಸಮಯದಲ್ಲಿ ಅಲ್ಲಾವುದ್-ದೀನ್ ಬಹಮನ್ ಷಾ ವಿಶಾಲವಾದ ಸಾಮ್ರಾಜ್ಯವನ್ನು ಹೊಂದಿದ್ದನಲ್ಲದೇ ಆಡಳಿತವನ್ನೂ ತುಘಲಕ್‌ನ ತತ್ವಗಳ ಆಧಾರದ ಮೇಲೆ ಭದ್ರಪಡಿಸಿದ್ದನೆಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಈತನ ಸಾಮ್ರಾಜ್ಯವು ಪಶ್ಚಿಮ ಕರಾವಳಿಯವರೆಗೂ ವ್ಯಾಪಿಸಿತ್ತಲ್ಲದೇ ಪೂರ್ವದಲ್ಲಿ ಕೋಟೆಯವರೆಗೂ ಹರಡಿತ್ತು. ಅಲ್ಲಾ ಉದ್ದೀನ್ ಬಹಮನ್ ಷಾ ತನ್ನ ರಾಜ್ಯವನ್ನು ನಾಲ್ಕು 'ತರಫ್' ಅಥವಾ ವಿಭಾಗಗಳನ್ನಾಗಿ ವಿಂಗಡಿಸಿದ್ದನು. ಅವುಗಳೆಂದರೆ ದಾಬೋಳ್‌ವರೆಗಿನ ಮತ್ತು ಕೃಷ್ಣಾ-ತುಂಗಭದ್ರಾ ಪ್ರದೇಶಗಳನ್ನೊಳಗೊಂಡ ಅಹಸನಾಬಾದ್-ಗುಲಬರ್ಗಾ, ದೌಲತಾಬಾದ್, ಬೀದರ್ ಮತ್ತು ಕಾಂದಹಾರ್, (ಇಂದೂರ್ ಮತ್ತು ತೆಲಂಗಾಣದ ಕೆಲವು ಪ್ರದೇಶಗಳನ್ನೊಳಗೊಂಡ ಬೀದರ್) ಇವುಗಳಲ್ಲಿ ಗುಲಬರ್ಗಾ ಪ್ರಾಂತ್ಯವೇ ಬಹಳ ಮುಖ್ಯವಾದ ಆಡಳಿತ ಘಟಕವಾಗಿತ್ತು. ಈ ಪ್ರಾಂತ್ಯಗಳಿಗೆ ರಾಜ್ಯಪಾಲರುಗಳನ್ನು ಮಾಲಿಕ್ ನಾಯಬ್ ಸಾಮಾನ್ಯವಾಗಿ ಸೈನ್ಯದ ಮುಖಂಡರುಗಳನ್ನೇ ನೇಮಿಸಲಾಗುತ್ತಿತ್ತು. ಸಾಮ್ರಾಜ್ಯದಲ್ಲಿದ್ದ ಪ್ರತಿಯೊಬ್ಬ ಅಮೀರನಿಗೂ ಒಂದು ಜಹಗಿರಿಯು ಕೊಡಲ್ಪಟ್ಟಿತು. ಈ ಅಮೀರನು ನಿಯಮದಂತೆ ಆಪತ್ಕಾಲದಲ್ಲಿ ಸಹಾಯ ಮಾಡಲು ಒಂದು ಸೈನ್ಯವನ್ನು ಇಡಬೇಕಾಗಿತ್ತು. ಆಡಳಿತ ನಿಯಂತ್ರಣವನ್ನು ಬಹಮನ್ ಷಾ ತುಘಲಕ್‌ನ ಆಡಳಿತ ಪದ್ಧತಿಯ ಆಧಾರದ ಮೇಲೆ ರೂಪಿಸಿದ್ದನು. ಪ್ರಸಿದ್ಧ ಪರ್ಷಿಯನ್ ಗ್ರಂಥವಾದ 'ಬರ್ಹಾನ್-ಇ-ಮಸಿದ್' ರಾಜನ ಅಧಿಕಾರಿಗಳ ಕಾರ್ಯ ಹಾಗೂ ಹುದ್ದೆಯ ಹೆಸರುಗಳನ್ನು ವಿವರಿಸಿರುವುದು. ಅವುಗಳಲ್ಲಿ ಕೆಲವು ಮುಖ್ಯವಾದುವೆಂದರೆ ಸಾಹಿಬ್-ಇ-ಅರ್ಜ್ (ಸೈನ್ಯವನ್ನು ಪರಿಶೀಲಿಸುವುದು, ಕುರಬೇಗ್-ಇ-ಮಕ್‌ಸರನ್ (ಸೈನ್ಯ ವಿಭಾಗಾಧಿಕಾರಿ), ದಬೀರ್(ಕಾರ್ಯದರ್ಶಿ, ದೀವಾನ್(ಮಂತ್ರಿ), ದವತ್‌ದಾರ್(ಮುದ್ರಾಧಿಕಾರಿ), ಹಾಜೀಬ್-ಉಲ್-ಕಾಸ್‌ಬಾಹ್(ನಗರದ ಪೋಲೀಸ್ ಅಧಿಕಾರಿ), ಶಹ್ನಾ-ಇ-ಬರ್ಗಾ(ದರ್ಬಾರ್ ಅಧಿಕಾರಿ), ಸರ್-ಪರದಾಹ-ದಾರ್(ನೇಪಥ್ಯಾಧಿಕಾರಿ) ಮುಂತಾದವುಗಳು. ಅಲ್ಲಾ-ಉದ್-ದೀನ್ ಬಹಮನ್ ಷಾ ೧೩೫೮ರಲ್ಲಿ ನಿಧನನಾದಾಗ ಆತನ ಮಗನಾದ ಮೊದಲನೇ ಮಹಮ್ಮದ್ ಷಾ (೧೩೫೮-೭೭) ಪಟ್ಟಕ್ಕೆ ಬಂದನು. ಬಹಮನ್ ಷಾನ ಆಳ್ವಿಕೆಯ ಅವಧಿಯಲ್ಲಿ ತನ್ನ ರಾಜಧಾನಿ ನಗರವಾದ ಗುಲಬರ್ಗಾವನ್ನು ಬೃಹತ್ ಕಟ್ಟಡಗಳಿಂದ ಹಾಗೂ ಉತ್ತಮ ನಗರ ವ್ಯವಸ್ಥೆಗಳಿಂದ

ಆಧುನಿಕಗೊಳಿಸಿದನು. ಈತನು ಆ ಕಾಲದ ಪ್ರಸಿದ್ಧ ಸೂಫಿ ಸಂತರಾಗಿದ್ದ ಶೇಕ್ ಫಾರಿಬ್, ಶೇಕ್ ಬೀಜಾಪುರಿ ಮತ್ತು ಶೇಕ್ ಜುನಾದಿಗಳಿಗೆ ಆಶ್ರಯ ನೀಡಿದ್ದನಲ್ಲದೇ ಸ್ವತಃ ತಾನೇ ಈ ಸೂಫಿ ಸಂತರುಗಳ ನಿಷ್ಠಾವಂತ ಭಕ್ತನಾಗಿದ್ದನು.

ಮಹಮ್ಮದ್ ಷಾನ ಆಳ್ವಿಕೆಯಲ್ಲಿ ಮುಖ್ಯವಾಗಿ ವಿಜಯನಗರ ಮತ್ತು ತೆಲಂಗಾಣದ ವಿರುದ್ಧ ಯುದ್ಧಗಳು ನಡೆದವು. ಇದಲ್ಲದೇ ಸುಲ್ತಾನನು ದೌಲತಾಬಾದಿನಲ್ಲಿ ತಲೆದೋರಿದ ದಂಗೆಯನ್ನು ಅಡಗಿಸಬೇಕಾಯಿತು. ಕೊನೆಗೆ ತೆಲಂಗಾಣದ ರಾಜನು ಸುಲ್ತಾನನೊಂದಿಗೆ ಒಪ್ಪಂದ ಮಾಡಿಕೊಂಡು ತನ್ನ ಚಿನ್ನದ ಸಿಂಹಾಸನವನ್ನು ಸುಲ್ತಾನನಿಗೆ ಅರ್ಪಿಸಿದನು. ಈ ಸಿಂಹಾಸನವು ಗುಲಬರ್ಗಾದ ಅರಮನೆಯಲ್ಲಿ ಸ್ಥಾಪಿಸಲಾಯಿತೆಂದು ತಿಳಿದು ಬರುತ್ತದೆ. ಮಹಮ್ಮದ್‌ನ ನಂತರ ಗುಲಬರ್ಗಾವನ್ನು ಆಳಿದ ಸುಲ್ತಾನರುಗಳು ಈ ಸಿಂಹಾಸನ ಮತ್ತಷ್ಟು ಅತ್ಯಮೂಲ್ಯವಾದ ಮುತ್ತು ರತ್ನ ಹಾಗೂ ಪ್ರಜ್ವಲ ಕಲ್ಲುಗಳಿಂದ ಅಲಂಕರಿಸಿ ಶ್ರೀಮಂತಗೊಳಿಸಿದರೆಂದು ಪ್ರತೀತಿಯಿದೆ. ಸಿಂಹಾಸನದಲ್ಲಿ ತಾನು ಅಲಂಕರಿಸಿ ತನ್ನ ಮನರಂಜನೆಗಾಗಿ ನೃತ್ಯ ಹಾಗೂ ಸಂಗೀತಗಾರ್ತಿಯರನ್ನು ನೇಮಿಸಿ ಅವರಿಗೆ ನೀಡಬೇಕಾದ ಗೌರವಧನದ ಕಪ್ಪವನ್ನು ವಿಜಯನಗರದ ಅರಸು ನೀಡಬೇಕು ಎಂಬುವ ರಾಜಾಜ್ಞೆಯನ್ನು ತನ್ನ ರಾಯಭಾರಿಯೊಂದಿಗೆ ಕಳುಹಿಸಿದಾಗ ಬುಕ್ಕನು ಅವನನ್ನು ಅಪಮಾನಗೊಳಿಸಿ ಕತ್ತೆಯ ಮೇಲೆ ಮೆರವಣಿಗೆ ಮಾಡಿಸಿದ ಪ್ರತಿಫಲವೇ ಮುದಗಲ್‌ನ ಯುದ್ಧವೆಂದು ತಿಳಿದು ಬರುತ್ತದೆ. ಬಹಮನಿಯರ ಹಾಗೂ ವಿಜಯನಗರದ ನಡುವೆ ಮುದಗಲ್‌ನಲ್ಲಿ ನಡೆದ ಭಾರಿ ಯುದ್ಧದಲ್ಲಿ (೧೩೬೫) ಅಪಾರ ಸಾವು-ನೋವುಗಳುಂಟಾದವು. ವಿಜಯನಗರದ ಬುಕ್ಕರಾಯನು ಈ ಯುದ್ಧದಲ್ಲಿ ಸ್ವತಃ ಭಾಗಿಯಾಗಿದ್ದನು. ಕೊನೆಗೆ ಬುಕ್ಕನು ಸೋಲನ್ನನುಭವಿಸಿ ಬಹಮನಿ ರಾಜನ ರಾಜಾಜ್ಞೆಯನ್ನು ಗೌರವಿಸಬೇಕಾಗಿ ಬಂತು.

ಮೊದಲನೆ ಮಹಮ್ಮದನು ನಿಧನನಾದ ಮೇಲೆ ೧೩೭೫ರಲ್ಲಿ ಅವನ ಮಗ ಅಲ್ಲಾವುದ್ದೀನ್ ಮುಜಾಹಿದನು ಪಟ್ಟಕ್ಕೆ ಬಂದನು. ಈತನೂ ಸಹ ತನ್ನ ತಂದೆಯ ತತ್ವಗಳನ್ನೇ ಅನುಸರಿಸಿ ವಿಜಯನಗರದೊಡನೆ ಸೆಣಸಾಟವನ್ನು ಮುಂದುವರಿಸಿದನು. ಆದರೆ, ಬುಕ್ಕನು ಯುದ್ಧಕ್ಕೆ ಬದಲಾಗಿ ತನ್ನ ರಾಜತಂತ್ರದ ಮೂಲಕ ಈತನ ಮನವನ್ನು ಗೆಲ್ಲುವ ಯೋಜನೆಯನ್ನು ಕಾರ್ಯರೂಪಗೊಳಿಸಿದನು. ಮುಜಾಹಿದನ ಸೇನಾಧಿಕಾರಿಯಾಗಿದ್ದ ದೌದ್ ಖಾನನು ದುರ್ಬಲ ಸೇನೆಯೊಂದಿಗೆ ಆದೋನಿ (ವಿಜಯನಗರದ ಹತೋಟಿಯಲ್ಲಿತ್ತು)ಯ ಮೇಲೆ ಎರಗಿದಾಗ ಒಂಭತ್ತು ತಿಂಗಳುಗಳ ಕಾಲ ಯುದ್ಧ ನಡೆಯಿತು. ಈ ಸಂದರ್ಭದಲ್ಲಿ ದೌದ್‌ಖಾನನು ಕೈಗೊಂಡ ಯುದ್ಧ ತಂತ್ರದ ಬಗೆಗೆ ಮುಜಾಹಿದ್‌ಗೆ ತೃಪ್ತಿಯಾಗದೇ ಈತನ ಮೇಲೆ (ದುರ್ಬಲ ನಡತೆಯೇ ಕಾರಣ)ಕ್ರಮ ಕೈಗೊಳ್ಳಲು ನಿಶ್ಚಯಿಸಿದನು. ಇದನ್ನು ಮೊದಲೇ ತಿಳಿದುಕೊಂಡ ದೌದ್‌ಖಾನನು ೧೫ ಏಪ್ರಿಲ್ ೧೩೭೮ರಂದು (ಸಂಚಿನೊಂದಿಗೆ) ಮುಜಾಹಿದನನ್ನು ಕೊಂದನು. ಆ ಕ್ಷಣದಲ್ಲೇ ತಾನು ಗುಲಬರ್ಗಾದ ಸುಲ್ತಾನನೆಂದು ಘೋಷಿಸಿಕೊಂಡನು. ಇದಾದ ಒಂದೇ ತಿಂಗಳೊಳಗೆ ಮುಜಾಹಿದ್‌ನ ತಂಗಿಯು ದೌದ್ ಖಾನನ್ನು ಮೋಸದಿಂದ ಕೊಂದು ಎರಡನೇ ಮಹಮ್ಮದ್ ಷಾನನ್ನು ಅಧಿಕಾರಕ್ಕೆ ಬರುವಂತೆ ಮಾಡಿದಳೆಂದು ತಿಳಿದು ಬರುತ್ತದೆ.

ಬಹಮನಿಯ ಸಿಂಹಾಸನವ್ನೇರಿದ ಎರಡನೇ ಮಹಮ್ಮದ್ ಷಾ (೧೩೭೮-೯೭) ಒಬ್ಬ ಪರಿಜ್ಞಾನಾಯುತ ಆಡಳಿತಗಾರ ಹಾಗೂ ಸ್ವತಃ ಪಂಡಿತನೂ ಆಗಿದ್ದನು. ಈತನು ತನ್ನ ಆಸ್ಥಾನದ ಸದರ್-ಇ-ಜಹಾನ್ (ಮುಖ್ಯ ನ್ಯಾಯಾಧೀಶ)ನಾಗಿ ಫೈಜುಲ್ಲ ಅಂಜು ಎಂಬ ಪ್ರಸಿದ್ಧ ಪಂಡಿತನನ್ನು ನೇಮಕ ಮಾಡಿದ್ದನು. ಸುಲ್ತಾನನು ಜನಹಿತ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಆಳ್ವಿಕೆ ಮಾಡುತ್ತಿದ್ದನು. ಈತನು ಕೈಗೊಂಡ ಬರ ಪರಿಹಾರ ಕ್ರಮಗಳು ಪ್ರಗತಿ ಪರವಾಗಿದ್ದವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇವನ ಔದಾರ್ಯದ ಫಲವಾಗಿ ಏಷ್ಯದ ವಿವಿಧ ಭಾಗಗಳಿಂದ ವಿದ್ವಾಂಸರು ಇವನ ಆಸ್ಥಾನಕ್ಕೆ ಬಂದಿದ್ದರು. ಈತನು ತನ್ನ ಅಧಿಕಾರಿ ಫಖ್ರಿ-ಇ-ದವಲಾ ಮತ್ತು ಮುಲಾರಖಾ ಸುಲ್ತಾನಿ ಎಂಬ ಆತನ ಹೆಂಡತಿ ಇಬ್ಬರ ನೇತೃತ್ವದಲ್ಲಿ ಗುಲಬರ್ಗಾದಲ್ಲಿ ಮಸೀದಿ ಕಟ್ಟಿಸಿದ ಬಗೆಗೆ ಆತನ ಕ್ರಿ.ಶ. ೧೩೯೪-೯೫ರ ಪರ್ಷಿಯನ್ ಶಾಸನವು (ಗುಲಬರ್ಗಾದಲ್ಲಿದೆ) ಉಲ್ಲೇಖಿಸುತ್ತದೆ. ರಾಜಕೀಯ ಯುದ್ಧಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡದಿದ್ದ ಕಾರಣ ಈತನ ಕಾಲದಲ್ಲಿ ಕೊಂಕಣ ಕರಾವಳಿಯು ಬಹಮನಿಯರ ಕೈ ತಪ್ಪಿ ವಿಜಯನಗರದ ವಶಕ್ಕೆ ಬಂದಿತು. ಈತನು ೧೩೯೭ರಲ್ಲಿ ನಿಧನನಾದ ಮೇಲೆ ಈತನ ಮಕ್ಕಳಾದ ಘಿಯಾಸುದ್ದೀನ್ ಮತ್ತು ಶಮ್ಸುದ್ದೀನ್ ಇಬ್ಬರು ಒಬ್ಬರ ತರುವಾಯ ಒಬ್ಬರು ಪಟ್ಟಕ್ಕೆ ಬಂದರು. ಒಬ್ಬ ಮುಂಗೋಪಿ ಟರ್ಕಿಷ್ ಗುಲಾಮ ಸಂತತಿಯ ಘಿಯಾಸುದ್ದೀನ್ ಅನ್ನು ಪದಚ್ಯುತಗೊಳಿಸಿ ಆತನ

ಕಣ್ಣುಗಳನ್ನು ಕ್ರೂರವಾಗಿ ಕೀಳಿಸಿದನು. ನಂತರ ಘಿಯಾಸುದ್ದೀನ್‌ನ ತಮ್ಮನಾದ ಶಮ್ಸುದ್ದೀನನನ್ನು ಬಹಮನಿ ಸಿಂಹಾಸನವನ್ನೇರುವಂತೆ ಮಾಡಿದನು. ಆದರೆ, ಈತನು ಬಹಳ ದಿನ ಅಧಿಕಾರದಲ್ಲಿ ಉಳಿಯಲಿಲ್ಲ. ಕೊನೆಗೆ ಇವರ ಪ್ರಬಲ ದಾಯಾದಿಯಾಗಿದ್ದ ಸುಲ್ತಾನ ಫಿರೋಜನು ೧೩೯೭ರಲ್ಲಿ ಬಹಮನಿಯ ಸಾಮ್ರಾಜ್ಯದ ಪಟ್ಟವನ್ನೇರಿದನು. ಫರಿಷ್ತಾನ ಪ್ರಕಾರ ಬಹಮನಿ ಸುಲ್ತಾನರ ಪೈಕಿ ಈತನೇ ಜನಪ್ರಿಯ ಹಾಗೂ ಅಪಾರ ಸೈನಿಕ ಪರಿಜ್ಞಾನವನ್ನು ಹೊಂದಿದವನಾಗಿದ್ದನು.

ಹಸನ್ ಬಹಮನ್ ಷಾನ ಮೊಮ್ಮಗನಾಗಿದ್ದ ತಾಜುದ್ದೀನ್ ಫಿರೋಜನು (೧೩೯೭-೧೪೨೨) ತನ್ನ ಆಡಳಿತವನ್ನು ಪವಿತ್ರ ಕುರಾನ್ ಗ್ರಂಥದ ತತ್ವಗಳ ಆಧಾರದ ಮೇಲೆ ನಿಯಂತ್ರಿಸಿದ ಕಾರಣ, ಸಮಾಜದಲ್ಲಿ ಎಲ್ಲರಿಗೂ ಅದರಲ್ಲೂ ಸ್ತ್ರೀಯರಿಗೆ ವಿಶೇಷ ಸ್ಥಾನಮಾನಗಳು ದೊರೆಯುವಂತಾಯಿತೆಂಬ ಅಭಿಪ್ರಾಯವಿದೆ. ಈತನು ವಿಜಯನಗರದ ಮೇಲೆ ಮೂರು ಯುದ್ಧಗಳನ್ನು (೧೩೯೮-೧೪೦೭ ಮತ್ತು ೧೪೧೭) ಸತತವಾಗಿ ಮಾಡಬೇಕಾಗಿ ಬಂದಿತು. ಫಿರೋಜನು ಪರಿಜ್ಞಾನಾಯುತ ಆಡಳಿತಗಾರನಾಗಿದ್ದ ಕಾರಣ ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶೇಷ ಉತ್ತೇಜನವನ್ನು ನೀಡಿದನು. ಇವನ ಆಸ್ಥಾನದಲ್ಲಿ ಒಳ್ಳೆಯ ಸಂಗೀತಗಾರರು, ನೃತ್ಯಗಾರರು, ತತ್ವಜ್ಞಾನಿಗಳು ಹಾಗೂ ಇತಿಹಾಸಕಾರರು ಇದ್ದುದರ ಬಗೆಗೆ ಉಲ್ಲೇಖವಿದೆ.

ಫಿರೋಜನೇ ಸ್ವತಃ ಪ್ರಜ್ಞಾವಂತ ಆಡಳಿತಗಾರನಾಗಿದ್ದ ಕಾರಣ ಆತನ ಇತಿಹಾಸಕಾರರು ಸುಲ್ತಾನ್-ಇ-ಘಸಿಯನ್ ಎಂದು ಕರೆದಿದ್ದಾರೆ. ಈತನು ಕರುಣಾಮಯಿಯೂ ಆಗಿದ್ದನು. ಅನೇಕ ಬ್ರಾಹ್ಮಣ ಸೆರೆಯಾಳುಗಳನ್ನು ಇವನು ಬಿಡುಗಡೆ ಮಾಡಿದ್ದನು. ವಿಜಯನಗರದ ಮೇಲಿನ ಈತನ ಯುದ್ಧಗಳು ಕೇವಲ ರಾಜಕೀಯ ಪ್ರಚೋದನೆಗಳಿಂದ ಉಂಟಾದುವೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಖೇರ್ಲಾದ ನರಸಿಂಗರಾಯನು ಯುದ್ಧದಲ್ಲಿ ಪರಾಭವಗೊಂಡಾಗ ಅವನನ್ನು ಬಹಳ ಗೌರವಯುತವಾಗಿ ಆತ್ಮೀಯದಿಂದ ಕಂಡನೆಂದು ತಿಳಿದು ಬರುತ್ತದೆ. ಸ್ವತಃ ತಾನೇ ಕವಿಯಾಗಿದ್ದ ಕಾರಣ ಸಾಹಿತ್ಯ ಬೆಳವಣಿಗೆಗೆ ಕಾರಣನಾದನು. ಈತನು ಒಳ್ಳೆಯ ಸುಂದರ ಅಕ್ಷರವಿನ್ಯಾಸ (ಕ್ಯಾಲಿಯೋಗ್ರಫಿ)ಗಾರನಾಗಿದ್ದು ಪ್ರತಿ ನಾಲ್ಕು ದಿನಗಳಿಗೊಮ್ಮೆ ಪವಿತ್ರ ಕುರಾನ್ ಗ್ರಂಥದ ೧೬ ಪುಟಗಳನ್ನು ಅತ್ಯಂತ ಸುಂದರ ಅಕ್ಷರ ವಿನ್ಯಾಸದೊಂದಿಗೆ ರಚಿಸುತ್ತಿದ್ದನೆಂದು ತಿಳಿದು ಬರುತ್ತದೆ. ಫೈಜುಲ್ಲಾ ಅಂಜು, ಮುಲ್ಲಾ ಇಸ್ಹಾಕ್ ಸುರಹಿಂದ್ ಮುಂತಾದ ಪ್ರಸಿದ್ಧ ಪರ್ಷಿಯನ್ ಲೇಖಕರು ಈತನ ಆಸ್ಥಾನದಲ್ಲಿದ್ದರೆಂದು ತಿಳಿದು ಬರುತ್ತದೆ. ಈತನನ್ನು ಪಾಂಡಿತ್ಯದಲ್ಲಿ ಮಹಮ್ಮದ್ ಬಿನ್ ತುಘಲಕ್‌ನೊಂದಿಗೆ ಹೋಲಿಸಲಾಗಿದೆ. ಈತನ ಆಸ್ಥಾನಕ್ಕೆ ವಿವಿಧ ದೇಶಗಳಿಂದ ವಿದ್ವಾಂಸರುಗಳು ಆಗಿಂದಾಗ್ಗೆ ಬಂದು ರಾಜಾಧಿಪತ್ಯವನ್ನು ಪಡೆಯುತ್ತಿದ್ದರೆಂದು ವ್ಯಕ್ತವಾಗುತ್ತದೆ. ವಾಸ್ತುಶಿಲ್ಪ ಕಲೆಯಲ್ಲೂ ವಿಶೇಷ ಆಸಕ್ತಿ ಹೊಂದಿದವನಾಗಿ ಗುಲಬರ್ಗಾ ಹಾಗೂ ಫಿರೋಜಾಬಾದ್‌ಗಳಲ್ಲಿ ಅನೇಕ ಕಟ್ಟಡಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಸ್ಪೇನಿನ ಕೊರ್ಡೋಲಾ ಎಂಬಲ್ಲಿರುವ ಸುಂದರವಾದ ಮಸೀದಿಯ ಮಾದರಿಯಲ್ಲೇ ಗುಲಬರ್ಗಾದಲ್ಲಿ ಜುಮ್ಮಾ ಮಸೀದಿಯನ್ನು ನಿರ್ಮಿಸಿದನು. ಪೂರ್ಣವಾಗಿ ಛಾವಣಿಯಿಂದ ಆವೃತವಾಗಿರುವ ಮಸೀದಿಯು ಇದಾಗಿದ್ದು ಭಾರತದಲ್ಲೇ ಮೊದಲನೆಯದೆಂಬ ಅಭಿಪ್ರಾಯವಿದೆ. ಈತನು ದೌಲತಾಬಾದ್‌ನಲ್ಲಿ ಹಸನ್ ಘಿಲಾನಿ ಎಂಬ ಖಗೋಳ ವಿಜ್ಞಾನಿಯ ಮಾರ್ಗದರ್ಶನದಂತೆ ೧೪೦೭ರಲ್ಲಿ ಒಂದು ಖಗೋಳ ವೀಕ್ಷಣಾಲಯವನ್ನು ನಿರ್ಮಿಸಿದನು. ಭೀಮಾ ನದಿಯ ತೀರದಲ್ಲಿ ಫಿರೋಜಾಬಾದ್ ಎಂಬ ಹೊಸ ನಗರವನ್ನೇ ಈತನು ನಿರ್ಮಿಸಿದನು. ಈತನು ಈ ನಗರವನ್ನು ಎರಡನೇ ರಾಜಧಾನಿಯನ್ನಾಗಿ ಉಪಯೋಗಿಸುತ್ತಿದ್ದನು. ಫಿರೋಜನ ಸುಮಾರು ೨೫ ವರ್ಷಗಳ ಆಳ್ವಿಕೆಯ ಅವಧಿಯಲ್ಲಿ ವಿಜಯನಗರದ ಅರಸರ ವಿರುದ್ಧ ಮಾತ್ರವಲ್ಲದೇ ಅವರ ಹಿತೈಷಿಗಳ ವಿರುದ್ಧವೂ ಹೋರಾಡಬೇಕಾಯಿತು. ವಿಜಯನಗರದ ಬುಕ್ಕರಾಯನು ರಾಯಚೂರು ದೋ-ಆಬ್ ಅನ್ನು ಬಹಮನಿಯ ಹತೋಟಿಯಿಂದ ಹಿಂದಕ್ಕೆ ಪಡೆಯಲು ತೀವ್ರ ಪ್ರಯತ್ನ ಮಾಡಿದನು. ಈತನ ಈ ಕಾರ್ಯದಲ್ಲಿ ರಾಜಮಹೇಂದ್ರಿಯ ಕಾತ್ಯಏಮನು ಸಹಾಯ ನೀಡಿದ್ದರೂ ವಿಜಯನಗರದ ಸೇನೆಯು ಕೃಷ್ಣಾ ನದಿಯನ್ನು ದಾಟಲೂ ಸಾಧ್ಯವಾಗಲಿಲ್ಲ. ಫಿರೋಜನು ತನ್ನ ಸೈನಿಕ ತಂತ್ರದಿಂದ ಹಾಗೂ ಪ್ರಬಲ ಸೈನ್ಯ ಬಲದೊಂದಿಗೆ ತಾನೇ ಯುದ್ಧಭೂಮಿಯನ್ನು ಪ್ರವೇಶಿದಾಗ ವಿಜಯನಗರ ಸೇನೆಯು ಚದುರಿ ಎಲ್ಲಾ ದಿಕ್ಕುಗಳಲ್ಲೂ ಪಲಾಯನ ಮಾಡಿದವೆಂದು ತಿಳಿದು ಬರುತ್ತದೆ. ಎರಡನೇ ಹರಿಹರನು ಬಹಮನಿಯವರೊಂದಿಗೆ ಒಪ್ಪಂದ ಮಾಡಿಕೊಂಡು ೧೦ ಲಕ್ಷ ಹಣವನ್ನು ಕಪ್ಪದ ರೂಪದಲ್ಲಿ ಫಿರೋಜನಿಗೆ ಸಲ್ಲಿಸುವಂತೆ ನಿಶ್ಚಯಿಸಲಾಯಿತು. ರಾಯಚೂರಿಗೆ ಫಿರೋಜನು ಪೌಲಾದ್ ಎಂಬ ಸೇನಾಧಿಕಾರಿಯನ್ನು ರಾಜ್ಯಪಾಲನನ್ನಾಗಿ ನೇಮಿಸಿದನು. ಕೇವಲ ದಖನ್ನಿನ ಯುದ್ಧಗಳಲ್ಲೇ ಅಲ್ಲದೇ ೧೪೦೧ರಲ್ಲಿ ಭಾರತದ ಮೇಲೆ ತೈಮೂರ್‌ನ ದಾಳಿಯುಂಟಾದಾಗ ಆತನಿಗೆ ಸೈನಿಕ ಸಹಾಯವನ್ನು ಆಶ್ವಾಸಿಸಿ ತನ್ನ ರಾಯಭಾರಿಯನ್ನು ಅಲ್ಲಿಗೆ ಕಳುಹಿಸಿದನು. ಇದಕ್ಕೆ ಪ್ರತಿಯಾಗಿ ತೈಮೂರನು ತನ್ನ

ದಕ್ಷಿಣ ಭಾರತದ ದಾಳಿಗಳ ಸಮಯದಲ್ಲಿ ಬಹಮನಿಯ ಸಾಮ್ರಾಜ್ಯದ ಮೇಲೆ ದಾಳಿ ಮಾಡುವುದಿಲ್ಲವೆಂಬ ಆಶ್ವಾಸನೆ ನೀಡಿದನು. ಗುಜರಾತ್, ಮಾಳ್ವ ಹಾಗೂ ದಖ್ಖನ್ ಪ್ರದೇಶಗಳಲ್ಲಿ ತೈಮೂರನ ಹತೋಟಿಯನ್ನು ಸ್ಥಾಪಿಸುವಲ್ಲಿ ಈತನು ನೆರವಾದನೆಂದು ಪಿ.ಬಿ. ದೇಸಾಯಿಯವರು ತಿಳಿಸುತ್ತಾರೆ. ನಂತರ ೧೪೦೬ರಲ್ಲಿ ವಿಜಯನಗರದ ಮೊದಲನೇ ದೇವರಾಯನೊಡನೆ ಸೆಣಸಾಟದಲ್ಲಿ ಫಿರೋಜನು ರಾಜಧಾನಿಯವರೆಗೂ ಮುನ್ನುಗ್ಗಿ, ಸಂಧಾನ ಮಾಡಿಕೊಂಡು ಆತನ ಮಗಳನ್ನು ವಿವಾಹವಾಗಿ ಬಂಕಾಪುರವನ್ನು ವರದಕ್ಷಿಣೆಯ ರೂಪದಲ್ಲಿ ಪಡೆದನು. ಈ ಆರಂಭಿಕ ಸಾಧನೆಗಳಿಂದಾಗಿ ಮಹಾತ್ವಾಕಾಂಕ್ಷಿಯಾದ ಫಿರೋಜನು ಇಡೀ ದಖ್ಖನ್ ಪ್ರದೇಶವನ್ನು ತನ್ನ ಹತೋಟಿಗೆ ತೆಗೆದುಕೊಳ್ಳುವ ಆಸೆಯನ್ನು ಹೊಂದಿದ್ದನು. ಕೊಂಡವೀಡಿನ ಪೆದ್ದ ಕೊಮಟಿ ವೇಮನ ಸಹಾಯದಿಂದ ರಾಜಮಹೇಂದ್ರಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವಲ್ಲಿ ಪೂರ್ಣವಾಗಿ ವಿಫಲನಾದನು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ವಿಜಯನಗರದ ಸೇನೆಯು ಹಾನಗಲ್‌ನ್ನು ದಾಳಿ ಮಾಡಿ ತನ್ನ ವಶಕ್ಕೆ ತೆಗೆದುಕೊಂಡಿತು. ಇದರಿಂದಾಗಿ ಅಲ್ಲಿ ಎರಡು ವರ್ಷಗಳ ಕಾಲ ಇದ್ದ ಬಹಮನಿಯರ ಆಳ್ವಿಕೆ ಕೊನೆಗೊಂಡಿತು. ಸುಲ್ತಾನನು ಕಷ್ಟಪಟ್ಟು ರಾಯಚೂರು ದೋ-ಆಬ್ ಅನ್ನು ಉಳಿಸಿಕೊಂಡನು. ಫಿರೋಜನ ಸೋಲುಗಳಿಂದಾಗಿ ಆತನ ಸಾಮ್ರಾಜ್ಯದಲ್ಲಿ ಅತೃಪ್ತಿ ಉಂಟಾಯಿತು. ಕೆಲವು ಸಣ್ಣಪುಟ್ಟ ದಂಗೆಗಳೂ ಆದುವು. ಈತನು ತನ್ನ ಪತನವನ್ನು ಮನಗಂಡು ತನ್ನ ಮಗನಾದ ಹಸನ್‌ನನ್ನು ೧೪೧೬ರಲ್ಲಿ ಉತ್ತರಾಧಿಕಾರಿಯಾಗಿ ನಾಮಕರಣ ಮಾಡಿದನು. ಇದಲ್ಲದೇ ಗುಲಬರ್ಗಾಕ್ಕೆ ಬಂದಿದ್ದ ಸೂಫಿ ಸಂತ ಹಜರತ್ ಗೇಸು ದರಾಜ್‌ನೊಡನೆ ಧಾರ್ಮಿಕ ಭಿನ್ನಾಭಿಪ್ರಾಯದೊಂದಿಗೆ ವೈಮನಸ್ಯ ಬಂದಾಗ ಫಿರೋಜನ ಜನಪ್ರಿಯತೆಯು ಮತ್ತಷ್ಟು ಕುಂದಿತು. ಆಂತರಿಕ ಸಮಸ್ಯೆಗಳು ಪ್ರಬಲಗೊಂಡಾಗ, ಈತನ ತಮ್ಮನಾದ ಅಹಮ್ಮದ್‌ನು ಸುಮಾರು ೨೦,೦೦೦ ಸೇನೆಯ ಬಲದೊಂದಿಗೆ ೨೨ನೇ ಸೆಪ್ಟೆಂಬರ್ ೧೪೨೨ರಂದು ಗುಲಬರ್ಗಾದ ಮೇಲೆ ದಾಳಿ ಮಾಡಿ ಸಾಮ್ರಾಜ್ಯದ ಸುಲ್ತಾನನೆಂದು ಅಭಿಷಿಕ್ತನಾದನು. ಇದಾದ ಕೆಲವೇ ದಿನಗಳಲ್ಲಿ ಫಿರೋಜನು ನಿಧನನಾದನು. ಅಹಮ್ಮದ್‌ನ ದಾಳಿಯೊಂದಿಗೆ ಗುಲಬರ್ಗಾದಲ್ಲಿ ಬಹಮನಿಯ ಸಾಮ್ರಾಜ್ಯದ ಅಂತ್ಯವೂ ಆಯಿತು. ಏಕೆಂದರೆ, ಆತನು ರಾಜಧಾನಿಯನ್ನು ಬೀದರ್‌ಗೆ ಸ್ಥಳಾಂತರಿಸಿದನು.


ಅಧಿಕಾರಕ್ಕೆ ಬಂದ ಕೆಲವೇ ಸಮಯದಲ್ಲಿ ಅಹಮದ್ ಷಾ(೧೪೨೨-೩೬) ರಾಜಧಾನಿಯನ್ನು ಗುಲಬರ್ಗಾದಿಂದ ೧೪೨೮ರಲ್ಲಿ ಬೀದರ್‌ಗೆ ವರ್ಗಾಯಿಸುವ ನಿರ್ಧಾರ ಕೈಗೊಂಡನೆಂದು ತಿಳಿದು ಬರುತ್ತದೆ. ಆತನ ಮಾರ್ಗದರ್ಶಕರು ಹಾಗೂ ಪರಮ ಗುರುವಾಗಿದ್ದ ಸೂಫಿ ಸಂತ ಹಜರತ್ ಗೇಸು ದರಾಜ್ ಅವರ (೧ನೇ ನವೆಂಬರ್ ೧೪೨೨) ನಿಧನದಿಂದಾಗಿ ದಿಗ್ಭ್ರಮೆಗೊಂಡನು. ಈ ಸಾವು ಗುಲಬರ್ಗಾದಲ್ಲಿ ಉಂಟು ಮಾಡಿದ ಶೂನ್ಯವೇ ಆತನಿಗೆ ರಾಜಧಾನಿಯನ್ನು ಬದಲಾಯಿಸಲು ಮುಖ್ಯ ಕಾರಣವೆಂದು ಸುಲ್ತಾನನೇ ಹೇಳಿಕೊಂಡಿದ್ದಾನೆ. ಇದಲ್ಲದೇ ಅರಮನೆಯಲ್ಲಿ ನಡೆಯುತ್ತಿದ್ದ ಮದ್ಯಪಾನ ಲೋಲುಪತೆ ಹಾಗೂ ಅನೈತಿಕ ಜೀವನವೂ ಅವನಿಗೆ ಹೇಸಿಗೆಯುಂಟು ಮಾಡಿದ್ದ ಕಾರಣ, ಜಾಗದ ಬದಲಾವಣೆಗಾಗಿ ಹಂಬಲಿಸುತ್ತಿದ್ದನೆಂದು ವ್ಯಕ್ತವಾಗುತ್ತದೆ. ಕೆಲವು ಅಭಿಪ್ರಾಯದಂತೆ ಗುಲಬರ್ಗಾದ ತೀವ್ರ ಉಷ್ಣಮಯ ವಾಯುಗುಣ ಬೀದರ್‌ಗೆ ರಾಜಧಾನಿಯನ್ನು ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿರಬಹುದು. ಅಹಮದ್ ಷಾ ಕೈಗೊಂಡ ಪ್ರಮುಖ ದಂಡಯಾತ್ರೆ ಎಂದರೆ ವಾರುಂಗಲ್ ರಾಜನನ್ನು ಪರಾಭವಗೊಳಿಸಿ ಅಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದ್ದೇ ಆಗಿದೆ. ನಂತರ ಆತನು ವಿಜಯನಗರದ ಕಡೆಗೆ ಗಮನ ಹರಿಸಿದನು. ದಕ್ಷಿಣದ ಆತನ ದಂಡಯಾತ್ರೆಗಳಲ್ಲಿ ಜಯವು ಲಭಿಸಿದ ಕಾರಣ ವಿಜಯನಗರದ ಅರಸು ತನಗೆ ಕಪ್ಪ ಕೊಡುವಂತೆ ಮಾಡಿದನು. ಅಲ್ಲಿಂದ ತೆಲಂಗಾಣದ ಕಡೆಗೆ ಮುಂದುವರೆದು ಗೋಲ್ಕೊಂಡ ಕೋಟೆಯನ್ನು ಮುತ್ತಿಗೆ ಹಾಕಿದನು. ಆತನ ದಿಗ್ವಿಜಯಗಳು ತೆಲಂಗಾಣ ಹಾಗೂ ವಾರುಂಗಲ್‌ವರೆಗೂ ವ್ಯಾಪಿಸಿದವು. ಆದರೆ, ಈತನ ವಿರುದ್ಧ ಬಂಡೆದ್ದ ತೆಲಂಗಾಣ, ವಾರುಂಗಲ್ ಹಾಗೂ ರಾಜಮಹೇಂದ್ರಿಯ ರಾಜರುಗಳ ನಡವಳಿಕೆಯಿಂದ ಅಹಮದ್ ಷಾ ಹೃದಯಾಘಾತದಿಂದ ೧೪ನೇ ಜುಲೈ ೧೪೩೬ರಲ್ಲಿ ನಿಧನನಾದನು. ಅಹಮದ್ ಷಾ ಸಾಹಿತ್ಯಾಭಿರುಚಿಯುಳ್ಳವನಾಗಿ ಅನೇಕ ಸಾಹಿತಿಗಳಿಗೆ ಆಶ್ರಯದಾತನಾಗಿದ್ದನು. ಪ್ರಸಿದ್ಧ ಪರ್ಷಿಯಾದ ಕವಿ ಜನಾಬ್ ಅಜಾರಿ 'ಬಹಮನ್ ನಾಮ' ಎಂಬ ಐತಿಹಾಸಿಕ ಗ್ರಂಥವನ್ನು ಈತನ ಕಾಲದಲ್ಲಿ ಪೂರ್ಣಗೊಳಿಸಿದನು. ಈತನ ಆಳ್ವಿಕೆಯ ಅವಧಿಯಲ್ಲೂ ಗುಲಬರ್ಗಾ ಜಿಲ್ಲೆಯು ಬಹುತೇಕವಾಗಿ ಬಹಮನಿಯ ಹತೋಟಿಯಲ್ಲಿಯೇ ಮುಂದುವರೆಯುವಂತಾಯಿತು. ಅಹಮದ್ ಷಾ ತರುವಾಯ ಇವನ ಜೇಷ್ಠ ಪುತ್ರ ಜಾಫರ್ ಖಾನನು ಎರಡನೇ ಅಲ್ಲಾ ಉದ್ ದೀನ್ ಅಹಮದ್ ಎಂಬ ಹೆಸರನ್ನು ಧರಿಸಿ ಪಟ್ಟಕ್ಕೆ ಬಂದನು.

ಎರಡನೇ ಅಲ್ಲಾ ಉದ್ ದೀನ್ ಅಹಮದ್ (೧೪೩೬-೫೮) ಅಧಿಕಾರಕ್ಕೆ ಬಂದ ತಕ್ಷಣದಲ್ಲೇ ತನ್ನ ಸಾಮ್ರಾಜ್ಯದ ಘನತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವಿಜಯನಗರದ ಎರಡನೇ ದೇವರಾಯನ ಹಾಗೂ ಖಂಡೇಶ ರಾಜ್ಯಗಳ ವಿರುದ್ಧ ಹೋರಾಡಲು ತನ್ನ ಪ್ರಬಲ ಸೈನ್ಯವನ್ನು ಕಳುಹಿಸಿದನು. ಈತನ ತಮ್ಮ ಮಹಮ್ಮದನು ವಿಜಯನಗರದ ಮೇಲೆ ಜಯಗಳಿಸಿ ಬಹಮನಿ ರಾಜ್ಯಕ್ಕೆ ಬರಬೇಕಾಗಿದ್ದ ಹಳೆ ಬಾಕಿ ಕಪ್ಪವನ್ನು ವಸೂಲು ಮಾಡಿದನು. ಇದಕ್ಕೆ ಉತ್ತರವಾಗಿ ಎರಡನೇ ದೇವರಾಯನು ೧೪೪೪ರಲ್ಲಿ ತನ್ನ ಸೈನ್ಯವನ್ನು ಪ್ರಬಲಗೊಳಿಸಿ ರಾಯಚೂರಿನ ಮುದಗಲ್‌ನ್ನು ಸ್ವತಂತ್ರ್ಯಗೊಳಿಸಿ ಬಿಜಾಪುರದವರೆಗೆ ಮುಂದುವರೆದು ಆ ನಗರವನ್ನು ಕೊಳ್ಳೆ ಹೊಡೆದನು. ಇದರ ಪರಿಣಾಮವಾಗಿ ಸುಲ್ತಾನನು ಇನ್ನು ಮುಂದೆ ತುಂಗಭದ್ರಾ ನದಿಯನ್ನು ದಾಟುವುದಿಲ್ಲವೆದು ದೇವರಾಯನೊಡನೆ ಒಪ್ಪಂದ ಮಾಡಿಕೊಂಡನು. ಹಾಗೆಯೇ ವಿಜಯನಗರದ ರಾಯನೂ ಕಪ್ಪವನ್ನು ತಪ್ಪದೇ ಕೊಡುವುದಾಗಿ ಒಪ್ಪಿಕೊಂಡನು. ಅಲ್ಲಾ ಉದ್ ದೀನ್‌ನು ಅಷ್ಟೂರಿನಲ್ಲಿ (ಬೀದರ್ ಜಿಲ್ಲೆ) ತನ್ನ ತಂದೆಯ ಸ್ಮಾರಕವನ್ನು ಅತ್ಯಂತ ಸುಂದರ ವಾಸ್ತು ರಚನೆಯೊಂದಿಗೆ ನಿರ್ಮಿಸಿದನು. ಈತನು ಹಲವಾರು ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಿ ಮುಖ್ಯವಾಗಿ ಆಂತರಿಕ ಆಳ್ವಿಕೆಯನ್ನು ಉತ್ತಮಗೊಳಿಸಿದನು. ಮದ್ಯಪಾನವನ್ನು ನಿಷೇಧಿಸಿ ಅದನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ವಿಧಿಸುತ್ತಿದ್ದನು. ಸಾರ್ವಜನಿಕ ಹಿಡಿತದಿಂದ ಅನೇಕ ಕಲ್ಯಾಣ ಕಾರ್ಯಗಳನ್ನು ಈತನು ಕೈಗೊಂಡನು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಹಲವಾರು ಮಸೀದಿಗಳನ್ನು, ಆಸ್ಪತ್ರೆಗಳನ್ನು ಹಾಗೂ ಅನೇಕ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಇಟಲಿಯ ಯಾತ್ರಿಕ ನಿಕೋಲಾಕೋಂಟಿ ಇವನ ಕಾಲದಲ್ಲಿ ದಖನ್ ಪ್ರದೇಶಕ್ಕೆ ಭೇಟಿಕೊಟ್ಟು ಅಲ್ಲಿಯ ಜನಜೀವನವು ಸಮೃದ್ಧಮಯವಾಗಿದ್ದುದರ ಬಗೆಗೆ ವರದಿ ಮಾಡಿರುವನು. ಈ ಸಾಮ್ರಾಜ್ಯದಲ್ಲಿ ಕೈಗೊಂಡ ಎಲ್ಲಾ ಪ್ರಗತಿಪರ ಕಾರ್ಯಕ್ರಮಗಳೂ ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಉತ್ತಮವಾಗಿದ್ದವೆಂದು ಆತನು ತಿಳಿಸುತ್ತಾನೆ. ಇವರು ಹಡಗು ನಿರ್ಮಾಣ ಕಲೆಯಲ್ಲಿ ಉತ್ತಮವಾಗಿದ್ದರು. ಏಕೆಂದರೆ ಇವರ ಕೆಲವು ಹಡಗುಗಳು ಇಟಲಿಯ ಹಡಗುಗಳಿಗಿಂತಲೂ ಬೃಹದಾಕಾರವಾಗಿದ್ದವೆಂದು ನಿಕೋಲೋಕೋಂಟಿ ತಿಳಿಸುತ್ತಾನೆ. ಗಾಣಗಾಪುರದ ನರಸಿಂಹ ಸರಸ್ವತಿ ಸ್ವಾಮಿಗಳು ಈತನಿಗೆ ಬಂದಿದ್ದ ಉಷ್ಣದ ಕುರುವನ್ನು ವಾಸಿ ಮಾಡಿ, ರಾಜನಿಗೆ ಉಂಟಾಗಿದ್ದ ತೀವ್ರ ವೇದನೆಯನ್ನು ಕೊನೆಗಾಣಿಸಿದರೆಂದು ಪ್ರತೀತಿಯಿದೆ. ಈತನ ತರುವಾಯ ೧೪೫೮ರಲ್ಲಿ ಇವನ ಮಗನಾದ ಹುಮಾಯೂನ್ ಷಾ ಪಟ್ಟಕ್ಕೆ ಬಂದನು. ಫರಿಷ್ತಾನ ಹೇಳಿಕೆಯ ಪ್ರಕಾರ ಹುಮಾಯೂನನು ಧಾರ್ಮಿಕವಾದಿಯಾಗಿದ್ದು ಅತ್ಯಂತ ಕ್ರೂರ ರಾಜನಾಗಿದ್ದನೆಂದು ತಿಳಿದು ಬರುತ್ತದೆ. ಈತನು ಮಹಮ್ಮದ್ ಗವಾನನನ್ನು ತನ್ನ ಪ್ರಧಾನ ಮಂತ್ರಿಯನ್ನಾಗಿ ನೇಮಕ ಮಾಡಿದನು. ಸುಲ್ತಾನನ ದಾಯಾದಿಯಾಗಿದ್ದ ಸಿಕೆಂದರನು ಹುಮಾಯೂನನ ವಿರುದ್ಧ ಸಂಚು ನಡೆಸಿದ್ದನು. ಆದರೆ, ಮಹಮ್ಮದ್ ಗವಾನನ ಹಾಗೂ ಟರ್ಕಿಯವನಾಗಿದ್ದ ಖ್ವಾಜಾ-ಇ-ಜಹಾನ್‌ನ ಸಹಾಯದೊಂದಿಗೆ ರಾಜನು ಸಿಕಂದರ್‌ನನ್ನು ಒಂದು ಘೋರ ಯುದ್ಧದಲ್ಲಿ ಕೊಂದನು. ಈತನು ತನ್ನ ವಿರೋಧಿಗಳನ್ನು ಕ್ರೂರವಾಗಿ ಕೊಲ್ಲುತ್ತಿದ್ದ ಕಾರಣ ಇತಿಹಾಸದಲ್ಲಿ ಹುಮಾಯೂನನನ್ನು ಒಬ್ಬ 'ಟೈರೆಂಟ್' (ಜಲೀಂ) ಅಂದರೆ ಸುಲ್ತಾನನೆಂದು ಪರಿಗಣಿಸಲಾಗಿದೆ. ಕೊನೆಗೆ ಹುಮಾಯೂನನು ತನ್ನ ಆಸ್ಥಾನದ ಸೇವಕನೊಬ್ಬನಿಂದ ೧೪೬೧ರಲ್ಲಿ ಕೊಲ್ಲಲ್ಪಟ್ಟನು. ಇವನ ತರುವಾಯ ಈತನ ಅಪ್ರಾಪ್ತವಯಸ್ಕನಾಗಿದ್ದ ಇವನ ಮಗ ಅಹಮದ್ ಖಾನನು (ಎಂಟು ವರ್ಷದವನು) ೧೪೬೧ರಲ್ಲಿ ಪಟ್ಟಕ್ಕೆ ಬಂದನು. ಈತನ (೧೪೬೧-೬೩) ಆಳ್ವಿಕೆಯ ಅವಧಿಯಲ್ಲಿ ಪ್ರಧಾನಿಯಾಗಿದ್ದ ಮಹಮ್ಮದ್ ಗವಾನನು ಒಂದು ಆಡಳಿತ ಸಮಿತಿಯನ್ನು ರಚಿಸಿ ಆಡಳಿತ ನಡೆಸಿದನು. ಕೊನೆಗೆ ೧೪೬೩ರಲ್ಲಿ ಅಹಮದ್ ಖಾನನ ತಮ್ಮನಾದ ಮೂರನೇ ಶಮ್ಸುದ್ದೀನ ಮಹಮ್ಮದನು ಪಟ್ಟಕ್ಕೆ ಬಂದನು. ಇವನು (೧೪೬೩-೮೨) ಮಹಮ್ಮದ್ ಗವಾನನನ್ನು ಪ್ರಧಾನ ಮಂತ್ರಿಯಾಗಿ ವಕೀಲ್-ಉಲ್-ಸುಲ್ತಾನಾತ್ ನೇಮಿಸಿದನು. ಮಧ್ಯಕಾಲೀನ ಕರ್ನಾಟಕ ಇತಿಹಾಸದಲ್ಲಿ ಮಹಮೂದ್ ಗವಾನನು ಒಬ್ಬ ಸಮರ್ಥ ಆಡಳಿತಗಾರನೆಂದು ಜನಪ್ರಿಯನಾಗಿರುವನು. ಈತನು ತನ್ನ ೪೨ನೇ ವಯಸ್ಸಿನಲ್ಲಿ ಅರೇಬಿಯಾದ ಗಿಲಾನ್‌ನಿಂದ ವ್ಯಾಪಾರಕ್ಕೋಸ್ಕರ ೧೪೫೩ರಲ್ಲಿ ಇಲ್ಲಿಗೆ ಬಂದನೆಂದು ಪ್ರತೀತಿಯಿದೆ. ರಾಜ್ಯಾಡಳಿತದಲ್ಲಿ ಎಲ್ಲಾ ವಿಭಾಗಗಳಲ್ಲಿಯೂ ಪ್ರಾವೀಣ್ಯತೆಯನ್ನು ಈತನು ಪ್ರದರ್ಶಿಸಿದನು. ಅರ್ಥ ಶಾಖೆಯನ್ನು ಸುಧಾರಣೆಗೊಳಿಸಿ ಸುವ್ಯವಸ್ಥಿತಗೊಳಿಸಿದನು. ಶಿಕ್ಷಣ ಕ್ಷೇತ್ರದಲ್ಲಿ ಈತನು ಕೈಗೊಂಡ ಸುಧಾರಣಾ ಕ್ರಮಗಳ ಫಲವಾಗಿ ಸಾಮ್ರಾಜ್ಯದಾದ್ಯಂತ 'ಮದರಸ'ಗಳನ್ನು ಹಾಗೂ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿರುವುದು ಈತನ ಗಣನೀಯ ಸಾಧನೆಗಳಾಗಿವೆ. ಪಾಂಡಿತ್ಯ ಪ್ರಿಯನಾಗಿದ್ದ ಈತನು ತನ್ನ ಗ್ರಂಥಾಲಯದಲ್ಲಿದ್ದ ೩,೦೦೦ ಪುಸ್ತಕಗಳಿಗೂ ಮೀರಿದಂತೆ ಬೀದರ್‌ನಲ್ಲಿರುವ ಪ್ರಖ್ಯಾತ ವಿದ್ಯಾ ಕೇಂದ್ರಕ್ಕೆ ದೇಣಿಗೆಯಾಗಿ ಕೊಟ್ಟ ಬಗೆಗೆ ಉಲ್ಲೇಖವಿದೆ. ನ್ಯಾಯಾಡಳಿತವನ್ನು

ಲೋಕೋಪಕಾರದ ರೀತಿಯಲ್ಲಿ ಗೋಚರವಾಗುವಂತೆ ಅನೇಕ ಪಾರದರ್ಶಕ ಪದ್ಧತಿಗಳನ್ನು ಜಾರಿಗೊಳಿಸಿದನು. ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಿದುದೇ ಅಲ್ಲದೆ, ಅಕ್ರಮವಾಗಿ ಸರಕಾರದ ಹಣವನ್ನು ದುರುಪಯೋಗ ಮಾಡಿಕೊಂಡವರ ಮೇಲೆ ಉಗ್ರ ಕ್ರಮ ಕೈಗೊಳ್ಳಲಾಗುತ್ತಿತ್ತು. ಈತನ ಆಳ್ವಿಕೆಗೆ ವಿಶಾಲವಾದ ಉತ್ತರ ಕರ್ನಾಟಕದ ಬಹುತೇಕ ಭಾಗಗಳು ಒಳಪಟ್ಟಿದ್ದವು. ಗವಾನನೇ ಸ್ವತಃ ತನ್ನ ದಾಳಿಗಳಲ್ಲಿ ಸೈನಿಕ ಮುಖಂಡತ್ವವನ್ನು ಪ್ರದರ್ಶಿಸಿದ ಕಾರಣ ಆತನಿಗೆ 'ಲಷ್ಕರಿ' ಎಂಬ ಬಿರುದು ಧರಿಸುವಂತಾಯಿತೆಂದು ತಿಳಿದು ಬರುತ್ತದೆ. ಹಿಂದೆ ಇದ್ದ ಸಾಮ್ರಾಜ್ಯದ ನಾಲ್ಕು ತರಫ್‌ಗಳನ್ನು ಮಹಮ್ಮದ್ ಗವಾನನು ಎಂಟು ತರಫ್‌ಗಳನ್ನಾಗಿ ಪುನರ್ ವಿಂಗಡಿಸಿದನು. ಇವುಗಳನ್ನು ಸರ್.ಲಷ್ಕರಿಗಳೆಂದು ಕರೆಯಲಾಗುತ್ತಿತ್ತು. ಆತನೇ ಸ್ವತಃ ವಕೀಲ-ಉಲ್-ಸುಲ್ತಾನತ್(ಪ್ರಧಾನಮಂತ್ರಿ) ಮತ್ತು ಬಿಜಾಪುರದ ತರಫ್‌ದಾರನಾಗಿದ್ದನು.

ಖ್ವಾಜಾ ಜಹಾನ್ ಮತ್ತು ಮಹಮ್ಮದ್ ಗವಾನನ ಸಹ ಆಳ್ವಿಕೆಯ ಕಾಲದಲ್ಲಿ ತೆಲಂಗಾಣದ ಅರಸರು ಮತ್ತು ಮಾಳ್ವದ ಮಹಮ್ಮದ್ ಖಿಲ್ಜಿ ಜೊತೆಗೂಡಿ ಬಹಮನಿಯ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದರು. ತೆಲಂಗಾಣದ ಅರಸರನ್ನು ಹಿಮ್ಮೆಟ್ಟಿಸಲಾಯಿತು. ಆದರೆ ಮಹಮ್ಮದ್ ಖಿಲ್ಜಿಯು ಈ ಸಾಮ್ರಾಜ್ಯಕ್ಕೆ ಪ್ರಬಲ ಅಪಾಯವನ್ನುಂಟುಮಾಡಿದನು. ಇದರ ಪರಿಣಾಮವಾಗಿ ಬಹಮನಿ ಸಾಮ್ರಾಜ್ಯವು ಅತೀ ದುರಂತದ ಸೋಲನ್ನನುಭವಿಸಬೇಕಾಯಿತು. ಇದರ ರಾಜಧಾನಿಯಾದ ಬೀದರ್ ನಗರವನ್ನು ಸ್ವಲ್ಪ ಕಾಲ ಅವರು ತಮ್ಮ ಮುಷ್ಠಿಯಲ್ಲಿಟ್ಟುಕೊಳ್ಳುವಂತಾಯಿತು. ಈ ಸಂದರ್ಭದಲ್ಲಿ ಗುಜರಾತಿನ ಅರಸರು ಬಹಮನೀಯರ ನೆರವಿಗೆ ಬಂದು ಮಾಳ್ವದ ಸೇನೆಯನ್ನು ತೆರವು ಮಾಡಿಸಿ ಹಿಮ್ಮೆಟ್ಟಿಸಲಾಯಿತು. ತಮ್ಮ ಅಧಿಕಾರವನ್ನು ಪುನರ್ ಸ್ಥಾಪಿಸುತ್ತಿದ್ದ ಸಮಯದಲ್ಲಿ ಜುಲೈ ೧೪೬೩ರಲ್ಲಿ ಸುಲ್ತಾನನು ತನ್ನ ಕಿರಿ ವಯಸ್ಸಿನಲ್ಲಿ ನಿಧನನಾದನು. ಈತನ ತರುವಾಯ ಇವನ ಕಿರಿಯ ಸಹೋದರ ಅಪ್ರಾಪ್ತ ವಯಸ್ಕನಾಗಿದ್ದ ಮೂರನೇ ಮಹಮ್ಮದನು ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದನು. ಈತನ ಕಾಲದಲ್ಲೂ ಪ್ರಧಾನ ಮಂತ್ರಿಯ ಮೂಲಕವೇ ಆಡಳಿತವು ಮುಂದುವರೆಯುವಂತಾಯಿತು. ರಷ್ಯಾ ದೇಶದ ನಿಖಿತಿನ್ ಎಂಬ ಯಾತ್ರಿಕನು ೧೪೭೦ರಲ್ಲಿ ಈ ಸಾಮ್ರಾಜ್ಯಕ್ಕೆ ಭೇಟಿಕೊಟ್ಟು ಬೀದರ್ ಹಿಂದೂಸ್ತಾನದ ಮಹಮ್ಮದೀಯ ನಗರಗಳಲ್ಲೇ ಒಂದು ಬಹು ಮುಖ್ಯ ನಗರವಾಗಿದೆ ಎಂದು ವರ್ಣಿಸಿರುವನು. ಈ ವೇಳೆಗೆ ಬಹಮನಿ ಸಾಮ್ರಾಜ್ಯವು ಪೂರ್ವದ ಸಾಗರದಿಂದ ಪಶ್ಚಿಮದ ಸಾಗರದವರೆಗೂ ವ್ಯಾಪಿಸಿತು. ಇಲ್ಲಿದ್ದಂತಹ ನಾಲ್ಕು ಮುಖ್ಯ ಪ್ರಾಂತ್ಯಗಳಲ್ಲಿ ಅಂದರೆ ಗುಲಬರ್ಗಾ, ಬೀದರ್ ಪ್ರಾಂತ್ಯಗಳನ್ನು ಮಹಮದ್ ಗವಾನ್ ಮತ್ತು ಯೂಸುಫ್ ಆದಿಲ್ ಖಾನನು ಹಾಗು ತೆಲಂಗಾಣ ಮತ್ತು ಬೆರಾರ್ ಪ್ರಾಂತ್ಯಗಳನ್ನು ಮಲ್ಲಿಕ್ ಹಸನ್ ನಿಜಾಮ್ ಉಲ್ ಮುಲ್ಕ್ ಮತ್ತು ಫತಾವುಲ್ಲಾ ಇಮಾದ್ ಉಲ್ ಮುಲ್ಕ್ ಇವರುಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡಿದ್ದರು. ಇವರಲ್ಲಿ ಯೂಸುಫ್ ಆದಿಲ್ ಖಾನನು ಪರಕೀಯನಾಗಿದ್ದ ಕಾರಣ ಅವನಿಗೆ ವಿದೇಶಗಳಿಂದ ಬೆಂಬಲವೂ ಇತ್ತೆಂದು ತಿಳಿದು ಬರುತ್ತದೆ. ಬೆಳಗಾವಿ ಮತ್ತು ಬಂಕಾಪುರದ ರಾಜರುಗಳು ಗೋವಾ ಕರಾವಳಿ ಪ್ರದೇಶವನ್ನು ಹಿಂದೂ ಸಾಮ್ರಾಜ್ಯಕ್ಕೆ ಮತ್ತೆ ಹಿಂದಿರುಗಿಸುವ ಪ್ರಯತ್ನ ಮಾಡಿದರು. ಇದನ್ನು ಅರಿತ ಮೂರನೇ ಮಹಮ್ಮದ್ ಮತ್ತು ಮಹಮ್ಮದ್ ಗವಾನ್ ಇಬ್ಬರೂ ಬಂಕಾಪುರಕ್ಕೆ ಬಂದು ತಮ್ಮ ಸಾಮ್ರಾಜ್ಯದ ಹತೋಟಿಯನ್ನು ಭದ್ರಪಡಿಸಿದರು. ಈ ಅಸ್ಥಿರತೆಯ ಸಂದರ್ಭದಲ್ಲಿ ಅನೇಕ ರಾಜಕೀಯ ಸಂಚಿಗೆ ಗವಾನನನ್ನು ಸಿಕ್ಕಿಸಿ ಕೊನೆಗೆ ಅವನನ್ನು ಕೊಂದು ಹಾಕುವಂತೆ ಸುಲ್ತಾನನು ಆದೇಶಿಸುವಂತೆ ಒತ್ತಡ ತರಲಾಯಿತೆಂದು ತಿಳಿದು ಬರುತ್ತದೆ. ಮಹಮ್ಮದ್ ಗವಾನನನ್ನು ೧೪೮೧ರಲ್ಲಿ ರಾಜಕೀಯ ತಂತ್ರದ ಸಂಚುಗಳಿಗೆ ಬಲಿಪಡಿಸಿ ದೇಶ ದ್ರೋಹದ ಸುಳ್ಳು ಆರೋಪದ ಮೇಲೆ ಕೊಂದು ಹಾಕಲಾಯಿತು. ಬಹುಶಃ ಇಂಥ ದಕ್ಷ ಆಡಳಿತಗಾರನನ್ನು ಈ ರೀತಿ ಹೀನಾಮಾನವಾಗಿ ಹಿಂಸಿಸಿ ಕೊಂದ ಕಾರಣ ಬಹಮನಿಯ ಸಾಮ್ರಾಜ್ಯದ ಪತನವು ಮುನ್ಸೂಚಿತವಾಯಿತು. ಪ್ರಬಲ ಬಹಮನಿಯರ ಶೀಘ್ರ ಪತನಕ್ಕೆ ಈ ಘಟನೆಯೇ ಮುಖ್ಯ ಕಾರಣವಾಯಿತೆಂದು ಹೇಳಲಾಗುತ್ತಿದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಯೂಸುಫ್ ಆದಿಲ್ ಖಾನನು (ಆತನಿಗೂ ಜೀವಾಪಾಯವಿದ್ದ ಕಾರಣ) ಬೀದರ್‌ನಿಂದ ವಿಜಾಪುರಕ್ಕೆ ಹೋದನು ಅನಂತರ ವಿಜಾಪುರದ ಪ್ರಬಲ ಸೇನೆಯು ಗುಲಬರ್ಗಾವನ್ನು ಸುಲಭವಾಗಿ ದಾಳಿ ಮಾಡಿ ತನ್ನ ವಶಕ್ಕೆ ತೆಗೆದುಕೊಂಡಿತು. ಅಲ್ಲಿದ್ದ ಬಹಮನಿಯ ರಾಜ್ಯಪಾಲನನ್ನು ಹೊರಹಾಕಲಾಯಿತು. ಮೂರನೇ ಮಹಮ್ಮದ್ ಷಾನ ತರುವಾಯ ಪಟ್ಟಕ್ಕೆ ಬಂದ ನಾಲ್ಕು ಸುಲ್ತಾನರುಗಳು ಒಬ್ಬರ ತರುವಾಯ ಒಬ್ಬರು ಕೇವಲ ಹೆಸರಿಗೆ ಮಾತ್ರ ರಾಜರೆಂದು ಕರೆದುಕೊಂಡರು. ಬಹಮನಿಯ ಮಹಮ್ಮದ್ ಷಾನ ಮಗ ನಾಲ್ಕನೆ ಮಹಮ್ಮದ್ ಷಾ (೧೫೧೮-೨೦)ನ ಆಳ್ವಿಕೆಯ ಅವಧಿಯಲ್ಲಿ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಗಳು ತೀರಾ ಹದಗೆಟ್ಟಿತ್ತು. ಅವನು ತನ್ನ ಪಿತ್ರಾರ್ಜಿತವಾಗಿ ಬಂದಿದ್ದ

## ಬಹಮನಿ ಸುಲ್ತಾನರ ವಂಶಾವಳಿ



ಅಮೂಲ್ಯವಾದ ಕಿರೀಟವನ್ನು ಭಾಗಮಾಡಿ ಮಾರಾಟ ಮಾಡಿ ಬಂದ ಹಣದಲ್ಲಿ ಜೀವನ ಸಾಗಿಸಬೇಕಾದ ಪರಿಸ್ಥಿತಿಯಿತ್ತೆಂಬ ಅಭಿಪ್ರಾಯವು ತಿಳಿದು ಬರುತ್ತದೆ. ಬಹಮನಿ ಸಾಮ್ರಾಜ್ಯದ ಪತನದ ಪರಿಣಾಮವಾಗಿ ಐದು ಸ್ವತಂತ್ರ ರಾಜ್ಯಗಳು ದಖನ್ನಿನಲ್ಲಿ ಹುಟ್ಟಿಕೊಂಡವು. ಅವುಗಳೆಂದರೆ (೧) ಇಮದ್ ಷಾಹಿ ವಂಶದ ಆಶ್ರಯದಲ್ಲಿ ಬೇರಾರ್ (೨) ನೈಜಾಮ್ ಷಾಹಿ ವಂಶದ ಆಶ್ರಯದಲ್ಲಿ ಅಹಮ್ಮದ್‌ನಗರ (೩)ಆದಿಲ್ ಷಾಹಿ ವಂಶದ ಆಶ್ರಯದಲ್ಲಿ ವಿಜಾಪುರ (೪) ಕುತುಬ್ ಷಾಹಿ ವಂಶದ ಆಶ್ರಯದಲ್ಲಿ ಗೋಲ್ಕೊಂಡ ಮತ್ತು (೫) ಬರೀದ್ ಷಾಹಿ ವಂಶದ ಆಶ್ರಯದಲ್ಲಿ ಬೀದರ್.

ಬಹಮನಿ ಸಾಮ್ರಾಜ್ಯದ ರಾಜಧಾನಿಯು ಗುಲಬರ್ಗಾದಿಂದ ಬೀದರ್‌ಗೆ ವರ್ಗಾಯಿಸಲ್ಪಟ್ಟ ಮೇಲೆ ಗುಲಬರ್ಗಾ ನಗರವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಕೇವಲ ಪ್ರಾಂತೀಯ ಕೇಂದ್ರ ಸ್ಥಾನವಾಗಿ ಮುಂದುವರೆಯುವಂತಾಯಿತು. ವಿಜಾಪುರದಲ್ಲಿ ಯೂಸುಫ್ ಆದಿಲ್ ಷಾ ಗುಲಬರ್ಗಾವನ್ನು ತನ್ನ ಹತೋಟಿಗೆ ತೆಗೆದುಕೊಂಡ ಮೇಲೆ ಈ ನಗರವು ಆತನ ಅಧೀನದಲ್ಲೇ ಮುಂದುವರೆಯಿತು.

ಕೆ.ಎ. ನೀಲಕಂಠ ಶಾಸ್ತ್ರಿಯವರ ಅಭಿಪ್ರಾಯದಂತೆ "ಬಹಮನಿಯವರ ಆಳ್ವಿಕೆಯ ಕಥನವು ದಖನ್ನಿನ ಸುಲ್ತಾನರುಗಳ ರಾಜಕೀಯ ಇತಿಹಾಸದಲ್ಲಿ ರೋಮಾಂಚನ ಅಧ್ಯಾಯವೇನೂ ಇಲ್ಲ. ಬಹಮನಿಯ ಬಹುತೇಕ ಸುಲ್ತಾನರುಗಳು ಮದ್ಯಪಾನ ಲೋಲುಪರುಗಳಾಗಿದ್ದರು. ಅವರ ರಾಜದರ್ಭಾರಿನಲ್ಲಿ ಯಾವುದೇ ತಾತ್ವಿಕ ಪದ್ಧತಿಗಳೂ ಕಂಡು ಬರುವುದಿಲ್ಲ. ಇದೇ ತತ್ವಗಳಿಂದಾಗಿ ಮಹಮ್ಮದ್ ಗವಾನನಂಥ ಸಮರ್ಥ ಆಡಳಿತಗಾರನೂ ಅಮಾನುಷವಾಗಿ ಕೊಲೆಯಾದನು. ಅವರಲ್ಲಿ ಅನೇಕರು ಅಧಿಕಾರ ದಾಹಕ್ಕೆ ಬಲಿಯಾದುದು. ಅವರು ಜಾರಿಗೊಳಿಸಿದ ಅಪಾಯಕರ ತತ್ವಗಳೇ ಉದಾಹರಣೆಯಾಗಿವೆ." ಮುಂದೆ ಮುಗಲರು ದಖನ್ನಿನ ಮೇಲೆ ದಾಳಿ ಮಾಡುವವರೆಗೂ ಇದೇ ಪರಿಸ್ಥಿತಿ ಮುಂದುವರೆಯಿತು. ಇದೇ ಸಂದರ್ಭದಲ್ಲಿ ಮುಗಲರಿಗೂ ಮೊದಲು ವಿಜಯನಗರದ ಕೃಷ್ಣದೇವರಾಯನು ವಿಜಾಪುರದ ಕೋಟೆಯನ್ನು ದಾಳಿಮಾಡಿ ಗುಲಬರ್ಗಾ ನಗರವನ್ನು ಆಕ್ರಮಿಸಿ ಅಲ್ಲಿದ್ದ ಭದ್ರವಾದ ಕೋಟೆಯನ್ನು ನೆಲಸಮ ಮಾಡಿದನೆಂದು ತಿಳಿದು ಬರುತ್ತದೆ. ಆಗ ವಿಜಾಪುರದ ಅಧೀನದಲ್ಲಿ ಅಮೀರರುಗಳ ವಶದಲ್ಲಿದ್ದ ಮೂರನೇ ಮುಹಮ್ಮದ್ ಷಾನ ಮಕ್ಕಳಾಗಿದ್ದ ಮೂವರು ಬಹಮನಿ ರಾಜಕುಮಾರರುಗಳನ್ನು ಸ್ವತಂತ್ರಗೊಳಿಸಿದನು. ಇದನ್ನು ಯೂಸುಫ್ ಆದಿಲ್ ಖಾನನ ಮಗ ಇಸ್ಮಾಯಿಲ್ ಆದಿಲ್ ಖಾನನು ಸೆರೆ ಹಿಡಿದಿಟ್ಟಿದ್ದನೆಂದು ವ್ಯಕ್ತವಾಗುತ್ತದೆ. ಇದಾದ ಮೇಲೆ ರಕ್ಕಸಗಿ-ತಂಗಡಗಿ ಯುದ್ಧದ ತರುವಾಯ ಆದಿಲ್ ಷಾಹಿಯು ಗುಲಬರ್ಗಾದ ನಾಶವಾಗಿದ್ದ ಕೋಟೆಯನ್ನು ದುರಸ್ತಿಗೊಳಿಸದನೆಂದು ಕೋಟೆಯಲ್ಲಿರುವ ಆತನ ಶಾಸನಗಳು ಉಲ್ಲೇಖಿಸುತ್ತವೆ.

**ವಿಜಾಪುರದ ಆದಿಲ್ ಷಾಹಿಗಳು** (೧೪೯೦-೧೬೮೬)

ಬಹಮನಿ ಸಾಮ್ರಾಜ್ಯವು ಪತನಗೊಂಡ ನಂತರ ಅಸ್ತಿತ್ವಕ್ಕೆ ಬಂದ ಐದು ಪ್ರಮುಖ ಷಾಹಿ ರಾಜ್ಯಗಳಲ್ಲಿ ವಿಜಾಪುರದ ಆದಿಲ್ ಷಾಹಿಗಳ ಸಾಮ್ರಾಜ್ಯವು ೧೪೮೯ ಮುಖ್ಯವಾದದ್ದು. ಬಹಮನಿಗಳ ಕಾಲದಲ್ಲಿ ವಿಜಾಪುರ ಪ್ರಾಂತದ ಅಧಿಕಾರಿಯಾಗಿದ್ದ ಯೂಸುಫ್ ಆದಿಲ್ ಖಾನನು ೧೪೮೯ರಲ್ಲಿ ಸ್ವತಂತ್ರನಾಗಿ ಹೊಸದೊಂದು ರಾಜ್ಯವನ್ನು ಸ್ಥಾಪಿಸಿಕೊಂಡನೆಂದು ತಿಳಿದುಬರುತ್ತದೆ. ಮಹಮದ್ ಗವಾನನ ಆಶ್ರಯದಲ್ಲಿ ಬೆಳೆದ ಜಾರ್ಜಿಯ ಪ್ರಾಂತದವನಾದ ಮತ್ತು ತನ್ನ ಬಾಲ್ಯವನ್ನು ಈತನ ಗುಲಾಮನಾಗಿ ಕಳೆದ ಯೂಸುಫ್ ಆದಿಲ್ ಖಾನನು ವಿಜಾಪುರದ ಅಧಿಕಾರವನ್ನು ತನ್ನ ಕೈಯಲ್ಲಿ ಹಿಡಿದಿದ್ದು ಒಂದು ರೋಮಾಂಚಕ ಸಾಧನೆಯೆಂದು ಇತಿಹಾಸದಲ್ಲಿ ಹೇಳಲಾಗುತ್ತದೆ. ಆದರೆ ಇವನು ತುರ್ಕಿಯ ಎರಡನೇ ಮುರಾದನ್‌ನ ಮಗನೆಂಬುದು ಫರಿಷ್ತಾನ ಅಭಿಪ್ರಾಯ.

ಈತನು ದಖ್ಖನ್ನಿನ ಪ್ರತಿಭಾವಂತ ರಾಜರುಗಲ್ಲೊಬ್ಬನಾಗಿದ್ದು, ಮತಾಂಧನಾಗಿಲ್ಲದೆ ಇದ್ದುದರಿಂದ ಮತ್ತು ತನ್ನ ಮರಾಠಿ ರಾಣಿಯಿಂದ ಪ್ರಭಾವಿತನಾಗಿ ತನ್ನ ಹಿಂದೂ ಪ್ರಜೆಗಳನ್ನು ಗೌರವದಿಂದ ನೋಡಿಕೊಳ್ಳುತ್ತಿದ್ದನು. ಈತನ ಪ್ರಮುಖ ರಾಜಕೀಯ ಸಾಧನೆಯೆಂದರೆ ೧೫೧೦ರಲ್ಲಿ ಗೋವೆಯನ್ನು ಪೋರ್ಚುಗೀಸರಿಂದ ಕಿತ್ತುಕೊಂಡದ್ದು. ಇದರ ತರುವಾಯ ಅದೇ ವರ್ಷ ಸಂಭವಿಸಿದ ವಿಜಯನಗರದ ವಿರುದ್ಧದ ಯುದ್ಧದಲ್ಲಿ ಯೂಸುಫ್ ಆದಿಲ್‌ಷಾ ನಿಧನನಾದನು. ಈತನ ಸಮಾಧಿಯು ಇವನು ಪೂಜಿಸುತ್ತಿದ್ದ ಶಹಾ ಹಬೀಬುಲ್ಲಾ ಸಂತನ ಸಮಾಧಿಯ ಬಳಿಯಲ್ಲಿ ಗುಲಬರ್ಗಾ ಜಿಲ್ಲೆಯ ಗೋಗಿಯಲ್ಲಿರುವುದು.

ಆದಿಲ್ ಷಾನ ತರುವಾಯ ಅವನ ಮಗನಾದ ಇಸ್ಮಾಯಿಲ್ ಪಟ್ಟಕ್ಕೆ ಬಂದನು (೧೫೧೦). ಆಗ ಈತನಿಗೆ ಕೇವಲ ಒಂಭತ್ತು ವರ್ಷವಾಗಿದ್ದ ಕಾರಣ ಪ್ರಧಾನ ಮಂತ್ರಿಯೇ ಆಡಳಿತವನ್ನು ನಿರ್ವಹಿಸುತ್ತಿದ್ದನು. ಈತನ ದುರ್ಬಲತೆಯನ್ನು ಉಪಯೋಗಿಸಿಕೊಂಡು ಕೃಷ್ಣದೇವರಾಯನು ೧೫೧೨ರಲ್ಲಿ ರಾಯಚೂರನ್ನು ವಿಜಾಪೂರದಿಂದ ಗೆದ್ದುಕೊಂಡನು. ಆದರೆ ಕೆಲವೇ ವರ್ಷಗಳ ತರುವಾಯ ರಾಯಚೂರನ್ನು ಮತ್ತೆ ವಿಜಾಪುರದ ಸುಲ್ತಾನನು ಗೆದ್ದುಕೊಂಡನು. ಇದಕ್ಕೆ ಉತ್ತರವಾಗಿ ಕೃಷ್ಣದೇವರಾಯನು ೧೫೨೦ರಲ್ಲಿ ಅದನ್ನು ತಿರುಗಿ ಗೆದ್ದುಕೊಂಡನು. ಇಸ್ಮಾಯಿಲ್‌ನನ್ನು ಪೂರ್ಣವಾಗಿ ಸೋಲಿಸಿ ಕೆಲವು ಕಾಲ ರಾಜಧಾನಿಯನ್ನು (ವಿಜಾಪುರ) ಆಕ್ರಮಿಸಿ ಅಲ್ಲೇ ಬಿಡಾರ ಬಿಟ್ಟನು. ಇಸ್ಮಾಯಿಲ್ ಅಸಹಾಯಕನಾಗಿ ರಾಜಧಾನಿಯಿಂದ ಹೊರಗೆ ಉಳಿಯಬೇಕಾಯಿತು. ಆತನು ಅಹಮದ್‌ನಗರ ನಿಜಾಂ ಷಾನೊಡನೆ ವೈವಾಹಿಕ ಸಂಬಂಧ ಬೆಳೆಸಿ ಆತನ ಸ್ನೇಹವನ್ನು ಸಂಪಾದಿಸಿದನು. ಇದೇ ರೀತಿ ಬರಾರಿನ ಅಲ್ಲಾವುದ್ದೀನನ ಸ್ನೇಹವನ್ನು ಗಳಿಸಿ ೧೫೨೯ರಲ್ಲಿ ಬೀದರ್‌ನ್ನು ಮುತ್ತಿಗೆ ಹಾಕಿ ಅಮೀರ್ ಖರೀದ್‌ನನ್ನು ಸೆರೆಹಿಡಿದು ತನ್ನ ಆಸ್ಥಾನಕ್ಕೆ ತಂದನು. ೧೫೨೯ರಲ್ಲಿ ಕೃಷ್ಣದೇವರಾಯನು ನಿಧನನಾದ ಮೇಲೆ ರಾಯಚೂರು, ಮುದಗಲ್ ಹಾಗೂ ಬೆಳಗಾವಿಯನ್ನು ಪುನಃ ಗೆದ್ದುಕೊಂಡನು.

ಇಸ್ಮಾಯಿಲ್‌ನು ೧೫೩೪ರಲ್ಲಿ ನಿಧನನಾಗಲು ಅವನ ಮಗ ಮಲ್ಲುವನ್ನು ಕಡೆಗಾಣಿಸಿ ಈತನ ಇನ್ನೊಬ್ಬ ಮಗನಾದ ಹದಿನೈದು ವರ್ಷ ಪ್ರಾಯದ ಮೊದಲನೇ ಇಬ್ರಾಹಿಂನನ್ನು ೧೫೩೫ರಲ್ಲಿ ವಿಜಾಪುರದ ಸುಲ್ತಾನನಾದನು. ಮೊದಲನೇ ಇಬ್ರಾಹಿಂ ಆದಿಲ್ ಷಾನು (೧೫೩೫-೫೮) ತನ್ನ ಆಡಳಿತ ವ್ಯವಸ್ಥೆಯಲ್ಲಿ ಮೊದಲಬಾರಿಗೆ ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಅಧಿಕೃತ ಭಾಷೆಗಳನ್ನಾಗಿ ಜಾರಿಗೆ ತಂದನು. ಈತನು ವಿಜಯನಗರದ ರಾಮರಾಯನೊಡನೆ ಸ್ನೇಹವನ್ನು ಬೆಳೆಸಿ ತನ್ನ ಖ್ಯಾತ ಮಂತ್ರಿ ಅಸದ್ ಖಾನನ ಸಹಾಯದಿಂದ ಅಹಮದ್‌ನಗರ, ಬೀದರ್ ಮತ್ತು ಗೋಲ್ಕೊಂಡ ರಾಜ್ಯಗಳ ಮೇಲೆ ಯುದ್ಧ ಮಾಡಿದನು. ಯುದ್ಧದ ನಂತರ ಸುಖಲೋಲುಪ ಜೀವನವನ್ನು ನಡೆಸಲು ಪ್ರಾರಂಭಿಸಿ ೧೫೫೭ರಲ್ಲಿ ನಿಧನನಾದನು. ಈತನ ತರುವಾಯ ಇವನ ಮಗನಾದ ಮೊದಲನೇ ಅಲಿ ಆದಿಲ್ ಷಾ ೧೫೫೭ರಲ್ಲಿ ಪಟ್ಟಕ್ಕೆ ಬಂದನು. ಈತನು ತನ್ನ ತಂದೆಯಂತೆ ಸುನ್ನಿ ಇಸ್ಲಾಂ ಪಂಥವನ್ನು ಉತ್ತೇಜಿಸಿದ. ಷಿಯಾ ಪಂಥವನ್ನು ರಾಜ್ಯ ಧರ್ಮವನ್ನಾಗಿಸಿಕೊಂಡುದುದಕ್ಕೆ ಸಾಮ್ರಾಜ್ಯದಲ್ಲಿ ಅತೃಪ್ತಿಯ ಬಿರುಗಾಳಿಯನ್ನು ಎದುರಿಸಬೇಕಾಯಿತು. ೧೫೫೮ರಲ್ಲಿ ಇವನು ವಿಜಯನಗರದ ರಾಮರಾಯನೊಡನೆ ಸಂಧಾನ ಮಾಡಿಕೊಂಡು ಅಹ್ಮದ್‌ನಗರದ ರಾಜ್ಯವನ್ನು ನಿರ್ದಯವಾಗಿ ನಾಶ ಮಾಡಿದನು. ರಾಮರಾಯನು ಮಾಡಿದ ಅತ್ಯಾಚಾರಗಳಿಂದ ಅಲಿಗೂ ಅವನಿಗೂ ಆಗಿದ್ದ ಸಂಧಾನವು ಮುರಿದು ಬಿದ್ದಿತು. ಇಷ್ಟೇ ಅಲ್ಲದೆ ಯಾವ ಒಬ್ಬ ಮುಸ್ಲಿಮ್ ಸುಲ್ತಾನನೂ ಹಿಂದೂ ಸಾಮ್ರಾಜ್ಯವಾದ ವಿಜಯನಗರದ ಶಕ್ತಿ ಮತ್ತು ಶ್ರೀಮಂತಿಕೆಗೆ ಸಮನಲ್ಲವೆಂದು ರಾಮರಾಯನು ಹೇಳಿಕೊಂಡನೆಂದು ಅಲಿಗೆ ತಿಳಿದಾಗ ವಿಜಯನಗರವನ್ನು ಪತನಗೊಳಿಸುವ ತೀರ್ಮಾನ ಮಾಡಿದನು. ಇದರ ಸಲುವಾಗಿ ಒಂದು ಚತುರ್ಮುಖ ಸೇನಾಕೂಟವನ್ನು ರಚಿಸಿದನು. ಎಲ್ಲಾ ಮುಸ್ಲಿಮ್ ರಾಜ್ಯಗಳೂ ಒಟ್ಟುಗೂಡಿ ಸೇನಾಕೂಟವನ್ನು ರಚಿಸಿ ವಿಜಯನಗರದ ಸೇನೆಯ ಮೇಲೆ ರಕ್ಕಸಗಿ-ತಂಗಡಗಿ ಎಂಬ ಸ್ಥಳಗಳಲ್ಲಿ ೧೫೬೫ರಲ್ಲಿ ಭೀಕರ ಯುದ್ಧ ಮಾಡಿ ಜಯವನ್ನು ಗಳಿಸಿತು. ರಾಮರಾಯನನ್ನು ಸೆರೆಹಿಡಿಯಲಾಯಿತು. ವಿಜಯನಗರದ ಹೊಸ ರಾಜಧಾನಿ ಪೆನುಗೊಂಡವನ್ನು ಗೆಲ್ಲಲು ಅಲಿ ಆದಿಲ್ ಷಾ ವ್ಯರ್ಥ ಯತ್ನಮಾಡಿದ. ಹಾಗೂ ೧೫೭೧ರಲ್ಲಿ ಗೋವೆಯನ್ನು ಗೆಲ್ಲಲು ಭಾರಿ ಯತ್ನಮಾಡಿ ವಿಫಲನಾದನು. ಅಲಿ ಆದಿಲ್ ಷಾನು ೧೫೭೯ರಲ್ಲಿ ಕೊಲ್ಲಲ್ಪಟ್ಟನು.

ಮೊದಲನೇ ಅಲಿ ಆದಿಲ್ ಷಾ ಮರಣ ಹೊಂದಿದಾಗ ಇನ್ನೂ ಅಪ್ರಾಪ್ತ ವಯಸ್ಕನಾದುದರಿಂದ ಇಮ್ಮಡಿ ಇಬ್ರಾಹಿಂ ಆಳ್ವಿಕೆಯ ಅವಧಿಯಲ್ಲಿ ಚಾಂದ್ ಬೀಬಿಯೇ ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಿದ್ದಳು. ಇಮ್ಮಡಿ ಇಬ್ರಾಹಿಂನು ೧೬೨೬ರಲ್ಲಿ ೫೬ನೇ ವಯಸ್ಸಿನಲ್ಲಿ ಮರಣ ಹೊಂದಿದನು. ಆದಿಲ್ ಷಾಹಿ ರಾಜರಲ್ಲಿ ಈ ವಂಶದ ಸ್ಥಾಪಕನನ್ನು ಬಿಟ್ಟರೆ ಇವನೇ ಅತ್ಯಂತ ಸಮರ್ಥನೆಂದು ಮೆಡೋಸ್ ಟೈಲರ್ ಅಭಿಪ್ರಾಯ ಪಡುತ್ತಾನೆ. ಇಬ್ರಾಹಿಂನು ತೋದರ್ ಮಲ್ಲನ ಕಂದಾಯ ಆಡಳಿತವನ್ನು ಸ್ಥಳೀಯ ಬದಲಾವಣೆಗಳೊಂದಿಗೆ ತನ್ನ ರಾಜ್ಯದಲ್ಲಿ ಜಾರಿಗೆ ತಂದನು. ಇವನು ಗೋವೆಯ ಪೋರ್ಚುಗೀಸರೊಡನೆ ಸ್ನೇಹದಿಂದ ವರ್ತಿಸಿದನು. ಹಿಂದೂಗಳನ್ನು ಸ್ನೇಹಿತರನ್ನಾಗಿ ಮಾಡಿಕೊಂಡನು. ಮೆಡೋಸ್ ಟೈಲರ್ ತಿಳಿಸಿರುವಂತೆ ಇವನ ಅನೇಕ ಉನ್ನತ ದರ್ಜೆಯ ಅಧಿಕಾರಿಗಳು ಹಿಂದೂಗಳೇ ಆಗಿದ್ದರು. ಅಮೀರ್ ಬರೀದ್‌ಷಾ ಮತ್ತು ಆತನ ಕುಟುಂಬವನ್ನು ಬಂಧಿಸಿ ವಿಜಾಪುರಕ್ಕೆ ತರಲಾಯಿತು. ಈ ಘಟನೆಯನ್ನು ಬೀದರ್‌ನಲ್ಲಿರುವ ಒಂದು ಪರ್ಷಿಯನ್ ಶಾಸನದಲ್ಲಿ ವರ್ಣಿಸಲಾಗಿದೆ. ಇವನ ಕಾಲದಲ್ಲಿ ಬೀದರ್ ಬರೀದ್ ಷಾಹಿ ರಾಜ್ಯವನ್ನು ವಿಜಾಪುರದ

ಜೊತೆಗೆ ವಿಲೀನಗೊಳಿಸಲಾಯಿತು. ಈತನ ಕಾಲದಲ್ಲಿ ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಹೆಚ್ಚಿನ ಉತ್ತೇಜನ ದೊರೆತ ಕಾರಣ ವಿಜಾಪುರದಲ್ಲಿ ಅನೇಕ ಅತ್ಯುತ್ತಮ ಕಟ್ಟಡಗಳು ನಿರ್ಮಾಣಗೊಂಡವು. ಹೆನ್ರಿ ಕಸಿನ್ಸ್‌ನ ಅಭಿಪ್ರಾಯದಂತೆ ಇಬ್ರಾಹಿಂ ರೋಜಾ ಕಟ್ಟಡವು ಈತನ ಕಾಲದ ವಾಸ್ತು ರಚನೆಯ ಭವ್ಯತೆಯ ಉತ್ತಮ ಪ್ರತೀಕವಾಗಿದೆ. ಇವನ ಕಾಲದಲ್ಲಿ ಮುಸಲ್ಮಾನ ಇತಿಹಾಸಕಾರ ಮಹಮ್ಮದ್ ಕಾಸಿಂ ಫರಿಷ್ತಾ, ೧೬೦೬ರಲ್ಲಿ ರಾಜನ ಆಜ್ಞೆಯಂತೆ ಭಾರತದಲ್ಲಿ 'ಮುಸ್ಲಿಂ ಸತ್ತೆಯ ಉದಯ' ಎಂಬ ಪರ್ಷಿಯನ್ ಭಾಷೆಯ ಕೃತಿಯನ್ನು ಬರೆದನು.

ಇಮ್ಮಡಿ ಇಬ್ರಾಹಿಂನ ತರುವಾಯ ಪಟ್ಟಕ್ಕೆ ಬಂದ ಮಹಮ್ಮದ್ ಆದಿಲ್ ಷಾ ೧೬೨೬ರಲ್ಲಿ ಷಹಜಾನ್‌ನ ನೇತೃತ್ವದಲ್ಲಿ ಮುಗಲರ ದಾಳಿಯನ್ನೆದುರಿಸಿ ಪರಾಭವಗೊಂಡು ಕಪ್ಪ ಕಾಣಿಕೆಗಳನ್ನು ಕೊಡಲು ಒಪ್ಪಿಕೊಂಡನು. ಇವನು ವಿಜಾಪುರದಲ್ಲಿ ವಿಶ್ವವಿಖ್ಯಾತ ಗೋಲ್‌ಗುಂಬಜ್ ಕಟ್ಟಡವನ್ನು ನಿರ್ಮಿಸಿದನು. ಈ ಕಟ್ಟಡವು ಆ ಕಾಲದ ವಾಸ್ತು ರಚನೆಯ ಅತ್ಯಂತ ಗಣನೀಯ ತಾಂತ್ರಿಕ ಜ್ಞಾನವನ್ನು ಪ್ರತಿನಿಧಿಸುವ ಸುಂದರ ಕಟ್ಟಡವಾಗಿದೆ. ಈತನು (೧೬೨೬-೫೬) ದೀರ್ಘಕಾಲದ ತನ್ನ ಆಳ್ವಿಕೆಯಲ್ಲಿ ಅನೇಕ ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಿದನು. ಇವನ ತರುವಾಯ ಅಧಿಕಾರಕ್ಕೆ ಬಂದ ಎರಡನೇ ಅಲಿ ಆದಿಲ್ ಷಾ (೧೬೫೬-೭೨) ಹದಿನೆಂಟು ವರ್ಷದ ಯುವಕನಾಗಿದ್ದನು. ಅನೇಕ ವಿರೋಧಿ ಶಕ್ತಿಗಳನ್ನು ಎದುರಿಸಿ ವಿಜಾಪುರದ ಸಮಗ್ರತಗೆ ಕಾರಣನಾದ ಪರಾಕ್ರಮಶಾಲಿಯಾಗಿದ್ದನು. ಮುಗಲ್ ಸೇನಾಧಿಪತಿ ಜೆಸಿಂಗ್‌ನ ನೇತೃತ್ವದಲ್ಲಿ ವಿಜಾಪುರಕ್ಕೆ ಮುತ್ತಿಗೆ ಹಾಕಿದ ಮುಗಲ್ ದಂಡಯಾತ್ರೆಯನ್ನು ಯಶಸ್ವಿಯಾಗಿ ತಡೆದು ಹಿಮ್ಮೆಟ್ಟಿಸಿದನು. ಆದರೆ ಈತನು ತನ್ನ ಕೊನೆಯ ಕಾಲವನ್ನು ಮದ್ಯಪಾನದ ದಾಸನಾಗಿ ಸುಖ ಭೋಗದಲ್ಲಿ ಕಳೆದನೆಂದು ತಿಳಿದು ಬರುತ್ತದೆ. ಈತನ ವಜೀರನು ರಾಜ್ಯದ ಆಡಳಿತವನ್ನು ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದನು. ಇಮ್ಮಡಿ ಅಲಿಯು ೧೬೭೨ರಲ್ಲಿ ನಿಧನನಾಗಲು ವಿಜಾಪುರದ ವೈಭವವು ಕಣ್ಮರೆಯಾಯಿತು. ಸಿಕೆಂದರ್ ಎಂಬ ನಾಲ್ಕು ವರ್ಷದ ಬಾಲಕನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಅಧಿಕಾರವನ್ನು ಪಡೆಯುವ ಸಲುವಾಗಿ ಶ್ರೀಮಂತರಲ್ಲಿ ಹಾಗೂ ರಾಜ ಪ್ರತಿನಿಧಿಗಳಲ್ಲಿ ಕಲಹಗಳು ಪ್ರಾರಂಭವಾದವು. ಪ್ರಖ್ಯಾತ ಇತಿಹಾಸಕಾರ ಯದುನಾಥ ಸರ್ಕಾರರು ತಿಳಿಸುವಂತೆ ೧೬೭೨ರಿಂದ ೧೬೮೬ರವರೆಗಿನ ವಿಜಾಪುರದ ಇತಿಹಾಸವು ನಿಜವಾಗಿಯೂ ಅಲ್ಲಿನ ವಜೀರರ ಇತಿಹಾಸವೇ ಸರಿ ಎಂಬ ಅಭಿಪ್ರಾಯವು ಆ ಕಾಲದ ಪರಿಸ್ಥಿತಿಯನ್ನು ತಿಳಿಸುತ್ತದೆ. ಮುಂದೆ ಗುಲಬರ್ಗಾ ಜಿಲ್ಲೆಯು ವಿಜಾಪುರದ ಜೊತೆಗೆ ಔರಂಗಜೇಬನ ನೇತೃತ್ವದ ಮುಗಲರ ಆಳ್ವಿಕೆಗೆ ಒಳಪಟ್ಟಿತು.

## ಮುಗಲರ ದಾಳಿಗಳು

ಮುಗಲ್ ಸಾಮ್ರಾಜ್ಯದ ರಾಜರುಗಳಾದ ಜಹಾಂಗೀರ್ ಮತ್ತು ಷಾಹಜಾನರುಗಳು ದಖನ್ನಿನ ಮೇಲೆ ತಮ್ಮ ತೀವ್ರ ಗಮನ ಹರಿಸಲಾರಂಭಿಸಿದರು. ಇವರ ಮುಖ್ಯ ಉದ್ದೇಶ ದಖನ್ನಿನ ಪ್ರಬಲ ರಾಜಕೀಯ ಶಕ್ತಿಯನ್ನು ದಮನ ಮಾಡುವುದೇ ಆಗಿತ್ತೇ ವಿನಹ ದುರುದ್ದೇಶವನ್ನು ಹೊಂದಿರಲಿಲ್ಲ. ಇದರ ಪರಿಣಾಮವಾಗಿ ಮುಗಲ್ ಸೇನೆಯು ದಖನ್ನಿನ ಮೇಲೆ ಎರಗಿ ಬೆರಾರ್ ಮತ್ತು ಅಹಮ್ಮದ್ ನಗರದವರೆಗೂ ತಮ್ಮ ದಂಡಯಾತ್ರೆಯನ್ನು ಮುಂದುವರೆಸಿದವು. ಆ ಸಮಯದಲ್ಲಿ ಗೋಲ್ಕೊಂಡ ಮತ್ತು ವಿಜಾಪುರಗಳು ಅವರ ರಾಜಕೀಯ ಹತೋಟಿಯಿಂದ ಹೊರಗೆ ಉಳಿದವು. ಆದರೆ, ಔರಂಗಜೇಬನು ದಖನ್ನಿಗೆ ರಾಜ್ಯಪಾಲನಾಗಿ (೧೬೫೩) ನೇಮಕಗೊಂಡ ಸ್ವಲ್ಪ ಕಾಲದಲ್ಲೇ ಆತನು ಗುಲಬರ್ಗಾದ ಮೇಲೆ ದಾಳಿ ಮಾಡಿ ಅಲ್ಲಿಂದ ಮುಂದುವರೆದು ವಿಜಾಪುರದವರೆಗೂ ತನ್ನ ದಂಡಯಾತ್ರೆಯನ್ನು ಕೈಗೊಂಡನು. ಮಹಮ್ಮದ್ ಆದಿಲ್ ಷಾ ನವೆಂಬರ್ ೧೬೫೬ರಲ್ಲಿ ನಿಧನನಾಗಿದ್ದ ಕಾರಣ ಹಾಗೂ ಆತನ ಉತ್ತರಾಧಿಕಾರಿಯಾಗಿದ್ದ ಎರಡನೇ ಆದಿಲ್ ಷಾ ಇನ್ನೂ ೧೮ ವರ್ಷಗಳ ಯುವಕನಾಗಿದ್ದುದರಿಂದ ಪರಿಸ್ಥಿತಿ ಔರಂಗಜೇಬನಿಗೆ ಅನುಕೂಲವಾಗಿತ್ತು. ಔರಂಗಜೇಬನು ಮಹಮ್ಮದ್ ಆದಿಲ್ ಷಾ ರಾಜನ ನೇರವಾದ ಮಗನಲ್ಲವೆಂಬ ಕ್ಷುಲ್ಲಕ ಕಾರಣವನ್ನು ನೀಡಿ ವಿಜಾಪುರದ ಮೇಲೆ ದಾಳಿ ಮಾಡಲು ಮುಗಲ್ ಚಕ್ರವರ್ತಿ ಷಹಜಹಾನನ ಅನುಮತಿಯನ್ನು ಗಳಿಸಿಕೊಂಡಿದ್ದನು. ಬೀದರ್ ಅನ್ನು ಮಾರ್ಚಿ ೧೬೫೭ರಲ್ಲಿ ಆಕ್ರಮಿಸಿಕೊಳ್ಳಲು ಔರಂಗಜೇಬನು ಮಹಾಬತ್ ಖಾನನ ನೇತೃತ್ವದಲ್ಲಿ ಪ್ರಬಲ ಸೈನ್ಯವನ್ನು ಕಳುಹಿಸಿದನು. ಈತನು ವಿಜಾಪುರದ ಎಲ್ಲೆಗಳನ್ನು ಪ್ರವೇಶಿಸಿ ಕಲ್ಯಾಣ ಮತ್ತು ಗುಲಬರ್ಗಾ ನಗರಗಳನ್ನು ಸುಲಭವಾಗಿ ಆಕ್ರಮಿಸಿಕೊಂಡನು. ಈ ದಾಳಿಗಳನ್ನು ಹತ್ತಿಕ್ಕಲು ವಿಜಾಪುರದ ಸೇನೆಯು ಪ್ರಬಲ ವಿರೋಧ ಒಡ್ಡಿದ್ದರೂ ತಾಂತ್ರಿಕವಾಗಿ ಪ್ರಬಲ ಶಕ್ತಿಯಾಗಿದ್ದ ಮುಗಲರ ಸೇನೆಯು ಇದನ್ನು ಸುಲಭವಾಗಿ ಎದುರಿಸಿ ವಿಜಾಪುರವನ್ನು ಕೊಳ್ಳೆ ಹೊಡೆಯಿತೆಂಬ ಅಭಿಪ್ರಾಯವಿದೆ.

ಕಲ್ಯಾಣವು ಮುಗಲರ ವಶಕ್ಕೆ ಬಂದ ತಕ್ಷಣ ವಿಜಾಪುರದ ಸುಲ್ತಾನನು ಷಹಜಹಾನನೊಡನೆ ಶಾಂತಿ ಸಂಧಾನಕ್ಕೆ ಪ್ರಾರಂಭ ಮಾಡಿದನು. ಈ ಒಪ್ಪಂದದ ಪರಿಣಾಮವಾಗಿ ಷಹಜಾನನು ತನ್ನ ದಖನ್ನಿನ ರಾಜ್ಯಪಾಲನಾಗಿದ್ದ ಔರಂಗಜೇಬನಿಗೆ ಆದೇಶ ಕಳುಹಿಸಿ ತನ್ನ ಸೇನೆಯನ್ನು ವಿಜಾಪುರದಿಂದ ಹಿಂತೆಗೆದುಕೊಂಡು ಬೀದರ್‌ಗೆ ಹೋಗಬೇಕೆಂದು ತಿಳಿಸಿದನು. ಇದೇ ಸಂದರ್ಭದಲ್ಲಿ ಷಹಜಹಾನನಿಗೆ ಅನಾರೋಗ್ಯವಾದ ಕಾರಣ ಔರಂಗಜೇಬನು ಕಲ್ಯಾಣದಿಂದ ತನ್ನ ಸೇನೆಯನ್ನು ತೆಗೆದು ದೆಹಲಿಗೆ ಆತಂಕದಿಂದ ಹಿಂತಿರುಗಿದನು.

ಮುಗಲರಿಂದ ಉಂಟಾದ ಪ್ರಬಲ ದಾಳಿಗಳು ಎರಡನೇ ಆದಿಲ್‌ಷಾನ ಅಧೀನದಲ್ಲಿ ವಿಜಾಪುರದ ಭದ್ರ ಸೈನಿಕ ಆಡಳಿತಕ್ಕೆ ದಾರಿ ಮಾಡಿಕೊಟ್ಟಿತು ಎಂದು ತಿಳಿದು ಬರುತ್ತದೆ. ಈತನ ಆಳ್ವಿಕೆಯಲ್ಲಿ (೧೬೫೬-೭೨) ಸ್ವಲ್ಪಮಟ್ಟಿಗೆ ರಾಜಕೀಯ ಸ್ಥಿರತೆಯನ್ನು ಸ್ಥಾಪಿಸಲಾಯಿತು. ಆದರೆ ೧೬೭೨ರಲ್ಲಿ ಎರಡನೆಯ ಆದಿಲ್ ಷಾ ನಿಧನನಾದ ಮೇಲೆ ಅಧಿಕಾರಕ್ಕೆ ಬಂದ ಸಿಕಂದರ್ ತನ್ನ ಅಪ್ರಾಪ್ತ ವಯಸ್ಸಿನಲ್ಲಿದ್ದುದರಿಂದ ಆಡಳಿತವನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ ವಿಜಾಪುರದ ಪತನವು ಪ್ರಾರಂಭವಾಯಿತು. ಈತನ ದುರ್ಬಲತೆಯ ಪರಿಣಾಮದಿಂದಾಗಿ ಸಾಮ್ರಾಜ್ಯದಾದ್ಯಂತ ಅನಾಯಕತ್ವ ಹಾಗೂ ಗಲಭೆಗಳು ಆರಂಭವಾದವು. ಈ ಸಮಯದ ಉಪಯೋಗವನ್ನು ಪಡೆದು ಮುಗಲರ ದಖನ್ನಿನ ರಾಜ್ಯಪಾಲನಾಗಿದ್ದ ಬಹದ್ದೂರ್ ಖಾನನು ತನ್ನ ಪ್ರಬಲ ಸೇನೆಯ ಸಹಾಯದಿಂದ ವಿಜಾಪುರದ ಹಲವಾರು ಪ್ರಾಂತ್ಯಗಳನ್ನು ಹಾಗೂ ಗುಲಬರ್ಗಾವನ್ನು ೧೬೭೭ರಲ್ಲಿ ತನ್ನ ವಶಕ್ಕೆ ತೆಗೆದುಕೊಂಡನು. ಗುಲಬರ್ಗಾ ಜಿಲ್ಲೆಯ ದಕ್ಷಿಣದ ಭಾಗಗಳಾದ ಸುರಪುರ, ಶಾಹಪುರ, ಸಗರನಾಡು ಮುಂತಾದ ಪ್ರದೇಶಗಳು ಮೊದಲು ವಿಜಯನಗರದ ಮಾಂಡಳಿಕರಾಗಿದ್ದು ನಂತರ ಸ್ವತಂತ್ರ್ಯವಾಗಿದ್ದ ಸುರಪುರದ (ಬೇಡರ) ನಾಯಕರ ಆಳ್ವಿಕೆಯಲ್ಲಿದ್ದವು. ವಿಜಾಪುರವು ಮುಗಲರ ವಶವಾದ ಮೇಲೆ ಸುರಪುರದ ನಾಯಕರು ಸ್ವಂತಂತ್ರರಾದುದು ಮುಗಲ್ ರಾಜ್ಯಕ್ಕೆ ಕಸಿವಿಸಿಯುಂಟಾಯಿತು. ಔರಂಗಜೇಬನ ದಖನ್ನಿನ ವಿಸ್ತರಣಾ ತತ್ವಕ್ಕೆ ಸುರಪುರದ ನಾಯಕರು ನಿರಂತರ ಸಮಸ್ಯೆಯಾಗಿದ್ದರು. ಈತನ ಪ್ರತಿಯೊಂದು ಪ್ರಯತ್ನದಲ್ಲಿ ಮುಗಲ್ ಸೈನ್ಯವು ಪರಾಕ್ರಮ ಹೋರಾಟ ತಂತ್ರದ ಪ್ರಯೋಗವನ್ನು ಹೂಡಿ ಕೊನೆಗೆ ನಾಯಕರು ಮುಗಲ್‌ರೊಂದಿಗೆ ಸಂಧಾನ ಮಾಡಿಕೊಳ್ಳಲೇ ಬೇಕಾಯಿತು. ಇದರೊಂದಿಗೆ ಗುಲಬರ್ಗಾ ಜಿಲ್ಲೆಯ ಎಲ್ಲಾ ಪ್ರಾಂತ್ಯಗಳೂ ಮುಗಲರ ಹತೋಟಿಗೆ ಒಳಪಟ್ಟವು. ಇದರ ಪರಿಣಾಮವಾಗಿ ಸುರಪುರದ ನಾಯಕರು ಮುಗಲರ ಮಾಂಡಳಿಕರಾದರು. ಗುಲಬರ್ಗಾ ಜಿಲ್ಲೆಯ ದಕ್ಷಿಣದ ಪ್ರಾಂತ್ಯಗಳಲ್ಲಿ ಆಡಳಿತ ಹತೋಟಿಯನ್ನು ನಿರಂತರವಾಗಿ ಪಡೆಯುವಂತಾಯಿತು. ಒಟ್ಟು ವಸೂಲಾದ ಕಂದಾಯದಲ್ಲಿ ಸುರಪುರದ ನಾಯಕರಿಗೆ ಶೇಕಡಾ ೧೦ನೇ ಭಾಗವು ಲಭ್ಯವಾಗುತ್ತಿತ್ತೆಂದು ತಿಳಿದುಬರುತ್ತದೆ.

### ಹೈದರಾಬಾದ್ ನಿಜಾಮ ವಂಶದ ಉದಯ (೧೭೨೪-೧೯೪೮)

'ನಿಜಾಮ' ಅಥವಾ 'ಅಸಫ್ ಜಾಹಿ' ವಂಶದ ಸ್ಥಾಪನೆಯನ್ನು ಔರಂಗಜೇಬನ ನೆಚ್ಚಿನ ದಂಡನಾಯಕನಾಗಿ ಸೇವೆ ಸಲ್ಲಿಸಿದ್ದ ನಿಜಾಮ ಉಲ್ ಮುಲ್ಕ್ ಅಸಫ್ ಜಾಹ ೧೭೧೩ರಲ್ಲಿ ಮಾಡಿದನೆಂದು ಹೇಳಲಾಗುತ್ತದೆ. ಅಸಫ್‌ಜಾಹಿ ಔರಂಗಜೇಬನ ನಿಧನನಾದ ತರುವಾಯ ೧೭೧೩ರಲ್ಲಿ ದಖನ್ನಿನ ಸುಬೇದಾರನಾಗಿ ನೇಮಕಗೊಂಡ ಮೇಲೆ ದಕ್ಷಿಣ ಭಾಗದ ಆಡಳಿತ ಹತೋಟಿಯಲ್ಲಿ ಹಲವು ಪರಿವರ್ತನೆಗಳು ಗೋಚರವಾದವು. ಈತನ್ನು ೧೭೧೯ರಲ್ಲಿ ಮಾಳ್ವದ ಸುಬೇದಾರನಾಗಿ ನೇಮಕ ಮಾಡಲಾಯಿತು. ಆದರೆ, ಸಯ್ಯದ್ ಸಹೋದರರಿಗೆ ದೆಹಲಿಯ ದರ್ಬಾರಿನಲ್ಲಿ ಪ್ರಭಾವವಿದ್ದ ಕಾರಣ ಸಯ್ಯದ್ ದಿಲಾವರ್‌ನನ್ನು ಸುಬೇದಾರನಾಗಿ ನೇಮಕ ಮಾಡಿಕೊಂಡರೆಂದು ವ್ಯಕ್ತವಾಗುತ್ತದೆ. ಇದೇ ಸಮಯದಲ್ಲಿ ಜಾಹಿಗೆ ಬದಲಾಗಿ ಬಂದಿದ್ದ ದಖನ್ನಿನ ಸುಬೇದಾರನಿಗೆ ನಿಜಾಮ ಉಲ್ ಮುಲ್ಕ್‌ನ ಮೇಲೆ ದಾಳಿ ಮಾಡಿ ಉತ್ತರ ಭಾರತದತ್ತ ಹಿಮ್ಮೆಟ್ಟಿಸಲು ದೆಹಲಿಯ ದರ್ಬಾರ್ ಆಜ್ಞೆ ಹೊರಡಿಸಿತು. ಈ ತಂತ್ರದ ದುರಾಲೋಚನೆಯನ್ನು ಅರಿತುಕೊಂಡ ನಿಜಾಮನು ೧೭೨೦ರಲ್ಲಿ ದಿಲಾವರ್‌ನನ್ನು ರತನ್‌ಪುರ ಯುದ್ಧದಲ್ಲಿ ಪರಾಭವಗೊಳಿಸಿದನು. ಅನಂತರ ಈತನು ವಿಜಾಪುರವನ್ನು ಪ್ರವೇಶಿಸಿ ದಖನ್ನಿನ ಸುಬೇದಾರನನ್ನು ಸೋಲಿಸಿದನು. ದೆಹಲಿಯಲ್ಲೂ ಈ ಸಮಯಕ್ಕೆ ಸಯ್ಯದ್ ಸಹೋದರರ ಪ್ರಭಾವವೂ ಕುಂಠಿತವಾಗಿತ್ತು. ನಿಜಾಮ ಉಲ್ ಮುಲ್ಕ್‌ನನ್ನು ದೆಹಲಿಯಲ್ಲಿ ವಜೀರ್ ಆಗಿ ನೇಮಕ ಮಾಡಲಾಯಿತು. ಆದರೆ ಆತನಿಗೆ ಆ ಹುದ್ದೆಯಲ್ಲಿ ಆಸಕ್ತಿ ಇಲ್ಲದಿದ್ದ ಕಾರಣ ಅದಕ್ಕೆ ರಾಜೀನಾಮೆ ನೀಡಿ ಸ್ವತಂತ್ರವಾಗಿ ದಖನ್ನಿಗೆ ೧೭೨೪ರಲ್ಲಿ ಹಿಂದಿರುಗಿದನು. ವಾಪಸ್ ಬಂದ ಕೆಲವೇ ಸಮಯದಲ್ಲಿ ಮುಬಾರಿಜ್ ಖಾನನನ್ನು ದಖನ್ನಿನಲ್ಲಿ ಸುಬೇದಾರನಾಗಿ

ನೇಮಿಸಿ ದಕ್ಷಿಣದ ಮುಗಲ್ ಪ್ರಾಂತ್ಯಗಳನ್ನು ಆತನ ಹತೋಟಿಗೆ ನೀಡಿದನು. ನಿಜಾಮನು ಕ್ರಮವಾಗಿ ಮುಂದುವರೆದು ಅಕ್ಟೋಬರ್ ೧೭೨೪ರಲ್ಲಿ ಹೈದರಾಬಾದ್‌ನ್ನು ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿಯೇ ನೆಲೆಸಿದನು. ಹೈದರಾಬಾದಿಗೆ ಬಂದು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡ ನಿಜಾಮ ಉಲ್ ಮುಲ್ಕ್‌ನು ತನ್ನ ಸ್ವಾಯತ್ತ ಆಡಳಿತವನ್ನು ಕ್ರಮವಾಗಿ ಬಲಪಡಿಸಿಕೊಂಡನೆಂದು ತಿಳಿದು ಬರುತ್ತದೆ. ಈತನಿಗೆ 'ಅಸಫ್‌ಜಾಹ' ಎಂಬ ಬಿರುದು ನಂತರ ನೀಡಲಾಯಿತು. ದೆಹಲಿಯಲ್ಲಿಯೂ ಈ ಸಂದರ್ಭದಲ್ಲಿ ಸಿಂಹಾಸನಕ್ಕಾಗಿ ಅಸ್ಥಿರತೆಯ ಕಲಹಗಳು ಪ್ರಾರಂಭವಾಗಿದ್ದುದರಿಂದ ಈತನ ರಾಜ್ಯದ ಪ್ರಗತಿಗೆ ಯಾವುದೇ ರೀತಿಯ ಅಡಚಣೆಗಳೂ ಉಂಟಾಗಲಿಲ್ಲ. ಆದರೆ, ಆತನಿಗಿದ್ದ ಒಂದು ಪ್ರಬಲ ವಿರೋಧವೆಂದರೆ ಮರಾಠರು ಅನುಸರಿಸಿದ ವಿಸ್ತರಣಾ ನೀತಿಯೇ ಆಗಿತ್ತು. ಆತನು ತನ್ನ ರಾಜ್ಯ ನಿರ್ಬಂಧ ನೀತಿಯಿಂದ ಸುಲಭವಾಗಿ ಮರಾಠರನ್ನು ಹತೋಟಿಯಲ್ಲಿಟ್ಟಿದ್ದನು. ಅಸಫಜಾಹ ೧೭೪೮ರಲ್ಲಿ ಮರಣ ಹೊಂದುವ ವೇಳೆಗೆ ದಖನ್ನಿನಲ್ಲಿ ತನ್ನ ಸಾಮ್ರಾಜ್ಯದ ಆಳ್ವಿಕೆಯನ್ನು ಸುಭದ್ರಗೊಳಿಸಿಕೊಂಡಿದ್ದನು. ಈತನ ಜೀವಿತ ಸಮಯದಲ್ಲಿ ಮರಾಠರು ಇವನಿಂದ ಚೌತ್ ತೆರಿಗೆಯನ್ನು ವಸೂಲು ಮಾಡುತ್ತಿದ್ದರೆಂದು ವ್ಯಕ್ತವಾಗುತ್ತದೆ. ಗುಲಬರ್ಗಾ ಜಿಲ್ಲೆಯು ಈ ವೇಳೆಗಾಗಲೇ ಮೂವರು ರಾಜಕೀಯ ಶಕ್ತಿಗಳ ಹತೋಟಿಗಳಾದ ನಿಜಾಮನ ಹಿಡಿತದಲ್ಲಿ ಜಿಲ್ಲೆಯ ಅನೇಕ ಭಾಗಗಳಿದ್ದವು. ಅಪರೋಕ್ಷವಾಗಿ ಮರಾಠರಿಗೆ 'ಚೌತ್' ಸಲ್ಲಿಸುತ್ತಿದ್ದುದರಿಂದ ಅವರ ಹಿಡಿತದಲ್ಲಿದ್ದ ಭಾಗಗಳು ಹಾಗೂ ಸುರಪುರದ ನಾಯಕರಿಗೆ (ರಾಜ್ಯಕ್ಕೆ) ಒಳಪಟ್ಟಿದ್ದ ಭಾಗಗಳಿಂದ ಕಂದಾಯದ ಶೇಕಡಾ ೧/೧೦ ನೇ ಭಾಗವನ್ನು 'ದಹಿಜಾ' ರೂಪದಲ್ಲಿ ಸಲ್ಲಿಸಬೇಕಾದುದು ನಿಯಮವಾಗಿ ಮುಂದುವರೆಯಬೇಕಾಯಿತು. ಅಸಫ್ ಜಾಹನು ೧೭೪೮ರಲ್ಲಿ ನಿಧನನಾದ ಮೇಲೆ ಹೈದರಾಬಾದಿನಲ್ಲಿ ನಾಸಿರ್ ಜಂಗ್ ಮತ್ತು ಅವನ ಅಕ್ಕನ ಮಗ ಮುಸಾಫಿರ್ ಜಂಗ್ ಇಬ್ಬರ ನಡುವೆ ಸಿಂಹಾಸನಕ್ಕಾಗಿ ಕಲಹವು ಪ್ರಾರಂಭವಾಯಿತು. ಈ ವೇಳೆಗಾಗಲೇ ದಕ್ಷಿಣ ಭಾರತದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದ ಫ್ರೆಂಚರು ಮತ್ತು ಬ್ರಿಟೀಷರು ಈ ಸಿಂಹಾಸನ ಕಲಹದಲ್ಲಿ ಪರ-ವಿರೋಧ ಪಕ್ಷಗಳನ್ನು ವಹಿಸಿ ಪ್ರವೇಶ ಮಾಡಿದವು. ಫ್ರಾನ್ಸ್ ದೇಶದ ರಾಜ್ಯಪಾಲನಾಗಿದ್ದ ಡೂಪ್ಲೆ ಮುಸಾಫಿರ್ ಜಂಗನಿಗೆ ಬೆಂಬಲವಾಗಿ ಮತ್ತು ಬ್ರಿಟೀಷರು ನಾಸಿರ್ ಜಂಗನಿಗೆ ಬೆಂಬಲವಾಗಿ ನಿಂತರು. ಈ ಬೆಂಬಲಗಳು ಮೂರನೇ ಕರ್ನಾಟಕ ಯುದ್ಧದ ಪ್ರತಿಧ್ವನಿಯಾಗಿತ್ತೆಂದು ಗೋಚರವಾಗುತ್ತದೆ. ಕೊನೆಗೆ ಬ್ರಿಟೀಷ್ ಸೈನ್ಯವು ಬೆಂಬಲ ನೀಡಿದ ಕಾರಣ ನಾಸಿರ್ ಜಂಗನು ೧೭೫೦ರಲ್ಲಿ ಹೈದರಾಬಾದಿನ ನಿಜಾಮ ಸ್ಥಾನವನ್ನು ಹೊಂದಿದನು. ಆದರೆ, ಮುಸಾಫಿರ್ ಜಂಗನನ್ನು ಗಿಂಜಿ ಕೋಟೆಯಿಂದ ತೆರವು ಮಾಡಿಸಲು ಮತ್ತೊಮ್ಮೆ ನಾಸಿರ್ ಜಂಗನು ದಾಳಿ ಮಾಡಿದಾಗ ಭೀಕರ ಹೋರಾಟವಾಗಿ ನಾಸಿರ್ ಜಂಗನು ಯುದ್ಧ ಭೂಮಿಯಲ್ಲೇ ನಿಧನನಾದನು. ಮುಸಾಫಿರ್ ಜಂಗನು ನಿಜಾಮನೆಂದು ಘೋಷಿಸಿಕೊಂಡನು. ಈತನು ೧೭೫೧ರಲ್ಲಿ ನಿಧನನಾಗಲು ನಾಸಿರ್ ಜಂಗನ ತಮ್ಮನಾದ ಸಲಬತ್ ಜಂಗನು ಹೈದರಾಬಾದಿನ ನಿಜಾಮನೆಂದು ಪಟ್ಟಕ್ಕೆ ಬಂದನು. ಈತನು ಫ್ರೆಂಚ್ ದಂಡನಾಯಕ ಬುಸ್ಸಿಯ ಸಹಾಯದಿಂದ ಈ ಪಟ್ಟವನ್ನು ಗಳಿಸಿದ್ದರಿಂದ ಸಾಮ್ರಾಜ್ಯವು ಫ್ರೆಂಚರ ಪೂರ್ಣ ಆಡಳಿತ ಹತೋಟಿಗೆ ಒಳಪಡುವಂತಾಯಿತು. ಕೊನೆಗೆ ೧೭೫೯ರಲ್ಲಿ ಈತನ ಇನ್ನೊಬ್ಬ ಸಹೋದರನಾದ ನಿಜಾಮ ಅಲಿಯು ಇವನ ವಿರುದ್ಧ ಬಂಡೇಳಲು ಸಲಬತ್ ಜಂಗನು ಬ್ರಿಟೀಷರೊಡನೆ ತಕ್ಷಣ ಸಂಧಾನ ಮಾಡಿಕೊಂಡನು. ಇದೇ ಮುಂದೇ ಇಂಗ್ಲೀಷರ ಪ್ರಭಾವವು ಹೈದರಾಬಾದ್‌ನ ಸಂಸ್ಥಾನಗಳ ಮೇಲೆ ಉಂಟಾಗುವುದಕ್ಕೆ ಕಾರಣವಾಯಿತು. ನಿಜಾಮನು, ೧೭೭೭ರಲ್ಲಿ ಬ್ರಿಟೀಷರಿಗೆ ಸೈನಿಕ ನೆರವನ್ನು ಯಾವ ಸಮಯದಲ್ಲಿಯಾದರೂ ಒದಗಿಸುವುದಾಗಿ ಒಪ್ಪಂದಕ್ಕೆ ಸಹಿ ಹಾಕಿದನು. ಮುಂದೇ ಹೈದರಾಬಾದ್ ನಿಜಾಮನ ಸಂಸ್ಥಾನವು ಬ್ರಿಟೀಷರ ಅಧೀನದಲ್ಲೇ ಮುಂದುವರೆಯುವಂತಾಯಿತು. ನಿಜಾಮ್ ಅಲಿಯು ೧೮೦೩ರಲ್ಲಿ ನಿಧನನಾಗಲೂ ಅವನ ಮಗನಾದ ಸಿಕೆಂದರ್ ಜಾಹ ನಿಜಾಮನ ಪಟ್ಟಕ್ಕೆ ಬಂದನು. ಈತನು ವಿಷಯಾಲೋಲುಪನಾಗಿದ್ದ ಕಾರಣ ಆಡಳಿತವನ್ನು ಅವನ ಪ್ರಧಾನ ಮಂತ್ರಿಯಾಗಿದ್ದ ರಾಜ ಚಂದೂಲಾಲ್ ನಿರ್ವಹಿಸುತ್ತಿದ್ದನು. ನಿಜಾಮ ಸಿಕೆಂದರ್ ಜಾಹನು ೧೮೨೯ರಲ್ಲಿ ನಿಧನನಾಗಲು ಅವನ ಮಗನಾದ ನಾಸಿರ್ ಉದ್ ದೌಲನು ನಿಜಾಮನ ಪಟ್ಟಕ್ಕೆ ಬಂದನು. ಈತನೊಬ್ಬ ವಿಶಾಲ ಮನೋಭಾವದ ರಾಜನಾಗಿದ್ದು ಒಳ್ಳೆಯ ಜನಪ್ರಿಯತೆ ಗಳಿಸಿದನು. ಈತನಿಗೆ ಆಡಳಿತದಲ್ಲಿ ಸಹಾಯಕನಾಗಿದ್ದ ಪ್ರಧಾನಮಂತ್ರಿ ಮೊದಲನೇ ಸಾಲರ್ ಜಂಗನು ತುಂಬಾ ಜನಪ್ರಿಯನಾಗಿದ್ದನು. ಇದೇ ಸಮಯದಲ್ಲಿ ನಿಜಾಮನು ಬ್ರಿಟೀಷರೊಡನೆ ನಿರಂತರ ಮೈತ್ರಿಯನ್ನು ಕಾಪಾಡಿಕೊಳ್ಳುವ ಹೊಸ ಕರಾರಿಗೆ ಸಹಿ ಮಾಡಿದನು. ಇದಕ್ಕೆ ಪ್ರತಿಯಾಗಿ ಬ್ರಿಟೀಷರು ನಿಜಾಮನನ್ನು ಕೇವಲ ಯುದ್ಧ ಸಮಯದ ಸೈನಿಕ ಪ್ರತಿನಿಧಿ ಎಂಬ ನಿರ್ಬಂಧವನ್ನು ತೆಗೆದು ತಮ್ಮದೇ ಸೈನಿಕ ತುಕಡಿಯನ್ನು ನಿಜಾಮನ ನೆರವಿಗೆ ನೆಲೆಗೊಳಿಸಿದರು. ಹಾಗೂ

ಈ ಮೈತ್ರಿಕೂಟವು ಆತ್ಮೀಯವಾಗುವಂಥ ಪರಿಸ್ಥಿತಿಯನ್ನು ನಿರ್ಮಿಸಿದರು. ನಿಜಾಮ್ ನಾಸಿರ್ ಉದ್ ದೌಲ ೧೮೫೭ರಲ್ಲಿ ನಿಧನನಾದನು. ಈತನ ಉತ್ತರಾಧಿಕಾರಿಯಾಗಿ ನೇಮಕಗೊಂಡ ಅಫಸಲ್ ಉದ್ ದೌಲನು ಬ್ರಿಟೀಷರೊಡನೆ ಆತ್ಮೀಯ ಬಾಂಧವ್ಯವನ್ನು ಮುಂದುವರೆಸಿದನು.

ಅಸಫಜಾಹೀ ಅರಸರು ಮೊದಲನೆಯ ಸ್ವಾತಂತ್ರ್ಯ ಸಂಗ್ರಾಮದ ನಂತರ ತಕ್ಕಮಟ್ಟಿಗೆ ಸ್ವಾಯತ್ತತೆ ಹೊಂದಿದ್ದ ಸಂಸ್ಥಾನಿಕರಾಗಿ ಮುಂದುವರೆದರೆಂದೂ ಆಡಳಿತ, ಕಂದಾಯ, ಶಿಕ್ಷಣ ಮುಂತಾದ ರಂಗಗಳಲ್ಲಿ ಬ್ರಿಟೀಷರ ಧೋರಣೆಗಳನ್ನೇ ಮುಂದುವರೆಸಿದರು. ಅಫಜಲ್ ಉದ್ ದೌಲ (೧೮೫೭-೧೮೬೯) ರಾಜಕೀಯ ನೀತಿಯಲ್ಲಿ ತನ್ನ ತಂದೆಯ ಬ್ರಿಟೀಷರ ಅನುಯಾಯಿ ತತ್ವಗಳನ್ನೇ ಮುಂದುವರೆಸಿದನು. ೧೮೫೭-೫೮ರಲ್ಲಿ ಸಂಭವಿಸಿದ ಭಾರತದ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದೆದುರು ಬ್ರಿಟೀಷರು ತಲ್ಲಣಿಸುತ್ತಿದ್ದಾಗಲೂ ನಿಜಾಮ ಮತ್ತು ಅವನ ಪ್ರಧಾನ ಸಾಲಾರ್ ಜಂಗ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಈತನ ಈ ಉಪಕಾರಕ್ಕಾಗಿ ಬ್ರಿಟೀಷ್ ಸರ್ಕಾರ ನಿಜಾಮರೊಂದಿಗೆ ಹೊಸ ಒಪ್ಪಂದವನ್ನು ಮಾಡಿಕೊಂಡು ನಿಜಾಮರಿಂದ ತೆಗೆದುಕೊಂಡಿದ್ದ ಉಸ್ಮಾನಾಬಾದ್ ಮತ್ತು ರಾಯಚೂರು ಪ್ರದೇಶಗಳನ್ನು ನಿಜಾಮರಿಗೆ ಹಿಂತಿರುಗಿಸಿದರು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ನಿಜಾಮರ ಆಳ್ವಿಕೆಯಲ್ಲಿಯೇ ಮುಂದುವರೆದವು. ಅಫಜಲ್ ಉದ್ ದೌಲ ೧೮೬೯ರಲ್ಲಿ ನಿಧನರಾದ ಮೇಲೆ ಮೀರ್ ಮಹಬೂಬ್ ಅಲಿಖಾನ್ ನಿಜಾಮರಾದರು. ಮೀರ್ ಮಹಬೂಬ್ ಅಲಿ ಖಾನ್ (೧೮೬೯-೧೯೧೧) ಪಟ್ಟಕ್ಕೆ ಬಂದಾಗ ಅವನು ಅಪ್ರಾಪ್ತ ವಯಸ್ಕನಾಗಿದ್ದನು. ಆಗ ಆಡಳಿತವನ್ನು ಮೊದಲನೇ ಸಾಲಾರ ಜಂಗ್ ಹಾಗೂ ನವಾಬ್ ಶಮ್ಸುಲ್ಲಾ ಉಮ್ರಾ ಇಬ್ಬರೂ ನೋಡಿಕೊಳ್ಳುತ್ತಿದ್ದರು. ಈ ವ್ಯವಸ್ಥೆಯು ೧೮೮೪ರವರೆಗೂ ನಡೆದು ಆ ವರ್ಷ ನಿಜಾಮರೇ ಅಧಿಕಾರ ವಹಿಸಿಕೊಂಡರು. ೧೮೯೨ರಲ್ಲಿ ಕಾನೂನ ಚ-ಇ-ಮುಬಾರಕ್ (ಪವಿತ್ರ ಕಾಯಿದೆ) ರೂಢಿಯಲ್ಲಿ ಬಂದಿತು. ಅದು ಆಡಳಿತ ವರ್ಗದವರ ಕೈಪಿಡಿಯಾಯಿತು. ಮರಾಠವಾಡಾ ಸುಬೆಯಲ್ಲಿದ್ದ ಗುಲಬರ್ಗಾ ವಿಭಾಗದಲ್ಲಿ ಗುಲಬರ್ಗಾ, ರಾಯಚೂರು, ಲಿಂಗಸಗೂರು ಮತ್ತು ಉಸ್ಮಾನಾಬಾದ್ ಜಿಲ್ಲೆಗಳಿದ್ದವು. ಲಿಂಗಸುಗೂರನ್ನು ವಿಭಜಿಸಿ ಗುಲಬರ್ಗಾ, ರಾಯಚೂರುಗಳಿಗೆ ಸೇರಿಸಲಾಯಿತು. ಬೀದರನ್ನು ಗುಲಬರ್ಗಾಕ್ಕೆ ಸೇರಿಸಲಾಯಿತು. ಅಂದು (೧೮೯೨) ಗುಲಬರ್ಗಾ ವಿಭಾಗದಲ್ಲಿ ೩೨ ನಗರಗಳು, ೫,೬೬೨ ಗ್ರಾಮಗಳು ಇದ್ದವು. ಇವರ ಕಾಲದಲ್ಲಿ ಅನೇಕ ಆಡಳಿತ ಬದಲಾವಣೆಗಳು ಜಾರಿಗೆ ಬಂದವು. ೧೮೯೩ರಲ್ಲಿ ನಿಜಾಮರ ನೇತೃತ್ವದಲ್ಲಿ ಮಂತ್ರಿಮಂಡಲ ಮತ್ತು ನ್ಯಾಯಾಂಗ ಸಭೆಗಳು ಸ್ಥಾಪಿತವಾದವು.

ಮಹಬೂಬ್ ಅಲಿ ಖಾನ್‌ರ ಮರಣಾನಂತರ (೧೯೧೧) ಅವರ ಮಗ ಮೀರ್ ಉಸ್ಮಾನ್ ಅಲಿ ಖಾನ್ ನಿಜಾಮರಾಗಿ ನೇಮಕಗೊಂಡರು. ಮೀರ್ ಉಸ್ಮಾದ್ ಅಲಿ ಖಾನ್ ಅವರು (೧೯೧೧-೧೯೪೮) ಮೂರನೇ ಸಾಲಾರ ಜಂಗ್ ೧೯೧೪ರಲ್ಲಿ ರಾಜೀನಾಮೆಯಿತ್ತಾಗ ಆಡಳಿತವನ್ನು ಸ್ವತಂತ್ರವಾಗಿ ನೋಡಿಕೊಳ್ಳುವಂತಾಯಿತು. ಪ್ರಥಮ ಮಹಾಯುದ್ಧದ ಕಾಲದಲ್ಲಿ ಬ್ರಿಟೀಷರಿಗೆ ಆರ್ಥಿಕ ನೆರವು ಮತ್ತು ಸಹಾಯವನ್ನು ಇವರು ನೀಡಿದ್ದರು. ಹೈದರಾಬಾದ್ ಸಂಸ್ಥಾನದ ಆಡಳಿತ ಸಿಬ್ಬಂದಿಯನ್ನು ಪೂರ್ಣವಾಗಿ ಭಾರತೀಕರಣ ಮಾಡಿದ್ದು ಇವರ ಪ್ರಮುಖ ಸಾಧನೆಯಾಗಿದೆ. ಎಲ್ಲಾ ಸರಕಾರಿ ಹುದ್ದೆಗಳಲ್ಲೂ ಭಾರತೀಯರದೇ, ಅದರಲ್ಲೂ ಹೆಚ್ಚು ಮಟ್ಟಿಗೆ ಹೈದರಾಬಾದ್‌ನವರೇ ನಿರ್ವಹಿಸುವ ವ್ಯವಸ್ಥೆ ಮಾಡಿದುದು ಪ್ರಶಂಸನೀಯವಾಗಿದೆ. ಇವರ ಕಾಲದಲ್ಲಿ ರೈತವಾರಿ ಪದ್ಧತಿಯು ಸಾಮಾನ್ಯವಾಗಿತ್ತು. ೧೮೭೦ರವರೆಗೂ ಪಟೇಲ ಮತ್ತು ಪಟವಾರಿಗಳಿಗೆ ಇನಾಮ್ ಗ್ರಾಮಗಳನ್ನು ಕೊಡಲಾಗುತ್ತಿತ್ತು. ಬರಗಾಲದ ಸಮಯದಲ್ಲಿ ತೆರಿಗೆ ವಸೂಲಿ ತಡೆ ಹಿಡಿಯಲಾಗುತ್ತಿತ್ತು. ನಿಜಾಮರ ರಾಜ್ಯದಲ್ಲಿ ಇದ್ದ ಕನ್ನಡಿಗರ ಸಂಖ್ಯೆ ಕೇವಲ ಶೇ. ೧೪ರಷ್ಟು ಇತ್ತು. ೧೮ನೇ ಶತಮಾನದಲ್ಲಿ ಕಂದಾಯ ವಸೂಲಿಯನ್ನು ಬ್ಯಾಂಕರುಗಳಿಗೆ ಮತ್ತು ಪಠಾಣ ಸೈನಿಕರಿಗೆ ಗೇಣಿಗೆ ವಹಿಸಿಕೊಡುವ ಪದ್ಧತಿ ರೂಢಿಯಲ್ಲಿ ಬಂತು. ಮುಂದೆ ೧೯ನೇ ಶತಮಾನದಲ್ಲಿ ಸಾಲಾರ ಜಂಗ್ ಅವರು ಇದನ್ನು ರದ್ದುಪಡಿಸಿದರು. ಇದು ಜನಪ್ರಿಯ ಸುಧಾರಣೆಯಾಗಿತ್ತು. ನಂತರದ ದಿನಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ ಹೈದರಾಬಾದ್ ಸಂಸ್ಥಾನಾದ್ಯಂತ ವ್ಯಾಪಕವಾಗಿ ಹರಡಿದಾಗ ನಿಜಾಮರು ಬ್ರಿಟೀಷರ ಬೆಂಬಲಿಗರಾಗಿದ್ದ ಕಾರಣ ನಿಷ್ಕ್ರಿಯರಾದರು. ದಿ. ೧೫-೮-೧೯೪೭ರಂದು ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಯಾದಾಗ ಹೈದರಾಬಾದ್ ಸಂಸ್ಥಾನದಲ್ಲಿ ರಜಾಕರ ದೌರ್ಜನ್ಯ ಹಾಗೂ ಅವರ ವಿರುದ್ಧ ಚಳುವಳಿಗಳು ಆರಂಭವಾದಾಗ ನಿಜಾಮರ ಆಡಳಿತದಲ್ಲಿ ಅಭದ್ರತೆಯುಂಟಾಯಿತು. ಕೊನೆಗೆ ೧೩-೯-೧೯೪೮ರಂದು

ಭಾರತ ಸರಕಾರ ನಿಜಾಮರ ದುರಾಡಳಿತದ ವಿರುದ್ಧ ಪೋಲೀಸ್ ಕಾರ್ಯಾಚರಣೆ ಆರಂಭ ಮಾಡಿದಾಗ ಅನ್ಯ ಮಾರ್ಗವಿಲ್ಲದೇ ಮೀರ್ ಉಸ್ಮಾನ್ ಅಲಿ ಖಾನ್ ಶರಣಾಗತರಾಗಿ ಭಾರತದ ಒಕ್ಕೂಟವನ್ನು ಸೇರಲು ಅನುವು ಮಾಡಿಕೊಟ್ಟರು. ಇದರ ಜೊತೆಗೆ ದೀರ್ಘವಾದ ಅಸಫ್ ಜಾಹೀ ವಂಶದ ಆಡಳಿತವು ೧೯೪೮ರಲ್ಲಿ ಅಂತ್ಯಗೊಂಡಿತು.

**ಸುರಪುರದ ನಾಯಕರು** (೧೬೩೬-೧೮೫೮)

ಸುರಪುರ ಸಂಸ್ಥಾನದ ಅರಸರು ಗೋಸಲ ವಂಶದವರೆಂದು ಕರೆಯುವುದು ರೂಢಿಯಲ್ಲಿದೆ. ಇವರು ಗೋವುಗಳನ್ನು ಸಂರಕ್ಷಿಸುತ್ತಿದ್ದುದರಿಂದ ಇವರಿಗೆ ಗೋಸಲ ವಂಶದವರೆಂದು ಕರೆಯಲಾಗುತ್ತಿತ್ತೆಂದು ಹೇಳಲಾಗುತ್ತಿದೆ. ಈ ವಂಶದ ಮೂಲಜರು ದಕ್ಷಿಣ ಭಾರತದಿಂದ ಬಂದವರೆಂದು ಐತಿಹ್ಯವಿರುವುದು ವ್ಯಕ್ತವಾಗುತ್ತದೆ. ಈ ವಂಶದ ಮೂಲಪುರುಷ ನರಸಿಂಹನಾಯಕ. ಈ ವಂಶದವನಾದ ಕಲ್ಲಪ್ಪನಾಯಕನು ಸಾರಂಗ ಕೊಳ್ಳದಿಂದ ತುಂಬಳ ಎಂಬ ಸ್ಥಳಕ್ಕೆ ಬಂದನೆಂದು ಪ್ರತೀತಿಯಿದೆ. ಕಲ್ಲಪ್ಪನಾಯಕನಿಗೆ 'ಬಸವಶಂಕರ' ಎಂಬ ಬಿರುದು ಇತ್ತೆಂದು ವ್ಯಕ್ತವಾಗುತ್ತದೆ. ತುಂಬಳದಿಂದ ಕಂಪಿಲಿ, ಗಂಗಾವತಿ, ತಾವರಗೇರಿಯ ಮಾರ್ಗದ ಮೂಲಕ ರಾಯಚೂರು ಬಳಿಯ ಮುದುಗಲ್ಲಿಗೆ ಕಲ್ಲಪ್ಪನಾಯಕನು ತನ್ನ ಮಕ್ಕಳೊಂದಿಗೆ ವಲಸೆ ಬಂದನೆಂದು ಪ್ರತೀತಿಯಿದೆ. ಆಗ ಮುದುಗಲ್ಲಿನ ಕಿಲ್ಲೇದಾರನಾದ ಮುಸ್ತಫಖಾನ್ ಎಂಬುವನು ಕಲ್ಲಪ್ಪನಾಯಕನನ್ನು ಮುದುಗಲ್ಲಿಗೆ ಬಂದು ನೆಲೆಸುವಂತೆ ಮಾಡಿದನೆಂಬ ಐತಿಹ್ಯವಿದೆ. ಈತನಿಗೆ ಏಳು ಜನ ಮಕ್ಕಳಿದ್ದು, ಇವರುಗಳ ಪೈಕಿ ಚಿನ್ನ ಹಣಮನಾಯಕನೆಂಬುವನು (ಕಲ್ಲಪ್ಪನಾಯಕನ ಏಳನೇ ಮಗ) ಕಕ್ಕೇರಿಯಲ್ಲಿ ನೆಲೆಸಿದನೆಂದು ಪ್ರತೀತಿಯಿದೆ. ಇವನ ವಂಶಜರೇ ಸುರಪುರ ಮತ್ತು ಗುಡಗುಂಟಿ ಸಂಸ್ಥಾನಗಳ ಮೂಲ ಪುರುಷರು. ಚಿನ್ನಹಣಮನಾಯಕನು ಪ್ರಬಲನಾಗಿದ್ದು ಕಕ್ಕೇರಿಯ ಅಧಿಕಾರಿಗಳನ್ನು ಕೊಂದು ಅದನ್ನು ತನ್ನ ಕೈವಶಮಾಡಿಕೊಂಡು ಕಂಚಿನ ಕರಡಕಲ್ಲಿನ ಮೇಲೆ ದಾಳಿ ಮಾಡಿ ಬಾದ್‌ಶಹನ ಅಮಲ್ದಾರರನ್ನು ಪರಾಭವಗೊಳಿಸಿದನೆಂದು ತಿಳಿದು ಬರುತ್ತದೆ. ಇದೇ ಸಮಯದಲ್ಲಿ ಬಹರಿ ಬಸಂತರಾಯ ಎಂಬ ಮುದುಗಲ್ಲಿನ ದೇಸಾಯಿಯು ಮುದುಗಲ್ಲನ್ನು ಬಿಟ್ಟು ದೇವಪುರದಲ್ಲಿದ್ದು ಸಗರನಾಡನ್ನು ಆಳುತ್ತಿದ್ದನು. ಚಿನ್ನಹಣಮನಾಯಕನು ಅವನ ಮೇಲೆ ದಾಳಿ ಮಾಡಿ, ಅವನನ್ನು ಕೊಂದು ಅವನ ಅಧಿಕಾರವನ್ನು ತಾನು ಕಸಿದುಕೊಂಡನೆಂದು ಹೇಳಲಾಗುತ್ತಿದೆ. ಈತನ ತರುವಾಯ ಸುಮಾರು ಆರು ತಲೆಮಾರುಗಳವರೆಗೆ ಯಾವುದೇ ವಿಶೇಷ ಅಥವಾ ಮಹತ್ವದ ಸಂಗತಿಗಳು ಕೇಳಿ ಬರುವುದಿಲ್ಲ.

ಈ ವಂಶದಲ್ಲಿ ಮುಂದೆ ಬರುವ ಪಾಮನಾಯಕನಿಗೆ ಜಕ್ಕಪ್ಪ ದೇಸಾಯಿ ಮತ್ತು ಹುಚ್ಚಸೋಮ ನಾಯಕರೆಂಬ ಇಬ್ಬರು ಗಂಡು ಮಕ್ಕಳಿದ್ದರು. ಇಬ್ಬರೂ ನಾಯಕರು ಕಕ್ಕೇರಿ ಮತ್ತು ಗಡ್ಡಿ ಎಂಬ ಎರಡು ಸ್ಥಳಗಳಲ್ಲಿರುತ್ತಿದ್ದರು. ಈ ಜಕ್ಕಪ್ಪನಾಯಕನ ಮಕ್ಕಳೇ ಗಡ್ಡಿಲಿಂಗನಾಯಕ ಮತ್ತು ಗಡ್ಡಿ ಪಿಡ್ಡನಾಯಕರು. ಮೊದಲನೆಯವನು ಗುಡಗುಂಟಿ ಸಂಸ್ಥಾನದ ಮೂಲಪುರುಷ ಮತ್ತು ಗಡ್ಡಿ ಪಿಡ್ಡನಾಯಕನೇ ಸುರಪುರ ಸಂಸ್ಥಾನದ ಮೂಲ ಪುರುಷನು. ಗುಡಗುಂಟಿ ಸಂಸ್ಥಾನದ ನಾಯಕರು ಶೈವಾಚಾರ ಸಂಪ್ರದಾಯದವರಾಗಿದ್ದರು. ಆದರೆ, ಸುರಪುರದ ಅರಸರು ಮಾತ್ರ ವೈಷ್ಣವ ಮತಾವಲಂಬಿಗಳಾಗಿರುವುದು ವ್ಯಕ್ತವಾಗುತ್ತದೆ. ಲಭ್ಯವಿರುವ ಮರಾಠಿ ಕೈಫಿಯತ್ತುಗಳಿಂದ ವಿಜಾಪುರದ ಮೂಲ ಬಾದಶಾಹ ಯೂಸುಫ್ ಆದಿಲ್ ಷಾ ಮತ್ತು ಕೃಷ್ಣದೇವರಾಯನ ಕಾಲದವರೆಗೆ ಈ ಅರಸರ ಮೂಲ ಪುರುಷರ ಸಂಬಂಧವಿದ್ದುದು ಕಂಡುಬರುತ್ತದೆ.

ಸುರಪುರದ ಗಡ್ಡಿಪಿಡ್ಡನಾಯಕನು (೧೬೩೯-೬೬) ಈ ವಂಶದ ಪ್ರಥಮ ಪ್ರಮುಖ ಅರಸು ಎಂದು ತಿಳಿದು ಬರುತ್ತದೆ. ಇವನ ಹೆಸರಹಿಂದಿರುವ 'ಗಡ್ಡಿ' ಎಂದರೆ ಕಕ್ಕೇರಿಯ ಸಮೀಪ ಕೃಷ್ಣಾ ನದಿಯು ಹರಿಗಡಿದು ಅನೇಕ ಸಣ್ಣಪುಟ್ಟ ಗಡ್ಡೆಗಳಾಗಿವೆ(ದ್ವೀಪ). ಒಂದೊಂದು ಗಡ್ಡಿಯ ಭೂ ವಿಸ್ತಾರ ಸುಮಾರು ೧.೫ ರಿಂದ ೨.೫ ಚದುರ ಕಿಲೋ ಮೀಟರ್‌ನಷ್ಟು ಇದೆ. ಇವುಗಳಲ್ಲಿ ಮುಖ್ಯವಾದುವೆಂದರೆ ನೀರದೇವರ ಗಡ್ಡಿ, ದೇವರಗಡ್ಡಿ, ಜಂಗಿನಗಡ್ಡಿ, ತೋಲಿನಗಡ್ಡಿ, ನೀಲಕಂಠರಾಯನ ಗಡ್ಡಿ, ಬೆಣಚಿನ ಗಡ್ಡಿ ಮುಂತಾದವುಗಳು. ಈ ಎಲ್ಲಾ ಗಡ್ಡಿಗಳೂ ಜಕ್ಕಪ್ಪ ದೇಸಾಯಿಯ ಅಧೀನಕ್ಕೊಳಪಟ್ಟಿದ್ದವು. ಲಿಂಗನಾಯಕ ಮತ್ತು ಪಿಡ್ಡನಾಯಕ ಇಬ್ಬರೂ ಈ ಗಡ್ಡಿಯೊಂದರಲ್ಲಿರುತ್ತಿದ್ದರು. ಆದುದರಿಂದ ಇವರಿಗೆ ಗಡ್ಡಿ ಲಿಂಗನಾಯಕ ಮತ್ತು ಗಡ್ಡಿಪಿಡ್ಡ ನಾಯಕನೆಂಬ ಹೆಸರು ರೂಢಿಗೆ ಬಂದಿದೆ ಎಂದು ನಂಬಲಾಗಿದೆ. ಗಡ್ಡಿಪಿಡ್ಡ ನಾಯಕನಿಗೆ ವಿಜಾಪುರದ ಬಾದಶಾಹರಿಂದ ಕೊಡಲ್ಪಟ್ಟಿರುವ ಒಟ್ಟು ಆರು ಫಾರಸಿ ಸನದ್‌ಗಳು ಲಭ್ಯವಿದೆಯೆಂದು ತಿಳಿದು ಬರುತ್ತದೆ. ಗಡ್ಡಿಪಿಡ್ಡ

ನಾಯಕನ ಮರಣದ ನಂತರ ಆತನ ಮಗನಾದ ಪಾಮನಾಯಕನಿಗೆ ತನ್ನ ಎಲ್ಲಾ ವೃತ್ತಿಯನ್ನು ಅಧಿಕಾರ ಕೊಟ್ಟಿರುವ ಸನದ್ ಕೂಡ ಲಭ್ಯವಿದೆ. ಇವುಗಳ ಆಧಾರದ ಮೇಲೆ ಗಡ್ಡಿಪಿಡ್ಡನಾಯಕನು ಸುಮಾರು ೧೬೩೯-೬೬ರವರೆಗೆ ಜೀವಿಸಿದ್ದನೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಪಿಡ್ಡ ನಾಯಕನು ೧೬೩೯ರಲ್ಲಿ ತಾಳಿಕೋಟೆ ಮತ್ತು ಕೊಡೇಕಲ್ಲಿನ ಸರದೇಶಗತಿಯನ್ನು ಇನಾಮು ಹಳ್ಳಿಗಳೊಡನೆ ಮೊಹಮ್ಮದ್ ಆದಿಲ್‌ಷಾನಿಂದ ಪಡೆದಿರಬೇಕೆಂದು ಕಪಟರಾಳ ಕೃಷ್ಣರಾಯರು ತಿಳಿಸುತ್ತಾರೆ. ಅಹಮ್ಮದ್‌ನಗರ ರಾಜ್ಯವನ್ನು ಮುಗಲರ ದವಡೆಯಿಂದ ಉಳಿಸಲು ವಿಜಾಪುರದ ಸುಲ್ತಾನನು ಮರಾಠ ರಾಜ್ಯದ ಶಹಜಿಗೆ ಎಷ್ಟು ಸಹಾಯ ಮಾಡಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ೧೬೩೫ರಲ್ಲಿ ವಿಜಾಪುರದ ಮೇಲೆ ಪಶ್ಚಿಮದಿಂದಲೂ, ಪೂರ್ವದಿಂದಲೂ ಮುಗಲ ಸರದಾರರು ಬೀದರ್, ಕಲ್ಯಾಣ, ಗುಲಬರ್ಗಾ (ಸುಲ್ತಾನಪುರ, ಹೀರಾಪುರ) ಮುಂತಾದ ಪ್ರಾಂತ್ಯಗಳನ್ನು ನಾಶ ಮಾಡುತ್ತ ವಿಜಾಪುರಕ್ಕೆ ಬಂದು ತಲುಪಿದರು. ವಿಜಾಪುರದ ದಕ್ಷಿಣ ಭಾಗದ ದೋಣಿ ನದಿಯ ಎಡಬಲ ಪ್ರದೇಶವನ್ನು ಲೂಟಿ ಮಾಡಲು ಪ್ರಾರಂಭಿಸಿದರು. ಇದೇ ಲೂಟಿಯ ಗೊಂದಲದ ಪ್ರಸಂಗದಲ್ಲಿ ಗಡ್ಡಿಪಿಡ್ಡನಾಯಕನ ಕೈಫಿಯತ್ತುಗಳಲ್ಲಿ "ಮುಗಲರನ್ನು ಶೆಳ್ಳಗಿ, ಹುಲಕಲ್ ಮುಂತಾದ ಸ್ಥಳಗಳಲ್ಲಿ ಸೋಲಿಸಿ"ರಬಹುದೆಂದು ಹೇಳಿಕೊಳ್ಳಲಾಗಿದೆ. ಈ ಸಂಕ್ರಮಣದ ಕಾಲವು ಮುಗಿದ ತಕ್ಷಣ ೧೬೩೬ರಲ್ಲಿ ದೆಹಲಿಯ ಷಹಜಹಾನ್ ಮತ್ತು ಮಹಮ್ಮದ್ ಆದಿಲ್‌ಷಾ ನಡುವೆ ಒಪ್ಪಂದವಾಯಿತು. ಇದಾದ ಎರಡು ವರ್ಷಗಳಲ್ಲಿಯೇ ಗಡ್ಡಿಪಿಡ್ಡನಾಯಕನಿಗೆ ಜಂಜಹೀನಖಾನನೆಂಬ ಬಿರುದುಳ್ಳ ಗೋಸಲರಾಯನ ಬಾಬತು ಪರಗಣೆ ತಾಳಿಕೋಟೆಯ ಸರದೇಸಗತಿ, ಕೊಡೇಕಲ್ ಸಮತಿನ ಮೌಜೆ ಹಗರಟಗಿ, ಸಮತ್ ಹೇರೂರಿನ ಮಾರನ ಭಾವಿಕಸಭೆ ಹಳ್ಳಿಗಳ ಮತ್ತು ಸಹಕೊಡೆಕಲ್ಲನ್ನು ೧೬೩೮-೩೯ರಲ್ಲಿ ವಿಜಾಪುರದ ಸುಲ್ತಾನನಿಂದ ಕೊಡಲ್ಪಟ್ಟಿದೆ ಎಂದು ತಿಳಿದು ಬರುತ್ತದೆ. ಈ ಎಲ್ಲಾ ಪ್ರಾಂತ್ಯಗಳೂ ದೋಣಿ ನದಿ ಪ್ರದೇಶದಲ್ಲಿವೆ. ಜಂಜಹೀನಖಾನನೆಂಬ ಬಿರುದುಳ್ಳ ಗೋಸಲರಾಯ ಎಂಬುವನು ಯಾರೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ.

ಗುಲಬರ್ಗಾ ಜಿಲ್ಲೆಯಲ್ಲಿ ಕೃಷ್ಣಾ ಮತ್ತು ಭೀಮಾ ನದಿಯ ನಡುವಿನ ಪ್ರದೇಶಕ್ಕೆ ಸಗರನಾಡು ಅಥವಾ ಸಗರಗಡ್ಡೆ ಎಂದು ಕರೆಯುವುದು ಸಾಮಾನ್ಯವಾಗಿ ರೂಢಿಯಲ್ಲಿದೆ. ಈಗಿನ ಶಹಾಪುರ ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಂತೆ ಉನ್ನತವಾದ ಬೆಟ್ಟದ ಮೇಲೆ ಒಂದು ದುರ್ಗವಿದೆ. ವಿಜಾಪುರ ರಾಜ್ಯದ ಪೂರ್ವಭಾಗವು ಮೂರು ಬಾದ್‌ಶಾಹಿ ರಾಜ್ಯಗಳ ಗಡಿನಾಡಾಗಿತ್ತು. ಗೋವಳಕೊಂಡೆಯ ರಾಜ್ಯವು ಮಳಖೇಡದವರೆಗೆ ಹಬ್ಬಿತ್ತು. ಉತ್ತರ ತೆಲಂಗಾಣವೆಲ್ಲವೂ ಮುಗಲರ ವಶದಲ್ಲಿತ್ತು. ಇದೇ ಭಾಗದಲ್ಲಿ ಮುಗಲರ ದಾಳಿ ಮೇಲಿಂದ ಮೇಲೆ ಆಗುತ್ತಿತ್ತು. ಈ ಭಾಗದಲ್ಲಿ ಅರಾಜಕತೆಯುಂಟಾಗಿತ್ತು. ಇಂಥ ಅವ್ಯವಸ್ಥೆಯ ಕಾಲದಲ್ಲಿ ಗಡ್ಡಿಪಿಡ್ಡ ನಾಯಕನು ಪೂರ್ವದಿಕ್ಕಿನ ಈ ಸಗರ ನಾಡಿನಲ್ಲಿ ಪ್ರಬಲನಾಗಿ ತಲೆ ಎತ್ತಿದನು. ಆತನ ಕೈಫಿಯತ್ತಿನಲ್ಲಿ ಹೇಳಿರುವಂತೆ ವಾಗೀಣಗೇರಿಯಲ್ಲಿರುವಾಗ ಪಿಡ್ಡನಾಯಕ ಮತ್ತು ಅವನ ಮಗ ಪಾಮನಾಯಕ ಇಬ್ಬರೂ ಕೂಡಿ ಶಾಹಪುರ ಕಿಲ್ಲೆಯನ್ನು ದಾಳಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರೆಂದು ವ್ಯಕ್ತವಾಗುತ್ತದೆ. ಇವರನ್ನು ಕಿಲ್ಲೆಯಿಂದ ತೆರವು ಮಾಡಿಸಲು ವಿಜಾಪುರದ ಸುಲ್ತಾನನು ಫತ್ತೆಖಾನ್ ಮತ್ತು ಹಮೀದ್ ಖಾನ್ ಎಂಬ ಸರದಾರರ ನೇತೃತ್ವದಲ್ಲಿ ಪ್ರಬಲ ಸೇನೆಯನ್ನು ಕಳುಹಿಸಿದನು. ಆ ಸಮಯದಲ್ಲಿ ಹೋರಾಟ ಮಾಡಿದರೂ ಕೊನೆಗೆ ಪರಾಭವಗೊಂಡು ಗಡ್ಡಿನಾಯಕನ ಮಗನಾದ ಪಾಮನಾಯಕನನ್ನು ವಿಜಾಪುರಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಆನೆಯ ಜೊತೆಗೆ ಹೋರಾಟದಲ್ಲಿ ಪಾಮನಾಯಕನು ಜಯಶೀಲನಾಗಲು ವಿಜಾಪುರದ ಸುಲ್ತಾನನು ಸಗರ ನಾಡಿನ ಎಲ್ಲಾ ಪ್ರಾಂತ್ಯಗಳನ್ನು ಇವನಿಗೆ ಇನಾಮಾಗಿ ನೀಡಿದನೆಂದು ಕೈಫಿಯತ್ತು ತಿಳಿಸುತ್ತದೆ. ಗಡ್ಡಿಪಿಡ್ಡನಾಯಕನು ನಿಧನನಾದ ನಂತರ ೧೬೬೬ರಲ್ಲಿ ಅವನ ಮಗ ಪಾಮನಾಯಕನು ಜಮೀನ್ದಾರಿಯ ಎಲ್ಲಾ ವೃತ್ತಿಯನ್ನು ಪಡೆದನು. ಪಿಡ್ಡನಾಯಕನಿಗೆ ಐದು-ಆರು ಜನ ಹೆಂಡಂದಿರಿದ್ದರೂ ಮಕ್ಕಳಾಗಲಿಲ್ಲ. ಇವನ ಅಣ್ಣನ ಮಗನಾದ ಪಾಮನಾಯಕನನ್ನು (ಲಿಂಗನಾಯಕನ ಮಕ್ಕಳಲ್ಲಿ ಒಬ್ಬ) ದತ್ತಕ ಮಾಡಿಕೊಂಡಿದ್ದನೆಂದು ತಿಳಿದು ಬರುತ್ತದೆ.

ಪಿಡ್ಡನಾಯಕನ ಪ್ರಮುಖವಾದ ಸಾಧನೆಯೆಂದರೆ ಮುಗಲರೊಡನೆ ಅವನು ಬೆಳೆಸಿಕೊಂಡ ಸಂಬಂಧ. ಮುಗಲರಿಗೂ ವಿಜಾಪುರದವರ ನಡುವೆ ಯುದ್ಧ ನಡೆದ ಕಾಲದಲ್ಲಿ ಯುದ್ಧ ನೀತಿಯಂತೆ ವಿಜಾಪುರದ ಸರದಾರರ ಶಕ್ತಿಯನ್ನು ದುರ್ಬಲಗೊಳಿಸಿ ಗಡ್ಡಿಪಿಡ್ಡನಾಯಕನ ಮನವೊಲಿಸಿ ತನ್ನ ಕಡೆಗೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಔರಂಗಜೇಬನು ತನ್ನ ರಾಜಮುದ್ರೆಯಲ್ಲದೇ, ಪಿಡ್ಡನಾಯಕನಿಗೆ ಆಶ್ವಾಸನೆ ಕೊಡುವುದಕ್ಕಾಗಿ ಮುಗಲ್ ಬಾದಶಾಹ್‌ನ ಹಸ್ತದ ಮುದ್ರೆಯುಳ್ಳ .....ಕಳುಹಿಸಿದನು. (ಇದರ ಮೂಲ ಪ್ರತಿಯನ್ನು ಈಗಲೂ ಸುರಪುರದ ಅರಸರಲ್ಲಿ ಸಂರಕ್ಷಿಸಲಾಗಿದೆ.) ಪಟ್ಟದಲ್ಲಿ ಸೂಚಿಸಿದಂತೆ "ನೀನು

ಮುಸಲ್ಮಾನನಾಗಿದ್ದರೆ ನಮ್ಮ ಧರ್ಮ ಬಂಧುವಾಗಿರುತ್ತಿದ್ದಿ, ಸುರಕ್ಷಿತನಾಗಿರುತ್ತಿದ್ದಿ, ಪತನವಿಲ್ಲದ (ವೃತ್ತಿಯನ್ನು ಕಳೆದುಕೊಂಡು ಸ್ಥಳಾಂತರವಾಗುವ) ಸಂಕಟದಿಂದ ಮತ್ತು ಅನೇಕ ಶತ್ರುಗಳಿಂದ ಸಂರಕ್ಷಿಸಲ್ಪಡುತ್ತಿದ್ದಿ. ಆದರೆ (ನೀನು) ಮುಸಲ್ಮಾನನಾಗಿಲ್ಲವೆಂಬುದು ಖೇದ ಸಂಗತಿಯಾಗಿದೆ."

"ಶ್ರೇಷ್ಠನಾದ ಮತ್ತು ಕೃಪಾ ಪಾತ್ರನಾದ ಪಿಡ್ಡನಾಯಕ(ನೇ) ಬಾದಶಾಹನ ಕೃಪೆ(ಯಾದುದಕ್ಕೆ) ಅಭಿಮಾನವನ್ನು ತಾಳಿ ಅರಿತುಕೊಳ್ಳುವುದೇನೆಂದರೆ, ಈಗಿನ ಕಾಲದಲ್ಲಿ ಪೃಥ್ವೀರಾಯ ಕೃಪೆಯುಳ್ಳವನಾಗಿ, ಆ ಶ್ರೇಷ್ಠನಾದವನ ತಪ್ಪುಗಳನ್ನು ಕ್ಷಮಿಸಿ, ನಸರತಾಬಾದ್‌ದ ಸರದೇಸಗತಿಯನ್ನು ಪೂರ್ವದಿಂದ ನಡೆದು ಬಂದಂತೆ ನಡೆಯಿಸಲಾಗುವುದೆಂದು ರಾಜಾಜ್ಞೆಯಾಗಿದೆ. (ಕಾರಣ) ಬಾದ್‌ಶಾಹನ ಅನುಗ್ರಹವನ್ನು ಅಪೇಕ್ಷೆಯುಳ್ಳವನಾಗಿ (ಅವನು) ತನ್ನ ಮಗನಾದ ಪಾಮನಾಯಕನನ್ನು (ನಮ್ಮ) ಸನ್ನಿಧಿಗೆ ಕಳುಹಿಸಿ, ಬಾದ್‌ಶಾಹನಿಂದ ಅನುಗ್ರಹ ಮತ್ತು ಮನಸಬಗಳಿಂದ ಮರ್ಯಾದಿತನಾಗಬೇಕು" - ಪವಿತ್ರವಾದ ರಮಜಾನ್ ೪ ಜಲೂಸಿನ ೧ನೇ ವರ್ಷ ಔರಂಗಜೇಬನು ವಿಜಾಪುರದ ವಿರುದ್ಧ ಯುದ್ಧ ಮಾಡುವಾಗ ದೆಹಲಿಯ ಗಾದಿಯ ಸಲುವಾಗಿ ಅಣ್ಣ ತಮ್ಮಂದಿರೊಡನೆ ಕಾದಾಡಲು ದಕ್ಷಿಣದಿಂದ ತೆರಳುವುದಕ್ಕೆ ಮೊದಲು ಈ ಪತ್ರವನ್ನು ಗಿಡ್ಡನಾಯಕನಿಗೆ ಬರೆಯಲಾಗಿದೆ ಎಂದು ವ್ಯಕ್ತವಾಗುತ್ತದೆ. ದಿ. ೬ನೇ ರಜ್ಜಬದ ದಿನ ಕಲ್ಯಾಣವನ್ನು ಮುತ್ತಿಗೆ ಹಾಕಿದ (ನಾಲ್ಕನೇ ದಿನ) ೧ನೇ ರಮಜಾನ್ ತಿಂಗಳಿನಂದು ಈ ಪತ್ರ ಬರೆದಿರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತದೆ. ಈ ಪತ್ರದ ಮುಖ್ಯ ಹಿನ್ನೆಲೆ ಎಂದರೆ ಪಿಡ್ಡನಾಯಕ ಮತ್ತು ಅವನ ಮಗ ಪಾಮನಾಯಕ ಇಬ್ಬರೂ ವಿಜಾಪುರದ ಪರವಾಗಿ ಮುಗಲರ ವಿರುದ್ಧ ಕಾದಾಡಲಿಕ್ಕೆ ಬೆಂಬಲ ನೀಡಿದ್ದುದರಿಂದ, ಇವರಿಬ್ಬರನ್ನು ಆ ಸ್ನೇಹದಿಂದ ಬೇರ್ಪಡಿಸುವುದು ಈ ಪತ್ರದ ಉದ್ದೇಶವಾಗಿತ್ತೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಪತ್ರದ ಸಹಾಯದಿಂದ ನಮಗೆ ಪಿಡ್ಡ ನಾಯಕನ ಮತ್ತು ಪಾಮನಾಯಕನ ಪ್ರಾಬಲ್ಯತೆ ಹಾಗೂ ವರ್ಚಸ್ಸು ವ್ಯಕ್ತವಾಗುತ್ತದೆ.

ಹಿಂದೆ ವಾಗಿಣಗೇರಿಯಲ್ಲಿರುವಾಗ ಪಿತ್ರಾರ್ಜಿತ ಆಸ್ತಿಯ ಸಲುವಾಗಿ ಪಿಡ್ಡನಾಯಕನಿಗೂ ಲಿಂಗನಾಯಕನಿಗೂ ನಡುವೆ ತಲೆದೋರಿದ್ದ ಹಗೆತನವು ಏಳು ವರ್ಷಗಳ ನಂತರ ಇಬ್ಬರ ನಡುವೆ ಮಲ್ಲಿಭಾವಿಯ ಕಾಳಗದಲ್ಲಿ ಕೊನೆಗೊಂಡಿತು. ಇವರಿಬ್ಬರ ಅಕ್ಕತಂಗಿಯರಾದ ಕರಿಗುಡ್ಡದ ಎಂಕಮ್ಮ ಮತ್ತು ಎರಡಗಲ್ಲಿನ ಎಲ್ಲವ್ವ ಇವರ ಮಧ್ಯಸ್ತಿಕೆಯಿಂದ ಈ ಸಮಸ್ಯೆಯು ಬಗೆಹರಿಯಿತೆಂದು ಕೈಫಿಯತ್ತಿನಲ್ಲಿ ತಿಳಿಸಲಾಗಿದೆ. ಪಾಮನಾಯಕನ (೧೬೬೭-೮೭) ಇಪ್ಪತ್ತು ವರ್ಷಗಳ ಆಳ್ವಿಕೆಯು ಸುರಪುರದ ಅರಸರ ಕಾಲದ ಪ್ರಮುಖ ಹಾಗೂ ಪರಿಣಾಮಕಾರಿ ಆಳ್ವಿಕೆಯಾಗಿತ್ತೆಂದು ಹೇಳಲಾಗುತ್ತದೆ. ಈತನಿಗೆ ಎಲ್ಲಾ ಇನಾಮುಗಳು ವಿಜಾಪುರದ ಅಲಿ ಆದಿಲ್‌ಶಾಹನ ಕಾಲದಲ್ಲಿಯೇ ಬಹುಮಟ್ಟಿಗೆ ನೀಡಲಾಗಿತ್ತೆಂದು ಈತನ ಕಾಲದ ಪಾರಸಿ ಸನ್ನದ್‌ಗಳು ತಿಳಿಸುತ್ತವೆ. ಇವನ ಅಧೀನದಲ್ಲಿದ್ದ ಪ್ರಮುಖ ಪರಗಣಿಗಳೆಂದರೇ ಪರಗಣಿತಾಳೀಕೋಟೆ, ಪರಗಣಿ ಕೆಂಭಾವಿ-ಮಾಮಲೆ ಮಮ್ಮದಾಬಾದ್-ಉರುಫ್ ಸಾಲ್ವತ್ಯಾಡ-ಪರಗಣಿ ಅಲಮಲ(ಎಳಮೇಲಿ) ಮತ್ತು ಪರಗಣಿ ದೇವಪುರ. ಈತನ ಹತೋಟಿಯಲ್ಲಿದ್ದ ಪ್ರಮುಖ ಪೇಟೆಗಳೆಂದರೆ ಶಾಹಪುರ ಪೇಟೆ, ಅಫ್‌ಜಲ್‌ಪುರ ಪೇಟೆ ಮತ್ತು ಎಖಲಾಪುರ ಉರುಫ್ ಕಸಬಾ ಉಸ್ತಾದಬಾದ್(ಗೋಗಿ). ಈತನ ಕಾಲದಲ್ಲಿ ಸಗರನಾಡು ಮತ್ತು ಗುಲಬರ್ಗಾ ಪ್ರದೇಶಗಳು ವಿಜಾಪುರದ ಖವಾಸಖಾನನ ಅಧೀನದಲ್ಲೇ ಇತ್ತೆಂದು ಗೊತ್ತಾಗುತ್ತದೆ. ಆದರೆ, ಈ ಸರದಾರರ ನಡುವೆ ಜಗಳ ಪ್ರಾರಂಭವಾದ ಕೂಡಲೇ ಗುಲಬರ್ಗಾದಲ್ಲಿ ಮುಖ್ಯ ಅಧಿಕಾರಿಯಾಗಿದ್ದ ಸಿದ್ದಿ ತಂಬಲನು ಮುಗಲರ ಸಹಾಯವನ್ನು ಪಡೆದು ಬಂಡಾಯವನ್ನೆಬ್ಬಿಸಿದನು. ಇವನನ್ನು ಸುರಪುರದ ಪಾಮನಾಯಕನು ಯಶಸ್ವಿಯಾಗಿ ಬಗ್ಗುಬಡಿದನೆಂದು ಪಾಮನಾಯಕನಿಗೆ ದೊರೆತಿರುವ ಸನದ್‌ಗಳಿಂದ ತಿಳಿಯುತ್ತದೆ. ಸ್ವಲ್ಪ ಕಾಲ ಗುಲಬರ್ಗಾದ ಸರದೇಶಗತಿಯನ್ನು ಈತನು ಹೊಂದಿದ್ದಂತೆ ಕಾಣುತ್ತದೆಂಬ ಅಸ್ಪಷ್ಟ ಅಭಿಪ್ರಾಯವಿದೆ. ಪಾಮನಾಯಕನು ವಾಗಿಣಗೇರಿ ಮತ್ತು ಶಾಹಪುರ ಕಿಲ್ಲೆ ಎರಡರಲ್ಲೂ ಇರುತ್ತಿದ್ದನೆಂದು ಕೈಫಿಯತ್ತುಗಳಿಂದ ತಿಳಿದು ಬರುತ್ತದೆ. ಈತನು ವಾಗಿಣಗೇರಿಯಲ್ಲಿರುವಾಗ ವಿಶಿಷ್ಟಾದ್ವೈತ ಸಂಪ್ರದಾಯವನ್ನು ಸ್ವೀಕರಿಸಿ ವೈಷ್ಣವನಾದನೆಂದು ತಿಳಿದು ಬರುತ್ತದೆ. ಪಾಮನಾಯಕನು ವಾಗಿಣಗೇರಿಯಲ್ಲಿ ಗೋಪಾಲಸ್ವಾಮಿ ದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯದ ನಿತ್ಯ ಪೂಜೆ ಕೈಂಕರ್ಯಗಳಿಗೆ ಅನೇಕ ದತ್ತಿಗಳನ್ನು ಬಿಟ್ಟಿರುವನು. ಈತನು ತಿರುಪತಿಯ ವೆಂಕಟೇಶನ ಭಕ್ತನೂ ಆಗಿದ್ದನು. ಇಂದಿಗೂ ಸುರಪುರ ಸಂಸ್ಥಾನದ ಮರ್ಯಾದೆ ತಿರುಪತಿಯಲ್ಲಿ ನಡೆಯುತ್ತಿದೆ.

ಪಾಮನಾಯಕನು ಹಿರೇ ಹೆಂಡತಿ ಅಮ್ಮನಾಗತಿಯ ನೆನಪಿಗಾಗಿ ಅಮ್ಮಾಪುರವೆಂಬ ಗ್ರಾಮವನ್ನು ನಿರ್ಮಿಸಿದನು. ಈತನೇ ಮಲ್ಲಾಭಾವಿಯ ಕೆರೆಯನ್ನು ಕಟ್ಟಿಸಿದನೆಂದು ಪ್ರತೀತಿಯಿದೆ. ಚಿಕ್ಕನಹಳ್ಳಿಯಲ್ಲಿ ಒಂದು ಹುಡೆಯನ್ನು ವಾಗಿಣಗೇರಿಯಲ್ಲಿ

ಮತ್ತೊಂದು ಕೋಟೆಯನ್ನು ಕಟ್ಟಿಸಿ ಮದ್ದು ಗುಂಡು ತೋಪುಗಳಿಂದ ಸಜ್ಜುಗೊಳಿಸಿದನು. ಪಾಮನಾಯಕನು ತನ್ನ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೊಳಿಸಿ ಸೇನೆಯ ಹುದ್ದೆಗಳನ್ನು ಹಾಗೂ ಭದ್ರತೆಯ ವ್ಯವಸ್ಥೆಯನ್ನು ಹೊಸದಾಗಿ ಸೃಷ್ಟಿಸಿದನು. ಈತನು ಜಾರಿಗೊಳಿಸಿದ ಸೇನೆಯ ಹುದ್ದೆಗಳೆಂದರೆ ಗುಡಿಕಾರ, ಸರಸೌಬತ್, ಸರಹವಲ್ದಾರ್, ಸಬ್‌ನವೀಸ್, ಮರಾಠಿ ಸವಾರ ಮುಂತಾದವು. ಗೋಗಿ, ದೇವಪುರ, ತಿಂಥಿಣಿ, ವಜ್ಜಲ, ಕೊಡೇಕಲ್ ಮುಂತಾದ ಪ್ರಾಂತ್ಯಗಳಿಗೆ ಸುಬೇದಾರರನ್ನು ನೇಮಿಸಿದ್ದನೆಂದು ಆತನ ಕೈಫಿಯತ್ತುಗಳಲ್ಲಿ ಉಲ್ಲೇಖಿಗೊಂಡಿವೆ. ಈತನ ಕಾಲದಲ್ಲಿ ಪುರುಷ ಕಾದಿ ಸಾತನ ಗುರುಗಳು, ಸಿಂಗಾರಿಯ ವೈದ್ಯ ಪರವಸ್ತು, ವಿದ್ಯಾಗರು, ನಾಮದ ವೆಂಕಯ್ಯ, ದೊರಕು ಸೀನಯ್ಯ ಮುಂತಾದ ಪಂಡಿತರುಗಳ ಉಲ್ಲೇಖಿಗಳು ಈ ಆಧಾರಗಳಲ್ಲಿ ಕಾಣಸಿಗುತ್ತವೆ.

ಪಾಮನಾಯಕನು ೧೬೮೭ರಲ್ಲಿ ನಿಧನನಾದ ಮೇಲೆ ಅವನ ಅಣ್ಣನ ಮಗನಾದ ಪೀತಾಂಬರ ಬಹಿರಿಪಿಡ್ಡನಾಯಕನು ಅಧಿಕಾರಕ್ಕೆ ಬಂದನು. ಮುಗಲರು ವಿಜಾಪುರ ರಾಜ್ಯದ ಅಧಿಕಾರವನ್ನು ವಹಿಸಿ ರಾಯಚೂರು ಕಿಲ್ಲೆಯನ್ನು ಗೆಲ್ಲುವಾಗ ೧೬೮೯ರಲ್ಲಿ ಪಿಡ್ಡನಾಯಕನು ಮುಗಲರಿಗೆ ಬಹಳ ಸಹಾಯ ಮಾಡಿದನೆಂದು ತಿಳಿದು ಬರುತ್ತದೆ. ಈತನ ಪ್ರಾರಂಭದ ಆಳ್ವಿಕೆಯ ಅವಧಿಯಲ್ಲಿ ಅಮ್ಮಾನ್ನಾಗತಿಯು ಸುಮಾರು ಎರಡು ವರ್ಷಗಳ ಕಾಲ ಆಡಳಿತ ಮಾಡಿದ್ದಳೆಂದು ಕೈಫಿಯತ್ತುಗಳಿಂದ ತಿಳಿದು ಬರುತ್ತದೆ. ಪಿಡ್ಡನಾಯಕ ಹಾಗೂ ಮರಾಠಿ ಸರದಾರರಿಗೆ ಸ್ನೇಹ ಸಂಬಂಧವಿದ್ದು ಈ ಮರಾಠೆ ಸರದಾರರುಗಳ ಕುಟುಂಬಗಳು ವಾಗಿಣಗೇರಿಗೆ ಬಂದು ಆಶ್ರಯ ಪಡೆಯುತ್ತಿದ್ದವು. ಇದರಿಂದಾಗಿ ಔರಂಗಜೇಬನು ಇವನನ್ನು ಶಿಕ್ಷಿಸಲು ಯೋಜಿಸಿದನು. ಅಲ್ಲದೇ ಈತನು ತನ್ನ ತಂದೆ ಸಂಪಾದಿಸಿದ ಎಲ್ಲಾ ರಾಜ್ಯವನ್ನು ಮುಗಲರ ಹತೋಟಿಯಿಂದ ಪುನಃ ಕಸಿದುಕೊಂಡನು. ಗುಲಬರ್ಗಾ, ವಿಜಾಪುರ, ರಾಯಚೂರು ಮಾಮಲೆಗಳ ಸರ ಸರದೇಸಗತಿಯ 'ದಾಹಿಜಾ' ರೂಸೂಮನ್ನು ವಸೂಲು ಮಾಡಲು ಆರಂಭಿಸಿದನು. ಈತನ ಮಾಸೂಮ್ ಅವ್ಯವಹಾರಗಳು ಔರಂಗಜೇಬನಿಗೆ ಸರಿ ಕಾಣಿಸಲಿಲ್ಲ. ಕಡೆಗೆ ಔರಂಗಜೇಬನು ತನ್ನ ಮಗನಾದ ಕಾಂಬಕ್ಷ್‌ನನ್ನು ಬಹಿರಾಮಖಾನನೆಂಬ ಸರದಾರನೊಡನೆ ವಾಗಿಣಗೇರಿಯನ್ನು ಗೆದ್ದುಕೊಳ್ಳಲು (೧೬೯೧) ಕಳುಹಿಸಿದನು. ಕಾಂಬಕ್ಷ್‌ನು ಎರಡು ತಿಂಗಳವರೆಗೆ ವಾಗಿಣಗೇರಿಯಲ್ಲಿ ತಳವೂರಿ ಖಂಡಕ, ಮೋರ್ಚ್‌ಗಳನ್ನು ತೋಡಿಸಿ ತನ್ನ ಸೈನ್ಯದ ರಕ್ಷಣೆಗಾಗಿ ಉನ್ನತವಾದ ಗೋಡೆಗಳನ್ನು ಕಟ್ಟಿಸಿ ಅವುಗಳ ಮೇಲೆ ದೊಡ್ಡ ತೋಪುಗಳನ್ನಿಡಿಸಿದನು. ಈ ಸಮಯದಲ್ಲಿ ಔರಂಗಜೇಬನು ವಿಜಾಪುರ ಜಿಲ್ಲೆಯ ಇಸ್ಲಾಮಾಪುರದಲ್ಲಿದ್ದನು. ಇಷ್ಟು ಸಮೀಪದಲ್ಲೇ ಮೊಗಲ ಬಾದಶಹಾ ಇರುವಾಗ ಹೋರಾಡುವುದು ವ್ಯರ್ಥವೆಂದು ಅರಿತ ಪಿಡ್ಡಾಯಕನು ಬಾದ್‌ಶಾಹನ ಸೈನ್ಯಾಧಿಕಾರಿ ರೋಹುಲ್ಲಾಖಾನನ್ನು ಓಲೈಸಿ ರೋಹುಲ್ಲಾಖಾನನು ನಿಷ್ಕ್ರಿಯನಾಗುವಂತೆ ಮಾಡುವಲ್ಲಿ ಯಶಸ್ವಿಯಾದನು. ಔರಂಗಜೇಬನು ಸುಮಾರು ಐದು ತಿಂಗಳವರೆಗೂ ನೋಡಿ ಅವನನ್ನು ಹಿಂದಕ್ಕೆ ಕರೆಸಿ ಆತನ ಬದಲು ಇನ್ನೊಬ್ಬ ಮಗನಾದ ಆಜಮ್‌ನನ್ನು ಕಳುಹಿಸಿದನು. ಆಜಮ್‌ನು ಒಂದು ವರ್ಷದವರೆಗೂ ವಾಗಿಣಗೇರಿಯ ಸಮೀಪದ ಸ್ಥಳದಲ್ಲಿದ್ದು ಅದರ ಸುತ್ತಮುತ್ತಲಿನ ಪ್ರದೇಶವನ್ನು ನಾಶಗೊಳಿಸಲು ಆರಂಭಿಸಿದನು. ಪಿಡ್ಡನಾಯಕನು ಸಂಧಿಯನ್ನು ಬಯಸಿ ಆಜಮ್‌ನಿಗೆ ಎರಡು ಲಕ್ಷ ರೂ.ಗಳ ಕಾಣಿಕೆಯನ್ನು ಕೊಡಲು ಒಪ್ಪಿದನು. ಇದಲ್ಲದೇ ಬಾದಶಾಹ್‌ನಿಗೆ ಏಳು ಲಕ್ಷ ರೂ.ಗಳ ನಜರಾಣಿ ಕಪ್ಪವನ್ನು ಸಲ್ಲಿಸಲು ಒಪ್ಪಿಕೊಂಡನು. ತಂದೆಯ ಎಲ್ಲ ವೃತ್ತಿಯನ್ನು ಪಿಡ್ಡನಾಯಕನಿಗೆ ನೀಡಿ ಆಜಮ್‌ಶಾಹನ ಹೇಳಿಕೆಯಂತೆ ಔರಂಗಜೇಬನು ಸನದ್ ಅನ್ನು ಬರೆದು ಕಳುಹಿಸಿದನು. ಇದು ೧೬೯೩ರಲ್ಲಿ ಬರೆದಿರುವ ದಾಖಲೆಯಾಗಿದೆ ಎಂದು ತಿಳಿದು ಬರುತ್ತದೆ.

ಇದಾದ ನಂತರ ಔರಗಜೇಬನು 'ಜಿಂಜಿ' ಕೋಟೆಯನ್ನು ವಶ ಮಾಡಿಕೊಳ್ಳಲು ಆಜಮ್‌ನನ್ನು ಸಗರ ಪ್ರಾಂತದಿಂದ ಕಳುಹಿಸಿದನು. ಅಲ್ಲಿಯ ಪರಿಸ್ಥಿತಿಯು ಹದಗೆಟ್ಟಿತ್ತು. ಆಜಮ್‌ನು ಸಗರ ಪ್ರಾಂತವನ್ನು ಬಿಟ್ಟು ಹೋದ ಕೂಡಲೇ ಪಿಡ್ಡನಾಯಕನು ಮೊದಲಿನಂತೆ 'ಲೂಟಿ' ಮಾಡುತ್ತಾ ಎಲ್ಲ ಪ್ರಾಂತಗಳನ್ನು ಮುಗಲರಿಂದ (೧೬೯೬) ಕಸಿದುಕೊಂಡನು. ಔರಂಗಜೇಬನು ಪುನಃ ಪಿಡ್ಡನಾಯಕನ ಮೇಲೆ ಎರಗಲು ಕಳುಹಿಸಿದನು. ಫಿರೋಜ ಜಂಗನಿಗೆ ಹಿಂದಿನಂತೆಯೇ ಹಣದ ಆಶೆಯನ್ನು ತೋರಿಸಿ ಸಂತೋಷಗೊಳಿಸಿ ತನ್ನಲ್ಲೇ ಉಳಿಸಿಕೊಂಡನು.

ಔರಂಗಜೇಬನಿಗೆ ವಿಜಾಪುರದ ಬಳಿಯ ಬ್ರಹ್ಮಪುರಿಯಲ್ಲಿಯೂ ಆ ನಂತರ ಇಸ್ಲಾಂಪುರದಲ್ಲೂ ಪಿಡ್ಡಾಯಕನ ರಾಜಕೀಯ ತಂತ್ರದ ಸುದ್ದಿ ಮುಟ್ಟಿತು. ಫಿರೋಜ ಜಂಗನಿಗೆ ಪ್ರತ್ಯೇಕ ರಾಜಾಜ್ಞೆ ಕಳುಹಿಸಿ ಸಗರ ನಾಡಿನ ಬೇಡರನ್ನು

ತಡೆಹಿಡಿಯಬೇಕೆಂದು ಆಜ್ಞಾಪಿಸಿದನು. ಈ ಸಮಯದಲ್ಲಿ ಮರಾಠಿ ಸರದಾರರ ಕುಟುಂಬಗಳು ಪಿಡ್ಡನಾಯಕನ ರಕ್ಷಣೆಯಲ್ಲಿದ್ದವು. ಅವುಗಳಿಗೆ ರಕ್ಷಣೆ ನೀಡಿದ ಪಿಡ್ಡನಾಯಕನ ಪಾತ್ರ ಬಹಳ ಹಿರಿದಾದುದೆಂದು ಪ್ರಶಂಶಿಸಲಾಗಿದೆ. ಇನ್ನೊಂದು ಕಡೆ ಔರಂಗಜೇಬನು ಕಾಂಬಕ್ಷ್, ಆಜಮ್, ರೋಹುಲ್ಲಾಖಾನ್, ಫಿರೋಜ್ ಜಂಗ್ ಮುಂತಾದ ಪ್ರಮುಖ ಸರದಾರರುಗಳನ್ನು ಪಿಡ್ಡನಾಯಕನನ್ನು ದಂಡಿಸುವುದಕ್ಕಾಗಿ ಕಳುಹಿಸಿ ವಿಫಲನಾಗಿದ್ದನು ಮತ್ತು ಯಾವುದೇ ಫಲಿತಾಂಶವಿಲ್ಲದೇ ಆತನು ರೋಸಿ ಹೋಗಿದ್ದನು. ಈ ಸಮಯದಲ್ಲಿ ವಿಜಾಪುರ ಪಟ್ಟಣದವರೆಗೂ ತನ್ನ ರಾಜ್ಯವನ್ನು ಬೆಳೆಸಿದ್ದನು. ಗುಲಬರ್ಗಾ ಪಟ್ಟಣದೊಂದಿಗೆ ಮುಗಲರ ಸಂಪರ್ಕಗಳು ಕಡಿದುಹೋದವು. ಇದರಿಂದಾಗಿ, ೧೭೦೫ರ ಕೊನೆಯ ಭಾಗದಲ್ಲಿ ....ಪಾರ್ಲಿ, ಪನ್ನಾಳಗಡ, ವಿಸಾಳಗಡ ಮುಂತಾದ ದುರ್ಗಗಳನ್ನು ಒಂದಾದ ಮೇಲೊಂದು ಕಸಿದು ಔರಂಗಜೇಬನು ತಾನೇ ಸ್ವತಃ ವಾಗಿಣಗೇರಿಗೆ ಬಂದನು. ಫೆಬ್ರವರಿ ೧೭೦೫ರಲ್ಲಿ ವಾಗಿಣಗೇರಿಯನ್ನು ಮುತ್ತಿಗೆ ಹಾಕಿದನು. ಸಗರನಾಡು ಔರಂಗಜೇಬನಿಂದ ವಿಜಾಪುರ ಪ್ರಾಂತದ ಸಭೇದಾರನಾದ ಜೀನಕುಲಿಚಖಾನನಿಗೆ ಜಹಾಗೀರಾಗಿ ಕೊಡಲಾಗಿತ್ತು. ಈ ಚೀನಕುಲಿಚಖಾನನು ವಾಗಿಣಗೇರಿಯ ಕೋಟೆಯ ಒಂದು ಕಿಲೋಮೀಟರ್ ಅಂತರದಲ್ಲಿ ಬೀಡು ಬಿಟ್ಟಿದ್ದನು. ಈತನ ಜೊತೆಗೆ ಔರಂಗಜೇಬನಿಗೆ ಅತ್ಯಂತ ಪ್ರಿಯನಾದ ಹಮೀದ್-ವುದ್-ದೀನ್ ಖಾನನು ಹಾಗೂ ಇತರೆ ಪ್ರಬಲ ಘುಗಲ್ ಸರದಾರರುಗಳು ಸೇರಿಕೊಂಡು ಮುತ್ತಿಗೆ ಹಾಕಿ ಭೀಕರ ಹೋರಾಟ ನಡೆಯಿತು. ಕೊನೆಗೆ ಮುಗಲರು ವಾಗಿಣಗೇರಿ ಕೋಟೆಯನ್ನು ವಶಪಡಿಸಿಕೊಂಡರು. ಆದರೆ ಪಿಡ್ಡಯಾಕನು ಚಾತುರ್ಯದಿಂದ ಯುದ್ಧಭೂಮಿಯಿಂದ ತಪ್ಪಿಸಿಕೊಂಡನು. ಸ್ವಲ್ಪ ಸಮಯದ ನಂತರ ಕೃಷ್ಣಾ ನದಿಯನ್ನು ದಾಟಿ ಗುಡುಗುಂಟಿಯ ಕೋಟೆಯಲ್ಲಿ ರಕ್ಷಣೆ ಪಡೆದನು. ಇವನಿಗೆ ಆಶ್ರಯ ನೀಡಿದ ಗುಡಗುಂಟಿಯ ಹುಚ್ಚಸೋಮಪ್ಪ ನಾಯಕನನ್ನು ಅವನ ವೈರಿ ದೇವದುರ್ಗದ ಕುಂಟ ವಾಸುದೇವ ನಾಯಕನು ಮುಗಲರ ಸಹಾಯ ಪಡೆದು ಬೆನ್ನಟ್ಟಿದನು. ಈ ದೇವದುರ್ಗದ ನಾಯಕನೊಡನೆ ಹೋರಾಡಿ ಅವನನ್ನು ಬಗ್ಗು ಬಡಿದು ಪಿಡ್ಡನಾಯಕನು ತಾವರಗೇರಿ ಮಾರ್ಗದ ಮೂಲಕ ಕನಕಗಿರಿಗೆ ಬಂದನು. ಕನಕಗಿರಿಯ ಉಡಚನಾಯಕ ಬೆಂಬಲದಿಂದ ಗಂಗಾವತಿಯ ಎಮ್ಮೀಗುಡ್ಡವನ್ನು ಸೇರಿದನು. ವಾಗಿಣಗೇರಿಯು ತನ್ನ ವಶವಾದ ನಂತರ ಔರಂಗಜೇಬನು ಗೋಪಾಲಸ್ವಾಮಿ ದೇವಾಲಯವನ್ನು ನೆಲಸಮ ಮಾಡಿ ಅದರ ಬದಲಾಗಿ ಒಂದು ಮಸೀದಿಯನ್ನು ಕಟ್ಟಿಸಿದನೆಂದು ಹೇಳಲಾಗುತ್ತದೆ. ಅತ್ತ ಪಿಡ್ಡನಾಯಕನು ಗಂಗಾವತಿಯ ಗುಡ್ಡದಲ್ಲಿದ್ದು ಪುನಃ ಗುಡಗುಂಟೆಗೆ ಬಂದನು. ಔರಂಗಜೇಬನು ೧೭೦೭ರಲ್ಲಿ ನಿಧನನಾದ ಮೇಲೆ ದಖನ್ನಿನ ಇತಿಹಾಸದಲ್ಲೂ ಅನೇಕ ಬದಲಾವಣೆಗಳು ಉಂಟಾದವು. ವಿಜಾಪುರವನ್ನು ಮುಗಲ್ ರಾಜ್ಯದ ಒಂದು ಸುಭಾ ಮಾಡಿ ಚೀನಕುಲಿಚ ಖಾನನು ಸಭೆದಾರನಾದನು. ಪಿಡ್ಡನಾಯಕನು ಗುಡಗುಂಟೆಯಲ್ಲಿದ್ದ ಹಿಮ್ಮತಯಾರ್‌ಖಾನನನ್ನು ಹೊಡೆದೋಡಿಸಿ ಗುಡಗುಂಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ವಾಗಿಣಗೇರಿಯಲ್ಲಿ ಪುನಃ ಗೋಪಾಲಸ್ವಾಮಿಯ ದೇವಾಲಯವನ್ನು ದುರಸ್ಥಿಗೊಳಿಸಿ ಮೂಲವಿಗ್ರಹವನ್ನು ಪ್ರತಿಷ್ಠಾಪಿಸಿದನು. ಇಷ್ಟೆಲ್ಲಾ ಆದ ಮೇಲೆ ಸುರಪುರವನ್ನು ಈತನೇ ವ್ಯವಸ್ಥಿತವಾಗಿ ನಿರ್ಮಿಸಿ ಅದನ್ನೇ ತನ್ನ (೧೭೦೭) ರಾಜಧಾನಿಯನ್ನಾಗಿ ಮಾಡಿಕೊಂಡನು. ಪಿಡ್ಡನಾಯಕನಿಗೆ ಬಾದಶಾಹಿಖಿಲ್ಲತ್ತು ಗೌರವಗಳಿಂದ 'ಪಿತಾಂಬರ ಬಹಿರಿ ಪಿಡ್ಡನಾಯಕ' ಎಂಬ ಹೆಸರು ರೂಢಿಗೆ ಬಂದಿತೆಂಬ ಪ್ರತೀತಿಯಿದೆ. ಪಿಡ್ಡನಾಯಕನು ೧೭೨೭ರಲ್ಲಿ ನಿಧನ ಹೊಂದಿದ ಮೇಲೆ ಅವನ ಮಗ ಇಮ್ಮಡಿ ಪಾಮನಾಯಕನು ಸುರಪುರದಲ್ಲಿ ಪಟ್ಟಕ್ಕೆ ಬಂದನು. ಈತನು ೧೭೨೭ರಿಂದ ೧೭೪೧ರವರೆಗೆ ಅಧಿಕಾರ ನಿರ್ವಹಿಸಿದನು. ಔರಂಗಜೇಬನ ಉತ್ತರಾಧಿಕಾರಿಗಳು ದುರ್ಬಲರಾಗಿದ್ದರಿಂದ ದೆಹಲಿಯ ಕೇಂದ್ರಾಡಳಿತವು ಶಿಥಿಲವಾಯಿತು. ಹೆಸರಿಗೆ ಮಾತ್ರ ಮುಗಲ ಸಾಮ್ರಾಜ್ಯವು ಅಸ್ತಿತ್ವದಲ್ಲಿದ್ದು ದಕ್ಷಿಣದಲ್ಲಿ ಹೈದರಾಬಾದಿನ ನಿಜಾಮನು ಸ್ವತಂತ್ರನಾದನು. ಮರಾಠರು ಮತ್ತೆ ಪ್ರಬಲರಾದರು. ಇಮ್ಮಡಿನಾಯಕನು ತನ್ನ ತಂದೆಯ ರಾಜ್ಯವನ್ನು ವಹಿಸಿಕೊಂಡ ಮೇಲೆ ನಿಜಾಮನ ಸಂಗಡ ಸ್ನೇಹದಿಂದ ಇದ್ದನು. ಈತನ ರಾಜ್ಯಾರೋಹಣ ಸಂದರ್ಭದಲ್ಲಿ ನಿಜಾಮನು ಎಲ್ಲಾ ಸೌಲಭ್ಯಗಳನ್ನು ಒದಗಿಸಿದ್ದನೆಂದು ತಿಳಿದು ಬರುತ್ತದೆ. ಪೇಶ್ವೆಯರ ಪ್ರಾಬಲ್ಯದ ನಂತರ ಸುರಪುರದ ಸಂಸ್ಥಾನಿಕರು ಮತ್ತು ಮರಾಠರ ನಡುವೆ ಇದ್ದ ಆತ್ಮೀಯ ಸಂಬಂಧ ಮುಂದುವರೆಯಲಿಲ್ಲ. ನಿಜಾಮನ ನಿರ್ದೇಶನದಂತೆ ಪಾಮನಾಯಕನು ಆನೆಗುಂದಿಯ ತಿರುಮಲರಾಯನನ್ನು ಸೆರೆಹಿಡಿದು ಹೈದರಾಬಾದಿಗೆ ಒಪ್ಪಿಸಿದನು. ಇದಕ್ಕಾಗಿ ನಿಜಾಮನು ಈತನನ್ನು ಗೌರವಿಸಿದನೆಂದು ತಿಳಿದು ಬರುವುದು. ಇದೇ ರೀತಿ ಪಾಮನಾಯಕನು ಕನಕಗಿರಿಯ ಹಿರೇನಾಯಕನೊಡನೆ ಯುದ್ಧಮಾಡಿ ಜಯಶೀಲನಾದನೆಂದು ತಿಳಿದು ಬರುತ್ತದೆ. ಈತನು ಅನೇಕ ಜನಹಿತ ಕಾರ್ಯಕ್ರಮಗಳನ್ನು ಕೈಗೊಂಡನು. ಸುರಪುರದಲ್ಲಿ ದೇವರ ಕೆರೆ ಕಟ್ಟಿಸಿದನು. ಇದಲ್ಲದೇ ಸುರಪುರದ ಐದು ಅಗಸಿ ಬಾಗಿಲುಗಳು, ಕೋಟೆ, ಹುಡೆಗಳನ್ನು ಈತನೇ ಕಟ್ಟಿಸಿದನೆಂದು ಪ್ರತೀತಿಯಿದೆ.

ಇಮ್ಮಡಿ ಪಾಮನಾಯಕನ ಮರಣಾ ನಂತರ ೧೭೪೨ರಲ್ಲಿ ಪಟ್ಟಕ್ಕೆ ಬಂದ ಅವನ ಹಿರಿಯ ಮಗ ಮುಮ್ಮಡಿ ಪಿಡ್ಡನಾಯಕನು ೧೭೪೭ರಲ್ಲಿ ನಿಧನನಾದನು. ಮುಮ್ಮಡಿ ಪಿಡ್ಡನಾಯಕನಿಗೆ ಮಕ್ಕಳಿರಲಿಲ್ಲವಾದುದರಿಂದ ಅವನ ತಮ್ಮನಾದ ವೆಂಕಟಪ್ಪನಾಯಕನು ಸಂಸ್ಥಾನದ ಅಧಿಕಾರ ವಹಿಸಿಕೊಂಡನು. ಎಡ ಮುಂಗೈ ಕತ್ತರಿಸಿಹೋಗಿದ್ದುದರಿಂದ ಅವನನ್ನು ಮೊಂಡಗೈ ವೆಂಕಟಪ್ಪ ನಾಯಕನೆಂದು ಕರೆಯಲಾಯಿತೆಂದು ಪ್ರತೀತಿಯಿದೆ. ಈತನು ಕಬ್ಬಿಣದ ಕೃತಕ ಮುಂಗೈಯನ್ನು ಉಪಯೋಗಿಸುತ್ತಿದ್ದುದಾಗಿ ತಿಳಿದು ಬರುತ್ತದೆ. (ಕಬ್ಬಿಣದ ಕೃತಕ ಮುಂಗೈಯನ್ನು ಈಗಲೂ ಸುರಪುರದ ನಾಯಕರ ವಂಶಸ್ಥರು ಸಂರಕ್ಷಿಸಿರುವರು). ವೆಂಟಪ್ಪನಾಯಕನು (೧೭೪೭-೫೨) ಹೊರ ಪ್ರಾಂತ್ಯಗಳಲ್ಲಿ ದಂಡಯಾತ್ರೆ ಕೈಗೊಂಡಿದ್ದ ಸಮಯದಲ್ಲಿ ಸುರಪುರದಲ್ಲಿ ಕೆಲವು ಅಧಿಕಾರಿಗಳು ಒಂದಾಗಿ ಸಂಚು ನಡೆಸಿ ಆತನನ್ನು ಅಧಿಕಾರದಿಂದ ತೆಗೆಯಲು ಪ್ರಯತ್ನಿಸಿದರು. ಗುಡಗುಂಟಿಯ ಸೋಮಸರ್ಜನನ್ನು ಕರೆತಂದು ಅವನನ್ನು ಸುರಪುರದ ಅರಸನೆಂದು ಘೋಷಿಸಿದರು. ಅವನು ಸುಮಾರು ಒಂಭತ್ತು ತಿಂಗಳು ಆಳಿದನು. ವೆಂಕಟಪ್ಪನಾಯಕನು ವಿಠೋಜಿರಾಯನೆಂಬುವನ ಸಹಾಯದಿಂದ ಸುರಪುರಕ್ಕೆ ತನ್ನ ಸೈನ್ಯ ಬಂದು ಮತ್ತೆ ಅಧಿಕಾರವನ್ನು ಪಡೆಯಲು ಹವಣಿಸುತ್ತಿದ್ದನು. ಬಂಡುಗಾರರು ವೆಂಟಪ್ಪನಾಯಕನನ್ನು ಹಿಡಿದು ಸೆರೆಯಲ್ಲಿಟ್ಟರು. ದೇವದುರ್ಗದ ಕಿಲಿಚನಾಯಕನು ಬಂದು ಬೇಡರನ್ನು ಸಂಘಟಿಸಿ ಬಂಡುಗಾರರನ್ನು ಹೊರಹಾಕಿ ವೆಂಕಟಪ್ಪ ನಾಯಕನನ್ನು ಬಿಡುಗಡೆ ಮಾಡಿದನು. ಸೋಮಸರ್ಜಾ ತಕ್ಷಣ ಸುರಪುರದಿಂದ ಪಲಾಯನ ಮಾಡಿದನು. ವೆಂಕಟಪ್ಪನಾಯಕನು ಸಂತಾನವಿಲ್ಲದೇ ೧೭೫೨ರಲ್ಲಿ ನಿಧನನಾದನು. ಸಂಸ್ಥಾನದಲ್ಲಿ ಆಗ ಅಧಿಕಾರಕ್ಕೆ ಹಕ್ಕಿದ್ದ ಕೃಷ್ಣಪ್ಪನಾಯಕ ಮತ್ತು ಅವನ ಮಕ್ಕಳು ಸುರಪುರದಲ್ಲಿರಲಿಲ್ಲ. ಆದುದರಿಂದ, ಆತನ ತರುವಾಯ ರಮಣಪ್ಪನಾಯಕನೆಂಬುವವನನ್ನು ಸಂಸ್ಥಾನದ ಹಕ್ಕುದಾರನೆಂದು ಪರಿಗಣಿಸಿದರು. ಈತನು ವೃದ್ಧಾಪ್ಯದಲ್ಲಿದ್ದುದರಿಂದ ಇವನ ಮಗ ಪಾಮನಾಯಕನಿಗೆ ಪಟ್ಟವನ್ನು ಕಟ್ಟಿದರು. ಇವು ಅಪ್ರಾಪ್ತ ವಯಸ್ಕನಾಗಿದ್ದುದರಿಂದ ಇವನ ಪರವಾಗಿ ರಮಣಪ್ಪ ನಾಯಕನೇ ಅಧಿಕಾರ ನಡೆಸಿದನು. ಇವನ ಸುರಪುರದ ಗೋಪಾಲಸ್ವಾಮಿಯ ದೇವಾಲಯದ ಕಟ್ಟಡ ಕಾರ್ಯವನ್ನು ಮುಂದುವರೆಸಿದನೆಂದು ಹೇಳಲಾಗುತ್ತದೆ. ಮುಮ್ಮಡಿ ವಾಮನಾಯಕನು (೧೭೫೨-೭೪) ಅಧಿಕಾರಕ್ಕೆ ಬಂದ ಸಮಯದಲ್ಲಿ ಹೈದರಾಬಾದಿನಲ್ಲಿ ನಿಜಾಮ ಅಲಿಖಾನನು (೧೭೫೭) ಅಧಿಕಾರದಲ್ಲಿದ್ದನು. ಮರಾಠಾ ಸಾಮ್ರಾಜ್ಯದಲ್ಲಿ ಬಾಲಾಜಿ ಬಾಜಿರಾಯನು ಪೇಶ್ವೆಯಾಗಿದ್ದನು. (೧೭೪೦-೬೧). ಈ ಎರಡೂ ರಾಜಕೀಯ ಶಕ್ತಿಗಳೊಡನೆ ಪಾಮನಾಯಕನು ವೈವಿಧ್ಯಮಯವಾದ ಪ್ರತ್ಯೇಕ ಮೈತ್ರಿಯನ್ನು ಮುಂದುವರೆಸಿಕೊಂಡು ಹೋದನು. ಪಾಮನಾಯಕನ ಕಾಲದಲ್ಲಿ ಸುರಪುರದಲ್ಲಿ ಸಣ್ಣಪುಟ್ಟ ಬೇಡರ ಬಂಡಾಯಗಳು ತಲೆಯೆತ್ತಿದವು. ಅರಸನು ಅವುಗಳನ್ನು ಹತ್ತಿಕ್ಕಿದನು. ಈತನು ೧೭೭೩ರಲ್ಲಿ ನಿಧನನಾದ ಮೇಲೆ ಇಮ್ಮಡಿ ವೆಂಟಪ್ಪನಾಯಕನು ಸುರಪುರದ ಸಂಸ್ಥಾನದ ಅಧಿಕಾರ ವಹಿಸಿಕೊಂಡನು.

ಇಮ್ಮಡಿ ವೆಂಕಟಪ್ಪನಾಯಕನು (೧೭೭೩-೧೮೦೨) ಅರಸುತನವನ್ನು ಒಪ್ಪಿಸಿಕೊಂಡ ತಕ್ಷಣವೇ ರಘುನಾಥರಾವ್ ಪೇಶ್ವೆ ಮತ್ತು ನಿಜಾಮರ ನಡುವೆ ಬಿದರಕೋಟೆ ಎಂಬ ಸ್ಥಳದಲ್ಲಿ ಯುದ್ಧವಾಯಿತು. ವೆಂಕಟಪ್ಪ ನಾಯಕನಿಗೂ ಪೇಶ್ವೆಗೂ ನಡುವೆ ರುಸೂಮನ್ನು ವಸೂಲು ಮಾಡುವ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಈ ಮಧ್ಯೆ ನಿಜಾಮನಿಗೂ-ಪೇಶ್ವೆಗೂ ಪೂರ್ವದ ವೈಷಮ್ಯವಿದ್ದ ಕಾರಣ ಖರ್ಡೆ ಎಂಬ ಸ್ಥಳದಲ್ಲಿ ಯುದ್ಧ ಪ್ರಾರಂಭವಾಯಿತು. ನಿಜಾಮನು ಸುರಪುರದ ಇಮ್ಮಡಿ ವೆಂಕಟಪ್ಪನಾಯಕನ ಸಹಾಯ ಕೋರಿದನು. ಈ ಕರೆಗೆ ಒಪ್ಪಿ ತಾನೇ ತನ್ನ ಸೈನ್ಯದೊಡನೆ ನಿಜಾಮನ ಪರವಾಗಿ (೧೭೯೫) ಯುದ್ಧದಲ್ಲಿ ಪ್ರವೇಶಿಸಿದನು. ಇದಾದ ತರುವಾಯ ನಿಜಾಮನು ಬ್ರಿಟೀಷರ ಬೆಂಬಲವನ್ನು ಹೆಚ್ಚಿಸಿಕೊಂಡನು. ಸುರಪುರ ಸಂಸ್ಥಾನವು ನಿಜಾಮನ ಅಪರೋಕ್ಷ ಹತೋಟಿಯಲ್ಲಿದ್ದುದರಿಂದ ಇಲ್ಲಿಯೂ ಆಂಗ್ಲರ ಆಡಳಿತವು ಕ್ರಮೇಣ ನೆಲೆಯೂರುವಂತಾಯಿತು. ಇವನ ತರುವಾಯ ಮುಮ್ಮಡಿ ಪಿಡ್ಡನಾಯಕ (೧೮೦೨-೧೮)ನು ಸುರಪುರ ಸಂಸ್ಥಾನದ ಅಧಿಕಾರ ನಿರ್ವಹಿಸಿದನು. ಪಿಡ್ಡನಾಯಕನ ತರುವಾಯ ಮುಮ್ಮಡಿ ಪಿಡ್ಡನಾಯಕನು ಅಧಿಕಾರಕ್ಕೆ ಬಂದನು. ಮುಮ್ಮಡಿ ಪಿಡ್ಡನಾಯಕನು (೧೮೧೮-೨೭) ಅದಿಕಾರಕ್ಕೆ ಬಂದ ಮೇಲೆ ಹಿಂದೆ ಜಾರಿಗೆ ಬಂದಿದ್ದ ನಿರ್ಣಯದಂತೆ ಸಿಕೆಂದರ್ ಜಾಹ ನಿಜಾಮನಿಗೆ ನಜರಾಣಿ ಪೇಷ್‌ಕಷ್ ಅನ್ನು ಕೊಟ್ಟನು. ಈ ಸಮಯದಲ್ಲಿ ಪೇಶ್ವೆ ರಾಜ್ಯವು ನಾಮಾವಶೇಷವಾಗಿ ಆ ಪ್ರದೇಶವೆಲ್ಲವೂ ಇಂಗ್ಲೀಷರ ವಶವಾಗಿತ್ತು. ಇಂಗ್ಲೀಷರು ಮತ್ತು ನಿಜಾಮರ ನಡುವೆ ೧೮೦೦ರಲ್ಲಿ ತಹನಾಮೆ (ಒಪ್ಪಂದ) ಆಗಿದ್ದುದರಿಂದ ಮತ್ತು ೧೮೧೮ರಲ್ಲಿ ಪೇಶ್ವೆ ರಾಜ್ಯವು ಇಂಗ್ಲೀಷರ ವಶವಾಗಿದ್ದ ಹಿನ್ನೆಲೆಯಲ್ಲಿ ಸುರಪುರ ಸಂಸ್ಥಾನದಲ್ಲಿ ಕೈ ಹಾಕಲು ಸಿದ್ಧತೆ ನಡೆಯಿತು. ಇದೇ ಸಂದರ್ಭದಲ್ಲಿ ಸಂಸ್ಥಾನದ ಆರ್ಥಿಕ ಸ್ಥಿತಿಯು ಹದಗೆಟ್ಟಿತ್ತು. ಮುಮ್ಮಡಿ ವೆಂಕಟಪ್ಪನಾಯಕನು ಹೆಸರಿಗೆ

ಮಾತ್ರ ಸುರಪುರ ಸಂಸ್ಥಾನದ ಅಧಿಕಾರವನ್ನು ಮುಂದುವರೆಸಿದ್ದನು. ಈತನು ರಂಗಮ್ಮನೆಂಬ ತನ್ನ ಪತ್ನಿಯ ಹೆಸರಿನಲ್ಲಿ ೧೮೨೨ರಲ್ಲಿ ಸುರಪುರದ ಸಮೀಪ ರಂಗಮ್ಮ ಪೇಟೆಯನ್ನು ಸ್ಥಾಪಿಸಿದನೆಂದು ಪ್ರತೀತಿಯಿದೆ. ಈತನು ೧೮೨೭-೪೩ರಲ್ಲಿ ಸುರಪುರ ಸಂಸ್ಥಾನದ ಅಧಿಕಾರ ವಹಿಸಿಕೊಂಡನು. ಈತನ ಅಧಿಕಾರದ ಅವಧಿಯಲ್ಲಿ ಉಲ್ಬಣಿಸಿದ ಸುರಪುರ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಮಾಡಲು ಆಗಿನ ಬ್ರಿಟೀಷ್ ಸರಕಾರ ೧೮೪೨ರಲ್ಲಿ ಕ್ಯಾಪ್ಟನ್ ಗ್ರಿಸ್ಲೇ ಎಂಬುವವನನ್ನು ನೇಮಿಸಿತು. ಈತನು ನಿಜಾಮ ಸರಕಾರದ ಪಕ್ಷ ವಹಿಸಿ ಸುರಪುರದ ಪರಗಣೆಯನ್ನು ಸಂಸ್ಥಾನಿಕರಿಂದ ಕಸಿದು ನಿಜಾಮನಿಗೆ ಕೊಡಬೇಕೆಂದು ತನ್ನ ವರದಿಯಲ್ಲಿ ಸೂಚಿಸಿದನು.

ಕ್ಯಾಪ್ಟನ್ ಗ್ರಿಸ್ಲೇ ಸುರಪುರದಲ್ಲಿ ಇರುವಾಗಲೇ ಕೃಷ್ಣಪ್ಪನಾಯಕನು ನಿಧನನಾದನು. ಈತನ ತರುವಾಯ ಏಳು ವರ್ಷದ ನಾಲ್ವಡಿ ವೆಂಕಟಪ್ಪನಾಯಕನು (೧೮೪೨-೫೮) ಅಧಿಕಾರಕ್ಕೆ ಬಂದನು ಹಾಗೂ ಆತನು ಅಪ್ರಾಪ್ತ ವಯಸ್ಕನಾಗಿದ್ದುದರಿಂದ ಇವನ ತಾಯಿ ಈಶ್ವರಮ್ಮ ಆಡಳಿತ ನಡೆಸಿದಳು. ಕ್ಯಾಪ್ಟನ್ ಗ್ರಿಸ್ಲೇಯ ಬದಲು ಕ್ಯಾಪ್ಟನ್ ಮೆಡೋಸ್ ಟೇಲರ್‌ನನ್ನು ರಾಜಕೀಯ ಪ್ರತಿನಿಧಿಯಾಗಿ ಬ್ರಿಟೀಷ್ ಸರಕಾರ ೧೮೪೩ರಲ್ಲಿ ನೇಮಕ ಮಾಡಿತು. ಈತನು ಎಲ್ಲಾ ರೀತಿಯಿಂದಲೂ ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಿ ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಉತ್ತಮ ಪಡಿಸಿದನು. ಇಲ್ಲಿಂದ ಮುಂದೆ ಸುರಪುರ ನಾಯಕರು ಯಾವುದೇ ಸ್ವತಂತ್ರ ಅಧಿಕಾರವನ್ನು ಹೊಂದದೇ ಕೇವಲ ಇಂಗ್ಲೀಷರ ಅಧೀನ ಅರಸರಾಗಿ ಮುಂದುವರೆದರು. ನಾಲ್ವಡಿ ವೆಂಕಟಪ್ಪನಾಯಕನೇ ಈ ವಂಶದ ಕೊನೆಯ ಅರಸನೆಂದು ಹೇಳಲಾಗುತ್ತದೆ.

## ಬ್ರಿಟಿಷರು ಮತ್ತು ಸ್ವಾತಂತ್ರ್ಯ ಸಂಗ್ರಾಮ

ಆದಿಲ್ ಷಾಹಿ ಸಾಮ್ರಾಜ್ಯದ ಪತನವಾದ ಮೇಲೆ ದಖಿನ್ ಪ್ರದೇಶದಲ್ಲಿ ಸಣ್ಣಪುಟ್ಟ ಸ್ವತಂತ್ರ ರಾಜ್ಯಗಳು ಬಲಗೊಂಡಿದ್ದೆ ಅಲ್ಲದೇ, ಹೈದರಾಬಾದ್ ಸಂಸ್ಥಾನದ ನಿಜಾಮನು ೧೮೧೮ರ ತರುವಾಯ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ಹಿತವನ್ನು ಬೆಂಬಲಿಸುವ ಪರಾಧೀನತ್ವದೆಡೆಗೆ ಸಾಗಿದ್ದನು. ಇದೇ ಸಮಯದಲ್ಲಿ ಸುರಪುರದ ನಾಯಕರು ಕಂಪನಿ ಸರಕಾರದ ಹತೋಟಿಗೆ ಒಳಪಡುವುದಕ್ಕೆ ತಮ್ಮ ವಿರೋಧವನ್ನು ಪ್ರಕಟಿಸಿದರು. ನಾಲ್ವಡಿ ವೆಂಕಟಪ್ಪ ನಾಯಕನು ೧೮೪೧ರಲ್ಲಿ ಸುರಪುರ ಸಂಸ್ಥಾನದ ನಾಯಕನಾದ ಮೇಲೆ, ಆತನು ಅಪ್ರಾಪ್ತ ವಯಸ್ಕನಾದ ಕಾರಣ, ಬ್ರಿಟೀಷರು ಹೈದರಾಬಾದ್ ನಿಜಾಮನ ಬೆಂಬಲದಿಂದ ಈ ಸಂಸ್ಥಾನಕ್ಕೆ ಮೆಡೋಸ್ ಟೈಲರ್‌ನನ್ನು ರಾಜಕೀಯ ಪ್ರತಿನಿಧಿಯಾಗಿ ನೇಮಿಸಿದರು. ಯುವರಾಜನಿಗೆ ಶಿಕ್ಷಣ ಹಾಗೂ ರಾಜ್ಯಾಡಳಿತದಲ್ಲಿ ಸೂಕ್ತ ತರಬೇತಿಯನ್ನು ನೀಡವುದು ಈ ರಾಜಕೀಯ ಪ್ರತಿನಿಧಿಯ ಜವಾಬ್ದಾರಿಯಾಗಿತ್ತು. ತಾನು ಪ್ರವರ್ಧಮಾನಕ್ಕೆ ಬಂದ ಮೇಲೆ ವೆಂಕಟಪ್ಪ ನಾಯಕನು ಸಂಸ್ಥಾನದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡದ್ದೇ ಅಲ್ಲದೇ, ರಾಜಕೀಯ ಪರಿಜ್ಞಾನದಿಂದ ಆಡಳಿತ ಪದ್ಧತಿಯನ್ನು ಅಂತರಿಕವಾಗಿ ಭದ್ರಪಡಿಸಿದನು. ಆಗಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಡಾಲಹೌಸಿಯು ಸಿಪಾಯಿ ದಂಗೆಗೆ (ಐದು ವರ್ಷಗಳಿಗೆ ಮುಂಚೆ ೧೮೫೨) ಮುಂಬೈ ಇನಾಮ್ ಕಮಿಷನ್‌ಅನ್ನು ನೇಮಕ ಮಾಡಿ ದಖನ್ನಿನ ಸಣ್ಣಪುಟ್ಟ ಸಂಸ್ಥಾನಗಳು ಹೊಂದಿದ್ದ ಆಸ್ತಿಪಾಸ್ತಿಗಳ ಬಗೆಗೆ ಅನ್ವೇಷಣೆ ಕೈಗೊಳ್ಳಲು ಅದೇಶಿಸಿದನು. ಈ ಕಮಿಷನ್‌ನ ಶಿಫಾರಸ್ಸಿನನ್ವಯ ಈ ಪ್ರದೇಶದಲ್ಲೆ ೨೦,೦೦೦ಕ್ಕೂ ಅಧಿಕ ಸಂಖ್ಯೆಯ ಆಸ್ಥಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಡಾಲಹೌಸಿಯು ನಿರ್ಧರಿಸಿದನು. ಸುರಪುರದ ಸಂಸ್ಥಾನವು ಈ ಆರ್ಥಿಕ ನಿರ್ಬಂಧವನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ಅಷ್ಟೇ ಅಲ್ಲದೇ ತನ್ನ ಸಂಸ್ಥಾನದ ಆಂತರಿಕ ವ್ಯವಹಾರದಲ್ಲಿ ಬ್ರಿಟೀಷರು ಹಸ್ತಕ್ಷೇಪ ಮಾಡುವುದನ್ನು ವೆಂಕಟಪ್ಪನಾಯಕನು ಪ್ರಬಲವಾಗಿ ವಿರೋಧಿಸಿದನು. ವೆಂಕಟಪ್ಪನಾಯಕನಿಗೆ, ಡಾಲಹೌಸಿಯು, ಉತ್ತರಾಧಿಕಾರಿಗಳಿಲ್ಲದ ಕಾರಣದ ಮೇಲೆ ಅನೇಕ ಸಣ್ಣಪುಟ್ಟ ಸಂಸ್ಥಾನಗಳನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡುದುದರ ಬಗೆಗೆ ಅರಿವಿತ್ತು. ತನ್ನ ಸಂಸ್ಥಾನದ ಸಂರಕ್ಷಣೆಗೆ ಅವಶ್ಯಕವಾದ ಸೇನೆಯನ್ನು ಅರಬ್ಬರಿಂದ ಮತ್ತು ರೋಹಿಲ್ಲ ವಂಶಗಳಿಂದ ಆಯ್ದು ಸೈನಿಕರಿಂದ ಬಲಗೊಳಿಸಲು ಸೂಕ್ತ ಕ್ರಮ ಕೈಗೊಂಡನು.

ಆದರೆ ತನ್ನ ಸಾಮ್ರಾಜ್ಯಶಾಹಿ ಧೋರಣೆಯಿಂದ ರಾಜಕೀಯ ವಿಸ್ತರಣೆ ಕೈಗೊಂಡ ಬ್ರಿಟೀಷರಿಗೆ ಸುರುಪುರದ ಗೋಪ್ಯ ಸೈನ್ಯ ಬಲದ ವರ್ಧನೆಯ ಬಗೆಗೆ ಮಾಹಿತಿ ಇತ್ತೆಂದು ತಿಳಿದುಬರುತ್ತದೆ. ಅವಶ್ಯಕವಾಗಿ ತಮ್ಮ ವಿರುದ್ಧ ದಂಗೆ ಎಬ್ಬಿಸಲು ಹವಣಿಸುತ್ತಿರುವ ಹಾಗೂ ದುರಾಡಳಿತದ ಆರೋಪದ ಮೇಲೆ ಸುರಪುರದ ನಾಯಕನ ವಿರುದ್ಧ ತನಿಖೆಯನ್ನು ಮಾಡಲು ಕಂಪನಿ ಸರಕಾರ ನಿರ್ಧಾರ ಕೈಗೊಂಡಿತು. ಈ ಎಲ್ಲಾ ಆರೋಪಗಳೂ ನಿರಾಧಾರವಾದುದೆಂದು ನಾಯಕನು

ಪ್ರತಿಪಾದಸಿದನು. ಆದರೆ ಇದೇ ಸಮಯದಲ್ಲಿ ಹೈದರಾಬಾದಿನ ನಿಜಾಮನು ಸುರಪುರದ ಸಂಸ್ಥಾನದಲ್ಲಿ ನಾಯಕನು ಗುಪ್ತವಾಗಿ ಸೈನಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆಂದು ಆರೋಪಿಸಿ ಹೈದರಾಬಾದ್‌ನಲ್ಲಿದ್ದ ಬ್ರಿಟೀಷ್ ರೆಸಿಡೆಂಟ್‌ಗೆ ಒಂದು ದೂರು ಕಳುಹಿಸಿದನು. ಈ ಪ್ರದೇಶದಲ್ಲಿ ಒಂದು ಪ್ರಬಲ ದಂಗೆಯಾಗಬಹುದೆಂದು ಆಲೋಚಿಸಿ ಬ್ರಿಟೀಷ್ ಸರಕಾರ ವೆಂಕಟಪ್ಪ ನಾಯಕನನ್ನು ದಂಡಿಸಲು ಕ್ಯಾಪ್ಟನ್ ಬ್ಯಾರಿಯ ನೇತೃತ್ವದಲ್ಲಿ ಸೈನಿಕ ತುಕಡಿಯನ್ನು ಸುರಪುರಕ್ಕೆ ಕಳುಹಿಸಿತು. ಈ ದಾಳಿಯನ್ನು ಪರಾಕ್ರಮದಿಂದ ಸುರಪುರದ ಬೇಡರು ಎದುರಿಸಿದ್ದೇ ಅಲ್ಲದೇ ಬ್ರಿಟೀಷರ ಈ ಸೇನೆಯ ಮುಖಂಡ, ಕ್ಯಾಪ್ಟನ್ ಬ್ಯಾರಿಯನ್ನು ಪ್ರಬಲ ಸೆಣೆಸಾಟದಲ್ಲಿ ಕೊಲ್ಲಲಾಯಿತು. ಇದಕ್ಕೆ ಉತ್ತರವಾಗಿ ಬ್ರಿಟೀಷರು ಮತ್ತಷ್ಟು ಸೇನೆಯ ಬಲದೊಂದಿಗೆ ಮತ್ತೊಮ್ಮೆ ದಾಳಿ ಮಾಡಿ ಸುರಪುರದ ಕೋಟೆಗೆ ಮುತ್ತಿಗೆ ಹಾಕಿದರು. ಸುರಪುರದ ಬೇಡರು ಪ್ರಬಲ ವಿರೋಧವನ್ನು ಒಡ್ಡಿದ್ದರೂ ತಮ್ಮ ಸೇನೆಯ ಅಧಿಕಾರಿಯೊಬ್ಬನ ರಾಜದ್ರೋಹದಿಂದಾಗಿ ಸೋಲನ್ನನುಭವಿಸ ಬೇಕಾಯಿತು. ತನ್ನ ಸೋಲನ್ನು ಮೊದಲೇ ಮನಗಂಡಿದ್ದ ವೆಂಕಟಪ್ಪ ನಾಯಕನು ಸುರಪುರದಿಂದ ಹೈದರಾಬಾದಿಗೆ ಹೊರಟು ಹೋಗಿದ್ದನು. ಪುನಃ ಅರಬ್ಬಿ ಮತ್ತು ರೊಹಿಲ್ಲಾಗಳನ್ನೊಳಗೊಂಡ ಸೈನ್ಯ ಶಕ್ತಿಗಳನ್ನು ಸಂಘಟಿಸಿ ಸುರಪುರವನ್ನು ಹಿಂದಕ್ಕೆ ಪಡೆಯಬಹುದೆಂಬ ಆಕಾಂಕ್ಷೆ ಆತನಿಗಿತ್ತು. ಆದರೆ, ಈ ಆಸೆ ಕೈಗೂಡಲಿಲ್ಲ. ಆತನ ಜೊತೆಗೆ ಹೈದರಾಬಾದ್‌ಗೆ ಹೋಗಿದ್ದ ಜೊತೆಗಾರರು ಚದುರಿಹೋಗಿದ್ದರು. ವೆಂಕಟಪ್ಪನಾಯಕನನ್ನು ಸಲಭವಾಗಿ ಸೆರೆಹಿಡದು ಸಾಲಾರ್‌ಜಂಗನ ಮೂಲಕ ಬ್ರಿಟೀಷರಿಗೆ ಒಪ್ಪಿಸಲಾಯಿತು. ಈತನ ವಿರುದ್ಧ ಹಲವಾರು ರಾಜಕೀಯ ಆರೋಪಗಳನ್ನು ಹೊರಿಸಿ ವಿಚಾರಣೆಗೆ ಗುರಿ ಮಾಡಿ ನಾಲ್ಕು ವರ್ಷಗಳ ಶಿಕ್ಷೆಯನ್ನು ಕಂಪನಿ ಸರಕಾರ ವಿಧಿಸಿತು. ತನಗೆ ಉಂಟಾದ ಅವಮಾನವನ್ನು ಸಹಿಸಲಾರದೇ, ತನ್ನನ್ನು ಕಾರಾಗೃಹಕ್ಕೆ ಒಯ್ಯುತ್ತಿದ್ದ ಅಧಿಕಾರಿಯ ಬಳಿಯಿದ್ದ ರಿವಾಲ್ವಾರ್‌ನ ಸಹಾಯದಿಂದ ವೆಂಕಟಪ್ಪ ನಾಯಕನು ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿದುಬರುತ್ತದೆ. ೧೮೫೭ರ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದ ವೀರಯೋಧ ವೆಂಕಟಪ್ಪನಾಯಕನ ಅಂತ್ಯದ ಬಗೆಗೆ ಹಲವಾರು ಭಿನ್ನಭಿಪ್ರಾಯಗಳಿವೆ. ಹೀಗೆ ಬ್ರಿಟೀಷರು ಆಕ್ರಮಿಸಿದ ಸುರಪುರ ಸಂಸ್ಥಾನವನ್ನು ೧೮೫೮ರಲ್ಲಿ ನಿಜಾಮನ ಆಧೀನಕ್ಕೆ ಒಪ್ಪಿಸಲಾಯಿತು. ಹೀಗೆ ಹೈದರಾಬಾದ್ ಸಂಸ್ಥಾನವು ಬ್ರಿಟೀಷ್ ಸಾಮ್ರಾಜ್ಯಶಾಹಿ ವಾದದ ಒಂದು ಬಲಿಷ್ಠ ಕೋಟೆಯಾಗಿತ್ತು ಮತ್ತು ಮುಸ್ಲಿಮರ ಊಳಿಗ ಮಾನ್ಯದ ಒಂದು ಕೇಂದ್ರವಾಗಿ ಬೆಳೆಯಿತೆಂಬ ಅಭಿಪ್ರಾಯವೂ ಇದೆ.

ಬ್ರಿಟೀಷರಿಗೆ ಹೈದರಾಬಾದ್ ಅರಸನು ನೀಡಿದ ಸಹಾಯವನ್ನು ಕೊಂಡಾಡಿ ನಿಜಾಮನೊಂದಿಗೆ ಬಿಟೀಷ್ ಸರಕಾರವು ೧೮೬೦ರಲ್ಲಿ ಹೊಸದೊಂದು ಸ್ನೇಹ ಒಪ್ಪಂದ ಮಾಡಿಕೊಂಡಿತು. ಇದರ ಪ್ರಕಾರ ಉಸ್ಮಾನಾಬಾದ್ ಮತ್ತು ರಾಯಚೂರು ದೋಅಬ್‌ಗಳು ನಿಜಾಮನ ಅಧಿಕಾರಕ್ಕೆ ಒಳಪಡುವಂತಾಯಿತು. ೧೮೬೯ರಲ್ಲಿ ನಿಜಾಮ ಅಫ್‌ಜಲ್-ಉದ್-ದೌಲನ ತರುವಾಯ ಅವನ ಮಗ ಮೀರ ಮೆಹಬೂಬ್ ಆಲಿ ಖಾನನು ಅಧಿಕಾರಕ್ಕೆ ಬಂದನು. ಆಗ ಈತನಿಗೆ ಕೇವಲ ಮೂರು ವರ್ಷ ವಯಸ್ಸಾಗಿದ್ದ ಕಾರಣ ಮೊದಲನೇ ಸಾಲಾರ್‌ಜಂಗ್ ಹಾಗೂ ನವಾಬ್ ಶಯ್‌ಜ್ ವುಲ್ಲಾ ಉಮರ್ ಇಬ್ಬರೂ ಸೇರಿ ಬ್ರಿಟೀಷರ ಮಾರ್ಗದರ್ಶನದಂತೆ ಆಡಳಿತ ನಿರ್ವಹಿಸಿದರು. ಈ ಆಳ್ವಿಕೆಯು ೧೮೮೪ರ ವರೆಗೂ ಮುಂದುವರೆಯಿತು. ಈ ಸಮಯದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಗುಲಬರ್ಗಾ ಜಿಲ್ಲೆಯು ಹೈದರಾಬಾದ್‌ನ ನಿಜಾಮನ ಮೂಲಕ ಬ್ರಿಟೀಷರ ಆಳ್ವಿಕೆಗೆ ಪರೋಕ್ಷವಾಗಿ ಒಳಪಟ್ಟಿತು. ದಖನ್ ಪ್ರದೇಶದ ಹೃದಯದಂತಿದ್ದ ಹೈದರಾಬಾದ್ ರಾಜ್ಯವು ಭಾರತದ ಅಂದಿನ ದೇಶೀಯ ರಾಜ್ಯಗಳ ಪೈಕಿ ಅತಿದೊಡ್ಡ ರಾಜ್ಯವಾಗಿತ್ತು. ಇದರಲ್ಲಿ ತೆಲಂಗಾಣ, ಮರಾಠವಾಡ ಮತ್ತು ಕರ್ನಾಟಕಗಳೆಂಬ ಮೂರು ಭಾಷಾವಾರು ಪ್ರಾಂತ್ಯಗಳು ಅಡಕವಾಗಿದ್ದವು. ಕರ್ನಾಟಕದ ಈ ಭಾಗವು ಈಗಿನ ಬೀದರ್, ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳನ್ನು ಹೊಂದಿದ್ದಿತು. ಹೈದರಾಬಾದ್‌ನ ನಿಜಾಮರುಗಳ ನಿರಂಕುಶ ಆಡಳಿತಕ್ಕೆ ಒಳಪಟ್ಟಿದ್ದ ಗುಲಬರ್ಗಾ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟವು ೧೯೩೮ರವರೆಗೂ ಹೆಚ್ಚು ಪ್ರಭಾವವಿಲ್ಲದೇ ಮಂದಗತಿಯಿಂದ ಸಾಗಿತ್ತು. ಪರದೇಶ ವಸ್ತುಗಳ ಬದಲು ಸ್ವದೇಶಿ ವಸ್ತುಗಳನ್ನೇ ಬಳಸಬೇಕು, ಖಾದಿ ಬಟ್ಟೆಗಳನ್ನು ಉತ್ಪಾದಿಸಿ ಪ್ರಚುರ ಪಡಿಸಬೇಕು, ಹರಿಜನರ ಏಳ್ಗೇಗಾಗಿ ಪ್ರಯತ್ನಿಸಬೇಕು ಮುಂತಾದ ರಾಷ್ಟ್ರೀಯ ರಚನಾತ್ಮಕ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿದ್ದಿತು ಮತ್ತು ಈ ದಿಶೆಯಲ್ಲಿ ಅಲ್ಪಸ್ವಲ್ಪ ಕಾರ್ಯನಡೆಯುತ್ತಿತ್ತು.

## ಸ್ವಾತಂತ್ರ್ಯ ಸಂಗ್ರಾಮ

ಹೈದಾರಾಬಾದಿನಲ್ಲಿದ್ದ ನಿಜಾಮರ ಆಳ್ವಿಕೆಯ ಧೋರಣೆಗಳ ಪರಿಣಾಮವಾಗಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆಯಲ್ಲಿ ಹೈದರಾಬಾದ್ ಸರ್ಕಾರದ ಪ್ರತಿನಿಧಿ ಸಾಲಾರ್ ಜಂಗನು ಇಂಗ್ಲೀಷರಿಗೆ ಸಹಾಯ ಮಾಡಿದ ಕಾರಣ ಈ ಭಾಗದಲ್ಲಿ ಆ ಸಂಗ್ರಾಮವು ಯಾವುದೇ ಪ್ರಭಾವ ಉಂಟು ಮಾಡಲಿಲ್ಲವೆಂಬುದು ಇತ್ತೀಚಿನವರೆಗೂ ಇದ್ದ ಅಭಿಪ್ರಾಯವಾಗಿತ್ತು. ಆದರೇ, ಕೇವಲ ಹೈದರಾಬಾದಿನ ಆಳರಸರು ಮಾತ್ರ ಬ್ರಿಟೀಷರಿಗೆ ತಮ್ಮ ಬೆಂಬಲ ನೀಡಿದ್ದರೂ, ದಖನ್ನಿನ ಸಾಮಾನ್ಯ ಜನತೆಗೆ ಈ ಹೋರಾಟದಿಂದ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಸಹಾಯಕವಾಯಿತೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿಯೂ ಸ್ವಾತಂತ್ರ್ಯ ಹೋರಾಟದ ಬಗೆಗೆ ಜನಾಭಿಪ್ರಾಯದ ಜಾಗೃತಿ ಮೂಡಿತ್ತು. ಸಿಪಾಯಿ ದಂಗೆಯ ಸಮಯದಲ್ಲಿ ಇಂಗ್ಲೀಷರ ಭದ್ರತೆಗಾಗಿ ನಿಜಾಮನು ಒದಗಿಸಿದ್ದ ಪ್ರಬಲ ಸೇನೆಯ ಸಂರಕ್ಷಣೆಯಿಂದ ಈ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ತೀವ್ರ ಪರಿಣಾಮ ಉಂಟಾಗಿತ್ತು. ಈ ಸೇನೆಯ ಆಡಳಿತವನ್ನು ದುರ್ಬಲವಾಗಿ ನಿರ್ವಹಿಸಿದ್ದ ಮುಖ್ಯಮಂತ್ರಿ ಚಂದೂಲಾಲನ ದುಂದುವೆಚ್ಚದ ಪರಿಣಾಮವು ಸಾಮಾನ್ಯ ಜನತೆಗೆ ಸಹಜವಾಗಿಯೇ ಉಂಟಾಗಿತ್ತು. ಈ ಜಿಲ್ಲೆಯಲ್ಲಿದ್ದ ಸಾಮಾನ್ಯ ಜನತೆಯು ಬ್ರಿಟೀಷ್ ರೆಸಿಡೆಂಟನು ಹೋರಾಟದ ಸಣಪುಟ್ಟ ಘಟನೆಗಳನ್ನು ಅಡಗಿಸಿದ ಕಾರಣ ಜನತೆ ತಮ್ಮಲ್ಲಿದ್ದ ರಾಷ್ಟ್ರೀಯತೆಯ ಅರಿವಿಂದಾಗಿ ತಮ್ಮ ವಿರೋಧವನ್ನು ಆಗಿಂದಾಗ್ಗೆ ವ್ಯಕ್ತಪಡಿಸುತ್ತಿದ್ದರು. ಹೈದರಾಬಾದಿನ ಆಡಳಿತದಲ್ಲಿ ಮೊದಲನೇ ಸಾಲಾರ್‌ಜಂಗನು ಜಾರಿಗೆ ತಂದ ಸುಧಾರಣೆಗಳು ಹಾಗೂ ಆಂಗ್ಲ ಮತ್ತು ಉರ್ದು ಶಿಕ್ಷಣ ಪದ್ಧತಿಗಳು ಈ ಭಾಗದ ಜನ ಜಾಗೃತಿಗೆ ಸ್ವಲ್ಪ ಮಟ್ಟಿಗೆ ಕಾರಣವಾದುವು. ಪ್ರಸಿದ್ಧ ವಿದ್ವಾಂಸರಾಗಿದ್ದ ಅಘೋರನಾಥ ಚಟ್ಟೋಪಾಧ್ಯಾಯ, ಮುಲ್ಲಾ ಅಬ್ದುಲ್ ಕಯೂಮ್ ಮತ್ತು ರಾಮಚಂದ್ರ ಪಿಳ್ಳೈ ಮುಂತಾದವರು ಹೈದರಾಬಾದಿಗೆ ಬಂದು ನೆಲೆಸುವಂತಾಯಿತು. ಮಹಾತ್ಮಗಾಂಧೀಜಿಯವರು ೧೯೨೪ರಲ್ಲಿ ಅಧ್ಯಕ್ಷರಾಗಿದ್ದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಪರಿಣಾಮವಾಗಿ ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಸಕ್ತಿ ವಹಿಸಲು ಪ್ರಚೋದನೆ ಸಿಕ್ಕಿತು. ಇದಕ್ಕೆ ಪೂರ್ವದಲ್ಲಿ ೧೯೨೧-೨೨ರಲ್ಲಿ ಗುಲಬರ್ಗಾದಲ್ಲಿ ಕರಾಳಸ್ವರೂಪದ ಹಿಂದೂ-ಮುಸಲ್ಮಾನರ ದಂಗೆ ನಡೆಯಿತು. ಜನಾರ್ಧನ ರಾವ್ ದೇಸಾಯಿಯವರು ತಿಳಿಸಿರುವಂತೆ "ನಗರದಲ್ಲಿರುವ ಗುಡಿಗಳನ್ನು ಹಾಗೂ ಶರಣ ಬಸವೇಶ್ವರ ಗುಡಿಯನ್ನು ಕೆಡವಲು ಪ್ರಯತ್ನಗಳು ನಡೆದುವು. ಕೊನೆಗೆ ಸಿ.ಐಡಿ- ಡಿ.ಎಸ್.ಪಿ. ಅವರುಗಳ ಮರಣವಾಯಿತು. ಸಂಸ್ಥಾನೀ ಸರಕಾರ ಇದನ್ನು ಮುಚ್ಚಲು ಪ್ರಯತ್ನಿಸಿತು. ಆದರೆ ನಾನೇ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಅವರು ಇದರ ವಿಚಾರವನ್ನು ಬರೆದು ಪ್ರಕಟಿಸಿದೆ. ನಂತರ ಗಾಂಧೀಜಿಯವರು ಹರಿಜನ (ಯಂಗ್ ಇಂಡಿಯಾ?) ಪತ್ರಿಕೆಯಲ್ಲಿ 'ಗುಲಬರ್ಗಾ ಗಾನ್ ಮ್ಯಾಡ್' ಎಂಬ ಲೇಖನ ಬರೆದು ಪ್ರಕಟಿಸಿದರು." ಇದು ಆಕಾಲದ ಪ್ರಮುಖ ಪ್ರಚೋದಕ ಘಟನೆಯಾಗಿತ್ತೆಂದು ದೇಸಾಯಿ ಅವರು ತಿಳಿಸುತ್ತಾರೆ. ಮಹಾತ್ಮಗಾಂಧೀಜಿಯವರು ೧೯೨೭ರಲ್ಲಿ ಗುಲಬರ್ಗಾಕ್ಕೆ ಇದೇ ಸಂದರ್ಭದಲ್ಲಿ ಭೇಟಿ ನೀಡಿ ಶರಣ ಬಸವೇಶ್ವರ ದೇವಾಲಯವನ್ನು ಸಂದರ್ಶಿಸಿದರು. ಇವರ ಭೇಟಿ ಸ್ವಾತಂತ್ರ್ಯ ಚಳವಳಿಗಾರರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು. ಮುಖ್ಯವಾಗಿ ಗುಲಬರ್ಗಾ ಜಿಲ್ಲೆಯು ಹೈದರಾಬಾದ್ ರಾಜ್ಯದ ಭಾಗವಾಗಿದ್ದ ಕಾರಣ ಮತ್ತು ನಿಜಾಮನು ಬ್ರಿಟೀಷರಿಗೆ ಓಲೈಸಬೇಕಾಗಿದ್ದುದರಿಂದ ಕರ್ನಾಟಕ ಬೇರೆಡೆಗೆ ಸಂಭವಿಸಿದ ಅಸಹಕಾರ ಚಳವಳಿ ಅಥವಾ ಕರನಿರಾಕರಣ ಸತ್ಯಾಗ್ರಹಗಳು ಇಲ್ಲಿ ಸಂಭವಿಸಲಿಲ್ಲವೆಂಬ ಅಂಶವು ಗಮನೀಯವಾಗಿದೆ. ಆದರೆ, ರಾಷ್ಟ್ರೀಯ ಹೋರಾಟಗಳ ೧೯೩೧-೩೨ ಪ್ರಭಾವವು ಉಂಟಾಗದೇ ಇರಲಿಲ್ಲ. ಹೈದರಾಬಾದಿನ ಸಿಟಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಫಜಲ್-ಉಲ್-ರೆಹಮಾನ್ ಸ್ವದೇಶಿ ಸಂಘದ ಕಾರ್ಯದರ್ಶಿಯಾಗಿದ್ದರಿಂದ ಹಾಗೂ ಖಾದಿ ವಸ್ತ್ರಗಳನ್ನು ಧರಿಸುವ ಬಗೆಗೆ ಪ್ರೋತ್ಸಾಹಿಸಿದ್ದರಿಂದ ಅವರನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಈ ವೇಳೆಗಾಗಲೇ ರಾಷ್ಟ್ರೀಯ ಸಭೆಗಳನ್ನು ಸಮಾವೇಶಗೊಳಿಸುವುದರ ಮೇಲೆ ನಿಜಾಮನ ಸರಕಾರವು ನಿರ್ಬಂಧ ಹೇರಿತ್ತು. ಗುಲಬರ್ಗಾದಲ್ಲಿ ಖಾದಿ ಚಳವಳಿ ಹರಡಿತು.

ಹೈದರಾಬಾದ್ ರಾಜ್ಯದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ೧೯೩೮ನೇ ಇಸವಿಯು ಒಂದು ಮೈಲಿಗಲ್ಲೆಂದು ಪರಿಗಣಿಸಲ್ಪಟ್ಟಿದೆ. ಈ ಕಾಲದಲ್ಲಿ ರಾಜಕೀಯ ವಿಚಾರಗಳು ಕ್ರೋಢೀಕೃತಗೊಂಡು ಖಚಿತರೂಪ ತಳೆದವು. ಹೈದರಾಬಾದಿನಲ್ಲಿ ಆರ್ಯ ಸಮಾಜದ ಚಟುವಟಿಕೆಗಳು ೧೯ನೇ ಶತಮಾನದ ಕೊನೆಯ ದಶಕದಲ್ಲಿ ಆರಂಭವಾಗಿದ್ದರೂ ೧೯೩೫ರಿಂದೀಚೆಗೆ ಸ್ವಾಮಿ ಶ್ರದ್ಧಾನಂದರು ನೀಡಿದ್ದ ಉತ್ತೇಜನದಿಂದ ದ್ವಿಗುಣಗೊಂಡವು. ಆ ಸಮಯಕ್ಕೆ ಆರ್ಯ ಸಮಾಜವು ವಿವಿಧ

ಜಾತಿಗಳಲ್ಲಿ ಸಾಮಾಜಿಕ ಐಕ್ಯತೆ ಮೂಡಿಸುವ ಒಂದು ಪ್ರಬಲ ರಾಷ್ಟ್ರೀಯ ಸಂಸ್ಥೆಯಾಗಿ ಬೆಳೆದು ಬಂದಿತ್ತು. ಎಲ್ಲರಿಗೂ ಸಮಾನವಾದ ಧಾರ್ಮಿಕ ಹಕ್ಕುಬಾದ್ಯತೆಗಳನ್ನು ನೀಡಬೇಕೆಂಬ ಚಳವಳಿಗೆ ಆರ್ಯ ಸಮಾಜವು ಪ್ರಮುಖ ವೇದಿಕೆಯಾಯಿತು. ಜನವರಿ ೧೯೩೭ರಲ್ಲಿ ಕಕ್ಕೇರಿ ಹನುಮಂತರಾಯರ ಅಧ್ಯಕ್ಷತೆಯಲ್ಲಿ ಹೈದರಾಬಾದ್ ಸಾರ್ವಜನಿಕ ಸಮಿತಿಯು ಅಧಿವೇಶನದಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಯ ಬಗೆಗೆ ನಿರ್ಣಯ ಕೈಗೊಂಡಿತು. ಇದರ ಪರಿಣಾಮವಾಗಿ ನಿಜಾಮನ ಸರಕಾರವು ಸೆಪ್ಟೆಂಬರ್ ೧೯೩೮ರಲ್ಲಿ ಹೈದರಾಬಾದಿನ ರಾಜ್ಯ ಕಾಂಗ್ರೆಸ್‌ನ ಮೇಲೆ ನಿರ್ಬಂಧ ಹೇರಿದ್ದ ಕಾರಣ ಆರ್ಯ ಸಮಾಜದ ಚಳವಳಿಗೆ ಪುಷ್ಟಿ ಸಿಕ್ಕಿತೆಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ. "ಹೈದರಾಬಾದ್ ಸಂಸ್ಥಾನದಲ್ಲೆಲ್ಲಾ ಹಿಂದೂ-ಮುಸ್ಲಿಂ ದಂಗೆಗಳು ನಡೆಯುತ್ತಿದ್ದ ಕಾಲ ಅದಾಗಿತ್ತು. ಅಸಮಾಧಾನದಿಂದ ಹೊಗೆಯಾಡುತ್ತಿದ್ದ ಹಿಂದೂಗಳ ಮನಸ್ಸು ಇನ್ನು ದಬ್ಬಾಳಿಕೆಯ ವಿರುದ್ಧ ತಲೆಯೆತ್ತಲು ಹವಣಿಸುತ್ತಿದ್ದವು. ಆರ್ಯ ಸಮಾಜವು ಇದಕ್ಕೆ ನಾಯಕತ್ವ ಒದಗಿಸಿತು. ಹಾಗೂ ಬಹುಪಾಲು ಪ್ರತಿಭಟನೆಗಳು ಧಾರ್ಮಿಕ ಮೆರವಣಿಗೆಗಳಿಗೆ ಅವಕಾಶ ಕೊಡದಾಗ ಜಾತೀಯ ದಂಗೆಗಳಲ್ಲಿ ಮುಕ್ತಾಯವಾಗುತ್ತಿತ್ತು" ಎಂದು ರಾಮಾನಂದ ತೀರ್ಥರು ತಿಳಿಸುತ್ತಾರೆ. ಇಂಥಹ ಚಟುವಟಿಕೆಗಳನ್ನು ಗಮನಿಸಿ ,ವರದಿ ಮಾಡಲು ಪಂಜಾಬಿನ ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರೊಬ್ಬರನ್ನು ಆರ್ಯ ಸಮಾಜವು ನೇಮಿಸಿತ್ತು. ಹೈದರಾಬಾದಿನಲ್ಲಿ ಬಾಪಟ್ ಎಂಬುವರು ವೀರಸಾವರ್ಕರ್ ಅವರ ಹಿಂದೂ ಮಹಾಸಭಾದ ಚಳವಳಿಯನ್ನು ನಿರ್ದೇಶಿಸುತ್ತಿದ್ದರು. ಬಾಪಟ್ ಅವರು ೧೯೩೮ರಲ್ಲಿ ಗುಲಬರ್ಗಾಕ್ಕೆ ಬಂದು ಹಿಂದೂ ಮಹಾಸಭಾದ ಸಭೆಗಳನ್ನು ಸಂಘಟಿಸಿದಾಗ ಅವರನ್ನು ಸೆರೆಹಿಡಿಯಲಾಯಿತು. ಈ ರೀತಿ ಮೂರು ನಾಲ್ಕು ಸಲ ಸಂಭವಿಸಿ ಅವರನ್ನು ಸೊಲ್ಲಾಪುರಕ್ಕೆ ಕರೆದೊಯ್ಯಲಾಯಿತು. ಸ್ವಾಮಿ ರಾಮಾನಂದ ತೀರ್ಥರು ಹೈದರಾಬಾದಿನಲ್ಲಿ ನಿಜಾಮನ ಸರಕಾರವು ಹೇರಿದ ನಿರ್ಬಂಧದ ಬಗೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದೇ ಅಲ್ಲದೇ ಹೈದರಾಬಾದ್ ರಾಜ್ಯದಲ್ಲೆಲ್ಲಾ ಸಂಚರಿಸಿ ಸತ್ಯಾಗ್ರಹಗಳನ್ನು ಸಂಘಟಿಸಿದರು. ರಾಮಾನಂದ ತೀರ್ಥರು ಜುಲೈ ೨೬, ೧೯೦೩ರಂದು ವಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಜನಿಸಿದರು. ಆದರೆ, ಅವರ ಮನೆತನ ಮೂಲತಃ ಗುಲಬರ್ಗಾ ಜಿಲ್ಲೆಯದೆಂಬ ಅಭಿಪ್ರಾಯವಿದೆ. ಅವರ ಪೂರ್ವಾಶ್ರಮದ ಹೆಸರು ವೆಂಕಟೇಶ ಖೇಡಗಿಕರ್. ಪುಣೆಯ ರಾಷ್ಟ್ರೀಯ ವಿದ್ಯಾಸಂಸ್ಥೆಯಾದ ಟಿಳಕ್ ಮಹಾರಾಷ್ಟ್ರ ವಿದ್ಯಾಪೀಠದಲ್ಲಿ ಅವರು ರಾಜ್ಯಶಾಸ್ತ್ರದಲ್ಲಿ ಎಂ. ಎ., ಪದವಿ ಪಡೆದು ಮುಂಬೈಯಲ್ಲಿ ಪ್ರಸಿದ್ಧ ಕಾರ್ಮಿಕ ಸಂಘಗಳ ನಾಯಕರಾಗಿದ್ದ ಎನ್. ಎಂ. ಜೋಷಿ ಅವರೊಡನೆ ಕೆಲಸ ಮಾಡಿದರು. ಸ್ವಾಮಿಜಿಯ ತಂದೆ ಭವಾನ್‌ರಾವ್ ತತ್ವಜ್ಞಾನಿಯೋಗಿಯಾಗಿದ್ದರು. ರಾಮಾನಂದ ತೀರ್ಥರು ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸಿದರು. ಹೈದರಾಬಾದ್ ರಾಜ್ಯದಲ್ಲಿ ನಡೆದ ದಬ್ಬಾಳಿಕೆಯನ್ನು ಕಂಡು ಅನುಭವಿಸಿ, ಹೈದರಾಬಾದ್ ರಾಜ್ಯದ ಸ್ವಾತಂತ್ರ್ಯ ಚಳವಳಿಯ ನೇತಾರರಾದರು. ಅವರು ಹೈದರಾಬಾದ್ ಸಂಸ್ಥಾನೀ ಪ್ರದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು. ಗುಲಬರ್ಗಾ ಜಿಲ್ಲೆಯ ಗಾಣಗಾಪುರದಲ್ಲಿ ಇವರು ತಮ್ಮ ಬಾಲ್ಯದ ದಿನಗಳನ್ನು ಕಳೆದರು. ಮುಂಬೈಯಲ್ಲಿದ್ದಾಗ ಇವರು ತಮ್ಮ ಶಿಕ್ಷಣವನ್ನು ತ್ಯಜಿಸಿ ೧೯೨೧ರಲ್ಲಿ ಅಸಹಕಾರ ಚಳವಳಿಯಲ್ಲಿ ಭಾಗವಹಿಸುವುದರ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಪ್ರವೇಶ ಮಾಡಿದರು. ಹೈದರಾಬಾದ್‌ಗೆ ೧೯೩೮ ರಲ್ಲಿ ಬಂದು ಅಲ್ಲಿ ರಾಷ್ಟ್ರೀಯ ಸಂಘಟನೆ ಕೈಗೊಂಡು ಈ ಭಾಗದ ಹೋರಾಟಗಳನ್ನು ತಾವೇ ನಿರ್ವಹಿಸಿದರು. ಇವರೊಬ್ಬ ಸ್ವಾತಂತ್ರ್ಯ ಹೋರಾಟದ ಪಾರಿವ್ರಾಜಕ ಸಂನ್ಯಾಸಿಯಾಗಿದ್ದರು. ಇವರು ಸ್ವಾಮಿ ರಾಮತೀರ್ಥರ ಪರಂಪರೆಯ ಸಂನ್ಯಾಸ ದೀಕ್ಷೆಯನ್ನು ಪಡೆದರು. ಇವರಿಗೆ ಈ ಸತ್ಯಾಗ್ರಹದಲ್ಲಿ ಬೆಂಬಲನೀಡಿದ ಇತರೆ ನಾಯಕರುಗಳೆಂದರೇ, ಗೋವಿಂದರಾವ್ ನಾನಲ್, ರಾಮಕೃಷ್ಣ ಧೂತ್ (ಹೈದರಾಬಾದಿನವರು) ರಾವಿ ನಾರಾಯಣ ರೆಡ್ಡಿ (ತೆಲಂಗಾಣದವರು), ಶ್ರೀನಿವಾಸರಾವ್ ಬೋರಿಕರ್ (ಮರಾಠಾವಾಡದವರು) ಮತ್ತು ಜನಾರ್ಧನರಾವ್ ದೇಸಾಯಿ (ಗುಲಬರ್ಗಾದ ವಕೀಲರು). ಹೈದರಾಬಾದ್ ನಗರದಲ್ಲಿ ೧೯೩೮ರ ಸುಮಾರಿಗೆ ೩೦,೦೦೦ ಕ್ಕೂ ಅಧಿಕ ಕನ್ನಡಿಗರು ನೆಲೆಸಿದ್ದರು. ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸಿನ ಪ್ರಥಮ ಸತ್ಯಾಗ್ರಹದ ಅಧಿವೇಶವನ್ನು ೨೪ನೇ ಆಕ್ಟೋಬರ್ ೧೯೩೮ರಲ್ಲಿ ಹೈದರಾಬಾದ್‌ನ ಸುಲ್ತಾನ್ ಬಜಾರ್ ಪ್ರದೇಶದಲ್ಲಿ ನಡೆದಾಗ ಸತ್ಯಾಗ್ರಹಿಗಳನ್ನು ಸೆರೆಹಿಡಿದು ಕಾರಾಗೃಹಕ್ಕೆ ಕಳುಹಿಸಲಾಯಿತು. ಹೈದರಾಬಾದ್ ರಾಜ್ಯ ಕಾಂಗ್ರೆಸ್ಸನ್ನು ಕಾನೂನುಬಾಹಿರವೆಂದು ಸಾರುವ ಸರಕಾರದ ಆಜ್ಞೆಯನ್ನು ಇದೇ ಸಮಯಕ್ಕೆ ಹೊರಡಿಸಲಾಯಿತು. ಇದಕ್ಕೆ ಪ್ರತಿಯಾಗಿ ಸರಕಾರವು, 'ಕಾಂಗ್ರೆಸ್' ಎಂಬ ಶಬ್ದದ ಬಗೆಗೆ ಆಕ್ಷೇಪಣೆ ಎತ್ತಿದ್ದರಿಂದ ನಾಯಕರುಗಳು ತಮ್ಮ ಸಂಸ್ಥೆಯನ್ನು ಹೈದರಾಬಾದ್ ಸಾರ್ವಜನಿಕ ಸಮಿತಿ ಎಂದು ಹೆಸರಿಸಿ ಕಕ್ಕೇರಿ ಹನಮಂತರಾಯರ ಅಧ್ಯಕ್ಷತೆಯಲ್ಲಿ ೧೯೩೮ರಲ್ಲಿ ಅಸ್ತಿತ್ವಕ್ಕೆ ತರಲಾಯಿತು. ಪ್ರಾರಂಭದಲ್ಲಿ

ಹಲವು ಪ್ರಜ್ಞಾವಂತ ಮುಸ್ಲಿಮರು ಇದರ ಸದಸ್ಯರಾಗಿದ್ದರು, ಆದರೇ ನಿಜಾಮ ಸರಕಾರದ ಒತ್ತಡಕ್ಕೆ ಮಣಿದು ಈ ಸಮಿತಿಯಿಂದ ಅವರು ದೂರ ಉಳಿದರೆಂದು ತಿಳಿದು ಬರುತ್ತದೆ. ರಾಮಾನಂದ ತೀರ್ಥರು ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ ಹೈದರಾಬಾದ್ ಕಾಂಗ್ರೆಸ್ಸಿಗೆ ಮಾನ್ಯತೆ ನೀಡುವಂತೆ ಸರಕಾರದ ಮೇಲೆ ಒತ್ತಡ ತರಲು ಪ್ರಯತ್ನಿಸಿದರು. ಜನಾರ್ಧನ ರಾವ್ ದೇಸಾಯಿ ಎಂಬ ಕನ್ನಡಿಗರು ಹಾಗೂ ಹೈದರಾಬಾದ್‌ನ ರಾವಿ ನಾರಾಯಣ ರೆಡ್ಡಿಯವರೊಡಗೂಡಿ ರಾಮಾನಂದ ತೀರ್ಥರಿಗೆ ಪೂರ್ಣ ಸಹಕಾರ ನೀಡಿದರು. ಸತ್ಯಾಗ್ರಹ ಆರಂಭಿಸಬೇಕೆಂಬ ತೀವ್ರ ರಾಷ್ಟ್ರೀಯವಾದದಲ್ಲಿ ಇವರುಗಳಿಗೆಲ್ಲಾ ನಂಬಿಕೆಯಿತ್ತು. ಹೈದರಾಬಾದ್ ಸಂಸ್ಥಾನಿ ಕಾಂಗ್ರೆಸ್‌ನ ಮೇಲೆ ನಿಜಾಮನ ಸರಕಾರ ಹೇರಿದ್ದ ಪ್ರತಿಬಂಧದ ಹಿನ್ನಲೆಯಲ್ಲಿ ಹೋರಾಟ ನಡೆಸುವುದೆಂದು ತೀರ್ಮಾನಿಸಿದರು. ಇವರು ಹಮ್ಮಿಕ್ಕೊಂಡ ಸತ್ಯಾಗ್ರಹದ ಸ್ವರೂಪವನ್ನು ಆರ್ಯಸಮಾಜ ಹಾಗೂ ಹಿಂದೂ ಮಹಾಸಭಾಗಳಿಗೆ ಪೂರ್ವಭಾವಿಯಾಗಿ ತಿಳಿಸಲಾಯಿತು. ಆರ್ಯ ಸಮಾಜದ ಇಡೀ ಸಂಘಟನೆ ಈ ಹೋರಾಟದಲ್ಲಿ ಧುಮಕಿತು. ಆಗ ಈ ಸಂಸ್ಥೆಯಲ್ಲಿದ್ದ ಪ್ರಥಮ ಕಾರ್ಯಕಾರಿ ಸದಸ್ಯರುಗಳೆಂದರೇ ಗೋವಿಂದರಾವ್ ನಾನಲ (ಅಧ್ಯಕ್ಷರು) ರಾಮಕೃಷ್ಣದೂತ್ (ಕಾರ್‍ಯದರ್ಶಿ), ಕರ್ನಾಟಕದ ಜನಾರ್ಧನರಾವ್ ದೇಸಾಯಿ, ರಾವಿ ನಾರಾಯಣರೆಡ್ಡಿ ಮತ್ತು ಶ್ರೀನಿವಾಸರಾವ್ ಬೋರಿಕರ್ (ಸದಸ್ಯರಾಗಿದ್ದರು). ಜನಾರ್ಧನ ರಾವ್ ದೇಸಾಯಿಯವರು ಕರ್ನಾಟಕ ಪ್ರಾಂತೀಯ ಸಮ್ಮೇಳನದ ಸಂಘಟನೆಗೆ ಕಾರಣರಾದರು. ದೇಶದ ವಿವಿಧ ಭಾಗಗಳಿಂದ ಈ ಸಂಸ್ಥಾನಿ ಕಾಂಗ್ರೆಸ್ಸ್‌ನ ಚಟುವಟಿಕೆಗಳ ಬಗೆಗೆ ಮನ್ನಣೆ ದೊರೆಯಿತು.

ಸ್ವಾತಂತ್ರ್ಯ ಹೋರಾಟದ ಪ್ರಸಿದ್ಧ ನಾಯಕರಾಗಿದ್ದ ಹರ್ಡೇಕರ್ ಮಂಜಪ್ಪನವರು ಈ ಸಂಸ್ಥಾನದಲ್ಲೂ ೧೯೩೫ರಲ್ಲಿ ಸಂಚರಿಸಿ ಪ್ರಚೋದಿತ ಭಾಷಣಗಳ ಮೂಲಕ ಜನಜಾಗೃತಿಯನ್ನು ಮೂಡಿಸಿದ್ದರು. ವಿದೇಶಿ ಬಟ್ಟೆಗಳನ್ನು ತ್ಯಜಿಸುವುದು, ಖಾದಿ ಧರಿಸುವುದು, ಪಾನನಿರೋಧ ಹಾಗೂ ಅಸ್ಪೃಶ್ಯತೆಯ ನಿವಾರಣೆ ಮುಂತಾದ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಮೊದಲ ಬಾರಿಗೆ ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಜನಪ್ರಿಯಗೊಳಿಸಲಾಯಿತು. ೧೯೩೭ ರಲ್ಲಿ ಗುಲಬರ್ಗಾದಲ್ಲಿ ಪ್ರಥಮಬಾರಿಗೆ ಖಾದಿ ಭಂಡಾರವನ್ನು ಮಂಠಾಳ ಅವರು ಪ್ರಾರಂಭಿಸಿದರು. ೧೯೩೮ರಲ್ಲಿ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗೋವಿಂದರಾವ್ ನಾನಲ್ ಮತ್ತು ರಾಮಾನಂದ ತೀರ್ಥರು ಜನಗಳಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಿದರು. ಇವರುಗಳು ನಿರ್ವಹಿಸಿದ ರಾಷ್ಟ್ರೀಯ ಹೋರಾಟದಲ್ಲಿ ೧೯೩೮ರಲ್ಲಿ ಆರ್ಯಸಮಾಜವೂ ಸೇರಿಕೊಂಡ ಕಾರಣ ಹೋರಾಟವು ದೊಡ್ಡ ಪ್ರಮಾಣದಲ್ಲಿ ಜರುಗಿತು. ಮುಂಬೈ ಕರ್ನಾಟಕದ ಖ್ಯಾತ ಮುಖಂಡರಾಗಿದ್ದ ಗುದ್ಲೆಪ್ಪ ಹಳ್ಳಿಕೇರಿ ಮತ್ತು ಅಂದಾನಪ್ಪ ದೊಡ್ಡಮೇಟಿ ಮುಂತಾದವರು ಈ ಸಮಯದಲ್ಲಿ ಗುಲಬರ್ಗಾ ಹಾಗೂ ಇತರೆ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಮೂಡಿಸಿದರು. ಆರ್ಯ ಸಮಾಜದ ಚಳವಳಿಯೂ ಸೇರಿದಂತೆ ಈ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಈ ಜಿಲ್ಲೆಯ ಹೋರಾಟಗಾರರೆಂದರೇ ದತ್ತಾತ್ರೇಯ ಅವರಾಧಿ, ಪ್ರೊಫೆಸರ್ ದೇವುಳಗಾಂವಕರ್, ಕೋಳೂರು ಮಲ್ಲಪ್ಪ ನಾರಾಯಣರಾವ್ ಕಾನ್ನಾಳ, ಸರ್ದಾರ್ ಶರಣಗೌಡ ಇನಾಮ್‌ದಾರ, ಜಗನ್ನಾಥರಾವ್ ಚಂದರ್ಕಿ, ಕಕ್ಕೇರಿ ಹನುಮಂತರಾವ್, ಅಣ್ಣಾರಾವ್ ವೀರಭದ್ರಪ್ಪ ಪಾಟೀಲ, ಹಕೀಕತರಾವ್ ಉಮಾಜಿ ಚಿಟಗುಪ್ಪಾಕರ್ ಇನ್ನೂ ಮುಂತಾದವರುಗಳು ಭಾಗವಹಿಸಿದ್ದರು.

**ವಂದೇಮಾತರಂ ಚಳವಳಿ**

ಸ್ವಾತಂತ್ರ್ಯ ಹೋರಾಟದ ಕಿಚ್ಚು ಮೊದಲು ತಗಲಿದ್ದು ವಿದ್ಯಾರ್ಥಿಗಳ ಸಮುದಾಯಕ್ಕೆ, ಹೈದರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಇಸ್ಲಾಂ ಧರ್ಮದ ದೀನಿಯಾತ ಅಥವಾ ಅಸಾಫಿಯ ವಂಶದ ಸ್ತುತಿಗಾನ ಪ್ರಾರ್ಥನೆ ಮಾಡಬೇಕಾದುದು ನಿಯಮವಾಗಿತ್ತು. ಸಂಸ್ಥಾನದಲ್ಲಿ ವಂದೇಮಾತರಂ ಹಾಡಲು ಸರ್ಕಾರ ನಿರ್ಬಂಧ ಹಾಕಿತು. ಇದು ಹಿಂದೂ ವಿದ್ಯಾರ್ಥಿಗಳಿಗೆ ಸಮಂಜಸವೆನಿಸದೆ ಆಗಿನ ರಾಷ್ಟ್ರೀಯತೆಯ ತಾರಕಮಂತ್ರವಾಗಿದ್ದ ವಂದೇಮಾತರಂ ಹಾಡಲು ಅವಕಾಶಕೊಡಬೇಕೆಂದು ಒತ್ತಾಯಿಸಿದರು ಮತ್ತು ಹಾಡಿದರು. ಹೈದರಾಬಾದಿನಲ್ಲಿ ಈ ಹೋರಾಟದ ಮುಖಂಡತ್ವವನ್ನು 'ವಂದೇ ಮಾತರಂ ರಾಮಚಂದ್ರರಾವ್' ಎಂಬ ಧೀರೋದ್ದಾತ್ತ ನಾಯಕರು ವಹಿಸಿದ್ದರು. ಇವರು ಅಮರರಾದ ಸ್ಫೂರ್ತಿಯೇ ಗುಲಬರ್ಗಾದಲ್ಲಿ ವಂದೇ ಮಾತರಂ ಚಳವಳಿಗೆ ಪುಷ್ಟಿನೀಡಿತು. ಗುಲಬರ್ಗಾದ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಧಾರವಾಡಕರ ಮಾಸ್ತರ್ ಎಂಬುವವರು ಅತೃಪ್ತ ಹಿಂದೂ ವಿದ್ಯಾರ್ಥಿಗಳಿಗೆ ವಂದೇಮಾತರಂ

ಹಾಡಲು ಅವಕಾಶಕೊಟ್ಟರು. ಇದಕ್ಕಾಗಿ ಧಾರವಾಡಕರರನ್ನು ಬಂಧಿಸಲಾಯಿತು. ಈ ಚಳವಳಿಯು ರಾಜ್ಯಾದ್ಯಂತ ಹರಡಿ ಜನಪ್ರಿಯವಾದುದೇ ಅಲ್ಲದೇ ಹಿಂದೂ ಮಹಾಸಭಾದ ಬಾಪಟ್ ಎಂಬುವವರನ್ನು ಸೊಲ್ಲಾಪುರದ ಸೆರೆಮನೆಯಿಂದ ಬಿಡುಗಡೆ ಮಾಡಿಸುವುದು ಚಳವಳಿಗಾರರ ಉದ್ದೇಶವೂ ಆಗಿತ್ತು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಜಿ. ಎಂ. ಸರಾಫರು ಈ ವಿಷಯದಲ್ಲಿ ಸರಕಾರದ ಆಜ್ಞೆಯ ವಿರುದ್ಧ ನಡೆದುಕೊಂಡಿದ್ದ ಕಾರಣ ತಮ್ಮ ಹುದ್ದೆ ತ್ಯಜಿಸಬೇಕಾಯಿತು. ಇವರು 'ವಂದೇಮಾತರಂ' ರಾಷ್ಟ್ರಗೀತೆಯು ರಾಷ್ಟ್ರೀಯ ಸಂಘಟನೆಯ ಸಂಕೇತವೆಂದು ಸಾರಿದರು. ಇಡೀ ತರುಣರ ಪೀಳಿಗೆಯ ಮೇಲೆ ವಂದೇಮಾತರಂ ಚಳವಳಿಯು ಅಸಾಧಾರಣ ಪ್ರಭಾವ ಬೀರಿತು. ಹೈದರಾಬಾದ್ ಸಂಸ್ಥಾನದ ಮುಂದಿನ ಹೋರಾಟಗಳಲ್ಲಿ ಪಾಲ್ಗೊಂಡ ಅನೇಕ ನಾಯಕರುಗಳು ವಂದೇ ಮಾತರಂ ಚಳವಳಿಯಿಂದ ಸ್ಫೂರ್ತಿ ಪಡೆದವರೆಂದರೆ ಉತ್ಪ್ರೇಕ್ಷೆಯಲ್ಲ. ಗುಲಬರ್ಗಾದ ಜಗನ್ನಾಥರಾವ್ ಚಂದರ್ಕಿ ಮತ್ತು ಡಾ. ಪದ್ಮನಾಭ ಪುರಾಣಿಕ ಆಗ ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಾಯಕರಾಗಿದ್ದರಲ್ಲದೇ ವಿದ್ಯಾರ್ಥಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಭಾಗವಹಿಸಿದ ವಿದ್ಯಾರ್ಥಿಗಳನ್ನು ಶಿಕ್ಷಿಸಿ ಹೊರಹಾಕಲಾಯಿತು. ಈ ವಿಶ್ವವಿದ್ಯಾಲಯದಿಂದ ಹೊರಹಾಕಲಾದ ವಿದ್ಯಾರ್ಥಿಗಳಿಗೆ ನಾಗಪುರ ವಿಶ್ವವಿದ್ಯಾಲಯದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಅಲ್ಲಿಯ ಉದಾರಮನಸ್ಸಿನ ಉಪಕುಲಪತಿಗಳು ಅವಕಾಶ ನೀಡಿದರು. ಗುಲಬರ್ಗಾದ ಕೆಲವು ವಿದ್ಯಾರ್ಥಿ ಮುಖಂಡರುಗಳು ಸಭೆಸೇರಿ ಗಾಂಧೀಜಿಯವರು ಇದೇ ಸಮಯದಲ್ಲಿ ಮದರಾಸಿಗೆ ಬಂದಿರುವ ಸುದ್ದಿ ತಿಳಿದು ಅವರನ್ನು ಭೇಟಿ ಮಾಡಲು ತೀರ್ಮಾನಿಸಿದರು. ಇವರಲ್ಲಿ ಶರಣಗೌಡ ಇನಾಮದಾರರು ಸೇರಿದ್ದರು. ಸರದಾರ್ ವೀರಣಗೌಡರು ಪಾಟೀಲ ಮತ್ತು ಮಹಾದೇವ ದೇಸಾಯಿ ಅವರ ಮೂಲಕ ಮದರಾಸಿನಲ್ಲಿ ಗಾಂಧೀಜಿಯವರನ್ನು ಭೇಟಿಮಾಡಿದಾಗ ಹೈದರಾಬಾದ್ ಕರ್ನಾಟಕ ಸಂಸ್ಥಾನಿ ಕಾಂಗ್ರೆಸ್‌ಗೆ ರಾಮಾನಂದ ತೀರ್ಥರನ್ನು ಅಧ್ಯಕ್ಷರನ್ನಾಗಿ ಮಾಡಲು ಗಾಂಧೀಜಿ ಒಪ್ಪಿದರು. ಆದರೆ ಈ ಸಂಸ್ಥೆ ಅಸ್ತಿತ್ವಕ್ಕೆ ಬಂದ ತಕ್ಷಣ ನಿಷೇಧಗೊಂಡಿತು. ೧೯೪೦ರ ಮಾರ್ಚ್ ೨ ರಂದು ಪ್ರತಿಬಂಧಿತರಾದ ಸಂಸ್ಥಾನಿ ಕಾಂಗ್ರೆಸ್ಸಿನ ಕೆಲವು ಕಾರ್ಯಕರ್ತರು ಮಹಾತ್ಮಗಾಂಧೀಜಿಯವರ ಸೂಚನೆಯಂತೆ ವೈಯಕ್ತಿಕ ಸತ್ಯಾಗ್ರಹ ಹೂಡಿದರು. ಸೆರೆಹಿಡಿಯಲಾಗಿದ್ದ ರಾಮಾನಂದರನ್ನು ೧೯೪೧ರ ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡಲಾಯಿತು. ಆಗ ಈ ಸಂಸ್ಥೆಯಲ್ಲಿ ರಾಮಾನಂದ ತೀರ್ಥರು, ಜನಾರ್ಧನರಾವ್ ದೇಸಾಯಿ, ಡಾ. ಮೇಲ್ಕೋಟೆ (ಇವರು ಎ. ಜಿ. ರಾಮಚಂದ್ರರಾವ್ ಅವರ ತಮ್ಮಂದಿರು), ಉಸ್ಮಾನಾಬಾದ್‌ನ ಪುಲಚಂದ್ ಗಾಂಧೀ ಇನ್ನೂ ಮುಂತಾದವರುಗಳಿದ್ದರು. ಮುಂದೆ ಎರಡನೇ ಮಹಾಯುದ್ಧ ಪ್ರಾರಂಭವಾದ ಕಾರಣ ಈ ಹೈದರಾಬಾದ್ ಕಾಂಗ್ರೆಸ್ ಸಂಸ್ಥೆಯನ್ನು ಪ್ರತಿಭಂಧ ಗೊಳಿಸಲಾಯಿತು. ತಕ್ಷಣವೇ ಇದರ ನಾಯಕರುಗಳು ಗುಲಬರ್ಗಾದಲ್ಲಿ ಸಭೆಸೇರಿ ಈ ಸಂಸ್ಥೆಯನ್ನು 'ಕರ್ನಾಟಕ ಪರಿಷತ್ತು' ಎಂದು ಹೆಸರು ಬದಲಿಸಿ ಜನಾರ್ಧನರಾವ್ ದೇಸಾಯಿ ಅವರ ನೇತೃತ್ವದಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದುವರೆಸಿದರು.

ಆರ್ಯ ಸಮಾಜದ ಹೋರಾಟವು ತೀವ್ರಗೊಂಡು ೧೯೪೧ರ ವೇಳೆಗೆ ಹೈದರಬಾದ್ ನಗರದಲ್ಲಿ ಜನಗಳಲ್ಲಿ ದೇಶಾಭಿಮಾನವನ್ನು ಮೂಡಿಸಿತ್ತು. ಈ ವೇಳೆಗಾಗಲೇ 'ರೇಹನ್‌ಮಾಯೇ ದಖನ್' ಎಂಬ ತೀವ್ರಗಾಮಿ ಉರ್ದು ದೈನಂದಿನ ಪತ್ರಿಕೆಯ ಸಂಪಾದಕನಾಗಿದ್ದ ಮಹಮ್ಮದ್ ಸಿದ್ಧಿಕಿ ಎಂಬುವನು 'ಇತ್ತೇಹಾದ್-ಉಲ್-ಮುಸ್ಲಿಮೀನ್' ಎಂಬ ಬಂಡಾಯಗಾರರ ಸಂಘವನ್ನು (೧೯೪೦) ಸ್ಥಾಪಿಸಿದ್ದನು. ಈ ಸಂಸ್ಥೆಯ ಮುಖಂಡತ್ವವನ್ನು ಖಾಸಿಂ ರಜ್‌ವಿ ಎಂಬ ಮತ್ತೊಬ್ಬ ಕಟ್ಟಾ ಮುಸ್ಲಿಂ ನಾಯಕನು ವಹಿಸಿದ್ದನು. ಈ ಸಂಸ್ಥೆಯು ಆರ್ಯಸಮಾಜದ ಚಟುವಟಿಕೆಗಳ ಮೇಲೆ ತನ್ನ ಗಮನ ಹರಿಸಿತು. ಇದೇ ಸಂದರ್ಭದಲ್ಲಿ ಏಪ್ರಿಲ್ ೨೨-೨೪ ೧೯೪೫ರಂದು ಗುಲಬರ್ಗಾದಲ್ಲಿ ಆರ್ಯ ಸಮಾಜದ ನಾಲ್ಕನೇ ಅಧಿವೇಶನವು ಸಮಾವೇಶಗೊಂಡಿತು. ಇದರ ಅಧ್ಯಕ್ಷತೆಯನ್ನು ರಾಜಾನಾರಾಯಣ ಲಾಲ್ ಪಿಟ್ಟಿ ಅವರು ವಹಿಸಿದ್ದರು. ಪೊಲಿಸರು ಈ ಸಭೆಯ ಮೇಲೆ ಯಾವ ಮುನ್ಸೂಚನೆಯಿಲ್ಲದೆ ದಾಳಿಮಾಡಿ ಪಂಡಿತ್ ವಿನಾಯಕರಾವ್, ಗಣಪತ್ ಶಾಸ್ತ್ರಿ, ಪಂಡಿತ್ ನರೇಂದ್ರಜಿ ಹಾಗೂ ಒಬ್ಬ ಸ್ವಯಂ ಸೇವಕ ಹೀರಾಲಾಲ್ ಪಾಂಡೆ ಮುಂತಾದವರನ್ನು ದಾರುಣವಾಗಿ ಹೊಡೆದರೆಂದು ತಿಳಿದು ಬರುತ್ತದೆ. ಲಾಟಿ ಹೊಡೆತದ ಪರಿಣಾಮವಾಗಿ ಪಂಡಿತ್ ನರೇಂದ್ರಜಿಯವರಿಗೆ ಕಾಲು ಮುರಿದು ಹೋಯಿತು. ಪೋಲೀಸರ ಲಾಟಿ ಚಾರ್ಜ್‌ನಿಂದ ಉಂಟಾದ ಅತೃಪ್ತಿಯು ಗುಲಬರ್ಗಾ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಹರಡಿ ರಾಷ್ಟ್ರೀಯ ಐಕ್ಯತೆಯು ಚುರುಕುಗೊಂಡಿತೆಂದು ಹೇಳಲಾಗುತ್ತದೆ. ಮುಂದೆ ೧೯೪೬ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ಅವರು ಹೈದರಾಬಾದ್‌ನಲ್ಲಿ ಪ್ರಧಾನ ಮಂತ್ರಿಯಾಗಿ ನೇಮಕಗೊಂಡಾಗ ಹಲವು ರಾಜಕೀಯ ನಿರ್ಬಂಧಗಳು ಸಡಿಲಗೊಂಡವು. ಆರ್ಯ ಸಮಾಜದವರು ಹೈದರಾಬಾದ್‌ನಲ್ಲಿ 'ಆರ್ಯಭಾನ್' ಎಂಬ ವಾರಪತ್ರಿಕೆಯನ್ನು

ಆರಂಭಿಸಲು ಮಿರ್ಜಾ ಅವರೇ ಅನುಮತಿ ನೀಡಿದರು. ಹೀಗೆ ಆರ್ಯಸಮಾಜವು ಸಂಸ್ಥಾನಿ ಹೋರಾಟಗಾರರಲ್ಲಿ ಪರಿಣಾಮಕಾರಿಯಾದ ಸಂಘಟನೆ ಮೂಡಿಸಿದುದು ಗಣನೀಯವಾಗಿದೆ. ೧೯೪೨ ರಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳವಳಿಗೆ ಪೂರ್ವಭಾವಿಯಾಗಿ ಹೈದರಾಬಾದ್‌ನ ನಿಜಾಮರು ಒಂದು ವಿಶೇಷ ಶಾಂತಿ ಒಪ್ಪಂದವನ್ನು ಸತ್ಯಾಗ್ರಹಿಗಳೊಡನೇ ಮಾಡಿಕೊಂಡು ತನ್ನ ಸರಕಾರದ ಪ್ರತಿನಿಧಿ ಸಭೆಯಲ್ಲಿ ಹಿಂದೂ ಮತ್ತು ಮುಸ್ಲಿಮರಿಗೆ ತಲಾ ೫೦ ಸ್ಥಾನಗಳನ್ನು ನೀಡಿದರು. ಇದಕ್ಕೆ ಸತ್ಯಾಗ್ರಹಿಗಳು ಒಪ್ಪಿದರು.

**ಕ್ವಿಟ್ ಇಂಡಿಯಾ ಚಳವಳಿ**

ಬ್ರಿಟೀಷ್ ರೆಸಿಡೆಂಟನು ಪರೋಕ್ಷವಾಗಿ ನಿಜಾಮನ ಮುಖೇನ ಸಂಸ್ಥಾನದ ಆಡಳಿತದ ಮೇಲೆ ಹತೋಟಿಯನ್ನು ಇಟ್ಟುಕೊಂಡಿದ್ದರಿಂದ ಹೈದರಾಬಾದ್ ರಾಜ್ಯದಲ್ಲಿ ಸಾಮಾನ್ಯ ಜನತೆ ಯಾವುದೇ ಬಹಿರಂಗ ವಿರೋಧ ಮಾಡುವುದೂ ದುಸ್ಸಾಧ್ಯವಾಗಿತ್ತು. ಇದಲ್ಲದೇ ನಿಜಾಮನ ಸರಕಾರವು ಇನ್ನೂ ಹೈದರಾಬಾದ್ ಕಾಂಗ್ರೆಸ್‌ನ ಮೇಲಿನ ನಿಷೇಧವನ್ನು ಮುಂದುವರೆಸಿತ್ತು. ಆದರೆ, ಈ ವೇಳೆಗಾಗಲೇ ರಾಷ್ಟ್ರೀಯ ಭಾವನೆಯು ಜಿಲ್ಲೆಯಾದ್ಯಂತ ವ್ಯಾಪಕವಾಗಿ ಪ್ರಸರಿಸಿತ್ತು. ರಾಜ್ಯ ಶಿಕ್ಷಣ ಕ್ಷೇತ್ರದಲ್ಲೂ ರಾಷ್ಟ್ರೀಯ ಧ್ಯೇಯೋದ್ದೇಶಗಳನ್ನು ಗುರಿಯಾಗಿ ಹೊಂದಿದ್ದ ಕೆಲವು ದೇಶೀಯ ವಿದ್ಯಾಸಂಸ್ಥೆಗಳು ಹಿಂದೆಯೇ ಅಸ್ಥಿತ್ವಕ್ಕೆ ಬಂದಿದ್ದವು ಇವು ರಾಷ್ಟ್ರ ಹಿತವನ್ನು ತಮ್ಮ ಶಾಲೆಯ ಶಿಸ್ತಿನ ಪಾಲನೆಯ ತತ್ವವನ್ನಾಗಿ ಅನುಸರಿಸಿದುವು. ಗುಲಬರ್ಗಾದಲ್ಲಿಯೇ ನೆಲೆಸಿದ್ದ ವಿಠಲರಾವ್ ದೇವುಳಗಾಂವ್‌ಕರ್ ಅವರು ವಕೀಲಿ ವೃತ್ತಿಯನ್ನನುಸರಿಸುತ್ತಾ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಂಡರು. ಇವರ ಪ್ರಯತ್ನದಿಂದಾಗಿ ದೇಶೀಯ ಶಾಲೆಗಳ ಸ್ಥಾಪನೆಯ ದಿಸೆಯಲ್ಲೇ ೧೯೦೭ರಲ್ಲಿ ನೂತನ ವಿದ್ಯಾಲಯ ಸ್ಥಾಪಿತವಾಯಿತು. ಈ ಶಾಲೆಯು ಮಾತೃಭಾಷೆಯಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣವನ್ನು ನೀಡುವ ಉದಾತ್ತ ಉದ್ದೇಶವನ್ನು ಹೊಂದಿದ್ದಿತು. ಇವರ ಪ್ರಯತ್ನದಿಂದಾಗಿ ಜನಾಭಿಪ್ರಾಯವನ್ನು ಬಲಗೊಳಿಸುವ ದೃಷ್ಟಿಯಿಂದ 'ಸಾರ್ವಜನಿಕ ಗ್ರಂಥಾಲಯ ಚಳವಳಿ'ಯೂ ಪ್ರಾರಂಭವಾಯಿತು. ಗುಲಬರ್ಗಾದ ಸಾರ್ವಜನಿಕ ಗ್ರಂಥಾಲಯವು ಇವರ ಪ್ರಯತ್ನದಿಂದಲೇ ಪ್ರಾರಂಭಗೊಂಡಿತು. ಗುಲಬರ್ಗಾದಲ್ಲಿ ಶರಣ ಬಸವೇಶ್ವರ ಸಂಸ್ಥಾನದ ಆಶ್ರಯದಲ್ಲಿ ಪ್ರಥಮ ಬಾರಿಗೆ 'ಶರಣ ಬಸವೇಶ್ವರ ವಾಚನಾಲಯ'ವನ್ನು ೧೯೧೮ರಲ್ಲಿ ಆರಂಭಿಸಿಲಾಯಿತು. ಇದೇ ಸಮಯದಲ್ಲಿ ರಂಗಂಪೇಟೆ (ಸುರಪುರ)ಯಲ್ಲೂ ಸಾಹಿತ್ಯ ಚಟುವಟಿಕೆಗಳು ಪ್ರಾರಂಭವಾಗಿ ಕನ್ನಡ ಭಾಷೆಯ ಬೆಳವಣಿಗೆ ಶ್ರಮ ವಹಿಸಲಾಯಿತು. ಸಾಹಿತ್ಯಾಭಿವೃದ್ಧಿಯು ರಾಷ್ಟ್ರೀಯತೆಯ ಪ್ರಚಾರಕ್ಕೆ ಪುಷ್ಠಿ ನೀಡಿತು. ಸೋದರ ಸಂಸ್ಥೆಗಳಾದ ಆಂಧ್ರ ಮಹಾಸಬೆ ಮತ್ತು ಮರಾಠವಾಡಾ ಪರಿಷತ್ತುಗಳ ಸಹಯೋಗದೊಂದಿಗೆ ಈ ಚಳವಳಿ ಕಾರ್ಯಗತವಾಗಿ ಜನರಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸುವಂತಾಯಿತು. ಹೈದರಾಬಾದ್ ಸಂಸ್ಥಾನದ ಇನ್ನೊಂದು ದೊಡ್ಡ ಕೇಂದ್ರವಾಗಿದ್ದ ರಾಯಚೂರಿನಲ್ಲಿ ಮುಖ್ಯವಾದ ರಾಷ್ಟ್ರೀಯ ಚಳವಳಿಗಳನ್ನು ದೇಶೀಯ ವಿದ್ಯಾಭ್ಯಾಸದ ಪದ್ಧತಿಯ ಮೂಲಕ ಪ್ರಚುರ ಪಡಿಸಿದ್ದಾಕ್ಕಾಗಿ ಪಂಡಿತ್ ತಾರಾನಾಥರನ್ನು ೧೯೨೧ರಲ್ಲಿ ಹೈದರಾಬಾದ್ ಸಂಸ್ಥಾನೀ ರಾಜ್ಯದಿಂದ ಹೊರಗೆ ಹಾಕಲಾಯಿತು. ಈ ಘಟನೆಯು ಗುಲಬರ್ಗಾದ ಬುದ್ಧಿಜೀವಿಗಳ ಸಂಘಟನೆಗೆ ಪ್ರಚೋದನೆ ಮೊದಲೇ ನೀಡಿತ್ತು.

ಗಾಂಧೀಜಿಯವರು ಆರಂಭಿಸಿದ 'ಭಾರತ ಬಿಟ್ಟು ತೊಲಗಿ' ಚಳವಳಿ ಹಿಂದೂಸ್ತಾನದಲ್ಲಿ ಬ್ರಿಟೀಷರ ಆಡಳಿತದ ತಳಹದಿಯನ್ನು ಅಲುಗಾಡಿಸಿತು. ಎರಡನೇ ಮಹಾಯುದ್ಧವು ಪ್ರಾರಂಭವಾದ ಮೇಲೆ ದೇಶದ ರಾಜಕೀಯ ಪರಿಸ್ಥಿತಿಯು ತೀವ್ರಗತಿಯಿಂದ ಬದಲಾಗುತ್ತಿತ್ತು. ಬ್ರಿಟೀಷ್ ಸಚಿವ ಮಂಡಲದ ನಿಯೋಗವೊಂದು ಭಾರತಕ್ಕೆ ಬಂದಿತು. ಈ ಮಂಡಲಿಗೆ ಭಾರತಕ್ಕೆ ಅಧಿಕಾರ ವಹಿಸಿ ಕೊಡುವ ಉದ್ದೇಶವಿತ್ತೆಂದು ತಿಳಿದು ಬರುತ್ತದೆ. ಇದೇ ಸಮಯದಲ್ಲಿ ಜವಹರಲಾಲ್ ನೆಹರೂರವರು ಹೈದರಾಬಾದ್ ರಾಜ್ಯ ಕಾಂಗ್ರೆಸ್‌ನ ಮೇಲೆ ಹೇರಲಾಗಿದ್ದ ನಿಷೇಧಾಜ್ಞೆಯನ್ನು ತೆಗೆದು ಹಾಕುವಂತೆ ಒತ್ತಾಯಿಸಿ ಹೈದರಾಬಾದಿನ ನಿಜಾಮರಿಗೆ ಪತ್ರ ಬರೆದರು. ಈ ಭಾಗದ ಹೋರಾಟದ ಮುಖಂಡತ್ವ ವಹಿಸಿದ್ದ ಗುಡಗುಂಟೆ ರಾಮಾಚಾರ್ಯರೂ ಭಾರತ ಸರಕಾರದ ಸಂಗಡ ಈ ಬಗ್ಗೆ ಪತ್ರ ವ್ಯವಹಾರ ಮಾಡುತ್ತಿದ್ದರು. ಅಲ್ಲದೇ ಸಂಸ್ಥಾನೀ ಜನರ ಪರಿಷತ್ತು ಮಾಡಿದ ತೀರ್ಮಾನವನ್ನು ಆಚರಣೆಗೆ ತರಲು ಡಾ. ಜಿ. ಎಸ್. ಮೇಲ್ಕೋಟೆ, ಎಂ.ಕೆ. ವಾಘಮೋರೆ, ದಿಗಂಬರ್‌ರಾವ್ ಬಿಂದು ಮತ್ತು ಕೃಷ್ಣಾಚಾರ್ಯ ಜೋಶಿ ಇವರುಗಳನ್ನೊಳಗೊಂಡ ಸಮಿತಿಯ ವತಿಯಿಂದ ಸತ್ಯಾಗ್ರಹವನ್ನು ಮುಂದುವರೆಸುವಂತೆ ರಾಮಾನಂದ ತೀರ್ಥರು ತೀರ್ಮಾನಿಸಿದರು. ಈ ವರೆಗೆ ಸಂಸ್ಥಾನಗಳಲ್ಲಿದ್ದ ರಾಜಕೀಯ ಸಮಸ್ಯೆಗಳ

ಬಗೆಗೆ ಮಹಾತ್ಮಗಾಂಧೀಜಿಯವರಿಗೆ ವಿವರಿಸುವ ದೃಷ್ಟಿಯಿಂದ ರಾಮಾನಂದರು ತಾವು ಬಿಡುಗಡೆಯಾದ ಮೇಲೆ ೧೯೪೨ರ ಮೇ ತಿಂಗಳಲ್ಲಿ ಸೇವಾ ಗ್ರಾಮಕ್ಕೆ ಹೋಗಿದ್ದರು. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಅವರು ಕೊನೆಯ ಹೋರಾಟಕ್ಕೆ ಕರೆ ಕೊಡಲಿರುವ ಉದ್ದೇಶವನ್ನು ವ್ಯಕ್ತಪಡಿಸಿದರು. ಇದರ ಫಲವಾಗಿ ಮಹಾತ್ಮ ಅವರು ಇಡೀ ಹೈದರಾಬಾದ್ ಸಂಸ್ಥಾನದ ಸಮಸ್ಯೆಯನ್ನು ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯ ಸಮಿತಿಯ ಮುಂದೆ ಮಂಡಿಸಿದರು. ಈ ಸಭೆಯಲ್ಲಿ ರಾಮಾನಂದ ತೀರ್ಥರೂ ಉಪಸ್ಥಿತರಿದ್ದರು. ಮುಂಬೈನಲ್ಲಿ ಸಮಾವೇಶಗೊಳ್ಳಲಿದ್ದ ಐತಿಹಾಸಿಕ ಎ.ಐ.ಸಿ.ಸಿ. ಅಧಿವೇಶನಕ್ಕೆ ಬರುವಂತೆ ಸ್ವಾಮೀಜಿಯವರಿಗೆ ಗಾಂಧೀಜಿ ಸೂಚಿಸಿದರು. ಹೈದರಾಬಾದಿಗೆ ಹಿಂದಿರುಗಿದರೇ ತಮ್ಮ ಬಂಧನವು ಖಂಡಿತ ಎಂದು ತಿಳಿದಿದ್ದ ರಾಮಾನಂದರು ಸೊಲ್ಲಾಪುರಕ್ಕೆ ಬಂದು ಕೆಲವೇ ಸ್ನೇಹಿತರಿಗೆ ಮಾತ್ರ ಪರಿಚಿತವಾಗಿದ್ದ ಒಂದು ಕಿರು ಓಣಿಯಲ್ಲಿ ಕೊಠಡಿಯಲ್ಲಿ ಉಳಿದು ಕೊಂಡರು. ಎಸ್. ಆರ್. ದಿವಾನ್ ಎಂಬುವರನ್ನು ತಮ್ಮ ದೂತರನ್ನಾಗಿ ಹೈದರಾಬಾದಿಗೆ ಕಳುಹಿಸಿ ಅಲ್ಲಿನ ತಮ್ಮ ಸಹಕಾರಿಗಳಿಗೆ ಮುಂಬೈಯಲ್ಲಿ ಕೈಗೊಂಡ ನಿರ್ಧಾರದ ಮಾಹಿತಿ ನೀಡಲು ಒಂದು ಪತ್ರದ ಮುಖೇನ ರಾಮಾನಂದರು ತಿಳಿಸಿದರು. ಇದರ ಮೂಲ ಉದ್ದೇಶವೆಂದರೆ ಹೈದರಾಬಾದ್ ಸಂಸ್ಥಾನದ ಹೋರಾಟಗಾರರು ಚಳವಳಿಯ ಪೂರ್ಣ ಸ್ವರೂಪವನ್ನು ತಿಳಿಯಬೇಕೆಂಬುದೇ ಆಗಿತ್ತು. ಆನಂತರ ಗೋವಿಂದರಾವ್ ನಾನಾಲರು ಪರ್ಭಣಿಯಿಂದ ಬರೆದ ಪತ್ರದ ಪ್ರಕಾರ, ರಾಮಾನಂದರು ಮದರಾಸ್ ರೈಲಿನಲ್ಲಿ ಹೈದರಾಬಾದ್‌ಗೆ ಸೊಲ್ಲಾಪುರದಿಂದ ಹೊರಟರು. ರೈಲು ಗುಲಬರ್ಗಾವನ್ನು ಪ್ರವೇಶಿಸುತ್ತಿದ್ದಂತೆ ಪ್ಲಾಟ್‌ಫಾರ್ಮ್ ಉದ್ದಕ್ಕೂ ಪೋಲೀಸ್‌ರ ಕಾವಲಿದ್ದುದು ಕಂಡು ಬಂದಿತು. ಆಗ, ಅವರು ಸ್ವಲ್ಪ ಮರೆಯಾಗಿ ವಾಡಿಗೆ ಬಂದ ಮೇಲೆ ರೈಲು ಬದಲಿಸಿ ಮುಂದೆ ನಾಂಪಲ್ಲಿ ರೈಲು ನಿಲ್ದಾಣದಲ್ಲಿಳಿದು ಟಾಂಗ ಹುಡುಕುತ್ತಿದ್ದಾಗ ಪೋಲೀಸ್ ಕಮಿಷನರ್ ಸ್ವಾಮೀಜಿಯವರನ್ನು ಬಂಧಿಸಿದರು. ಒಂದು ವಾರದ ನಂತರ ಡಾ. ಮೇಲ್ಕೋಟೆಯವರನ್ನು ಬಂದಿಸಲಾಯಿತು. ಸಂಸ್ಥಾನಿ ಕಾಂಗ್ರೆಸ್ ತನ್ನ ಅಧ್ಯಕ್ಷ ರಾಮಾನಂದರ ನೇತೃತ್ವದಲ್ಲಿ ಕೆಳಗಿನ ಬೇಡಿಕೆಗಳನ್ನು ನಿಜಾಮರ ಸರಕಾರದ ಮುಂದಿಟ್ಟಿತು.

೧. ನಿಜಾಮರ ಆಶ್ರಯದಲ್ಲಿ ತಕ್ಷಣ ಹೈದರಾಬಾದಿನಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆ ಹಾಗೂ ಅವರು ಸ್ವತಂತ್ರ್ಯ ಭಾರತದ ಒಕ್ಕೂಟದಲ್ಲಿ ಸೇರುವ ತಮ್ಮ ಇಚ್ಛೆಯನ್ನು ಪ್ರಕಟಿಸುವುದು.

೨. ತಕ್ಷಣ ಜನತೆಗೆ ನಾಗರಿಕ ಸ್ವಾತಂತ್ರ್ಯ ನೀಡಿಕೆಯ ಪ್ರಕಟಣೆ ಹಾಗೂ ಸಂಸ್ಥಾನೀ ಕಾಂಗ್ರೆಸ್ ಮೇಲೆ ವಿಧಿಸಿರುವ ಪ್ರತಿಬಂಧವನ್ನು ತೆಗೆದುಹಾಕುವುದು.

೩. ಎಲ್ಲಾ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡುವುದು.

ಆದರೆ ಇವುಗಳನ್ನು ಒತ್ತಾಯಿಸುವ ಮೊದಲೇ ಸ್ವಾಮೀಜಿ ಅವರು ರೈಲು ನಿಲ್ದಾಣದಲ್ಲಿ ಬಂಧಿಸಲ್ಪಟ್ಟಿದ್ದರು.

ಗಾಂಧೀಜಿಯವರು "ಮಾಡು ಇಲ್ಲವೇ ಮಡಿ" ಎಂಬ ಘೋಷಣೆಯಿಂದ ದಿನಾಂಕ ಆಗಸ್ಟ್ ೭-೮ರಂದು ಮುಂಬೈಯಲ್ಲಿ ಸೇರಿದ್ದ ಕಾಂಗ್ರೆಸ್‌ನ ಸಭೆಯಲ್ಲಿ ಕ್ವಿಟ್ ಇಂಡಿಯಾ ಸತ್ಯಾಗ್ರಹಕ್ಕೆ ಕರೆ ನೀಡಿದರು. ಈ ನಿರ್ಧಾರ ದೇಶಾದ್ಯಂತ ಮಿಂಚಿನಂತೆ ಸಂಚರಿಸಿತು. ಇದರ ಪ್ರಕಾರ ಬ್ರಿಟೀಷರು ಭಾರತವನ್ನು ಬಿಟ್ಟು ಕೂಡಲೇ ಹೊರಡಬೇಕೆಂಬ ಹೇಳಿಕೆಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹೊರಡಿಸಿತು. "ಪರಾಧೀನತೆಯನ್ನು ತೊರೆದು ಹಾಕಿ ಸ್ವತಂತ್ರರಾಗುವುದು, ಭಾರತೀಯರಿಗೆ ಇರುವ ಸಹಜ ರೂಪವಾದ ಹಕ್ಕು ಭಾದ್ಯತೆ ಎಂದು ಘೋಷಿಸಲಾಯಿತು." ಬ್ರಿಟೀಷ್ ಸರಕಾರವು ಕೂಡಲೇ ಪ್ರತಿಕ್ರಿಯೇ ತೋರಿತು. ಆಗಸ್ಟ್ ೯, ೧೯೪೨ರಂದು ಮುಂಜಾನೆ ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರನ್ನು ಮತ್ತು ಇತರ ನಾಯಕರನ್ನೂ ದಸ್ತಗಿರಿ ಮಾಡಲಾಯಿತು. ಕಾಂಗ್ರೆಸ್ ಪ್ರಾಂತೀಯ ಸಮಿತಿಗಳು ನ್ಯಾಯಬಾಹಿರ ಸಂಸ್ಥೆಗಳೆಂದು ಘೋಷಿಸಲ್ಪಟ್ಟವು. ಭಾರತಾದ್ಯಂತ ಅನೇಕ ಮುಖಂಡರನ್ನು ಸೆರೆಹಿಡಿಯಲಾಯಿತು. ಸಭೆ ಸೇರುವುದನ್ನು ದೇಶಾದ್ಯಂತ ನಿಷೇಧಿಸಲಾಯಿತು. ಕಾರಾಗೃಹಗಳನ್ನು ತುಂಬಲಾಯಿತು. ರಾಜಕೀಯ ಅಥವಾ ಯಾವುದೇ ರೀತಿಯ ಮೆರವಣಿಗೆಗಳನ್ನು ನಡೆಸುವುದು ಕಾನೂನು ಬಾಹಿರವೆಂದು ಘೋಷಿಸಲಾಯಿತು. ಹೀಗೆ ೯-೮-೧೯೪೨ರಂದು ಪ್ರಾರಂಭವಾದ ಕ್ವಿಟ್ ಇಂಡಿಯಾ ಹೋರಾಟ ದೇಶದ ಬೇರೆ ಬೇರೆ ಭಾಗಗಳಲ್ಲಿ ವಿವಿಧ ರೂಪ ತಳೆಯಿತು. ಹೈದರಾಬಾದ್ ರಾಜ್ಯದಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ಹೆಚ್ಚು ಪ್ರಬಲವಾಗಿ ಹರಡಲು ಸಾಧ್ಯವಾಗಲಿಲ್ಲ. ನಿಜಾಮಾರ ಸರಕಾರವು ವಿಧಿಸಿದ್ದ ಉಗ್ರ ಕ್ರಮಗಳಿಂದಾಗಿ ಇಲ್ಲಿ ವ್ಯಕ್ತಿ

ಸ್ವಾತಂತ್ರ್ಯಕ್ಕೆ ದೊಡ್ಡ ಅಘಾತ ಉಂಟಾಗಿತ್ತು. ಗಣೇಶೋತ್ಸವಗಳು ಈ ಸಮಯದಲ್ಲಿ ಅಂದೋಳನ ಪ್ರಚಾರಾ ಸಭೆಗಳಾಗಿ ಪರಿವರ್ತಿತವಾಗುತ್ತಿದ್ದವು. ದಶಕಗಳ ಹಿಂದೆ ಮಹಾರಾಷ್ಟ್ರದ ಬಾಲಗಂಗಾಧರ್ ತಿಲಕರು ಈ ಕ್ರಮವನ್ನು ಪ್ರಾರಂಭಿಸಿದರು. ಗುಲಬರ್ಗಾದಲ್ಲಿ ನಡೆದ ಗಣೇಶೋತ್ಸವದಲ್ಲಿ ಎನ್. ಜಿ. ಗೋರೆಯವರು "ಯುದ್ಧೋಕ್ತರ್ ಜಾಗತಿಕ ಪುನರ್ಘಟನ್" ಎಂಬ ವಿಷಯದ ಬಗೆಗೆ ಪ್ರಚೋದಿತ ಭಾಷಣ ಮಾಡಿದರು (೧೯೪೩). ನಿಜಾಮರ ಅಧಿಕಾರಿಗಳು ಇವರನ್ನು ಬಂಧಿಸುವ ಸನ್ನಾಹ ನಡೆಸಿದ್ದಾಗ, ಗುಂತಕಲ್‌ವರೆಗೆ ಮಾರುವೇಷದಲ್ಲಿ ಬಸ್ಸಿನಲ್ಲಿ ಹೋಗಿ ಅನಂತರ ಗೋರೆಯವರು ಮುಂಬೈಗೆ ತಪ್ಪಿಸಿಕೊಂಡು ಹೋಗಲು ಸ್ವಾತಂತ್ರ್ಯ ಹೋರಾಟಗಾರರು ಸಹಾಯ ಮಾಡಿದರು. ಇವರುಗಳಲ್ಲಿ ಡಾ. ವೆಂಕಟೇಶ ಪಾಂಡುರಂಗ ದೇವುಳಗಾಂವಕರ್ ಅವರೂ ಇದ್ದರು. ಆಗಸ್ಟ್ ೨೫ರ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ನಿಜಾಮರ ರಾಜ್ಯದಲ್ಲಿ ಸುಮಾರು ೨೫ರಿಂದ ೨೭ ಜನ ಸ್ವಾತಂತ್ರ್ಯ ಹೋರಾಟಗಾರರು ಬಂಧನಕ್ಕೊಳಗಾದರೆಂದು ವ್ಯಕ್ತವಾಗುತ್ತದೆ. ಈ ಭಾಗದ ಸ್ಥಳೀಯ ಕಾಂಗ್ರೆಸ್ಸಿಗರಿಗೆ ಕ್ವಿಟ್ ಇಂಡಿಯಾ ಚಳವಳಿಯ ಕಾವು ಸಹಜವಾಗಿಯೇ ತಗುಲಿದ್ದರೂ ಹೋರಾಟವನ್ನು ಹೂಡಲು ಬ್ರಿಟಿಷರ ಪರೋಕ್ಷ ಹತೋಟಿಯಲ್ಲಿದ್ದ ನಿಜಾಮರ ಸರಕಾರವು ಚಳವಳಿಗೆ ಯಾವುದೇ ರೀತಿಯ ಅವಕಾಶ ಕಲ್ಪಿಸಲಿಲ್ಲ. ಸಾಮಾನ್ಯ ಜನರಿಗೆ ಈ ಹೋರಾಟದ ಪರಿಜ್ಞಾನವು ಈ ಕಾರಣದಿಂದಾಗಿಯೇ ಹೆಚ್ಚಾಗಿ ಮೂಡಲಿಲ್ಲ. ಬಹುಶಃ ಈ ಪರಿಜ್ಞಾನ ಮೂಡಿದ್ದರೇ ಹೈದರಾಬಾದಿನಲ್ಲಿದ್ದ ಬ್ರಿಟಿಷರ ಹತೋಟಿಯನ್ನು ತೊರೆದು ಹಾಕಬೇಕೆಂಬ ಹಂಬಲ ಉಲ್ಬಣಿಸುತ್ತಿತ್ತು. ವಾಸ್ತವತೆಯ ದೃಷ್ಟಿಯಿಂದ ಹೇಳುವುದಾದರೇ ಈ ಪ್ರದೇಶವು ಬ್ರಿಟೀಷ್ ಸರಕಾರದ ಭಾಗವಾಗಿದ್ದರೂ ನಿಜಾಮರ ಸರಕಾರವು ತನ್ನ ಎಲ್ಲಾ ಪ್ರಯತ್ನದಿಂದ ಭಾರತದ ರಾಷ್ಟ್ರೀಯ ಹೋರಾಟಗಳು ತಮ್ಮ ರಾಜ್ಯದೊಳಗೆ ಘಟಿಸದಿರುವಂತೆ ಎಚ್ಚರಿಕೆವಹಿಸಿತ್ತು. ಆದರೇ ರಾಷ್ಟ್ರೀಯ ನಾಯಕರುಗಳೊಡನೆ ಸಂಪರ್ಕ ಹೊಂದಿದ್ದ ಹೈದರಾಬಾದ್ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಜಾಗೃತಿಗಾಗಿ ಘೋಷಣೆಗಳನ್ನು ಹರಡಿ ಸಾಮಾನ್ಯ ಜನತೆಯಲ್ಲಿ ರಾಷ್ಟ್ರೀಯ ಆಗು ಹೋಗುಗಳಲ್ಲಿ ಆಸಕ್ತಿ ವಹಿಸುವಂತೆ ಮಾಡಿದ್ದು ಗಮನೀಯವಾಗಿದೆ. ಡಾ. ಮೇಲ್ಕೋಟೆ ಅವರು ಹೈದರಾಬಾದಿನಲ್ಲಿ ಜವಾಬ್ದಾರಿ ಸರಕಾರದ ಅವಶ್ಯಕತೆಯನ್ನು ಒತ್ತಾಯ ಮಾಡಿ ಭಾರತದ ಬ್ರಿಟೀಷ್ ಗವರ್ನರ್ ಜನರಲ್‌ರೊಡನೆ ಪತ್ರ ವ್ಯವಹಾರ ನಡೆಸಿದ್ದರು. "ಕ್ವಿಟ್ ಇಂಡಿಯಾ" ಚಳವಳಿಯು ತಮ್ಮ ಸಂಸ್ಥಾನವನ್ನು ಪ್ರವೇಶಿಸದಂತೆ ನಿಜಾಮರ ಸರಕಾರ ಪ್ರಯತ್ನಿಸಿದ್ದರೂ ರಾಷ್ಟ್ರದ ಬೇರೆಡೆ ನಡೆದ ಘಟನೆಗಳ ಫಲವಾಗಿ ರಾಷ್ಟ್ರೀಯತೆಯ ಭಾವನೆಯು ಈ ಪ್ರಾಂತ್ಯದಲ್ಲಿ ಹರಡಿತು.

ಕ್ವಿಟ್ ಇಂಡಿಯಾ ಹೋರಾಟದಲ್ಲಿ ಭೂಗತರಾಗಿ ಕರ್ನಾಟಕದಲ್ಲಿ ಚಾಲನೆಕೊಡುತ್ತಿದ್ದ ಹಿರಿಯನಾಯಕರಾಗಿದ್ದ ರಂಗನಾಥ ದಿವಾಕರ್ ಮುಂತಾದವರು ಡಿಸೆಂಬರ್ ೧೯೪೪ರ ವೇಳೆಗೆ ಭೂಗತದಿಂದ ಹೊರಬಂದು ಪೋಲಿಸರಿಗೆ ಶರಣರಾದ ಬಳಿಕ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಚಳವಳಿ ಅಂತ್ಯಗೊಂಡಿತು. ರಾಮಾನಂದ ತೀರ್ಥರನ್ನು ಡಿಸೆಂಬರ್ ೧೯೪೩ರಲ್ಲಿ ಬಿಡುಗಡೆ ಮಾಡಲಾಗಿತ್ತು. ರಾಷ್ಟ್ರದ ಈ ಚಳವಳಿಯು ಹೈದರಾಬಾದ್ ಸಂಸ್ಥಾನದ ಜನರ ಹೋರಾಟಕ್ಕೆ ಪ್ರಮುಖ ಚಾಲನೆ ನೀಡಿತು. ಈ ಹೋರಾಟಗಳ ಫಲವಾಗಿ ೧೯೪೫ರ ನವೆಂಬರ್ ತಿಂಗಳಲ್ಲಿ ಸರಕಾರ ಸಂಸ್ಥಾನಿ ಕಾಂಗ್ರೆಸ್ಸ್‌ನ ಮೇಲೆ ವಿಧಿಸಲಾಗಿದ್ದ ಪ್ರತಿಬಂಧವನ್ನು ಕೆಲವು ಶರತ್ತುಗಳ ಮೇಲೆ ತೆಗೆಯುವುದಾಗಿ ಸೂಚಿಸಿತು. ಸರ್ ಮಿರ್ಜಾ ಇಸ್ಮಾಯಿಲ್ ಅವರು ನಿಜಾಮ್ ಸರಕಾರದ ಪ್ರಧಾನ ಮಂತ್ರಿಯಾಗಿ ಆಗಸ್ಟ್ ೧೯೪೬ರಲ್ಲಿ ನೇಮಕಗೊಂಡಾಗ ಮಹಮದ್ ಆಲಿ ಜಿನ್ನಾ ಅವರು ನಿಜಾಮರಿಗೆ ಪತ್ರಬರೆದು ಈ ನೇಮಕವನ್ನು ರದ್ದುಗೊಳಿಸುವಂತೆ ಕೋರಿದರೆಂದು ತಿಳಿದು ಬರುತ್ತದೆ. ಆದರೆ, ತಮ್ಮ ರಾಜ್ಯದ ಆಂತರಿಕ ಆಡಳಿತದ ವಿಚಾರದಲ್ಲಿ ಜಿನ್ನಾ ಅವರು ಹಸ್ತಕ್ಷೇಪ ಮಾಡುವುದು ನಿಜಾಮರಿಗೆ ಸ್ವಲ್ಪವೂ ಸರಿಬರಲಿಲ್ಲವೆಂದೂ ಅವರು ಹಾಗೆಂದು ಜಿನ್ನಾ ಅವರಿಗೆ ಉತ್ತರ ನೀಡಿದರೆಂದು ಹೇಳಲಾಗಿದೆ. ಗಾಂಧೀಜಿ ಹಾಗೂ ನೆಹರೂ ಅವರುಗಳು ಮಿರ್ಜಾ ಇಸ್ಮಾಯಿಲ್ ಅವರಿಗೆ ಆಧರಣೀಯ ಪತ್ರ ಬರೆದು ಕಾಂಗ್ರೆಸ್‌ನ ಮೇಲೆ ಹೇರಿದ್ದ ಪ್ರತಿಬಂಧವನ್ನು ತೆಗೆಯುವಂತೆ ಒತ್ತಾಯಿಸಿದರು. ಇದರ ಬಗೆಗೆ ಸೂಕ್ತ ಕ್ರಮಕೈಗೊಳ್ಳಲು ತಾವು ಪ್ರಯತ್ನಿಸಿರುವುದಾಗಿ ಮಿರ್ಜಾ ಅವರುಗಳಿಗೆ ತಿಳಿಸಿದರು. ಕೊನೆಗೆ ದಿನಾಂಕ ೩ನೇ ಜುಲೈ ೧೯೪೬ರಂದು ಸಂಸ್ಥಾನೀ ಕಾಂಗ್ರೆಸ್ಸಿನ ಮೇಲಿನ ಪ್ರತಿಬಂಧವನ್ನು ಮಿರ್ಜಾರವರ ಪ್ರಯತ್ನದಿಂದಾಗಿ ನಿಜಾಮ್ ಸರಕಾರವು ರದ್ದು ಮಾಡಿತು. ಹೀಗೆ ಹೈದರಾಬಾದ್ ಸಂಸ್ಥಾನದ ಜನರು ಸಂಘಟಿತರಾಗಿ ಹೋರಾಡುವ ವೇದಿಕೆ ಪುನಃ ನಿರ್ಮಾಣವಾಗಿ ಚಳವಳಿಯ ಹೊಸತೊಂದು ಅಲೆ ಉಂಟಾಯಿತು.

## ಸ್ವಾತಂತ್ರ್ಯದ ಕನಸು

ಕ್ವಿಟ್ ಇಂಡಿಯಾ ಚಳವಳಿಯ ತೀವ್ರ ಪ್ರಭಾವ ಹಾಗೂ ಅಂತರರಾಷ್ಟ್ರೀಯ ಪರಿಸ್ಥಿತಿಯ ಒತ್ತಡಗಳಿಂದಾಗಿ ಬ್ರಿಟೀಷ್ ಸರಕಾವು ಅಧಿಕಾರ ಹಸ್ತಾಂತರಕ್ಕೆ ನಿರ್ಧಾರಮಾಡಿತು. 'ಬ್ರಿಟೀಷ್ ಕ್ಯಾಬಿನೆಟ್ ಮಿಶನ್' ಅಧಿಕಾರ ಹಸ್ತಾಂತರದ ಯೋಜನೆಯನ್ನು ಸಿದ್ಧಪಡಿಸಿತು. ಆದರೆ, ಈ ಯೋಜನೆಯಲ್ಲಿ ಒಂದು ದೋಷವಿತ್ತು. ಬ್ರಿಟೀಷರ ಪರಮಾಧಿಕಾರ ಅಂತ್ಯಗೊಂಡಾಗ ದೇಶದಲ್ಲಿನ ಬ್ರಿಟೀಷರ ಆಡಳಿತಕ್ಕೆ ಒಳಪಟ್ಟ ಸಂಸ್ಥಾನಿ ರಾಜ್ಯಗಳ ಭವಿಷ್ಯದ ಬಗ್ಗೆ ಅದರಲ್ಲಿ ಸ್ಪಷ್ಟ ಉಲ್ಲೇಖ ಇರಲಿಲ್ಲ. ಪರಮಾಧಿಕಾರೀ ಸ್ವಾತಂತ್ರ್ಯವನ್ನು ಭಾರತದ ಸಂಸ್ಥಾನಗಳು ಪಡೆಯುವುದೆಂಬ ಮಾತು ಆಗಲೇ ಕೇಳಿಬರುತ್ತಿತ್ತು. ಈ ನಡುವೆ ದಿನಾಂಕ ೨೦ನೇ ಜನವರಿ ೧೯೪೪ರಂದು ಸಂಸ್ಥಾನಿ ಕಾಂಗ್ರೆಸ್ಸಿಗರು ಸಾಂಸದಿಕ ನಿಯೋಗಕ್ಕೆ ಒಂದು ಮನವಿ ಸಲ್ಲಿಸಿದ್ದರು. ಪ್ರಜೆಗಳ ಒತ್ತಡಗಳಿಗೆ ಮಣಿದು ಕೆಲವು ಸಂಸ್ಥಾನಿ ರಾಜರುಗಳು ಭಾರತ ಸರಕಾರದಲ್ಲಿ ಸೇರ್ಪಡೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಆದರೆ, ನಿಜಾಮರಿಗೆ ಭಾರತ ಸರಕಾರವನ್ನು ಸೇರುವ ವಿಚಾರದಲ್ಲಿ ಸ್ವಾತಂತ್ರ್ಯವಿದೆಯಂದು ವಾದಿಸಲಾಯಿತು. ಈ ಸೌಲಭ್ಯಕ್ಕೆ 'ರಾಜಗೋಪಾಲಾಚಾರ್ಯರ ಡಾಕ್ಟರೀನ್' ನೀತಿ ಎಂದು ಆಗ ಕರೆಯಲಾಗುತ್ತಿತ್ತು. ಹೈದರಾಬಾದ್‌ನ ಸುಲ್ತಾನ ಬಜಾರ್‌ನಲ್ಲಿ ೧೬ನೇ ಜೂನ್ ೧೯೪೭ರಂದು ರಾಮಾನಂದ ತೀರ್ಥರು ಹೈದರಾಬಾದ್ ರಾಜ್ಯದ ಮೂರು ಪ್ರಾದೇಶಿಕ ಪರಿಷತ್ತುಗಳ ಸಭೆಯನ್ನು ಸಮಾವೇಶಗೊಳಿಸಿದರು. ಇದರಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಶಂಕರರಾವ್‌ದೇವ್ ಭಾಗವಹಿಸಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಆಗಿನ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪ ಮತ್ತು ಹಳ್ಳಿಕೇರಿ ಗುದ್ಲೆಪ್ಪ ಇವರುಗಳೂ ಅದರಲ್ಲಿ ಭಾಗವಹಿಸಿದ್ದರು. ಸಭೆಯು ಶಾಂತಯುತವಾಗಿದ್ದು, ನಿಜಾಮರು ತಮ್ಮ ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ಸೇರ್ಪಡೆಗೊಳಿಸುವ ಒಪ್ಪಿಗೆ ಪತ್ರ (ಇನ್‌ಸ್ಟ್ರುಮೆಂಟ ಆಫ್ ಅಕ್ಸೆಸನ್) ಸಹಿ ಹಾಕಬೇಕೆಂಬ ಒತ್ತಾಯ ಪೂರ್ವಕ ನಿರ್ಣಯವನ್ನು ಸಭೆ ಸರ್ವಾನುಮತದಿಂದ ಕೈಗೊಂಡಿತು. ಒಂದು ವೇಳೆ ನಿಜಾಮರು ಇದಕ್ಕೆ ಒಪ್ಪದೇ ಇದ್ದರೆ ಸಂಸ್ಥಾನಿ ರಾಜ್ಯದಾದ್ಯಂತ ಅಹಿಂಸಾತ್ಮಕ ಸತ್ಯಾಗ್ರಹವನ್ನು ಹೂಡಬೇಕೆಂಬ ನಿರ್ಣಯವನ್ನೂ ಆ ಸಭೆಯಲ್ಲಿ ತೆಗೆದು ಕೊಳ್ಳಲಾಯಿತು. ಇದಾದ ಸ್ವಲ್ಪ ದಿನಗಳ ಮೇಲೆ ಈ ಮುಂಚೆ ಉಲ್ಲೇಖಿಸಿರುವಂತೆ ಈ ಸಂಸ್ಥಾನೀ ಕಾಂಗ್ರೆಸ್ಸಿನ ಮೇಲಿನ ಪ್ರತಿಬಂಧವನ್ನು ತೆಗೆಯಲಾಯಿತು. ಕೆಲವು ತಿಂಗಳುಗಳ ಬಳಿಕ ಭಾರತಕ್ಕೆ ಕೊನೆಯ ಬ್ರೀಟೀಷ್ ಗವರ್ನರ್ ಜನರಲ್ ಆಗಿ ಸರ್. ಮೌಂಟ್ ಬ್ಯಾಟನ್ ಅವರನ್ನು ನೇಮಕ ಮಾಡಲಾಯಿತು. ಕಾರ್ಮಿಕ ಪಕ್ಷದ ಆಟ್ಲಿ ಅವರು ಇಂಗ್ಲೆಂಡ್‌ನ ಪ್ರಧಾನಿಯಾದ ತರುವಾಯ ಭಾರತಕ್ಕೆ ಸ್ವಾತಂತ್ರ್ಯ ನೀಡಲು ಬ್ರಿಟೀಷ್ ಸರಕಾರ ಅವಶ್ಯಕ ಕಾನೂನು ಕ್ರಮಗಳನ್ನು ಕೈಗೊಂಡಿತು. ಪಾಕಿಸ್ತಾನವನ್ನು ರಚಿಸಿತು. ದಿನಾಂಕ ೧೫ನೇ ಆಗಸ್ಟ್ ೧೯೪೭ರಂದು ಭಾರತವು ವಿದೇಶಿದಾಸ್ಯದಿಂದ ವಿಮೋಚನೆಗೊಂಡಿತು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದರೂ ಹೈದರಾಬಾದ್ ಸಂಸ್ಥಾನವು ಮಾತ್ರ ನಿಜಾಮರ ನಿರಂಕುಶ ಪ್ರಭುತ್ವದಿಂದ ಮುಕ್ತವಾಗದೇ ಪ್ರತ್ಯೇಕವಾಗಿಯೇ ಉಳಿಯಿತು. ಹೈದರಾಬಾದ್ ಸಂಸ್ಥಾನೀ ಜನತೆ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಪ್ರತ್ಯೇಕವಾದ ಹಾಗೂ ರಜಾಕಾರರ ಘೋರವಾದ ಹಾವಳಿಗಳ ವಿರುದ್ಧ ಚಳವಳಿ ಹೂಡಬೇಕಾಯಿತು.

## ರಜಾಕಾರರ ದೌರ್ಜನ್ಯಗಳು

ನಿಜಾಮರು ಭಾರತದ ಸ್ವಾತಂತ್ರ್ಯ ಘೋಷಣೆಯ ಕಾಯ್ದೆ (೧೯೪೭)ಯಲ್ಲಿದ್ದ ನ್ಯೂನತೆಯನ್ನು ದುರುಪಯೋಗ ಪಡಿಸಿಕೊಂಡು, ಯಾವ ಕಾರಣಕ್ಕೂ ಹೈದರಾಬಾದ್ ಸಂಸ್ಥಾವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಬಾರದೆಂಬುದು ಅವರ ದೃಢ ನಿಲುವಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ದಿನಾಂಕ ೧೬ನೇ ಜೂನ್ ೧೯೪೭ರವರೆಗೆ ಆಂತರಿಕ ಸರಕಾರವು ಇನ್ನೂ ಅಸ್ತಿತ್ವದಲ್ಲಿತ್ತು. ನಿಜಾಮರ ನಿರ್ಧಾರದ ಬಗೆಗೆ ಜನ ಸಮುದಾಯದಲ್ಲಿ ವ್ಯಾಪಕ ಅತೃಪ್ತಿ ಆಂತರಿಕವಾಗಿ ಮೂಡಿಬಂದಿತ್ತು. ದಿನಾಂಕ ೧೫ನೇ ಆಗಸ್ಟ್ ೧೯೪೭ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ವಾರ್ತೆ ರೇಡಿಯೋಗಳ ಮೂಲಕ ಈ ಪ್ರಾಂತ್ಯದ ಜನತೆಯ ಕಿವಿಗಳಿಗೆ ಮಾತ್ರ ಕರ್ಣಾನಂದವನ್ನುಂಟುಮಾಡಿತು. ಸ್ವತಂತ್ರ ಭಾರತದ ರಾಷ್ಟ್ರಧ್ವಜವನ್ನು ಹೈದರಾಬಾದ್‌ನಲ್ಲಿ ಹಾರಿಸಲು ಆಗಲೇ ಗೋಪ್ಯವಾಗಿ ಸಿದ್ಧತೆಯು ನಡೆದಿತ್ತು. ರಾಮಾನಂದ ತೀರ್ಥರು ತಮಗೆ ಪಂಡಿತ್ ನೆಹರೂರವರು ಈ ಮೊದಲೆ ನೀಡಿದ್ದ ತ್ರಿವರ್ಣ ಧ್ವಜವನ್ನು ಹೈದರಾಬಾದಿನ ಸುಲ್ತಾನ ಬಜಾರಿನ ಒಂದು ಸಾರ್ವಜನಿಕ ಸ್ಥಳದಲ್ಲಿ ಹಾರಿಸಲು ವ್ಯವಸ್ಥೆ ಮಾಡಿದ್ದರು. ಈ ಧ್ವಜವನ್ನು ವಿಧಿಪೂರ್ವಕವಾಗಿ ಹಾರಿಸಲಾಯಿತು. ಆದರೆ ಅದರಲ್ಲಿ ಪಾಲ್ಗೊಂಡ

ಪ್ರಮುಖರೆಲ್ಲ ಬಂಧಿತರಾದರು. ಆಗಸ್ಟ್ ೧೫ರ ಬೆಳಗಿನ ಜಾವ ಮೂರು ಗಂಟೆಗೆ ರಾಮಾನಂದ ತೀರ್ಥ, ಡಾ. ಜಿ. ಎಸ್. ಮೇಲ್ಕೋಟೆ, ಕೃಷ್ಣಾಚಾರ್ಯ ಜೋಷಿ ಮುಂತಾದ ನಾಯಕರುಗಳನ್ನು ನಿಜಾಮರ ಸರಕಾರ ಬಂಧಿಸಿತು. ಜನಾರ್ಧನರಾವ್ ದೇಸಾಯಿಯವರು ಬಂಧನ ತಪ್ಪಿಸಿಕೊಂಡು ವಿಜಾಪುರದಲ್ಲಿದ್ದರು. ಇದು ಸ್ವಾತಂತ್ರ್ಯ ಹೋರಾಟದ ಕೊನೆಯ ಹಂತದ ಆರಂಭವೂ ಆಗಿತ್ತು. ನಿಜಾಮರ ಸರಕಾರವು ೧೬ನೇ ಆಗಸ್ಟ್ ೧೯೪೭ರಂದು ಒಂದು ಫರ್ಮಾನ್ ಹೊರಡಿಸಿ ಮೆರವಣಿಗೆ, ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವತಂತ್ರ್ಯ ಹಾಗೂ ಪತ್ರಿಕಾ ಸ್ವಾತಂತ್ರ್ಯಗಳ ಮೇಲೆ ಪ್ರತಿಬಂಧ ಹೇರಿತು. ಹೋರಾಟಗಾರರು ಯಾವುದೇ ಸಂಪರ್ಕ ಸಾಧನಗಳನ್ನು ಉಪಯೋಗಿಸದಂತೆ ಎಚ್ಚರಿಕೆ ವಹಿಸಲಾಯಿತು. ಈ ಸಮಯದಲ್ಲಿ ಸ್ವತಂತ್ರ ಭಾರತದ ರಾಷ್ಟ್ರ ಧ್ವಜವನ್ನು ಹಾರಿಸುವುದು ನಿಷೇಧಗೊಂಡಿತ್ತು. ಒಂದು ವೇಳೆ ಯಾರಾದರೂ ಇದನ್ನು ಉಲ್ಲಂಘಿಸಿದರೆ ಅದು ಕ್ರಿಮಿನಲ್ ಅಪಾದನೆ ಎಂದು ಪರಿಗಣಿಸಲಾಗುತ್ತಿತ್ತು. ನಿಜಾಮರು ತಾವೇ ಘೋಷಿಸಿಕೊಂಡ ಸ್ವಾತಂತ್ರ್ಯದ ಬಗೆಗೆ ವ್ಯಾಪಕವಾದ ವಿರೋಧಗಳು ಕಂಡು ಬಂದವು. ರಾಮಾನಂದ ತೀರ್ಥರು ಜನತೆಯ ಸ್ವಾತಂತ್ರ್ಯ ಹರಣದ ಕರಾಳ ಶಾಸನವನ್ನು ಖಂಡಿಸಿದ್ದೇ ಅಲ್ಲದೇ ಸಂಸ್ಥಾನಿ ರಾಜ್ಯದಾದ್ಯಂತ ವ್ಯಾಪಾಕ ಸತ್ಯಾಗ್ರಹಕ್ಕೆ ಕರೆ ನೀಡಿದರು. ಗುಲಬರ್ಗಾ ಜಿಲ್ಲೆಯಲ್ಲಿ ಅಲ್ಲಲ್ಲಿ ದೊಡ್ಡ ಪ್ರಮಾಣದಲ್ಲಿ ವಿರೋಧ ವ್ಯಕ್ತಪಡಿಸಿ ಸಭೆಗಳನ್ನು ನಡೆಸಲಾಯಿತು. ಈ ಹೋರಾಟದಲ್ಲಿ ಎಲ್ಲಾ ವರ್ಗದ ಜನರೂ ಭಾಗವಹಿಸಿದ್ದು ವಿಶೇಷವಾಗಿತ್ತು. ಅದರಲ್ಲೂ ರೈತ ವರ್ಗದವರು ಹೊಸ ಹುರುಪಿನೊಂದಿಗೆ ಪಾಲ್ಗೊಂಡಿದ್ದು ಕಂಡು ಬರುತ್ತದೆ. ಈ ಹೋರಾಟದಲ್ಲಿ ಹೈದರಾಬಾದಿನಲ್ಲಿ ಧ್ವಜಾರೋಹಣ ಮಾಡಿದ ಅಪಾದನೆಯ ಮೇಲೆ ಮಹಿಳಾ ಹೋರಾಟಗಾರ್ತಿಯರಾಗಿದ್ದ ಯಶೋದಾಬಾಯಿ ಮತ್ತು ಬ್ರಿಜ್‌ರಾಣಿಯವರುಗಳನ್ನು ಸೆರೆ ಹಿಡಿಯಲಾಯಿತು. ವಿಮಲಾಬಾಯಿ ಮೇಲ್ಕೋಟೆ (ಡಾ. ಮೇಲ್ಕೋಟೆ ಅವರ ಪತ್ನಿ) ಉಷಾ ಪಂಗ್ರಿಕರ್, ಅಹಲ್ಯಾ ಬಾಯಿ ಮುಂತಾದರು ಪ್ರತಿಬಂಧಕಾಜ್ಞೆ ಉಲ್ಲಂಘಿಸಿದಕ್ಕಾಗಿ ಪೋಲಿಸರ ಅಶ್ರುವಾಯು ದಾಳಿಯನ್ನು ಎದುರಿಸಬೇಕಾಯಿತು. ನಾರಾಯಣರಾವ್ ಭೀಮರಾವ್ ದೇಶಪಾಂಡೆಯವರು ಗುಲಬರ್ಗಾದಲ್ಲಿ ಎಂ. ಎಸ್. ಕೆ. ಮಿಲ್‌ನ ಒಳಗೆ ಆಗಸ್ಟ್ ೧೫ ರಂದು ರಾಷ್ಟ್ರ ಧ್ವಜ ಹಾರಿಸಿದ್ದಾಕ್ಕಾಗಿ ಒಂದು ವರ್ಷ ೪೦ ದಿನಗಳ ಜೈಲು ಶಿಕ್ಷೆ ಅನುಭವಿಸಿದರು. ಗುಲಬರ್ಗಾದಲ್ಲಿದ್ದ ಆಗಿನ ಪ್ರಮುಖ ಕಾರ್ಯಕರ್ತರುಗಳೆಂದರೆ ಕಕ್ಕೇರಿ ಹನುಮಂತರಾಯರು, ಕಪಟರಾಳ ಕೃಷ್ಣರಾಯರು, ದತ್ತಾತ್ರೇಯ ಅವರಾಧಿ, ಭಾವುರಾವ್ ದೇವುಳಗಾಂವಕರ್, ಅಶ್ವತ್ಥರಾವ್ ವಕೀಲರು, ಅನಿರುದ್ಧ ದೇಸಾಯಿ ಮುಂತಾದವರು. ೧೫ನೇ ಆಗಸ್ಟ್ ೧೯೪೭ರಂದು ಮುಂಜಾನೆ ಸ್ವಾತಂತ್ರ ಘೋಷಣೆಯಾದಾಗ ಗುಲಬರ್ಗಾದ ನೂತನ ವಿದ್ಯಾಲಯದ ಆಟದ ಮೈದಾನದಲ್ಲಿ ಫುಟ್‌ಬಾಲ್ ಪಂದ್ಯ ಆಡುವ ನೆವದಲ್ಲಿ ಯುವಕರು (ಹೋರಾಟಗಾರರು)ಗಳು ಸೇರಿದ್ದರು. ಅವರ ಜೊತೆಯಲ್ಲಿ ರಾಷ್ಟ್ರದ ತ್ರಿವರ್ಣ ಧ್ವಜವೂ ಇತ್ತು. ಸುಮಾರು ೫೦-೬೦ ವಿದ್ಯಾರ್ಥಿಗಳಿದ್ದ ತಂಡವು (ಅನಿರುದ್ಧ ದೇಸಾಯಿ ಅವರನ್ನು ಒಳಗೊಂಡಂತೆ) ಮೆಹಬೂಬ್ ಗುಲಶನ್ ಉದ್ಯಾನವನದ ಬಳಿ ಬೆಳಗ್ಗೆ ಆರು ಗಂಟೆಗೆ ಸೇರಿ ಕಕ್ಕೇರಿ ಹನುಮಂತರಾಯರ ಮನೆ ಮುಂದೆ ರಾಷ್ಟ್ರಧ್ವಜವನ್ನು ಹಾರಿಸಿದರು. ಪೋಲಿಸರಿಗೆ ಈ ವಿಷಯ ತಲುಪುವಷ್ಟರಲ್ಲಿ ಪ್ರಭಾತ್ ಪೇರಿಯನ್ನು ಪ್ರಮುಖ ರಸ್ತೆಗಳಲ್ಲಿ ಮುಂದುವರೆಸಿದರು. ಜಗತ್ ಪೋಲಿಸ್ ಸ್ಟೇಷನ್ ಮುಂದೆ ಮೆರವಣಿಗೆ ಬಂದಾಗ ಪೋಲೀಸರು ತಬ್ಬಿಬ್ಬಾದರು ಹಾಗೂ ವಿದ್ಯಾರ್ಥಿಗಳು ಪೋಲೀಸರ ಬಂಧನದಿಂದ ತಪ್ಪಿಸಿಕೊಂಡರು.

೧೯೪೭ ಆಗಸ್ಟ್ ೧೫ ರಂದು ಮಧ್ಯರಾತ್ರಿಯ ತರುವಾಯ ಹೈದರಾಬಾದ್ ಸಂಸ್ಥಾನದಲ್ಲಿ ನಡೆದ ವ್ಯಾಪಕ ದೌರ್ಜನ್ಯಗಳಿಗೆ ಧಾರ್ಮಿಕ ತೀವ್ರಗಾಮಿಗಳ ಸಂಸ್ಥೆಯಾದ ಇತ್ತ್‌ಹಾದ್-ಉಲ್ ಮುಸಲ್‌ಮೀನ್ ಮುಖ್ಯವಾಗಿ ಕಾರಣವಾಗಿತ್ತು. ಈ ಸಂಸ್ಥೆಯ ಸ್ಥಾಪನೆಯನ್ನು ಇದಕ್ಕೆ ಮೊದಲೇ ಲಾತೂರಿನ ಪ್ರಸಿದ್ಧ ವಕೀಲನಾಗಿದ್ದ ಖಾಸಿಂ ರಜ್ವಿ ಮತ್ತು 'ರೆಹನ್‌ಮಾಯೇ ದಕ್ಕನ್' ಪತ್ರಿಕೆಯ ಸಂಪಾದಕನಾಗಿದ್ದ ಮಹಮ್ಮದ್ ಸಿದ್ದಿಕಿ ಇವರುಗಳು (೧೯೪೦) ಕೈಗೊಂಡಿದ್ದರು. ಈ ಸಂಸ್ಥೆಯಲ್ಲಿ ಒರಿಸ್ಸಾದ ಚಳವಳಿಯಲ್ಲಿ ಭಾಗವಹಿಸಿದ್ದ ತೀವ್ರಗಾಮಿ ಬಂದೂಕುದಾರರನ್ನು ಸೇರಿಸಿಕೊಳ್ಳಲಾಗಿತ್ತೆಂದು ತಿಳಿದುಬರುತ್ತದೆ. ಈ ಸಂಸ್ಥೆಯ ಕಾರ್ಯಕರ್ತರನ್ನು ರಜಾಕಾರರೆಂದೂ ಕರೆಯಲಾಗುತ್ತಿತ್ತು. ಇತ್ತ್‌ಹಾದ್-ಉಲ್-ಮುಸಲ್‌ಮೀನ್ ಸಂಸ್ಥೆಯ ಅಧ್ಯಕ್ಷನಾಗಿದ್ದ ಬಹಾದ್ದೂರ್ ಯಾರ್‌ಜಂಗ್ (ಬಹಾದ್ದೂರ್ ಖಾನನು) ಅವರ ದಾಳಿಗಳನ್ನು ನಿರ್ದೇಶಿಸುತ್ತಿದ್ದನಲ್ಲದೇ ಕೋಮು ಭಾವನೆಗಳನ್ನು ಪ್ರಚೋದಿಸುವ ಭಾಷಣಗಳನ್ನು ನೀಡುತ್ತಿದ್ದನೆಂದು ತಿಳಿದು ಬರುತ್ತದೆ. ಸ್ವಾತಂತ್ರ್ಯ ಬಂದ ರಾತ್ರಿ ಗುಲಬರ್ಗಾ ರೈಲು ನಿಲ್ದಾಣಕ್ಕೆ ಬಂದ ಎಲ್ಲಾ ರೈಲುಗಳಿಗೂ ರಾಷ್ಟ್ರಧ್ವಜವನ್ನು ಕಟ್ಟಲಾಗಿತ್ತು ಮತ್ತು ಅವುಗಳಲ್ಲಿ ಒಂದೇ ಸಮನೆ ವಂದೇ ಮಾತರಂ ಕೇಳಿಬರುತ್ತಿತ್ತು. ರಜಾಕಾರರು ರೈಲುಗಳನ್ನು ನಿಲ್ಲಿಸಿ ರಾಷ್ಟ್ರಧ್ವಜವನ್ನು ಹರಿದು ಹಾಕಿ ಪ್ರಯಾಣಿಕರು

ಮೌನದಿಂದ ಸಾಗುವಂತೆ ನಿರ್ದೇಶಿಸುತ್ತಿದ್ದರೆಂದು ಹೇಳಲಾಗುತ್ತದೆ. ಅವರು ಸ್ಥಳದಿಂದ ಸ್ಥಳಕ್ಕೆ ತಮ್ಮ ದಳಗಳೊಡನೆ ಸಂಚರಿಸಿ ನಿಶ್ಶಸ್ತ್ರ ಅಮಾಯಕರ ಮೇಲೆ ಪ್ರಬಲ ದಾಳಿಗಳನ್ನು ಮಾಡಿ ಕೊಲೆ-ಸುಲಿಗೆಗಳನ್ನು ಮಾಡುತ್ತಿದ್ದರು. ಚಿಂಚೋಳಿಯಲ್ಲಿ ಇಂಥ ದಾಳಿಗಳನ್ನು ವಿರೋಧಿಸಿದ್ದಕ್ಕಾಗಿ ಅಪ್ಪಾರಾವ್ ಪಾಟೀಲರನ್ನು ರಾಜಾಕಾರರು ಕೊಂದು ಹಾಕಿದರು. ಮಾಗಾಂವ್ ಮತ್ತು ಕಮಲಾಪುರದಲ್ಲಿ ರೈತವರ್ಗದವರ ಮೇಲೆ ದಾಳಿ ಮಾಡಿ ದೋಚಿದರು. ಒಟ್ಟಿನಲ್ಲಿ ರಜಾಕಾರರ ದೌರ್ಜನ್ಯಗಳು ಹೈದರಾಬಾದ್ ಸಂಸ್ಥಾನದಲ್ಲಿ ಸಾಮಾನ್ಯ ಜನರು ಅಪಾರ ಆಸ್ತಿಪಾಸ್ತಿ ಪ್ರಾಣಹಾನಿಗೊಳಗಾಗುವಂತೆ ಮಾಡಿದುವು.

**ಕೆಲವು ಪ್ರಬಲ ವಿರೋಧಗಳು**

ರಜಾಕಾರರ ದೌರ್ಜನ್ಯಗಳನ್ನು ಹತ್ತಿಕ್ಕಲು ನಿಜಾಮನ ಸರಕಾರ ವಿಫಲವಾದಾಗ ಸಾಮಾನ್ಯ ಜನತೆಯೇ ಹಲವು ದಿಟ್ಟ ಮುಂದಾಳುಗಳ ನೇತೃತ್ವದಲ್ಲಿ ಸಂಘಟಿತರಾಗಿ ಪ್ರಬಲ ಹೋರಾಟ ಮಾಡಿ ರಜಾಕಾರರನ್ನು ಯಶಸ್ವಿಯಾಗಿ ತಡೆಗಟ್ಟಿದುದು ಪ್ರಶಂಸನೀಯವಾಗಿದೆ. ಗುಲಬರ್ಗಾದಲ್ಲಿ ಕಕ್ಕೇರಿ ಹನುಮಂತರಾಯರ ಮನೆಯಲ್ಲಿ ಜನಾರ್ಧನರಾವ್ ದೇಸಾಯಿಯವರ ಸಮ್ಮುಖದಲ್ಲಿ ಸಭೆಯನ್ನು ಸೇರಿಸಲಾಯಿತು. ಇದರಲ್ಲಿ ಅನೇಕ ಯುವಕರುಗಳು ಪಾಲ್ಗೊಂಡಿದ್ದರು. ಇಲ್ಲಿ ಮುಂದಿನ ಕ್ರಮಗಳ ಬಗೆಗೆ ನಿರ್ದಿಷ್ಟ ಯೋಜನೆಗಳನ್ನು ರೂಪಿಸಲಾಯಿತು. ಜನಾರ್ಧನರಾವ್ ದೇಸಾಯಿಯವರು ರಜಾಕಾರ್ ವಿರೋಧ ಚಳವಳಿಯ ಮುಂದಾಳತ್ವವನ್ನು ವಹಿಸಿದ್ದರು. ಅವರು ಕೊನೆಯವರೆಗೂ ಪೋಲೀಸರ ಕೈಗೆ ಸಿಗದೆ ಗಡಿಭಾಗಗಳಲ್ಲಿದ್ದು ಚಳವಳಿಯ ಮಾರ್ಗದರ್ಶನ ಮಾಡುತ್ತಿದ್ದರು. ಗುಲಬರ್ಗಾದ ಶರಣಗೌಡ ಇನಾಂದಾರ್ ಎಂಬ ತರುಣ ನಾಯಕ ಈ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಸೊಲ್ಲಾಪುರದಲ್ಲಿ ತಲೆ ಮರೆಸಿಕೊಂಡು ಪ್ರಬಲವಾದ ಭೂಗತ ಕಾರ್ಯ ಮಾಡಿದರು. ಶರಣಗೌಡರು ಗುಲಬರ್ಗಾಕ್ಕೆ ಬರುತ್ತಿದ್ದಾಗ ಸಾವಳಗಿ ರೈಲು ನಿಲ್ದಾಣದಲ್ಲಿ ಇಳಿದು ತಪ್ಪಿಸಿಕೊಂಡರು. ಆದರೆ, ಅವರ ಜೊತೆಗಿದ್ದ ಜಾಗನ್ನಾಥರಾವ್ ಚಂದ್ರಿಕಿ, ಅಣ್ಣಾರಾವ್ ಗಣಮುಖಿ, ಮಲ್ಲಪ್ಪ ಕೊಳೂರು ಮುಂತಾದವರನ್ನು ಸೆರೆಹಿಡಿಯಲಾಯಿತು. ಇವರ ಜೊತೆಗಿದ್ದ ಇತರ ನಾಯಕರೆಂದರೆ ದತ್ತಾತ್ರೇಯ ಅವರಾದಿ, ನಾರಾಯಣರಾವ್ ಕಾನಿಹಾಳ್ ಮುಂತಾದವರು ಚಳವಳಿಯಲ್ಲಿ ಭಾಗವಹಿಸಿ ಹೈದರಾಬಾದ್‌ನ ಗಡಿಯುದ್ದಕ್ಕೂ ಮುಂಬೈ ಪ್ರದೇಶಗಳಲ್ಲಿ ಹೋರಾಟಗಾರರ ಶಿಬಿರಗಳನ್ನು ಸ್ಥಾಪಿಸಿದರು. ಸರದಾರ್ ಶರಣಗೌಡರು ಮತ್ತು ದತ್ತಾತ್ರೇಯ ಅವರಾದಿ ಇಬ್ಬರೂ ಹೈದರಾಬಾದಿಗೆ ಹೋಗಿ ಜೈಲಿನಲ್ಲಿದ್ದ ರಾಮಾನಂದ ತೀರ್ಥರನ್ನು ಭೇಟಿ ಮಾಡಿ ತಮ್ಮ ಮುಂದಿನ ಹೋರಾಟಕ್ಕೆ ಸಿದ್ಧರಾದರು. ಗದಗಿಗೆ ಹೋಗಿ ಅಲ್ಲಿ ಪ್ರಸಿದ್ಧ ಹೋರಾಟಗಾರ ಜಾಲಿಹಾಳ ಅನಂತರಾಯರ ಮನೆಯಲ್ಲಿ 'ಜನ ರಕ್ಷಣಾ ಕಛೇರಿ'ಯನ್ನು ಪ್ರಾರಂಭಿಸಲಾಯಿತು. ಮುಂದೆ ವಿಜಾಪುರ, ಸೊಲ್ಲಾಪುರಗಳಲ್ಲೂ ಕಛೇರಿ ಗಳನ್ನು ತೆರೆಯಲಾಯಿತು. ವಿಜಾಪುರ ಜಿಲ್ಲೆಯ ಸಿಂದಗಿ ಮತ್ತು ದುದನಿ ಎರಡು ಕಡೆ ಯುವಕರನ್ನು ಸೇರಿಸಿಕೊಂಡು ಶಿಬಿರಗಳನ್ನು ಶರಣಗೌಡರು ಸ್ಥಾಪಿಸಿಕೊಂಡರು. ಶರಣಗೌಡ ಹಾಗೂ ದಾಸರಾವ್ ಮೊಖ್ತೆದಾರ್ ಅವರುಗಳ ನಾಯಕತ್ವದಲ್ಲಿ ಸುಮಾರು ೨೦೦ ಯುವಕರ ಸೇನೆಯನ್ನೇ ಸಿದ್ಧಪಡಿಸಿಕೊಂಡು, ಗುಲಬರ್ಗಾ ಜಿಲ್ಲೆಯ ಒಳಗೆ ಪ್ರವೇಶಿಸಿ ಜೇವರ್ಗಿ ತಾಲೂಕಿನ ಹಗರಟಗಿ, ಅರಳುಗುಂಡಿಗೆ, ಕಾಚಾಪುರ, ಮಳ್ಳಿ, ಕುಳಗೇರಿ, ಬೊಮ್ಮನಹಳ್ಳಿ, ಹುಣಸಿಗಿ ಎಲ್ಲಾ ಕಡೆಗೆ (ಆಗಸ್ಟ್ ೧೯೪೭ರ ಕೊನೆವಾರ) ಒಂದು ವಾರದ ಅವಧಿಯಲ್ಲಿ ದಾಳಿಮಾಡಿ ಪೋಲೀಸ್ ಠಾಣೆಗಳನ್ನು ವಶಪಡಿಸಿಕೊಂಡು ಕೆಲವು ಸರಕಾರಿ ಕಛೇರಿಗಳನ್ನು ಚಳವಳಿಗಾರರು ಸುಟ್ಟು ಹಾಕಿದರು. ರಜಾಕಾರರಿಗೆ ಸಿಡಲಿನಂತೆ ಬಂದು ಎರಗಿದ ಈ ರಕ್ಷಣಾ ದಾಳಿಗಳು ಅವರ ದೌರ್ಜನ್ಯಕ್ಕೆ ನೀಡಿದ ಪ್ರಬಲ ಉತ್ತರವಾಗಿದ್ದವು. ಬಳಿಕ ಚಳವಳಿಗಾರರು ದಾಳಿಯನ್ನು ಮುಂದುವರೆಸಿ ಯಡ್ರಾಮಿ ಪೋಲೀಸ್ ಠಾಣೆಯನ್ನು ವಶಪಡಿಸಿಕೊಂಡು ಸುರಪುರ ತಾಲೂಕಿನ ಕೆಂಭಾವಿ ಗ್ರಾಮವನ್ನೂ ತಮ್ಮ ಹತೋಟಿಗೆ ಶರಣಗೌಡರ ಪಡೆ ತೆಗೆದುಕೊಂಡಿತು. ಯಡ್ರಾಮಿಯಲ್ಲಿ ಶರಣಗೌಡರ ತಂದೆ ಮತ್ತು ಅವರ ಚಿಕ್ಕಪ್ಪನನ್ನು ಬಂಧಿಸಿ ಹಿಂಸಿಸಲಾಯಿತು. ಈ ಊರುಗಳಿಂದ ಮುಂದುವರೆದು ಅಫ್‌ಜಲ್‌ಪುರದಲ್ಲಿ ಬೀಡುಬಿಟ್ಟಿದ್ದ ಮಿಲಿಟರಿ ಕ್ಯಾಂಪ್‌ನ ಮೇಲೆ ಶರಣಗೌಡರ ಚಳವಳಿಯ ತಂಡವು ದಾಳಿ ಮಾಡಿ, ಅವರ ವಶದಲ್ಲಿದ್ದ ೬೦೦ ಚೀಲ ಜೋಳದ ದಾಸ್ತಾನನ್ನು ವಶಪಡಿಸಿಕೊಂಡು ಜನಗಳಿಗೆ ಹಂಚಿತು. ಶಿಬಿರದ ಸಂಘಟಕರಾಗಿದ್ದ ಶರಣಗೌಡರನ್ನು ಈ ಭಾಗದ ಜನರು ಅವರನ್ನು 'ಸರದಾರ' ರೆಂದು ಕರೆಯುತ್ತಿದ್ದರು. ಚಳವಳಿಗಾರರು ಗಡಿಭಾಗದಲ್ಲಿದ್ದ ಕಕ್ಕಳ ಮೇಳಿ, ಮಾಡಬಾಳಗಳನ್ನು ರಜಾಕಾರರ ಮುಷ್ಠಿಯಿಂದ ಸತ್ಯಾಗ್ರಹಿಗಳು ಸ್ವತಂತ್ರ ಗೊಳಿಸಿದರು. ಸುಮಾರು ೧೬ ಜನ ಸತ್ಯಾಗ್ರಹಿಗಳು ಕಕ್ಕಳಮೇಳಿಯ ಸರ್ಕಾರಿ ನೌಕರರನ್ನು ಮೂಲೆಪಾಲುಮಾಡಿ ೧೮ನೇ ಆಗಸ್ಟ್ ೧೯೪೭ರಂದು ತಮ್ಮವಶಕ್ಕೆ ತೆಗೆದುಕೊಂಡು ವಿಜಯನಗರ ಎಂದು ಕರೆದರು. ಹಾಗೆಯೇ ರೋಣ ತಾಲೂಕಿನ

ಗಡಿಯಂಚಿಗಿದ್ದ ಹೈದರಾಬಾದ್ ಸಂಸ್ಥಾನದ ೧೪ ಹಳ್ಳಿಗಳನ್ನು ಸ್ವತಂತ್ರಗೊಳಿಸಲಾಯಿತು. ನಿಂಬರ್ಗಿ (ಗಾಣಗಾಪುರ ರೈಲು ನಿಲ್ದಾಣದ ಸಮೀಪ) ಯ ಪೋಲೀಸ್ ಠಾಣೆಯ ಮೇಲೆ ದಾಳಿ ಮಾಡಲಾಯಿತು. ಇದರಿಂದ ಕೋಪಗೊಂಡು, ರಜಾಕಾರರು ಮುಂಬೈ ಯಿಂದ ಬರುತ್ತಿದ್ದ ರೈಲಿನ ಮೇಲೆ ದಾಳಿ ಮಾಡಿ ಅಪಾರವಾದ ಸಂಪತ್ತನ್ನು ಲೂಟಿಮಾಡಿ ಅನೇಕ ಪ್ರಯಾಣಿಕರಿಗೆ ಪ್ರಾಣಹಾನಿ ಉಂಟುಮಾಡಿದರು. ಆಗಸ್ಟ್ ೧೫, ೧೯೪೭ರಂದು ರಾತ್ರಿ ಎರಡು ಗಂಟೆಗೆ ಅಫ್‌ಜಲ್‌ಪುರದಲ್ಲಿ ಹರಿರಾವ್ ಮೊರೀರಾ, ಜಗನ್ನಾಥರಾವ್ ಅಷ್ಟಗಿ, ದತ್ತಾತ್ರೇಯ ಅವರಾದಿ, ಹಕೀಕತ್‌ರಾವ್ ಚಿಟಗುಪ್ಪಿಕರ ಮುಂತಾದ ಯುವಕರು ಸತ್ಯಾಗ್ರಹ ನಡೆಸಿ ರಾಷ್ಟ್ರ ಧ್ವಜವನ್ನು ಹಾರಿಸಿದ್ದೇ ಅಲ್ಲದೇ ಗಾಣಗಾಪುರ ರೈಲು ನಿಲ್ದಾಣದ ಮೇಲೆ ದಾಳಿಮಾಡಿ ಬೆಂಕಿ ಹಚ್ಚಿದರು. ಈ ಹೋರಾಟದಲ್ಲಿ ಸುಮಾರು ೨೦ ಕ್ಕೂ ಹೆಚ್ಚು ಕಾರ್ಯಕರ್ತರುಗಳು ಪಾಲ್ಗೊಂಡಿದ್ದರು. ಇದಕ್ಕೆ ಪ್ರತ್ಯುತ್ತರವಾಗಿ ಮುಂದೆ ಜನವರಿ ೧೯೪೮ರಲ್ಲಿ ರಜಾಕಾರರು ಅಫಜಲ್‌ಪುರದ ಮೇಲೆ ದಾಳಿ ಮಾಡಿ ವ್ಯಾಪಕ ಸಾವುನೋವುಗಳನ್ನುಂಟು ಮಾಡಿದರು. ಜಿಲ್ಲೆಯ ಇತರ ಭಾಗಗಳಾದ ಆಳಂದ, ಶಾಹಪುರ, ಸೇಡಂ, ಜೇವರ್ಗಿ, ಮಂತಾದ ಪ್ರದೇಶಗಳಲ್ಲಿಯೂ ರಜಾಕಾರರ ವಿರುದ್ಧ ಚಳವಳಿಗಳು ಸಂಭವಿಸಿದುವು. ಆಳಂದದಲ್ಲಿ ಕಲ್ಯಾಣರಾವ್ ದೇಶಪಾಂಡೆ, ದೊಂಡೋಪಂತ್ ಮತ್ತು ಭೀಮಾಶಂಕರ್ ಅವರುಗಳು ಜನಗಳನ್ನು ಸಂಘಟಿಸಿದರು. ನಂತರ ಗಣೇಶೋತ್ಸವದ ಕೋಮುಗಲಭೆಯಲ್ಲಿ ಕಲ್ಯಾಣ ರಾವ್ ಪೋಲಿಸರ ಗುಂಡಿಗೆ ಬಲಿಯಾದರು. ಇಲ್ಲಿ ರಜಾಕಾರರು ಒಂಭತ್ತು ಜನ ಸತ್ಯಾಗ್ರಹಿಗಳನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿದರು. ಸುರಪುರ ತಾಲೂಕಿನ ರಾಜನ ಕೋಳೂರು ಭಾಗದಲ್ಲಿ ಆದ ಸಶಸ್ತ್ರ ಘರ್ಷಣೆಯಲ್ಲಿ ವಿರೂಪಾಕ್ಷರೆಡ್ಡಿ, ಮಹಾಂತಗೌಡ ಹಾಗೂ ಐವರು ಪೋಲೀಸರು ಸತ್ತರು. ಮಹಾಂತಗೌಡನ ಶವವನ್ನು ಸತ್ಯಾಗ್ರಹಿಗಳು ಗಾಡಿಯಲ್ಲಿ ಹಾಕಿ ತಂದರು. ಶರಣಗೌಡರ ಪಡೆಯ ವೀರಾವೇಶದ ಹೋರಾಟದ ಫಲವಾಗಿ ಅನೇಕ ಗ್ರಾಮಗಳು ರಜಾಕಾರರ ದೌರ್ಜನ್ಯದಿಂದ ಮುಕ್ತವಾದುವು.* ನಿಜಾಮನ ಸರಕಾರ ಶರಣಗೌಡರನ್ನು ಬಂಧಿಸುವ ಆಜ್ಞೆ ಹೊರಡಿಸಿ ಇವನ್ನು ಜೀವಂತ ಹಿಡಿದು ಕೊಟ್ಟರೆ ಸೂಕ್ತ ಬಹುಮಾನ ನೀಡುವುದಾಗಿ ಆಜ್ಞೆ ಹೊರಡಿಸಿತು. ಇವರನ್ನು ಹಿಡಿದು ಕೊಡಲು ಕೆಲವು ಹಿಂದೂ ಜನಗಳೇ ಹಣದ ಆಸೆಯಿಂದ ತವಕಿಸುತ್ತಿದ್ದರು. ಒಮ್ಮೆ ಮಳ್ಳಿಯಿಂದ ಇವರು ಕುಳಗೇರಿಗೆ ಹೋಗುತ್ತಿದ್ದಾಗ, ಹೊನ್ನಾಳಿಯೆಂಬ ಸ್ಥಳದಲ್ಲಿ ಪೋಲೀಸ್ ಪೇದೆಯೊಬ್ಬ ಹಳ್ಳಿಗನಂತೆ ವೇಷ ಧರಿಸಿ ಶರಣಗೌಡರನ್ನು ಸೆರೆಹಿಡಿಯಲು ಸಂಚು ಮಾಡಿದನು ಆದರೆ ಆತನ ಕೈಯ ಮೇಲೆ ಇದ್ದ ಪಿ. ಸಿ. ೫೨ ಎಂಬ ಸಂಖ್ಯೆಯನ್ನು ಕತ್ತಲಲ್ಲಿ ಕಂಡು ಹಿಡಿದು ತಕ್ಷಣ ಶರಣಗೌಡರು ತಪ್ಪಿಸಿಕೊಂಡು ವಿಜಾಪುರದ ತಾಳೀಕೋಟೆಯಲ್ಲಿದ್ದು ಮತ್ತೇ ಗುಲಬರ್ಗಾ ಜಿಲ್ಲೆಯನ್ನು ಪ್ರವೇಶ ಮಾಡದೇ ಸ್ವತಂತ್ರರಾಗಿ ಉಳಿದುಕೊಂಡರು.

ರಜಾಕಾರರ ವಿರುದ್ಧ ಹೋರಾಟದ ಫಲವಾಗಿ ಜೈಲು ಸೇರಿದವರು ಸಾವಿರಾರು ಮಂದಿ ಹಾಗೂ ಗಡಿಯಿಂದಾಚೆಗೆ ವಲಸೆ ಹೋದವರು ಇದಕ್ಕೂ ಹೆಚ್ಚು ಸಂಖ್ಯೆ ಜನರು. ಹೈದರಾಬಾದ್ ಕಾಂಗ್ರೆಸ ಪ್ರಾರಂಭ ಮಾಡಿದ ಸುಮಾರು ೧೪ ತಿಂಗಳು ನಡೆದ ಈ ಹೋರಾಟದಲ್ಲಿ ಸಂಸ್ಥಾನದಲ್ಲಿ ಒಟ್ಟು ಇಪ್ಪತ್ತು ಸಾವಿರ ಸತ್ಯಾಗ್ರಹಿಗಳು ಸೆರೆಗೆ ಹೋದರು, ಐದು ಸಾವಿರ ಜನರರು ಕೊಲೆಯಾದರೆಂದು ವರದಿಯಾಗಿದೆ. ಗುಲಬರ್ಗಾದ ಸದರ್ ಮೆಹಬಸ್‌ಸುಬಾ (ಈಗಿನ ಸೂಪರ್ ಮಾರ್ಕೆಟ್ ಜಾಗ) ಜೈಲಿನಲ್ಲಿ ೧೭ನೇ ಡಿಸೆಂಬರ್ ೧೯೪೭ರಂದು ಪಿಕೆಟಿಂಗ್ ಮಾಡುತ್ತಿದ್ದ ಅನಿರುದ್ಧ ದೇಸಾಯಿ ಕೃಷ್ಣ ಗುನಾಳ ಮುಂತಾದವರನ್ನು ಬಂಧಿಸಿ ಜಗತ್ ಜೈಲಿನಲ್ಲಿಡಲಾಯಿತು. ಇವರನ್ನು ನೋಡಲು ಆಗ ತಾನೆ ಬಿಡುಗಡೆ ಹೊಂದಿದ್ದ ಅನಿರುದ್ಧರ ಅಣ್ಣ ಕುಸುಮಾಕರ ದೇಸಾಯಿ ಬಂದರು. ರಾಯಚೂರಿನಲ್ಲಿ ಸೆರೆಹಿಡಿಯಲಾಗಿದ್ದ ಕೆಲವರನ್ನು ಗುಲಬಾರ್ಗ ಜೈಲಿಗೆ ತಂದಿದ್ದರು. ಅದರಲ್ಲಿ ಅನಿರುದ್ಧರ ಚಿಕ್ಕಪ್ಪ ಭೀಮಸೇನರಾಯರೂ ಇದ್ದರು. ಜೈಲಿನಲ್ಲಿ ದಿನಾಂಕ ಏಪ್ರಿಲ್ ೧೩ ರಂದು ಸಾಯಂಕಾಲ ಭೀಮಾಸೇನರಾವ್ ಇದ್ದ ಆವರಣದಲ್ಲಿ ಸತ್ಯಾಗ್ರಹಿಗಳೆಲ್ಲಾ ಪ್ರಾರ್ಥನೆಗೆ ಸೇರಿದ್ದರು. ಆಗ ರಜಾಕಾರರು ಹಾಗೂ ಪೋಲಿಸರು (ಬರ್ಕಂದರು) ಅಧಿಕ ಸಂಖ್ಯೆಲ್ಲಿ ನುಗ್ಗಿ ಪ್ರಾರ್ಥನೆ ಮಾಡುತ್ತಿದ್ದವರನ್ನೂ ಥಳಿಸಲಾರಂಭಿಸಿದಾಗ ಬೆಣಕಲ್ಲಿನ ಭೀಮಸೇನ ರಾವ್ ದೇಸಾಯಿಯವರಿಗೆ ತಲೆಗೆ ಪೆಟ್ಟು ಬಿದ್ದು ಅಪಾರ ರಕ್ತಸ್ರಾವವಾಗಿ ಅಸುನೀಗಿದರು. ಇದೊಂದು ವ್ಯಕ್ತಿ ಸ್ವಾತಂತ್ರ್ಯ ಹರಣ ಮಾಡಿದ ವಿಕೋಪದ ಕರಾಳ ರಾತ್ರಿಯಾಗಿತ್ತೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಈ ಸಮಯದಲ್ಲಿ ಇದೇ ಸೆರೆಮನೆಯಲ್ಲಿ ಬಂಧಿತರಾಗಿದ್ದ ಇತರೆ ನಾಯಕರುಗಳೆಂದರೆ ಜಗನ್ನಾಥರಾವ್

* ರಜಾಕಾರರ ದೌರ್ಜನ್ಯಗಳ ಬಗೆಗೆ ಜನಪ್ರಿಯ ಲಾವಣಿಯಿದ್ದು, ಇದನ್ನು ಧಾರವಾಡ ಜಿಲ್ಲೆಯ ನವಲುಗುಂದ ತಾಲೂಕಿನ ನಲವಡಿ ಗ್ರಾಮದ ಖ್ಯಾತ ರಂಗನಾಟಕಕಾರರೂ, ಕರ್ನಾಟಕ ಕವಿಚಂದ್ರ ಬಿರುದಾಂಕಿತ ಕವಿಗಳೂ ಆದ ನಲವಡಿ ಶ್ರೀಕಂಠಶಾಸ್ತ್ರಿಗಳು (೧೮೮೯-೧೯೬೭) ರಚಿಸಿರುವರು.

ಚಂದ್ರಿಕಿ, ಭಾವು ಸಾಹೇಬ ದೇವುಳಗಾಂವಕರ್, ಭೀಮಸೇನಾಚಾರ್ಯ ಮೂಲಿ (ಚಿಂಚೋಳಿಯವರು) ಮುಂತಾದವರುಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಯಾದಗಿರಿಯಲ್ಲಿ ರಾಷ್ಟ್ರಧ್ವಜದೊಂದಿಗೆ ೭ನೇ ಆಗಸ್ಟ್ ೧೯೪೭ರಂದು ಮೆರವಣಿಗೆ ನಡೆಸಲಾಯಿತು. ಇದರಲ್ಲಿ ಶಿದ್ರಾಮಪ್ಪ ಶಿವರಾಯಿ, ವಿಶ್ವನಾಥರೆಡ್ಡಿ, ವೀರಭದ್ರಪ್ಪ, ಚನ್ನಪ್ಪ, ರಾಜಶೇಖರ್ ಇವರುಗಳು ಪಾಲ್ಗೊಂಡಿದ್ದರು. ಶಿದ್ರಾಮಪ್ಪ ಶಿವರಾಯಿ ಅವರನ್ನು ೧೮-೮-೧೯೪೭ರಂದು ಬಂಧಿಸಿ ಗುರುಮಠಕಲ್ಲಿಗೆ ಒಯ್ದು ಅಪಾರ ಹಿಂಸೆ ಕೊಡಲಾಯಿತು.

ವಿಜಾಪುರ ಜಿಲ್ಲೆಯ ತಾಳಿಕೋಟೆಯಲ್ಲಿ ಸುರಪುರ ರಾಜಾ ವೆಂಕಟಪ್ಪನಾಯಕರು ಜನಹಿತ ಶಿಬಿರದ ಪ್ರಮುಖರಾಗಿದ್ದು ಅವರಿಗೆ ಅಪ್ಪಾರಾವ್ ವಕೀಲರು ಸಹಾಯಮಾಡಿದರು. ಈ ಶಿಬಿರದವರು ಮುಳ್ಳೂರು ಮೇಲೆ ದಾಳಿ ಮಾಡಿ ಈ ಗ್ರಾಮವನ್ನು ರಜಾಕಾರರ ವಶದಿಂದ ತಮ್ಮ ವಶಕ್ಕೆ ತೆಗೆದುಕೊಂಡರು. ವಿರೂಪಾಕ್ಷಪ್ಪ ಪಾಟೀಲನೆಂಬ ತರಣನು ೨೦ ಜನರೊಡನೆ ಹೋಗಿ ದಾಳಿ ನಡೆಸಿದನು. ಈ ಯುವಕನು ಪೋಲೀಸರ ಗುಂಡಿಗೆ ಬಲಿಯಾದನು. ಸೊಲ್ಲಾಪುರದಲ್ಲಿ ಮಹಾಗಾಂವ್‌ನ ಅಪ್ಪಾರಾವ್ ಪಾಟೀಲರು ನಿರಾಶ್ರಿತರ ಶಿಬಿರವನ್ನು ನಡೆಸಿದ್ದರು. ದಿಗಂಬರರಾವ್ ಕಲ್ಮಂಣಕರ್ ಅವರು ಗಡಿಶಿಬಿರದ ಪ್ರಮುಖರಾಗಿದ್ದರು. ಅವರು ಗೆರಿಲ್ಲಾಯುದ್ಧಗಳಲ್ಲಿ ವಿಶೇಷ ತರಬೇತಿ ಪಡೆಯುವ ಸಲುವಾಗಿ ತಮ್ಮ ಜೊತೆಯಲ್ಲಿ ಹಲವಾರು ಯುವಕರುಗಳನ್ನು ಹಾಗೂ ಕುಸುಮಾಕರ ದೇಸಾಯಿ ಅವರನ್ನು ವಿಜಯವಾಡದಲ್ಲಿ ನಡೆದ ವಿಶೇಷ ಶಿಬಿರಕ್ಕೆ ಕರೆದುಕೊಂಡು ಹೋಗಿದ್ದರು. ಚಂದ್ರಶೇಖರ್ ಪಾಟೀಲರು ಇದಕ್ಕೆ ಸಹಾಯಕರಾಗಿದ್ದರು. ಅವರು ವಿಜಾಪುರದಲ್ಲಿ ನಿರಾಶ್ರಿತರ ಶಿಬಿರವನ್ನು ಅಣ್ಣಾರಾವ್ ಗಣಮುಖಿ ಹಾಗೂ ಕಲ್ಮಂಣಕರ್ ಅವರುಗಳು ನೋಡಿಕೊಳ್ಳುತ್ತಿದ್ದರು. ಡಾ. ಕಂಠಿ, ಜಯಾಚಾರ್ಯ ಪುರಾಣಿಕ್, ಹಣಮಂತರಾವ್ ಕಕ್ಕೇರಿ, ಹೋಂಗಾರ್ಡ್ ಮುಖ್ಯಸ್ಥರಾಗಿದ್ದ ಎಚ್. ಟಿ. ಸಾಸನೂರ್ (ಇವರುಗಳೂ ಶಿಬಿರದ ಕಾರ್ಯಗಳಲ್ಲಿ ಪಾಲ್ಗೊಂಡಿದ್ದರು. ಈ ಶಿಬಿರಗಳಲ್ಲಿ, ಭಯಭೀತರಾಗಿ ಊರುಗಳನ್ನು ಬಿಟ್ಟು ಬಂದಿದ್ದ ಜನರಿಗೆ ಆಶ್ರಯ ನೀಡಿ ಸಾಂತ್ವನಗೊಳಿಸಲಾಗುತ್ತಿತ್ತು. ಸೊಲ್ಲಾಪುರದ ಶಿಬಿರದಲ್ಲಿ ಶಿಬಿರದ ಸಂಘಟನೆ ಮತ್ತು ಇತರೆ ವ್ಯವಸ್ಥೆಗಾಗಿ ಕಾಡಾದಿ ಮಲ್ಲಪ್ಪನವರು ಜಯದೇವಿ ತಾಯಿ ಲಿಗಾಡೆ, ಬಾಬಾಸಾಹೇಬ ಮುಂತಾದವರು ಮುಂದಾಳತ್ವ ವಹಿಸಿ ನೆರವು ನೀಡಿದರು. ಸೊಲ್ಲಾಪುರ ಶಿಬಿರದಲ್ಲಿ ಕಾನಿಹಾಳ್ ನಾರಾಯಣರಾವ್ ಮತ್ತು ತ್ರಿಲೋಚನ ದೀಕ್ಷಿತ್ ಮತ್ತಿತರರು ಕಾರ್ಯಕರ್ತರುಗಳಾಗಿ ಸೇವೆ ಸಲ್ಲಿಸಿದರು. ಸಿಂದಗಿ ಶಿಬಿರದ ಸಂಘಟನೆಗೆ ಸಹಾಯಕರಾಗಿದ್ದ ಎಸ್. ಆರ್. ಕಂಠಿ ಅವರ ಮೂಲಕ ಮುಂಬೈ ಸರಕಾರದ ಜೊತೆಗೆ ಸಂಪರ್ಕ ಸಾಧಿಸಲಾಯಿತು. ಆರ್ಯ ಸಮಾಜವು ಸಾಂತ್ವನ ಶಿಬಿರಗಳನ್ನು ಸೊಲ್ಲಾಪುರ, ಪಂಡರಾಪುರ್, ಬಸ್ಸಿ, ವಿಜಾಪುರ, ಉಮರ್‌ಖೇಡ್ ಮುಂತಾದ ಸ್ಥಳಗಳಲ್ಲಿ ನಡೆಸಿತ್ತು.

**ಜನಾಭಿಪ್ರಾಯದ ಕಾರ್ಯಗಳು**

ಹೊರ ಪ್ರಪಂಚಕ್ಕೆ ಹೈದರಾಬಾದ್ ಸಂಸ್ಥಾನದಲ್ಲಿ ಏನು ನಡೆಯುತ್ತಿದೆ ಎಂಬುದು ಕೇವಲ ವೃತ್ತ ಪತ್ರಿಕೆಗಳಿಂದ ಮಾತ್ರ ಪ್ರಸಾರವಾಗುತ್ತಿತ್ತು. ಡಾ. ಕಂಠಿಯವರ ಪ್ರಯತ್ನದಿಂದ 'ಹೈದರಾಬಾದ್ ಕರ್ನಾಟಕ' ಎಂಬ ಪತ್ರಿಕೆಯು ಪ್ರಕಟವಾಯಿತು. ಇದರ ವ್ಯವಹಾರವನ್ನು ಎಸ್. ಡಿ. ಪಾಟೀಲ ಎಂಬುವವರು ನೋಡಿಕೊಳ್ಳುತ್ತಿದ್ದು ಹುಬ್ಬಳ್ಳಿಯಲ್ಲಿ ಮುದ್ರಿತವಾಗುತ್ತಿತ್ತು. ಹೀಗೆಯೇ ದತ್ತಾತ್ರೇಯ ಅವರಾದಿ ಮತ್ತು ಎಸ್. ಹನುಮಂತರಾಯರು ಸೇರಿ ೧೯೪೭ರ ಫೆಬ್ರವರಿಯಲ್ಲಿ 'ನಾಗರಿಕ' ಎಂಬ ಸಾಪ್ತಾಹಿಕ ಪತ್ರಿಕೆಯನ್ನು ಪ್ರಕಟಿಸಿದರು. ಇದರ ಮುಖ ಪುಟದಲ್ಲಿ ರಾಷ್ಟ್ರದ ತ್ರಿವರ್ಣ ಧ್ವಜವನ್ನು ಮುದ್ರಿಸಲಾಗುತ್ತಿತ್ತು. ಇದರಲ್ಲಿ ಪರಮಹಂಸರ ಜನ್ಮದಿನದಂದು ಪ್ರಕಟವಾದ ಪ್ರಥಮ ಮುದ್ರಣದಲ್ಲಿ ನಿಜಾಮರನ್ನು ಖಂಡಿಸಿ ಲೇಖನವನ್ನು ಬರೆಯಲಾಗಿತ್ತು. ಮೊದಲ ಪ್ರತಿ ಹೈದರಾಬಾದಿನಲ್ಲಿ ಮುದ್ರಿತಾವಾಗಿದ್ದು ನಂತರ ರಾಯಚೂರಿನಲ್ಲಿ ಮುದ್ರಿತವಾಗುತ್ತಿತ್ತು. ಮುಂದೆ ಇದನ್ನು ಸಂಪಾದಿಸಿದ್ದಕ್ಕಾಗಿ ಅವರಾದಿ ಹಾಗೂ ಹನುಮಂತರಾಯರುಗಳನ್ನು ಬಂಧಿಸಿ ಪತ್ರಿಕಾ ಕಾರ್ಯಾಲಯವನ್ನು ಸೀಲ್ ಮಾಡಲಾಯಿತು. ಇದೇ ಸಮಯದಲ್ಲಿ (೧೯೪೭-೪೮) ನಾರಾಯಣರಾವ್ ಕಾನಿಹಾಳ್, ಬಾವೂ ಸಾಹೇಬ ದೇವುಳಗಾಂವಕರ್ ಮುಂತಾದವರು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಹೈದರಾಬಾದ್ ಸಂಸ್ಥಾನದ ವಿಮೋಚನಾ ಚಳವಳಿಗೆ ಸಂಬಂಧಿಸಿದ ಕರಪತ್ರಗಳ ಕಾರ್ಬನ್ ಅಥವಾ ಹಸ್ತ ಪ್ರತಿಗಳನ್ನು ತೆಗೆದು ಜನಗಳಿಗೆ ಹಂಚುತ್ತಿದ್ದರು. ಇದು ಜನಜಾಗೃತಿಗೆ ಪ್ರಮುಖ ಕಾರಣವಾಯಿತು. ಆಗ ತರುಣರಾಗಿದ್ದ ವಸಂತ ಕುಷ್ಟಗಿ ಮತ್ತು ಲಕ್ಷ್ಮೀಕಾಂತ ಪಟ್ಟಣಕರ್ 'ಉದಯ' ಎಂಬ ಕೈಬರಹದ ಪತ್ರಿಕೆಯನ್ನು ಆರಂಭಿಸಿ ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡಲು ಕಾರಣರಾದರು.

ಇವರ ಈ ಕಾರ್ಯದಲ್ಲಿ ಪ್ರಹಲ್ಲಾದ, ಪ್ರಾಣೇಶ್, ಅಮೀನ ಸಾಹೇಬ, ಗೋವಿಂದರಾಯರ ಮಗ, ಮಗಳು, ಶ್ರೀಪಾದ ಮುಂತಾದ ಯುವಕರುಗಳು ಸಹಾಯ ಮಾಡುತ್ತಿದ್ದರು. ಹೈದರಾಬಾದಿನಲ್ಲಿ 'ಇಮ್ರೋಜ್' ಉರ್ದು ದಿನ ಪತ್ರಿಕೆಯು ನಿರ್ಭಯವಾಗಿ ರಜಾಕಾರರ ಹಾವಳಿಗಳನ್ನು ವರದಿ ಮಾಡಿದುದಕ್ಕಾಗಿ ಅದರ ಸಂಪಾದಕ ಷೋಬುಲ್ಲಾ ಖಾನನನ್ನು ಕೊಲ್ಲಲಾಯಿತು. ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ರಜಾಕಾರರ ಹಾವಳಿಗಳಿಂದ ಹೈದರಾಬಾದ್ ಸಂಸ್ಥಾನೀ ಜನತೆ ಅನುಭವಿಸಿದ ಧಾರುಣ ಘಟನೆಗಳು ಪ್ರಕಟಗೊಂಡವು. ಜನಾಭಿಪ್ರಾಯವು ಕ್ರೋಢೀಕೃತಗೊಂಡು ಶಾಂತಿ ಸ್ಥಾಪನೆಯಡೆಗೆ ಕೇಂದ್ರ ಸರಕಾರವನ್ನು ಕ್ರಿಯಾಶೀಲವಾಗುವಂತೆ ಮಾಡಿದುದು ಗಣನೀಯವಾಗಿದೆ.

### ಹೋರಾಟದ ಅಂತ್ಯ

ಭಾರತದ ಸ್ವಾತಂತ್ರ್ಯದ ನಂತರ ಅನೇಕ ಸಂಸ್ಥಾನಿ ರಾಜ್ಯಗಳು ಭಾರತ ಸರಕಾರದ ಅಧಿಕಾರವನ್ನು ಸ್ವಇಚ್ಛೆಯಿಂದ ಒಪ್ಪಿಕೊಂಡು ವಿಲೀನಗೊಂಡವು. ಕೆಲವು ರಾಜ್ಯಗಳನ್ನು ಸರಕಾರವೇ ತನ್ನ ಹತೋಟಿಗೆ ತೆಗೆದುಕೊಂಡಿತು. ಆದರೆ ಹೈದರಾಬಾದ್ ಸಂಸ್ಥಾನ ಮಾತ್ರ ಇನ್ನೂ ಭಾರತದ ಸರಕಾರದೊಡನೆ ವಿಲೀನವಾಗುವ ವಿಷಯದಲ್ಲಿ ವಿಚಾರ ವಿನಿಮಯ ಹಂತದಲ್ಲಿತ್ತು. ಕೆ. ಎಂ. ಮುನ್ಷಿಯವರನ್ನು ಭಾರತ ಸರಕಾರ ಹೈದರಾಬಾದಿನಲ್ಲಿ ತನ್ನ ರಾಜಕೀಯ ಪ್ರತಿನಿಧಿಯನ್ನಾಗಿ ದಿ. ೨೯ನೇ ನವೆಂಬರ್ ೧೯೪೭ ರಂದು ನೇಮಿಸಿತು. ಆದರೆ, ಸ್ವತಂತ್ರ ರಾಜನಾಗಬೇಕೆಂಬ ಆಕಾಂಕ್ಷೆ ಹೊಂದಿದ್ದ ನಿಜಾಮರ ಮನಸ್ಸಿನ ಮೇಲೆ ಇದು ಯಾವುದೇ ರೀತಿಯ ಪರಿಣಾಮ ಬೀರಲಿಲ್ಲ. ರಜಾಕಾರರ ದೌರ್ಜನ್ಯಗಳಿಂದ ತತ್ತರಿಸಿಹೋಗಿದ್ದ ಸಾಮಾನ್ಯ ಜನತೆಯನ್ನು ರಕ್ಷಿಸಿ ಶಾಂತಿ ಸ್ಥಾಪನೆ ಮಾಡಬೇಕಾದ ದಿಸೆಯಲ್ಲಿ ನಿಜಾಮರು ಕ್ರಿಯಾಶೀಲರಾಗಲೇ ಇಲ್ಲ. ನಿಜಾಮರ ಹಿತೈಷಿಗಳನೇಕರು, ಅವರನ್ನು ತಪ್ಪು ಸಲಹೆಗಳೊಂದಿಗೆ ದಾರಿ ತಪಿಸುತ್ತಿದ್ದ ಮಂತಾದ ನಾಯಕರುಗಳ ಹತೋಟಿಯಿಂದ ಬಿಡಿಸಲು ಪ್ರಯತ್ನಿಸಿದರು. ಇವರುಗಳ ಪೈಕಿ ನಿಜಾಮರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಹಾಗೂ ಅವರ ಬಗೆಗೆ ಅಪಾರ ಗೌರವ ವಿಟ್ಟುಕೊಂಡಿದ್ದ ಸಮರ್ಥ, ಆಡಳಿತಗಾರರೆನಿಸಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಇಂತಹ ಗಂಭೀರ ಸಂದರ್ಭದಲ್ಲಿ ಸಹಾಯ ಮಾಡುವುದು ತಮ್ಮ ಕರ್ತವ್ಯವೆಂದು ತಿಳಿದು ನಿಜಾಮರನ್ನು ಈ ಬಿಕ್ಕಟ್ಟಿನಿಂದ ಪಾರು ಮಾಡಲು ಪ್ರಯತ್ನಿಸಿದರು. ದಿ. ೧ನೇ ಮೇ ೧೯೪೮ರಂದು ಮಿರ್ಜಾರವರು ನಿಜಾಮರಿಗೆ ಒಂದು ಆತ್ಮೀಯ ಪತ್ರ ಬರೆದು ದೇಶದ ಇತರೆ ರಾಜರುಗಳಂತೆ ಅವರೂ ನಡೆದುಕೊಳ್ಳಬೇಕೆಂದು ಸೂಚಿಸಿ, ಲಾರ್ಡ್ ಮೌಂಟ್ ಬ್ಯಾಟನ್‌ರನ್ನು ಹೈದರಾಬಾದಿಗೆ ಆಹ್ವಾನಿಸಿ ಅವರೊಂದಿಗೆ ಫಲಪ್ರದಾಯಕ ಚರ್ಚೆ ನಡೆಸಬೇಕೆಂದು ಸಲಹೆ ಮಾಡಿದರು. ಇವರು ತಮ್ಮ ಪತ್ರದಲ್ಲಿ ಮೌಂಟ್ ಬ್ಯಾಟನ್‌ರು ಸಂಸ್ಥಾನಿ ರಾಜ್ಯಗಳನ್ನು ವಿಲೀನಗೊಳಿಸಿಕೊಳ್ಳುವ ಬಗೆಗೆ ಮತ್ತು ಜವಾಬ್ದಾರಿ ಸರಕಾರ ನೀಡುವ ಬಗೆಗೆ ಉದಾತ್ತ ಮನೋಭಿಲಾಶೆಯನ್ನು ಹೊಂದಿರುವವರೆಂದು ಸೂಕ್ಷ್ಮವಾಗಿ ತಿಳಿಸಿದ್ದರು. ಮಿರ್ಜಾ ಅವರ ಸಲಹೆಯ ಮೇರೆಗೆ ಮೌಂಟ್ ಬ್ಯಾಟನ್‌ರನ್ನು ಹೈದರಾಬಾದಿಗೆ ಬರುವಂತೆ ಆಹ್ವಾನಿಸಿ ನಿಜಾಮರು ಪತ್ರ ಬರೆದರು. ಆದರೆ, ವಿಪರೀತ ಚಟುವಟಿಕೆಗಳಿಂದಾಗಿ ತಮಗೆ ಬರಲು ಸಾಧ್ಯವಾಗುತ್ತಿಲ್ಲವೆಂದು ಮೌಂಟ್‌ಬ್ಯಾಟನ್ ಉತ್ತರಿಸಿದರು. ಮಿರ್ಜಾ ಇಸ್ಮಾಯಿಲ್ ಅವರೂ ಇದರ ಬಗೆಗೆ ಪತ್ರ ಬರೆದರೂ ಫಲಪ್ರದವಾಗಲಿಲ್ಲ. ನಂತರ ನಿಜಾಮರ ಸೂಚನೆಯ ಮೇರೆಗೆ ಮಿರ್ಜಾ ಅವರು ಹೊಸ ದೆಹಲಿಗೆ ಹೋಗಿ ರಾಷ್ಟ್ರ ನಾಯಕರುಗಳಾದ ವಿ. ಪಿ. ಮೆನನ್, ಸರ್ದಾರ ವಲ್ಲಭ ಬಾಯ್ ಪಟೇಲ್ ಮತ್ತು ಸ್ವತಂತ್ರ್ಯ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜ ಗೋಪಾಲಚಾರ್ಯರನ್ನು ಭೇಟಿ ಮಾಡಿದರು. ಶಾಂತಿಯುತವಾಗಿ ಚರ್ಚಿಸಿ ನಿಜಾಮರು ಹೈದರಾಬಾದ್ ರಾಜ್ಯವನ್ನು ಭಾರತದ ಒಕ್ಕೂಟದಲ್ಲಿ ಸೇರಿಸಲು ಒಪ್ಪಿಸುವ ಪ್ರಯತ್ನ ಮಾಡಿದ ಮಿರ್ಜಾ ಇಸ್ಮಾಯಿಲ್ ಅವರ ಶ್ರದ್ಧಾಯುತ ಕಾರ್ಯವನ್ನು ಆಗತಾನೆ, ನಿಜಾಮರ ಪ್ರಧಾನ ಮಂತ್ರಿಯಾಗಿ ನೇಮಕವಾಗಿದ್ದ ಮೀರ್ ಲಾಯಕ್ ಅಲಿ ಮತ್ತು ಆತನ ಸಚಿವ ಸಂಪುಟವು ವಿರೋಧಿಸಿ ಅಸಮಾಧಾನವನ್ನು ವ್ಯಕ್ತಪಡಿಸಿದುವು. ಇದರಂತೆ ವಿಶ್ವಸಂಸ್ಥೆಯ ಮುಂದೆ ಹೈದರಾಬಾದಿನ ಸಮಸ್ಯೆಯನ್ನು ತರುವ ಉದ್ದೇಶವಿದೆ ಎಂಬ ಅಂಶವು ದಿ. ೨೬ನೇ ಜುಲೈ ೧೯೪೮ ರಂದು ಆಕಾಶವಾಣಿಯ ಮೂಲಕ ದೆಹಲಿಯಲ್ಲಿದ್ದ ಮಿರ್ಜಾ ಅವರು ತಿಳಿದುಕೊಂಡಾಗ ಬೆರಗಾದರು. ಈ ಘಟನೆಯಿಂದ ರಜಾಕಾರರ ದೌರ್ಜನ್ಯವನ್ನು ತಡೆಗಟ್ಟುವ ಮಿರ್ಜಾ ಅವರು ಮಾಡಿದ ಪ್ರಯತ್ನವು ವಿಫಲವಾಯಿತು. ಕೊನೆಯ ಪ್ರಯತ್ನವಾಗಿ ಜೈನ್ ಯಾರ್ ಜಂಗ್‌ರನ್ನು ಹೈದರಾಬಾದಿಗೆ ಕಳುಹಿಸಿ ಭಾರತ ಸರಕಾರ ದೊಡನೆ ವಿಲೀನಗೊಳ್ಳಬೇಕೆಂದು ಮಿರ್ಜಾ ವಾರ್ತೆ ಕಳುಹಿಸಿದರು. ಆದರೆ

ಇದೂ, ಸಹ ಫಲಪ್ರದವಾಗಲಿಲ್ಲ. ಹೈದರಾಬಾದ್‌ನಲ್ಲಿದ್ದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಮಿರ್ಜಾ ಅವರು ಹೈದರಾಬಾದಿಗೆ ಹೋಗುವ ಧೈರ್ಯ ಮಾಡಲಿಲ್ಲ, ಆದರೆ ಪತ್ರ ಮುಖೇನ ನಿಜಾಮರನ್ನು ಮತ್ತೊಮ್ಮೆ ಕೋರಿದರು. ನಿಜಾಮರು ಗವರ್ನರ್ ಜನರಲ್‌ಗೆ ಆಗಸ್ಟ್ ೧೯೪೮ರಲ್ಲಿ ಟೆಲಿಗ್ರಾಮ್ ಕಳುಹಿಸಿ ಎರಡೂ ಸರಕಾರದ ಮಧ್ಯ ಉಂಟಾಗಿರುವ ಬಿನ್ನಾಭಿಪ್ರಾಯವನ್ನು ಪರಿಹರಿಸಬೇಕೆಂದು ಕೋರಿದರು. ಇದಕ್ಕೆ ಉತ್ತರವಾಗಿ ಸಿ. ರಾಜಗೋಪಾಲಚಾರ್ಯರು ದಿ. ೩೧ನೇ ಆಗಸ್ಟ್ ೧೯೪೮ರಂದು ಪತ್ರ ಬರೆದು "ಸಂಭವಿಸಬಾರದ ಅಮಾನುಷ ಭೀಕರ ಘಟನೆಗಳು ಹೈದರಾಬಾದಿನಲ್ಲಿ ನಡೆದುಬಿಟ್ಟಿವೆ. ಇಂತಹ ಪರಿಸ್ಥಿತಿಯಲ್ಲಿ ಶಾಂತಿಯುತ ಮಾತುಕತೆಗಳಿಗೆ ಅಸ್ಪದವಿಲ್ಲ ಮುಂದೆ ಯಾವ ನಿರ್ಧಾರ ತೆಗೆದುಕೊಳ್ಳಬೇಕೆಂಬುದು ನಮ್ಮ ಸರಕಾರಕ್ಕೆ ಬಿಟ್ಟಿದ್ದು ಮತ್ತು ಈ ಬಿಕ್ಕಟ್ಟನ್ನು ಪರಿಹರಿಸಲು ಎಲ್ಲಾ ಪ್ರಯತ್ನಗಳನ್ನು ಶಾಂತಿಯುತವಾಗಿ ಇತ್ಯರ್ಥ ಮಾಡಲು ಯತ್ನಿಸುತ್ತೇನೆ ದೇವರು ನಮ್ಮನ್ನು ಮುಂದೆ ನಡೆಸಲಿ" ಎಂದು ಕರಾರುವಾಕ್ಕಾಗಿ ನಿಜಾಮರಿಗೆ ತಿಳಿಸಿದರು. ನಿಜಾಮರ ಪರಿಸ್ಥಿಯ ಬಗೆಗೆ ಮಿರ್ಜಾ ಇಸ್ಮಾಯಿಲ್ ಅವರೂ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದೇ ಅಲ್ಲದೇ ಸಿಕೆಂದರಾಬಾದಿಗೆ ಭಾರತದ ಸೈನ್ಯವನ್ನು ಕಳುಹಿಸದೇ ಕಾಸಿಂ ರಜ್ವಿ ಮತ್ತು ಇತರೆ ಸಂಪುಟ ಮಂತ್ರಿಗಳ ನಿಯಂತ್ರಣದಿಂದ ನಿಜಾಮರನ್ನು ಪಾರು ಮಾಡುವುದು ಸಾಧ್ಯವಿಲ್ಲವೆಂದು ಭಾರತ ಸರಕಾರಕ್ಕೆ ಪತ್ರ ಮುಖೇನ ತಿಳಿಸಿದರು. ಹೈದರಾಬಾದ್ ಸಂಸ್ಥಾನದ ಪರಿಸ್ಥಿತಿಯು ದಿನೇ ದಿನೇ ಉಲ್ಬಣಗೊಳ್ಳುತ್ತಿದ್ದುದರಿಂದ ಕೇಂದ್ರದಲ್ಲಿ ಅಧಿಕಾರವಾದ ರಾಷ್ಟ್ರೀಯ ಕಾಂಗ್ರೆಸ್ ತನ್ನ ದಿ. ೨೦ನೇ ಮೇ ೧೯೪೮ರಲ್ಲಿ ಮುಂಬೈನಲ್ಲಿ ನಡೆಯಲಿದ್ದ ಅಧಿವೇಶನದಲ್ಲಿ ಈ ಗಂಭೀರ ವಿಷಯವನ್ನು ಪರಿಶೀಲಿಸಲಿತ್ತು. ಕೆ. ಎಂ. ಮುನ್ಷಿಯವರು ಜನಾರ್ಧನ ದೇಸಾಯಿಯವರಿಗೆ ಪತ್ರ ಬರೆದು ಈ ಅಧಿವೇಶನಕ್ಕೆ ಹೈದರಾಬಾದ್ ಕರ್ನಾಟಕದಿಂದ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಿಕೊಡುವಂತೆ ಕೋರಿದರು. ಆ ಪ್ರಕಾರ ದೇಸಾಯಿಯವರು ಕರ್ನಾಟಕದಿಂದ ಸರದಾರ ಶರಣಗೌಡ ಇನಾಂದಾರ್ ಹಾಗೂ ಡಾ. ಕಂಠಿ ಅವರುಗಳನ್ನು ಮುಂಬೈನ ಕಾಂಗ್ರೆಸ ಅಧಿವೇಶನಕ್ಕೆ ಕಳುಹಿಸಿಕೊಟ್ಟರು. ಎ.ಐ.ಸಿ.ಸಿ ಅದಿವೇಶನದ ಪ್ರಮುಖ ನಿರ್ಧಾರವೆಂದರೆ ಹೈದರಾಬಾದ್ ಸಮಸ್ಯೆಯ ಬಗೆಗೆ ಇತ್ಯರ್ಥ ಮಾಡಲು ಕಾಂಗ್ರೆಸ್ ಆಗಿನ ಗೃಹಮಂತ್ರಿಗಳಾಗಿದ್ದ ಸರದಾರ್ ಪಟೇಲರಿಗೆ ಅಧಿಕಾರ ನೀಡುವುದೇ ಆಗಿತ್ತು. ಪೋಲೀಸ್ ಕಾರ್ಯಾಚರಣೆಯ ಬಗೆಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂದು ಹೈದರಾಬಾದ್‌ನಿಂದ ಹೊರಗಿದ್ದ ಪ್ರತಿನಿಧಿಗಳು ಪಟೇಲರನ್ನು ಒತ್ತಾಯಿಸಿದರು. ಇದರ ಬಗೆಗೆ ದೀರ್ಘ ಆಲೋಚನೆ ಮಾಡಿ ಸೇನೆಯ ದಕ್ಷಿಣ ಕಮ್ಯಾಂಡ್‌ನ ಮುಖ್ಯಸ್ಥರಾಗಿದ್ದ ರಾಜೇಂದ್ರಸಿಂಗ್‌ಜಿಗೆ ಪಟೇಲರು ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ನೀಡಿದರು.

**ಪೋಲಿಸ್ ಕಾರ್ಯಾಚರಣೆ**

ಭಾರತ ಸರಕಾರದ ಸೇನೆಯ ತುಕಡಿಗಳನ್ನು ಹೈದರಾಬಾದ್ ರಾಜ್ಯದ ಗಡಿಗಳ ಸುತ್ತಲೂ ಸಿದ್ಧಪಡಿಸಲಾಯಿತು. ದಿ. ೧೩ನೇ ಸೆಪ್ಟೆಂಬರ್ ೧೯೪೮ರಂದು ರಾತ್ರಿ ಜನರಲ್ ಚೌಧುರಿಯ ಮುಖಂಡತ್ವದಲ್ಲಿ ಪೋಲೀಸ್ ಕಾರ್ಯಾಚರಣೆ ಪ್ರಾರಂಭವಾಯಿತು. ನಿಜಾಮರು ನಿಷ್ಕ್ರಿಯರಾದರು. ಸೈನ್ಯಾಚರಣೆಗೂ ಮುಂಚೆ ದಿ. ಆಗಸ್ಟ್ ೩೦, ೧೯೪೮ರಂದು ನಿಜಾಮರು ತಮ್ಮ ರಾಜ್ಯವನ್ನು ಉಳಿಸಬೇಕೆಂದು ತಮ್ಮ ಪ್ರಧಾನಿ ಮೀರ್ ಲಾಯ್ಯಕ್ ಅಲಿ ಮತ್ತು ಖಾಸಿಂ ರಜ್ವಿಯ ಸಹಾಯದಿಂದ ವಿಶ್ವಸಂಸ್ಥೆಗೆ ದೂರು ಸಲ್ಲಿಸಿದರು. ಭದ್ರತಾ ಸಮಿತಿಯಲ್ಲಿ ಚರ್ಚೆ ಅಪೂರ್ಣವಾಗಿ ದಿ. ೪ನೇ ಅಕ್ಟೋಬರ್ ೧೯೪೮ರಂದು ಮುಂದುವರೆಯುವುದೆಂದು ತೀರ್ಮಾನವಾಯಿತು. ದಿ. ೧೭ನೇ ಸೆಪ್ಟೆಂಬರ್ ೧೯೪೮ರಂದು ಭಾರತೀಯ ಸೇನೆಯು ಹೈದರಾಬಾದ್ ಪ್ರವೇಶಿಸಿತು. ಅನ್ಯಮಾರ್ಗವಿಲ್ಲದೇ ನಿಜಾಮರು ೧೮-೯-೧೯೪೮ರಂದು ಶರಣಾಗತರಾದರು. ಭಾರತ ಒಕ್ಕೂಟಕ್ಕೆ ಸೇರಿದ ಹೈದರಾಬಾದ್ ರಾಜ್ಯ ಉದಯವಾಯಿತು. ಅಸಫಜಾಹಿ ರಾಜತ್ವ ಕೊನೆಗೊಂಡಿತು. ಸಾಮಾನ್ಯ ಜನತೆಗೆ ತಮ್ಮ ಹೋರಾಟದ ಈ ಶಾಂತಿಯುತ ಅಂತ್ಯವು ಒಂದು ಅಭಿಮಾನದ ಸಾಧನೆಯಾಗಿತ್ತು. ೧೯೫೨ರಲ್ಲಿ ಈ ಪ್ರಾಂತ್ಯದಲ್ಲಿ ಸಾರ್ವತ್ರಿಕ ಚುನಾವಣೆ ನಡೆದು ಜನತೆ ಸರಕಾರಕ್ಕೆ ತಮ್ಮ ಚುನಾಯಿತ ಪ್ರತಿನಿಧಿಗಳನ್ನು ಮೊದಲ ಬಾರಿಗೆ ಆರಿಸಿ ಕಳುಹಿಸಿದರು. ಸ್ವತಂತ್ರ ಹೈದರಾಬಾದ್ ಸರಕಾರದ ಸಚಿವ ಸಂಪುಟದಲ್ಲಿ ಗುಲಬರ್ಗಾದ ಜಗನ್ನಾಥರಾವ್ ಚಂದ್ರಿಕಿ ಅವರು ಸಚಿವರಾಗಿ ನೇಮಕಗೊಂಡರು. ಈ ಸಚಿವ ಸಂಪುಟದ ನಾಯಕರಾಗಿ ಬಿ. ರಾಮಕೃಷ್ಣರಾವ್ ಆಯ್ಕೆಗೊಂಡರು. ಲೋಕಸಭೆಗೆ ಅಂದಿನ ಅಗ್ರಗಣ್ಯ ಜನನಾಯಕರಾಗಿದ್ದ ಸ್ವಾಮಿ ರಾಮಾನಂದ ತೀರ್ಥರು ಗುಲಬರ್ಗಾ ಕ್ಷೇತ್ರದಿಂದ ಚುನಾಯಿತರಾದರು.

## ಏಕೀಕರಣ ಚಳವಳಿ

ಸ್ವಾತಂತ್ರ್ಯಾನಂತರ ಸಂಸ್ಥಾನಿಕ ರಾಜ್ಯಗಳೂ ಭಾರತೀಯ ಒಕ್ಕೂಟದಲ್ಲಿ ಸೇರ್ಪಡೆಯಾದರೂ ರಾಜ್ಯಗಳ ರಚನೆಯ ಆಧಾರದ ಬಗ್ಗೆ ದೇಶಾದ್ಯಂತ ಭಿನ್ನಾಭಿಪ್ರಾಯಗಳು ತಲೆದೋರಿದವು. ಇಡೀ ಭಾರತವು ಇತಿಹಾಸದ ಕಾಲದಿಂದಲೂ ಏಕ ಆಡಳಿತಕ್ಕೆ (ಬ್ರಿಟೀಷ್ ಆಡಳಿತವನ್ನು ಹೊರತುಪಡಿಸಿ) ಎಂದೂ ಒಳಪಟ್ಟಿರಲಿಲ್ಲ. ಭಾರತವು ಅನೇಕ ಸಣ್ಣಪುಟ್ಟ ರಾಜ್ಯಗಳಾಗಿ ವಿಂಗಡಿಸಲಾಗಿದ್ದ ಚದುರಬಿಲ್ಲೆ (ಮೊಸೈಕ್)ಗಳ ಜೋಡಣೆಯಂತಿದ್ದುದು ಒಂದು ರಾಜಕೀಯ ಸತ್ಯಾಂಶವೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ೧೮೯೮ರಲ್ಲಿ ಪ್ರಥಮ ಬಾರಿಗೆ ಆಡಳಿತ ವಿಕೇಂದ್ರೀಕರಣವನ್ನು ಕುರಿತು ಪರಿಶೀಲಿಸಲು ನಿಯಮಿಸಲಾಗಿದ್ದ ರಾಯಲ್ ಕಮೀಶನ್ನಿನೆದುರಿನಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಸಾಕ್ಷ್ಯ ನೀಡುತ್ತಾ "ಬಾಷಿಕ ಹಾಗೂ ವಾಂಶಿಕ ಸಂಬಂಧಗಳನ್ನು ಆಧರಿಸಿ ಪ್ರಾಂತ್ಯಗಳನ್ನು ಪುನರ್ ರಚಿಸಬೇಕು ಹಾಗೂ ಕೇಂದ್ರೀಯ ಪ್ರಭುತ್ವದ ಕೆಳಗೆ ಅವುಗಳ ಸಂಯುಕ್ತ ರಾಜ್ಯ ಘಟನೆಯನ್ನು ರೂಪಿಸಬೇಕು". ಎಂಬುದಾಗಿ ಪ್ರತಿಪಾದಿಸಿದುದು ನಂತರ ನಡೆದ ರಾಜ್ಯಗಳ ಏಕೀಕರಣ ಚಳವಳಿಗೆ ಮೂಲ ಸ್ಫೂರ್ತಿಯಾಗಿತ್ತೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಕರ್ನಾಟಕ ಏಕೀಕರಣದ ಚಳವಳಿಯು ಸ್ವಾತಂತ್ರ್ಯ ಚಳವಳಿಯ ಜೊತೆ ಜೊತೆಗೆ ನಡೆದು ಜನರಲ್ಲಿ ಕನ್ನಡ ಭಾಷೆ ಹಾಗೂ ಆಡಳಿತ ಪ್ರದೇಶದ ಎಲ್ಲೆಗಳ ಬಗೆಗೆ ಜಾಗ್ರತಿ ಮೂಡಿಸಿದುದು ಗಣನೀಯವಾಗಿದೆ. ಉತ್ತರ ಕರ್ನಾಟಕದಲ್ಲಿ ೧೯೧೬ರಿಂದಲೇ ಕರ್ನಾಟಕ ಸಭಾ ಸ್ಥಾಪಿತವಾಗುವ ಹೊತ್ತಿಗೆ ಆಗಲೇ ನವಕರ್ನಾಟಕದ ಪ್ರಜ್ಞೆಯು ಹಾಗೂ ಅಭಿಮಾನವು ವ್ಯಾಪಿಸಿ ಅಖಂಡ ಕರ್ನಾಟಕದಲ್ಲಿಯ ವಿಚಾರಪರ ಜನರಲ್ಲಿ ವಿಕಸನ ಹೊಂದಿದ್ದಿತು. ಧಾರವಾಡದಲ್ಲಿ ಕರ್ನಾಟಕ ಸಭಾ ಮತ್ತು ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸರಿ ಸುಮಾರಿಗೆ ಒಂದೇ ಕಾಲಕ್ಕೆ ಸ್ಥಾಪಿತವಾದುವು. ಈ ಎರಡೂ ಸಂಸ್ಥೆಗಳು ಏಕೀಕೃತ ಕರ್ನಾಟಕಕ್ಕಾಗಿ ಕಟಿಬದ್ಧವಾಗಿದ್ದವು. ಕರ್ನಾಟಕದ ಕುಲಪುರೋಹಿತರೆನಿಸಿರುವ ಆಲೂರು ವೆಂಕಟರಾಯರು ಧಾರವಾಡದ ಕನ್ನಡಪರ ಚಳವಳಿಗಳನ್ನು ನಿರ್ದೇಶಿಸುತ್ತಿದ್ದರು. ಇವರು ಪ್ರಚುರಪಡಿಸಿದ 'ಕರ್ನಾಟಕ ಅಂತರ್ಗತ ಭಾರತ ಮಾತೆ'ಯ ತತ್ವ ಈ ಹೋರಾಟಕ್ಕೆ ಸ್ಫೂರ್ತಿ ಮಂತ್ರವಾಯಿತು. ಹೈದರಾಬಾದ್ ಸಂಸ್ಥಾನೀ ರಾಜ್ಯದಲ್ಲಿ ವಾಸಿಸುತ್ತಿದ್ದ ಕನ್ನಡಿಗರಲ್ಲಿ ಸಾಹಿತ್ಯಾಭಿರುಚಿಯು ಹಿಂದಿನಿಂದಲೇ ಬೆಳೆದು ಬಂದಿದ್ದರೂ ಇದು ಸರಕಾರದ ಗಮನವನ್ನು ಸೆಳೆಯುವುದರಲ್ಲಿ ಫಲಪ್ರದವಾಗಿರಲಿಲ್ಲ. ಆದರೆ ನಿಜಾಮರ ಸರಕಾರದ ರಾಜಕೀಯ ನಿರ್ಬಂಧಗಳು ಬಲಗೊಂಡಂತೆ ಸಾಹಿತ್ಯ ರಚನೆಯಲ್ಲಿ ಸ್ವಾತಂತ್ರ್ಯ ಬಯಕೆಯ ವಿಚಾರಗಳು ಪ್ರಬಲವಾಗಿ ಅಭಿವ್ಯಕ್ತಗೊಂಡವು. ಇದರಿಂದ ಗುಲಬರ್ಗಾ ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಾಹಿತ್ಯಿಕ ಸಂಘ-ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಸುರಪುರದ ಬಳಿಯ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘವು ೧೯೪೩ರಲ್ಲಿ ಎ.ಆರ್. ಬುದ್ಧಿವಂತ ಶೆಟ್ಟರು ಹಾಗೂ ಸಗರ ಕೃಷ್ಣಾಚಾರ್ಯ ಮುಂತಾದವರಿಂದ ಆರಂಭವಾಯಿತು. ೧೯೪೬ರಲ್ಲಿ ಶಹಬಾದ್‌ನಲ್ಲಿ ಗೋಪಾಲರಾವ್ ಕಟ್ಟಿ, ತಮ್ಮಣ್ಣಾಚಾರ್ಯ ಅರೇಕಲ್ ಮುಂತಾದ ಗಣ್ಯರು ಕನ್ನಡ ಸಂಘವನ್ನು ಸ್ಥಾಪಿಸಿ ಉಪನ್ಯಾಸ, ನಾಡಹಬ್ಬ, ಇತ್ಯಾದಿ ಕನ್ನಡಪರ ಕೆಲಸದಲ್ಲಿ ತೊಡಗಿದರು. ಇತರ ಕನ್ನಡ ಸಂಘಗಳು ಸ್ವಾತಂತ್ರ್ಯ ಪೂರ್ವದ ದಶಕದಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದು ಕನ್ನಡಿಗರಲ್ಲಿ ಸ್ವಾಭಿಮಾನವನ್ನು ಉಂಟುಮಾಡಿ, ಸಕ್ರಿಯವಾಗಿ ಸಂಘಟಿತರಾಗಲು ಸಹಾಯ ಮಾಡಿದುವು.

ಪ್ರಥಮ ಬಾರಿಗೆ ೧೯೩೪ರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನವು ರಾಯಚೂರಿನಲ್ಲಿ ಸಮಾವೇಶಗೊಂಡಿತು. ಇದರಲ್ಲಿ ಗುಲಬರ್ಗಾ ಜಿಲ್ಲೆಯಿಂದಲೂ ಕನ್ನಡಾಭಿಮಾನಿಗಳು ಭಾಗವಹಿಸಿದ್ದರು. ಈ ಸಮ್ಮೇಳನದ ನಿರ್ವಾಹಕರು ಸಾಹಿತ್ಯ ಪರಿಷತ್ತಿನಂತಹ ಕೇಂದ್ರೀಕೃತ ಸಂಸ್ಥೆಯೊಂದು ಹೈದರಾಬಾದಿನಲ್ಲಿ ಸ್ಥಾಪಿತವಾದರೆ ಸಾಹಿತ್ಯ ಚಟುವಟಿಕೆಗಳಿಗೆ ಹಾಗೂ ಕನ್ನಡಿಗರ ಸಂಘಟನೆಗೆ ಪುಷ್ಟಿ ದೊರೆಯುತ್ತದೆಂದು ಅಭಿಪ್ರಾಯಪಟ್ಟರು. ಇದೇ ಸಮಯಕ್ಕೆ ನಿಜಾಮ ಕರ್ನಾಟಕದ ಕೇಂದ್ರೀಯ ಸಮಿತಿಯೊಂದು ಅಸ್ತಿತ್ವಕ್ಕೆ ಬಂದು, ಸಾಹಿತ್ಯಿಕ ಸಂಸ್ಥೆಗಳೊಡನೆ ಸರಕಾರವು ಇನ್ನು ಮುಂದೆ ಸಹಕರಿಸುವುದೆಂದು ಪ್ರಕಟಿಸಿತು. ಈ ರೀತಿಯ ಸಂಘಟಿತ ಸಂಸ್ಥೆಯ ಕಲ್ಪನೆಯು ಆಗಲೇ ಸಂಸ್ಥಾನಿ ರಾಜ್ಯದ ವಿಚಾರವಂತರಲ್ಲಿ ಮೂಡಿತ್ತೆಂಬುದು ಸ್ಪಷ್ಟವಾದರೂ, ವಾಸ್ತವವಾಗಿ ಈ ಆಸೆ ಕೈಗೂಡಲಿಲ್ಲ. ಹೈದರಾಬಾದ್ ನಿಜಾಮರು ಪಟ್ಟಕ್ಕೆ ಬಂದು ೨೫ ವರ್ಷಗಳು ಕಳೆದಿದ್ದರಿಂದ ೧೯೩೭ರಲ್ಲಿ ಹೈದರಾಬಾದಿನಲ್ಲಿ ಒಂದು ಅಮೋಘ ಬೆಳ್ಳಿ ಹಬ್ಬದ ಉತ್ಸವ ಸಮಾರಂಭ ಏರ್ಪಾಡಗಿತ್ತು. ಈ ಸಮಾರಂಭದಲ್ಲಿ ಪಾಲ್ಗೊಳ್ಳಲು ಅನೇಕ ವಿಚಾರವಂತ ಕನ್ನಡಿಗರು ಗುಲಬರ್ಗಾ ಜಿಲ್ಲೆಯಿಂದಲೂ ಹೈದರಾಬಾದ್‌ಗೆ ಹೋಗಿದ್ದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ರಾಯಚೂರಿನ ಪ್ರಸಿದ್ಧ

ವಕೀಲರಾಗಿದ್ದ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಹೈದರಾಬಾದ್‌ನ ಎಕ್ಸೆಲ್‌ಸಿಯಾರ್ ಎಂಬ ಸುಂದರ ಥಿಯೇಟರ್‌ನ ಸಭಾಂಗಣದಲ್ಲಿ ನಿಜಾಮ ಕರ್ನಾಟಕ ಪರಿಷತ್ತಿನ ಪ್ರಥಮ ಐತಿಹಾಸಿಕ ಸಭೆಯು ಸಮಾವೇಶಗೊಂಡಿತು. ಈ ಕರ್ನಾಟಕ ಪರಿಷತ್ತೇ ಮುಂದೆ ಸಂಸ್ಥಾನಿ ರಾಜ್ಯ ಕಾಂಗ್ರೆಸ್‌ನ ಒಂದು ಭಾಗವಾಗಿ ಪರಿವರ್ತನೆಗೊಂಡು ಕಾಂಗ್ರೆಸ್‌ನಲ್ಲಿ ವಿಲೀನಗೊಳ್ಳುವುದೆಂಬ ಕಲ್ಪನೆ ಈ ಸಭೆಯನ್ನು ಸಂಘಟಿಸಿದ ಮಹನೀಯರುಗಳಿಗೆ ಆಗ ಇರಲಿಲ್ಲ. ಮುಂದೆ ಗುಲಬರ್ಗಾದವರೇ ಆದ ಜನಾರ್ಧನರಾವ್ ದೇಸಾಯಿ ಅವರು ನಿಜಾಮ ಕರ್ನಾಟಕ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾಗಿ ೨೪ನೇ ಅಕ್ಟೋಬರ್ ೧೯೩೮ರಿಂದ ಪ್ರಥಮ ಸತ್ಯಾಗ್ರಹವನ್ನು ಆರಂಭಿಸಿದರು. ತರುವಾಯ ಬೀದರ್‌ನಲ್ಲಿ ೧೯೪೦ರಲ್ಲಿ ನಡೆದ ದ್ವಿತೀಯ ಕರ್ನಾಟಕ ಪರಿಷತ್ತಿನ ಸಮ್ಮೇಳನಕ್ಕೆ ಜನಾರ್ಧನರಾವ್ ದೇಸಾಯಿ ಅವರೇ ಅಧ್ಯಕ್ಷತೆ ವಹಿಸಿದ್ದರು. ಈ ಅಧಿವೇಶನದಲ್ಲಿ ಗುಲಬರ್ಗಾ ಮತ್ತು ರಾಯಚೂರು ಪ್ರಾಂತ್ಯಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ತಮ್ಮ ಅಧ್ಯಕ್ಷ ಸ್ಥಾನದಿಂದ ದೇಸಾಯಿಯವರು (ರಾಜಕೀಯ ನಿರ್ಣಯಗಳನ್ನು ಆಗ ಮಾಡುವಂತಿರಲಿಲ್ಲ). ಪರಿಷತ್ತಿನ ಧ್ಯೇಯೋದ್ದೇಶಗಳನ್ನು ವಿವರಿಸುತ್ತ ರಾಜಕೀಯ ಸ್ವಾತಂತ್ರ್ಯ ಪಡೆಯುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವೆಂದು ಸೂಕ್ಷ್ಮವಾಗಿ ತಿಳಿಸಿದರು. ನಂತರ, ಪರಿಷತ್ತಿನ ಚಟುವಟಿಕೆಗಳು ಕ್ರಮೇಣ ತೀವ್ರಗೊಂಡು ಸ್ವಾತಂತ್ರ್ಯ ಹೋರಾಟವನ್ನು ಪ್ರಮುಖವಾಗಿಸಿಕೊಂಡು ಮುಂದುವರೆಯಿತು. ಸ್ವಾಮಿ ರಾಮಾನಂದತೀರ್ಥ, ಪ್ರಾಣೇಶಾಚಾರ್ಯ ಮತ್ತು ಶ್ರೀನಿವಾಸರಾವ್ ಹವಲ್ದಾರ್ ಇವರುಗಳು ಸೆಪ್ಟೆಂಬರ್ ೧೯೪೦ರಲ್ಲಿ ಈ ಸಂಸ್ಥೆಯ ವತಿಯಿಂದ ನಡೆದ ಸತ್ಯಾಗ್ರಹ ಚಟುವಟಿಕೆಗಳಲ್ಲಿ ಭಾಗವಹಿಸಿದ ಆರೋಪದ ಮೇಲೆ ಸರಕಾರ ೧೫ ತಿಂಗಳುಗಳ ಜೈಲು ಶಿಕ್ಷೆ ವಿಧಿಸಿತು.

ನಿಜಾಮ ಕರ್ನಾಟಕ ಪರಿಷತ್ತಿನ ಮೂರನೇ ಅಧಿವೇಶನವು ಮಾರ್ಚ್ ೧೯೪೨ರಲ್ಲಿ ಸುರಪುರದಲ್ಲಿ ಅಣ್ಣಾರಾವ್ ಗಣಮುಖಿ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಸುರಪುರದ ನಾಯಕರು ಮೊದಲು ಸಮ್ಮೇಳನಕ್ಕೆ ಸಹಕಾರ ನೀಡುವುದಾಗಿ ತಿಳಿಸಿ ಅನಂತರ ಅರಮನೆ ಮುಂಭಾಗದ ಮೈದಾನದಲ್ಲಿ ಸಭಾಂಗಣ ನಿರ್ಮಿಸುವುದಕ್ಕೂ ಒಪ್ಪಲಿಲ್ಲ. ಏಕೆಂದರೆ, ಆಗ ನಾಯಕರ ಮೇಲೆ ಆ ಸಮಯದಲ್ಲಿ ನಿಜಾಮ ಸರಕಾರದ ರಾಜಕೀಯ ಒತ್ತಡ ಬಲವಾಗಿದ್ದುದೇ ಇದಕ್ಕೆ ಕಾರಣವಾಗಿತ್ತೆಂದು ವ್ಯಕ್ತವಾಗುತ್ತದೆ. ಕರ್ನಾಟಕ ಪರಿಷತ್ತಿನ ಈ ಅಧಿವೇಶನವು ಜಿಲ್ಲೆಯ ಯುವಕ ಹೋರಾಟಗಾರರ ಗಮನ ಸೆಳೆದಿದ್ದೇ ಅಲ್ಲದೇ ಮೊದಲ ಬಾರಿಗೆ ಈ ಪ್ರಾಂತ್ಯದ ಹೋರಾಟಗಾರರು ಒಂದೇ ವೇದಿಕೆಯಲ್ಲಿ ಸೇರಲು ಸಹಾಯಕವಾಯಿತು. ಈ ಪರಿಷತ್ತಿನ ನಾಲ್ಕನೇ ಅಧಿವೇಶನವು ಮೇ ೧೯೪೪ರಲ್ಲಿ ರಾಯಚೂರಿನಲ್ಲಿ ಸಮಾವೇಶಗೊಂಡಿತು. ಇದರ ಅಧ್ಯಕ್ಷತೆಯನ್ನು ಗುಲಬರ್ಗಾದ ವಕೀಲರಾಗಿದ್ದ ಕಕ್ಕೇರಿ ಹನುಮಂತರಾಯರು ವಹಿಸಿದ್ದರು. ಈ ಅಧಿವೇಶನದಲ್ಲಿ ಭಾಗವಹಿಸಲು ಹೈದರಾಬಾದ್ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಕಕ್ಕೇರಿ ಹನುಮಂತರಾಯರ ಅಧ್ಯಕ್ಷತೆಯಲ್ಲಿ ಉಪ-ಸಮಿತಿಯೊಂದು ರಚಿತವಾಗಿ ಪರಿಷತ್ತಿನ ಕಾಯಿದೆಗಳನ್ನು ಹಾಗೂ ಉಪ ನಿಯಮಗಳನ್ನು ರಚಿಸುವುದು ಇದರ ಉದ್ದೇಶವಾಗಿತ್ತು. ನಂತರ ೧೯೪೬ರಲ್ಲಿ ಯಾದಗಿರಿಯಲ್ಲಿ ಕಕ್ಕೇರಿ ಹನುಮಂತರಾಯರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಪರಿಷತ್ತಿನ ಅಧಿವೇಶನದಲ್ಲಿ ಸ್ವಾಗತಾಧ್ಯಕ್ಷರಾಗಿ ಜಗನ್ನಾಥರಾವ್ ಚಂದ್ರಿಕಿಯವರು ಸಕ್ರಿಯವಾಗಿ ಭಾಗವಹಿಸಿದ್ದರು. ಇದಾದ ಸ್ವಲ್ಪ ದಿನದಲ್ಲೇ ಇವರನ್ನು ಬಂಧಿಸಲಾಯಿತು. ತರುವಾಯ ನಿಜಾಮರ ಸರಕಾರವು ಕೇಂದ್ರ ಕಾಂಗ್ರೆಸ್ ನಾಯಕರ ಒತ್ತಾಯಕ್ಕೆ ಮಣಿದು ೩ನೇ ಜುಲೈ ೧೯೪೬ರಂದು ರಾಜ್ಯ ಕಾಂಗ್ರೆಸ್‌ನ ಮೇಲೆ ವಿಧಿಸಿದ್ದ ಪ್ರತಿಬಂಧವನ್ನು ತೆಗೆದ ಮೇಲೆ ನಿಜಾಮ ಕರ್ನಾಟಕ ಪರಿಷತ್ತನ್ನು ರಾಜ್ಯ ಕಾಂಗ್ರೆಸ್ ಪಕ್ಷದಲ್ಲಿ ವಿಲೀನಗೊಳಿಸಲಾಯಿತು. ಹೀಗಾಗಿ ಈ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಕನ್ನಡಿಗರು ಸಂಘಟಿತರಾದದ್ದೇ ಅಲ್ಲದೇ ಈ ಭಾಗದ ರಾಜಕೀಯ ಆಗು-ಹೋಗುಗಳ ಮೇಲೆ ಅವಿಸ್ಮರಣೀಯ ಪ್ರಭಾವ ಬೀರಿರುವರು. "ಇತರ ಹಲವಾರು ರಾಷ್ಟ್ರಪರ ಕಾರ್ಯಕ್ರಮಗಳು ಕ್ರಿಯಾತ್ಮಕವೆಂದು ಈ ಸಂಸ್ಥೆಯು ಕರೆದುಕೊಂಡಿದ್ದರೂ ಅದು ನಿಜಾಮ ಸರಕಾರದ ವೈಯಕ್ತಿಕ ನೀತಿಗೆ ಗಂಡಾಂತರವನ್ನುಂಟು ಮಾಡಿದ್ದರಲ್ಲಿ ಸಂಶಯವಿಲ್ಲವೆಂದು" ನಿಜಾಮರ ಹಿತೈಷಿ ಅಲಿಯವಾರ್ ಜಂಗ ಅಭಿಪ್ರಾಯ ಪಟ್ಟಿದ್ದಾರೆ. ಅಭಿಪ್ರಾಯಗಳು ಭಿನ್ನವಾಗಿದ್ದರೂ ಕರ್ನಾಟಕ ಪರಿಷತ್ತು ಸ್ವಾತಂತ್ರ್ಯ ಪೂರ್ವದ ದಶಕಗಳಲ್ಲಿ ಕನ್ನಡಿಗರ ಅಭಿಮಾನಯುತ ಸಂಘಟನೆಗೆ ಪ್ರಥಮ ಬಾರಿಗೆ ಬುನಾದಿ ನಿರ್ಮಿಸಿದ್ದರಲ್ಲಿ ಸಂದೇಹವಿಲ್ಲ. ಇದೇ ಸಮಯದಲ್ಲಿ ತವಗ ಭೀಮಸೇನರಾಯರು ಹಾಗೂ ಇತರರು ಗುಲಬರ್ಗಾದಲ್ಲಿ ಹೈದರಾಬಾದ್ ಕರ್ನಾಟಕ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಆರಂಭಿಸಿ ಈ ಜಿಲ್ಲೆಯ ಕನ್ನಡಿಗರಲ್ಲಿ ತಮ್ಮ ಭಾಷೆಯ ಬಗೆಗೆ ಪ್ರೀತಿ ಹಾಗೂ ಜಾಗೃತಿ ಮೂಡಿಸಿದರು.

ಸ್ವಾತಂತ್ರ್ಯವು ಇಡೀ ಭಾರತಕ್ಕೆ ೧೫ನೇ ಆಗಸ್ಟ್ ೧೯೪೭ರಂದು ಲಭಿಸಿದ್ದರೂ ಹೈದರಾಬಾದ್ ಸಂಸ್ಥಾನಕ್ಕೆ ಲಭಿಸಲಿಲ್ಲ. ಹೋರಾಟದ ಮೂಲಕವೇ ಜನನಾಯಕರನ್ನು ಆಕರ್ಷಿಸಿ ಕೊನೆಗೆ ಪೋಲಿಸ್ ಕಾರ್ಯಾಚರಣೆಯ ಮೂಲಕವೇ ಭಾರತ ಒಕ್ಕೂಟವು ಹೈದರಾಬಾದ್ ಸಂಸ್ಥಾನವನ್ನು ಪಡೆಯಿತೆಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಈ ಸಮಯದಲ್ಲಿ ಡಾ. ಎ.ಎಸ್. ಮೇಲ್ಕೋಟೆ ಮತ್ತು ಅವರ ಪತ್ನಿ ವಿಮಲಾಬಾಯಿ, ಮಾನ್ವಿ ನರಸಿಂಗರಾವ್, ತವಗ ಭೀಮಸೇನರಾವ್, ಸಗರ ಕೃಷ್ಣಾಚಾರ್ಯ, ದಿಗಂಬರರಾವ್ ಕಲ್ಮಂಣಕರ್, ಸಿದ್ದಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ಬಿ.ಜಿ. ಚಿಮ್ಮಲಗಿ, ಸಿದ್ದವನಹಳ್ಳಿ ಕೃಷ್ಣಶರ್ಮ ಮುಂತಾದವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕನ್ನಡಪರ ಧ್ವನಿಯನ್ನು ಕಾಪಾಡಿಕೊಂಡು ಬಂದಿದ್ದರು. ಇದರಿಂದಾಗಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹೈದರಾಬಾದ್ ಸಂಸ್ಥಾನವು ಭಾರತೀಯ ಒಕ್ಕೂಟದಲ್ಲಿ ಸೇರ್ಪಡೆಯಾದ ಬಳಿಕ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಕನ್ನಡಿಗರು ಕರ್ನಾಟಕದಲ್ಲಿ ವಿಲೀನಗೊಳ್ಳುವ ಬಗೆಗೆ ವಿಶೇಷ ಆಸ್ಥೆ ವಹಿಸಿದರು. ಆ ಸಂದರ್ಭದಲ್ಲಿ ಸರದಾರ ಶರಣಗೌಡ ಇನಾಂದಾರರ ಪಾತ್ರವು ಮುಖ್ಯವಾದುದಾಗಿದೆ. ದಿನಾಂಕ ೭ನೇ ಮಾರ್ಚ್ ೧೯೪೯ರಂದು ಗುಲಬರ್ಗಾದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಕೊನೆಯ ಬಾರಿಗೆ (೧೨ನೇಯ ಪರಿಷತ್ತು) ಸಮಾವೇಶಗೊಂಡಿತು. ಅದೇ ಸಂದರ್ಭದಲ್ಲಿ ಉತ್ತಂಗಿ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಮಾರ್ಚ ೫,೬ ಮತ್ತು ೭, ೧೯೪೯ರಂದು ೩೨ನೇ ಕನ್ನಡ ಸಾಹಿತ್ಯ ಸಮ್ಮೇಳನವೂ ಗುಲಬರ್ಗಾದಲ್ಲಿ ನಡೆಯಿತು. ಉತ್ತಂಗಿ ಚನ್ನಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಬಲವಾದ ಹಾಗೂ ವಿಶಾಲವಾದ ಹೃದಯವಿಲ್ಲದೇ ಹೊಸ ರಾಷ್ಟ್ರ ರಚನೆಯಾಗಲಾರದು. ಇದು ಸಾಧ್ಯವಾಗಬೇಕಾದರೆ ಕನ್ನಡದ ಎಲ್ಲ ಜನತೆ ಒಂದೆಡೆಗೆ ಸೇರಿ ತನ್ನ ಸಾಂಸ್ಕೃತಿಕ ಬಲವನ್ನು ಹೆಚ್ಚಿಸಿಕೊಳ್ಳಬೇಕು. ಇದೇ ಕರ್ನಾಟಕ ಏಕೀಕರಣದ ಮೂಲ ಉದ್ದೇಶ" ಎಂದು ಕರೆ ನೀಡಿದರು. ಇದೇ ಅಧಿವೇಶನದಲ್ಲಿ ಕೆ.ಬಿ. ಜಿನರಾಜ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ೧೯೪೯ ಮಾರ್ಚ ೭ರಂದು ಗುಲಬರ್ಗಾದಲ್ಲಿ ಸಮಾವೇಶಗೊಂಡಾಗ ಬಹುತೇಕ ರಾಜಕೀಯ ನಾಯಕರು, ಸಾಹಿತಿಗಳು, ಕಲಾವಿದರು ಅದರಲ್ಲಿ ಪಾಲ್ಗೊಂಡಿದ್ದರು. ಈ ಅಧಿವೇಶನದಲ್ಲಿ ಮೈಸೂರು ಕ್ರಿಯಾಸಮಿತಿಯ ಅಧ್ಯಕ್ಷ ಟಿ. ಸುಬ್ರಹ್ಮಣ್ಯಂ ಅವರು ಪರಿಷತ್ತಿನ ಉದ್ಘಾಟನಾ ಭಾಷಣ ಮಾಡುತ್ತ 'ಮೈಸೂರು ಮಹಾರಾಜರು ಎಂದಿಗೂ ಏಕೀಕರಣಕ್ಕೆ ವಿರೋಧ ಮಾಡಿಲ್ಲ. ಮೈಸೂರು ಸಂಸ್ಥಾನವು ಏಕೀಕರಣದಿಂದ ದೂರವಿದೆ ಎಂದು ಭಾವಿಸುವುದು ತಪ್ಪು' ಎಂದು ತಿಳಿಸಿದರು. ಕೆ.ಬಿ. ಜಿನರಾಜ ಹೆಗಡೆಯವರು ಟಿ. ಸುಬ್ರಹ್ಮಣ್ಯಂ ಅವರ ಮಾತುಗಳನ್ನು ಅಲ್ಲಗಳೆದರು. ಈ ವಾದಗಳು ಸಭೆಯಲ್ಲಿ ನಡೆಯುತ್ತಿದ್ದಾಗ ಸರದಾರ್ ಶರಣಗೌಡ ಇನಾಂದಾರರು ಹೈದರಾಬಾದ್ ನಿಜಾಮರ ಆಳ್ವಿಕೆಯಿಂದ ಬೇಸತ್ತಿದ್ದ ಈ ಭಾಗದ ಜನತೆಗೆ ಸಂಸ್ಥಾನೀ ಧೋರಣೆಗಳಿರುವುದು ಸರಿಯಲ್ಲ ಹಾಗೂ ಏಕೀಕರಣವಾಗದಿದ್ದರೆ ಪುನಃ ನಿಜಾಮರ ಆಡಳಿತಕ್ಕೆ ಒಳಪಡುವ ಆತಂಕದಿಂದ ಕೋಪದಿಂದ ಪ್ರತಿಭಟಿಸಿದರು. ಸಭೆ ಹಲವಾರು ಏಕೀಕರಣ ತತ್ವಗಳನ್ನು ಮತದಾನದ ಮೂಲಕ ಅಂಗೀಕರಿಸಿತು.

ತಾಂಡೂರಿನಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಶರಣಗೌಡರು ಕರ್ನಾಟಕದೊಡನೆ ಏಕೀಕರಣವಾಗುವ ಬಗೆಗೆ ಬಹುಮತದ ಮೂಲಕ ವಿಶೇಷ ನಿರ್ಣಯವನ್ನು ಮಂಡಿಸಿದರು. ಇದಕ್ಕೆ ಉತ್ತರವಾಗಿ ೧೯೫೨ರಲ್ಲಿ ಪೊಟ್ಟಿ ಶ್ರೀರಾಮುಲು ಎಂಬ ಆಂಧ್ರದ ಮುಖಂಡರು ಆಂಧ್ರ ರಾಜ್ಯವನ್ನು ರಚಿಸಲು ಸರಕಾರವನ್ನು ಒತ್ತಾಯಿಸಲು ಅಮರಣಾಂತ ಉಪವಾಸವನ್ನು ಕೈಗೊಂಡರು. ಇವರು ೫೮ ದಿನಗಳ ಉಪವಾಸದ ನಂತರ ಡಿಸೆಂಬರ್ ೧೫ರಂದು ನಿಧನ ಹೊಂದಿದರು. ಈ ಘಟನೆಯಿಂದಾಗಿ ಆಂಧ್ರ ಪ್ರದೇಶದಲ್ಲೆಲ್ಲ ವ್ಯಾಪಕ ಗಲಭೆಗಳಾಗಿ ಅಪಾರ ಜೀವ ಹಾಗೂ ಆಸ್ತಿ ಪಾಸ್ತಿಗಳಿಗೆ ಹಾನಿಯುಂಟಾಯಿತು. ಡಿಸೆಂಬರ್ ೧೯ ರಂದು ನೆಹರೂ ಅವರು ಮದರಾಸ್ ರಾಜ್ಯದ ತೆಲುಗು ಪ್ರದೇಶಗಳನ್ನೊಳಗೊಂಡಂತೆ (ಆದರೆ ಮದರಾಸ್ ನಗರವನ್ನು ಹೊರತುಪಡಿಸಿ) ಆಂಧ್ರ ರಾಜ್ಯವನ್ನು ರಚಿಸಲು ಸರಕಾರ ನಿರ್ಧರಿಸಿದೆ ಎಂದು ಘೋಷಿಸಿದರು. ಕರ್ನಾಟಕದಲ್ಲಿ ಬೆಳಗಾವಿಗೆ ೧೯೫೩ರ ಡಿಸೆಂಬರ್ ೨೪ರಂದು ಜವಹರಲಾಲ್ ನೆಹರು ಅವರು ಬಂದಿದ್ದಾಗ ಶರಣಗೌಡರು ಗುಲಬರ್ಗಾ ಜನತೆಯ ಪರವಾಗಿ ಕರ್ನಾಟಕ ಏಕೀಕರಣದ ಅವಶ್ಯಕತೆಯ ಬಗೆಗೆ ಮನವಿಯೊಂದನ್ನು ಸಲ್ಲಿಸಿದರು ನಂತರ ಹುಬ್ಬಳ್ಳಿಯಲ್ಲಿ ೧೯೫೩ರಲ್ಲಿ ಸಮಾವೇಶಗೊಂಡ ಕೆ.ಪಿ.ಸಿ.ಸಿ. ಅಧಿವೇಶನದಲ್ಲೂ ಶರಣಗೌಡರು ಕರ್ನಾಟಕದೊಡನೆ ವಿಲೀನವಾಗುವ ಮನವಿಯನ್ನು ಶೀಘ್ರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು. ನೆಹರೂ ಸರಕಾರವು ಒತ್ತಾಯಗಳಿಗೆ ಮಣಿದು ರಾಜ್ಯಗಳ ಪುನರ್ ವಿಂಗಡಣೆಯ ಬಗೆಗೆ ತೀರ್ಮಾನಿಸಲು ೧೯೫೩ರಲ್ಲಿ ಫಸಲ್ ಅಲಿ ಆಯೋಗವನ್ನು ನೇಮಿಸಿತು.

ಫಸಲ್ ಅಲಿ ಆಯೋಗವು ಸಲ್ಲಿಸಿದ ತನ್ನ ಕರಡು ವರದಿಯಲ್ಲಿ ಹೈದರಾಬಾದ್ ಪ್ರಾಂತ್ಯದ ಕನ್ನಡ ಪ್ರದೇಶಗಳನ್ನು ಕರ್ನಾಟಕದೊಡನೆ ವಿಲೀನದ ಬಗೆಗೆ ಪ್ರಸ್ತಾಪವಿರಲಿಲ್ಲ. ನಂತರ ಒತ್ತಾಯಕ್ಕೆ ಮಣಿದು ಇದನ್ನು ಸರಿಪಡಿಸಲಾಯಿತು. ಹೈದರಾಬಾದ್ ನಾನಾಲನಗರದಲ್ಲಿ ೧೯೫೩ರ ಜನವರಿ ೧೮ರಂದು ಸಮಾವೇಶಗೊಂಡ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಮೈಸೂರು ಶಾಸನಮಂಡಲದ ೫೬ ಜನ ಸದಸ್ಯರು ಪ್ರಧಾನಿ ನೆಹರೂ ಅವರಿಗೆ ಮೈಸೂರನ್ನೊಳಗೊಂಡಂತೆ ಸಂಯುಕ್ತ ಕರ್ನಾಟಕ ರಾಜ್ಯ ರಚನೆಗೆ ಪೂರ್ಣ ಬೆಂಬಲ ಸೂಚಿಸುವ ಪತ್ರವನ್ನು ಸಲ್ಲಿಸಿದ್ದು ಇಲ್ಲಿ ಮಹತ್ವವಾಗಿದೆ. ಇದರ ಜೊತೆಗೆ ೧೯೫೪ರ ಫೆಬ್ರವರಿಯಲ್ಲಿ ಮೈಸೂರಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಉತ್ತರ ಕರ್ನಾಟಕದ ಪ್ರವಾಸ ಕೈಗೊಂಡರು. ಇದರಿಂದಾಗಿ ಈ ಭಾಗದ ಜನತೆಗೆ ಏಕೀಕರಣಕ್ಕೆ ಮೈಸೂರು ಪ್ರಾಂತ್ಯ ಪೂರ್ಣ ಬೆಂಬಲ ನೀಡುತ್ತದೆಂಬ ಅಂಶವು ಖಚಿತವಾಯಿತು. ಕೊನೆಗೆ ರಾಜ್ಯ ಪುನರ್ಘಟನಾ ಕಾನೂನಿನಂತೆ ಅಸ್ತಿತ್ವಕ್ಕೆ ಬಂದ ಮೈಸೂರು (ಕರ್ನಾಟಕ) ರಾಜ್ಯದಲ್ಲಿ ಗುಲಬರ್ಗಾ ೧೯ ಜಿಲ್ಲೆಗಳಲ್ಲಿ ಒಂದಾಗಿ ೧೯೫೬ರ ನವೆಂಬರ್ ೧ಕ್ಕೆ ವಿಲೀನವಾಯಿತು. ಮೈಸೂರಿನ ರಾಜಪ್ರಮುಖರೇ ವಿಶಾಲ ಮೈಸೂರಿನ ಪ್ರಥಮ ರಾಜ್ಯಪಾಲರಾದರು. ಏಕೀಕೃತರಾಗಿ ಹದಿನೇಳು ವರ್ಷಗಳ ಕಾಲ 'ಕರ್ನಾಟಕ' ಎಂಬ ನಾಮಕರಣಕ್ಕೆ ಹಲವಾರು ಹೋರಾಟಗಳು ನಡೆದುವು. ಶಾಹಪುರದವರಾದ ನಾಗಪ್ಪ ಶೆಟ್ಟರು ಈ ಏಕೀಕೃತ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾಗುವವರೆಗೂ ಚಪ್ಪಲಿ ಮತ್ತು ಟೊಪ್ಪಿಗೆ ಹಾಗೂ ಊರುಗೋಲುಗಳನ್ನು ತ್ಯಜಿಸಿದ್ದೇ ಅಲ್ಲದೇ ಸಿಹಿ ಪದಾರ್ಥಗಳನ್ನು ತಿನ್ನುವುದು ಸಹ ಬಿಟ್ಟಿದ್ದರೆಂದು ಹೇಳಲಾಗುತ್ತದೆ. ಕೊನೆಗೆ ಮೈಸೂರು ಸರಕಾರವು ೧೯೭೩ರ ನವೆಂಬರ್ ೧ ರಂದು ಈ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಲಾಯಿತು.

## ಚುನಾವಣೆಗಳು

ಸ್ವಾತಂತ್ರ್ಯಕ್ಕೆ ಮುನ್ನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ಅಲೆಯು ತುಂಬಾ ಕ್ಷೀಣವಾಗಿತ್ತು. ಪೋಲೀಸ್ ಕಾರ್ಯಾಚರಣೆಯ (೧೯೪೮)ರ ನಂತರ ನಿಜಾಮಷಾಹಿ ಕೊನೆಗೊಂಡ ಬಳಿಕ ದೇಶದ ಇತರ ಪ್ರದೇಶಗಳಂತೆ ಈ ಭಾಗದಲ್ಲೂ ಪ್ರಜಾಪ್ರಭುತ್ವದ ಪರವಾಗಿ ಬಲವಾದ ಅಭಿಪ್ರಾಯ ಮೂಡತೊಡಗಿತು. ಸ್ವಾತಂತ್ರ್ಯನಂತರ ದೇಶದಲ್ಲೇ ಮೊದಲನೇ ಲೋಕಸಭೆ ಚುನಾವಣೆಯು ೧೯೫೨ರಲ್ಲಿ ನಡೆಯಿತು. ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ಉಜ್ವಲ ದೇಶಪ್ರೇಮಿ ಮತ್ತು ಸ್ವಾತಂತ್ರ ಹೋರಾಟಗಾರರಾಗಿದ್ದ ಸ್ವಾಮಿ ರಾಮಾನಂದ ತೀರ್ಥರು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದರು. ಇವರಲ್ಲದೆ ಇನ್ನಿಬ್ಬರು ಅಭ್ಯರ್ಥಿಗಳು ಸಹ ಚುನಾವಣಾ ಕಣದಲ್ಲಿದ್ದರು. ಚಲಾಯಿಸಿದ ಒಟ್ಟು ಮತಗಳಲ್ಲಿ ಶೇ. ೫೨.೮ ರಷ್ಟು ಮತಗಳನ್ನು ಗಳಿಸಿದ ಸ್ವಾಮಿ ರಾಮಾನಂದ ತೀರ್ಥರು ವಿಜಯ ಶಾಲಿಗಳಾದರು. ಪಕ್ಷೇತರ ಹಾಗೂ ಸೋಶಿಯಲಿಸ್ಟ ಪಕ್ಷದ ಅಭ್ಯರ್ಥಿಗಳು ಕ್ರಮವಾಗಿ ಶೇ. ೩೬.೮ ಹಾಗೂ ೧೦.೪ ರಷ್ಟು ಮತಗಳನ್ನು ಪಡೆದರು. ೧೯೫೬ರ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣಾ ಆಜ್ಞೆಯ ಪ್ರಕಾರ ಜಿಲ್ಲೆಗೆ ಹನ್ನೊಂದು ವಿಧಾನಸಭಾ ಕ್ಷೇತ್ರಗಳನ್ನು ನಿಗದಿ ಮಾಡಲಾಗಿತ್ತು. ಅವುಗಳಲ್ಲಿ ಆಳಂದ ಮತ್ತು ಸೇಡಂ ಕ್ಷೇತ್ರಗಳು ದ್ವಿಸದಸ್ಯ ಕ್ಷೇತ್ರಗಳಾಗಿದ್ದು, ತಲಾ ಒಂದೊಂದು ಮೀಸಲು ಸ್ಥಾನಗಳನ್ನು ಹೊಂದಿದ್ದವು. ಜಿಲ್ಲೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ತುಂಬಾ ಬಲವಾಗಿತ್ತು. ಪ್ರಜಾ ಸೋಷಿಯಲಿಸ್ಟ್ ಹಾಗೂ ಕಮ್ಯೂನಿಸ್ಟ್ ಪಕ್ಷಗಳು ದುರ್ಬಲವಾಗಿದ್ದವು. ಪ್ರತಿಯೊಂದು ಚುನಾವಣೆಯ ವಿವರವನ್ನು ಮುಂದೆ ಕೊಡಲಾಗಿದೆ.

**ವಿಧಾನಸಭೆ ಚುನಾವಣೆ** - ೧೯೫೭

ಕರ್ನಾಟಕ ಏಕೀಕರಣದ ನಂತರ ೧೯೫೭ರಲ್ಲಿ ವಿಧಾನಸಭೆಗೆ ಮೊದಲನೇ ಸಾರ್ವತ್ರಿಕ ಚುನಾವಣೆಗಳು ನಡೆದವು. ೧೯೫೬ರ ಲೋಕಸಭೆ ಮತ್ತು ವಿಧಾನಸಭೆಯ ಪುನರ್ ವಿಂಗಡಣಾ ಆಜ್ಞೆಯ ಪ್ರಕಾರ ಜಿಲ್ಲೆಯಲ್ಲಿ ೧೧ ವಿಧಾನಸಭಾ ಕ್ಷೇತ್ರಗಳಿದ್ದವು. ಅವುಗಳಲ್ಲಿ ಆಳಂದ ಮತ್ತು ಸೇಡಂ ಕ್ಷೇತ್ರಗಳು ದ್ವಿಸದಸ್ಯ ಕ್ಷೇತ್ರಗಳಾಗಿದ್ದವು. (ತಲಾ ಒಂದೊಂದು ಮೀಸಲು ಸ್ಥಾನ). ಜಿಲ್ಲೆಯಲ್ಲಿ ೧೯೫೭ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪಕ್ಷಗಳು : ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಪ್ರಜಾ ಸೋಷಿಯಲಿಸ್ಟ್, ಹಾಗೂ ಕಮ್ಯೂನಿಸ್ಟ್ ಪಕ್ಷಗಳು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಅಫಜಲ್‌ಪುರ ಹಾಗೂ ಶಹಪೂರ ಮತ ಕ್ಷೇತ್ರಗಳಿಂದ ಅವಿರೋಧವಾಗಿ ಆಯ್ಕೆಯಾದರು. ಜಿಲ್ಲೆಯ ರಾಜಕಾರಣದಲ್ಲಿ ಅಂದು ಹೆಚ್ಚು ಪ್ರಭಾವಶಾಲಿಯಾಗಿದ್ದ ಕಾಂಗ್ರೆಸ್ ಪಕ್ಷವು ಒಟ್ಟು ೧೧ ಸ್ಥಾನಗಳನ್ನು ಗೆದ್ದುಕೊಂಡಿತು. ಉಳಿದ ಎರಡು ಸ್ಥಾನಗಳು ಪಕ್ಷೇತರರ

ಪಾಲಾದವು. ಇದರ ವಿವರಗಳು ಹೀಗಿವೆ. ೧. ಚಿಂಚೋಳಿ-ಕಾಂಗ್ರೆಸ್ ೯,೫೩೯(೬೦.೨೫) ಆಯ್ಕೆ ವೀರೇಂದ್ರ ಪಾಟೀಲ್ ಬಸಪ್ಪ ಹಾಗೂ ಪಕ್ಷೇತರ ಅಭ್ಯರ್ಥಿಗೆ ಬಿದ್ದ ಮತಗಳು ೬,೨೯೧(೩೯.೭೫). ೨. ಆಳಂದ (ದ್ವಿಸದಸ್ಯ ಕ್ಷೇತ್ರ-ಒಂದು ಸಾಮಾನ್ಯ ಹಾಗೂ ಒಂದು ಮೀಸಲು ಸ್ಥಾನ) ಕಾಂಗ್ರೆಸ್ ೧೮,೯೨೦(೨೯.೧೭) ಆಯ್ಕೆ ರಾಮಚಂದ್ರ ವೀರಪ್ಪ (ಮೀಸಲು) ಹಾಗೂ ಕಾಂಗ್ರೆಸ್ ೧೬,೩೯೩(೨೫.೨೮) ಆಯ್ಕೆ ಚಂದ್ರಶೇಖರ ಸಂಗಶೆಟ್ಟಪ್ಪ (ಸಾಮಾನ್ಯ), ಪ್ರಜಾ ಸೋಷಿಯಲಿಸ್ಟ್ ಅಥವಾ ಪಿ.ಎಸ್.ಪಿ. ೧೧,೯೧೧(೧೮.೩೮), ಪಿ.ಎಸ್.ಪಿ. ೮,೮೭೨(೧೩.೬೯) ಮತ್ತು ಪಕ್ಷೇತರ ೮,೭೪೭, (೧೩.೪೮). ೩. ಗುಲಬರ್ಗಾ-ಕಾಂಗ್ರೆಸ್ ೮.೮೬೪ (೪೪.೮೩) ಆಯ್ಕೆ ಮಹಮ್ಮದ್ ಅಲಿ ಮೆಹತಾಬ್ ಅಲಿ. ಕಮ್ಯೂನಿಸ್ಟ್ ಪಕ್ಷ ಅಥವಾ ಸಿ.ಪಿ.ಐ. ೫,೦೭೫ (೨೫.೬೬), ಪಕ್ಷೇತರ ೩,೫೬೩(೧೮.೦೩) ಮತ್ತು ಪಿ.ಎಸ್.ಪಿ. ೨,೨೭೦ (೧೧.೪೮). ೪. ಅಫಜಲ್‌ಪುರ-ಕಾಂಗ್ರೆಸ್ ಅಭ್ಯರ್ಥಿ ಅಣ್ಣಾರಾವ್ ಬಸಪ್ಪ ಅವಿರೋಧ ಆಯ್ಕೆ. ೫. ಕಾಳಗಿ-ಕಾಂಗ್ರೆಸ್ ೯,೦೪೪ (೬೨.೯೬) ಆಯ್ಕೆ ಶಂಕರಶೆಟ್ಟಿ ರಾಚಪ್ಪ, ಸಿ.ಪಿ.ಐ. ೪,೦೩೦ (೨೮.೦೫) ಹಾಗೂ ಪಕ್ಷೇತರ ೧,೨೯೨ (೮.೯೯). ೬. ಚಿತ್ತಾಪುರ-ಕಾಂಗ್ರೆಸ್ ೭,೦೧೮ (೩೯,೬೬) ಆಯ್ಕೆ ಶ್ರೀಮತಿ ವಿಜಯಾ ರಾಘವೇಂದ್ರ ರಾವ್. ಪಕ್ಷೇತರ ೫,೬೨೯ (೩೧.೮೩) ಮತ್ತು ಸಿ.ಪಿ.ಐ. ೫,೦೪೫ (೨೮.೫೧). ೭. ಸೇಡಂ-ದ್ವಿಸದಸ್ಯ ಕ್ಷೇತ್ರ - (ಒಂದು ಸಾಮಾನ್ಯ ಮತ್ತು ಒಂದು ಮೀಸಲು ಕ್ಷೇತ್ರ) ಪಕ್ಷೇತರ ಅಭ್ಯರ್ಥಿ ಜಮದಂಡ ಸರ್ವೇಶ (ಮೀಸಲು) ಅವಿರೋಧ ಆಯ್ಕೆ, ಕಾಂಗ್ರೆಸ್ ೨೦,೨೨೦ (೫೧.೮೬) ಆಯ್ಕೆ ಮಲ್ಲಪ್ಪ ಲಿಂಗಪ್ಪ (ಸಾಮಾನ್ಯ ಕ್ಷೇತ್ರ). ಪಕ್ಷೇತರ ೧೮,೭೬೮ (೪೮.೧೪) ೮. ಜೇವರ್ಗಿ-ಪಕ್ಷೇತರ ೭,೩೨೬ (೪೧.೭೧) ಆಯ್ಕೆ ಶರಣಗೌಡ ಸಿದ್ಧರಾಮಯ್ಯ. ಕಾಂಗ್ರೆಸ್ ೭,೨೨೬ (೪೧.೧೪) ಮತ್ತು ಸಿ.ಪಿ.ಐ. ೩,೦೧೧ (೧೭.೧೫). ೯. ಯಾದಗಿರಿ - ಪಕ್ಷೇತರ ೧೨,೬೦೦ (೫೨.೦೭) ಆಯ್ಕೆ ಬಸವಂತರಾಯ. ಕಾಂಗ್ರೆಸ್ ಪಡೆದ ಮತಗಳು ೧೧,೫೯೫(೪೭.೯೩). ೧೦. ಶಹಪುರ-ಕಾಂಗ್ರೆಸ್ ಅಭ್ಯರ್ಥಿ ವಿರುಪಾಕ್ಷಪ್ಪ ಅವಿರೋಧ ಆಯ್ಕೆ. ೧೧. ಶೋರಾಪುರ (ಸುರಪುರ), ೧೫,೫೬೧(೫೯.೪೦) ಆಯ್ಕೆ ಕುಮಾರ ನಾಯ್ಕ ವೆಂಕಟಪ್ಪ ನಾಯ್ಕ ಮತ್ತು ಪಕ್ಷೇತರರಿಗೆ ಬಿದ್ದ ಮತಗಳು ೧೦.೬೫೦(೪೦.೬೦). ಆವರಣದಲ್ಲಿರುವ ಸಂಖ್ಯೆಯು ಮತಗಳಿಕೆಯ ಶೇಕಡಾ ಪ್ರಮಾಣ ಸೂಚಿಸುವುದು.

**ಲೋಕಸಭಾ ಚುನಾವಣೆ** - ೧೯೫೭

ಮತ ಕ್ಷೇತ್ರಗಳ (ಡಿಲಿಮಿಟೇಷನ್) ಪುನರ್ ರಚನೆ ಆದೇಶದ (೧೯೫೬) ಪ್ರಕಾರ, ಗುಲಬರ್ಗಾ ಜಿಲ್ಲೆಯು ಎರಡು ಲೋಕಸಭಾ ಕ್ಷೇತ್ರಗಳನ್ನು ಹೊಂದಿತ್ತು. ಇವುಗಳಲ್ಲಿ ಒಂದು ಸಾಮಾನ್ಯ ಕ್ಷೇತ್ರವಾದರೆ ಮತ್ತೊಂದು ಮೀಸಲು ಕ್ಷೇತ್ರವಾಗಿತ್ತು. ಚುನಾವಣೆಯಲ್ಲಿ ಈ ಎರಡು ಸ್ಥಾನಗಳನ್ನು ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದರು. ಲೋಕಸಭಾ ಚುನಾವಣಾ ಫಲಿತಾಂಶಗಳು ಈ ರೀತಿ ಇದೆ. ಕಾಂಗ್ರೆಸ್ ೧,೩೯,೦೪೧(೨೬.೧೭) ಆಯ್ಕೆ ಮಹದೇವಪ್ಪ ಯಶ್ವಂತರಾವ್, ಕಾಂಗ್ರೆಸ್ ೧,೩೪,೨೩೯(೨೭.೨೭) ಆಯ್ಕೆ ಶಂಕರದೇವ (ಮೀಸಲು), ಪಕ್ಷೇತರ ೧,೦೯,೧೨೪(೨೦.೫೬), ಪಕ್ಷೇತರ ೮೮,೩೫೨(೧೬.೬೪) ಮತ್ತು ಪಿ.ಎಸ್.ಪಿ. ೬೦,೩೧೭(೧೧.೩೬).

**ಲೋಕಸಭಾ ಚುನಾವಣೆ** - ೧೯೬೨

ದ್ವಿಸದಸ್ಯ ಲೋಕಸಭಾ ಕ್ಷೇತ್ರಗಳನ್ನು ರದ್ದು ಮಾಡುವ ೧೯೬೧ ರ ಆಜ್ಞೆಯ ಪ್ರಕಾರ, ಗುಲಬರ್ಗಾವನ್ನು ೧೯೬೨ ರ ಸಾರ್ವತ್ರಿಕ ಚುನಾವಣೆಯಲ್ಲಿ ಏಕ ಸದಸ್ಯ ಕ್ಷೇತ್ರವನ್ನಾಗಿ ಮಾರ್ಪಡಿಸಲಾಯಿತು. ಹಾಗೂ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಸ್ವತಂತ್ರ ಪಕ್ಷಗಳ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆ ಇತ್ತು. ಕಾಂಗ್ರೆಸ್ ಪಕ್ಷವು ಪುನಃ ಈ ಕ್ಷೇತ್ರವನ್ನು ಉಳಿಸಿಕೊಂಡಿತು. ಎರಡು ಪಕ್ಷಗಳು ಪಡೆದ ಮತಗಳ ವಿವರಗಳು ಹೀಗಿವೆ. ಕಾಂಗ್ರೆಸ್ ೯೨,೩೯೯(೫೨.೨೮) ಆಯ್ಕೆ-ಮಹದೇವಪ್ಪ ಯಶ್ವಂತಪ್ಪ, ಸ್ವತಂತ್ರ ಪಕ್ಷ ೮೪,೩೨೬(೪೭.೭೨).

**ವಿಧಾನಸಭಾ ಚುನಾವಣೆ** - ೧೯೬೨

೧೯೬೧ ರಲ್ಲಿ ದ್ವಿಸದಸ್ಯ ಕ್ಷೇತ್ರಗಳನ್ನು ರದ್ದುಗೊಳಿಸಲಾಯಿತು. ಪರಿಣಾಮವಾಗಿ ೧೯೬೨ ರ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ದ್ವಿಸದಸ್ಯ ಕ್ಷೇತ್ರವು ಜಿಲ್ಲೆಯಲ್ಲಿರಲಿಲ್ಲಾ. ಈ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಒಟ್ಟು ೧೩ ವಿಧಾನಸಭೆ ಮತ ಕ್ಷೇತ್ರಗಳಿದ್ದವು. ಕಾಂಗ್ರೆಸ್ ಪಕ್ಷವು ಜಿಲ್ಲೆಯಲ್ಲಿ ಗಣನೀಯ ಪ್ರಭಾವವನ್ನು ಹೊಂದಿತ್ತು. ಚುನಾವಣಾ ಕಣದಲ್ಲಿದ್ದ ಇತರ ಪಕ್ಷಗಳೆಂದರೆ ಸ್ವತಂತ್ರ ಪಕ್ಷ, ಲೋಕಸೇವಕ ಸಂಘ, ಕಮ್ಯೂನಿಸ್ಟ್ ಹಾಗೂ ಇತರರು. ವಿಧಾನಸಭಾ

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಎಂಟು ಸ್ಥಾನಗಳನ್ನು ಗಳಿಸಿದರೆ, ಸ್ವತಂತ್ರ ಪಕ್ಷವು ಮೂರು ಸ್ಥಾನಗಳನ್ನು ಪಡೆಯಿತು. ಲೋಕಸೇವಕ ಸಂಘ ಹಾಗೂ ಕಮ್ಯೂನಿಸ್ಟ್ ಪಕ್ಷಗಳು ತಲಾ ಒಂದೊಂದು ಸ್ಥಾನವನ್ನು ಪಡೆದವು. ಚುನಾವಣಾ ಮತಗಳ ವಿವರಗಳು ಈ ರೀತಿ ಇದೆ. ೧. ಚಿಂಚೋಳಿ: ಕಾಂಗ್ರೆಸ್ ೧೩,೩೯೭(೫೮.೯೪) ಆಯ್ಕೆ-ವೀರೇಂದ್ರ ಪಾಟೀಲ್. ಸ್ವತಂತ್ರ ಪಕ್ಷ ೧೦,೩೫೩(೪೧.೦೬). ೨. ಕಮಲಾಪುರ : ಕಾಂಗ್ರೆಸ್ ೧೪,೪೮೪(೬೯.೬೦) ಆಯ್ಕೆ-ಶ್ರೀಮತಿ ಲಲಿತಾಂಬ ಚಂದ್ರಶೇಖರ್, ಪಿ.ಎಸ್.ಪಿ. ೩,೯೪೯(೧೮.೯೮) ಹಾಗೂ ಆರ್.ಪಿ.ಐ. ೨,೩೭೭(೧೧.೪೨). ೩. ಆಳಂದ (ಮೀಸಲು): ಕಾಂಗ್ರೆಸ್ ೧೧,೬೩೧(೬೫.೧೧) ಆಯ್ಕೆ-ದೇವಪ್ಪ ಶಾಮಣ್ಣ, ಪಿ.ಎಸ್.ಪಿ. ೪,೧೪೧(೨೩.೧೮) ಮತ್ತು ಆರ್.ಪಿ.ಐ. ೨,೦೯೨(೧೧.೭೫). ೪. ಗುಲಬರ್ಗಾ: ಸಿ.ಪಿ.ಐ. ೧೪,೨೦೮ (೫೩.೭೨) ಆಯ್ಕೆ ಗಂಗಾಧರ ನಾಮೋಷಿ, ಕಾಂಗ್ರೆಸ್ ೧೦,೯೨೦(೪೧.೨೯), ಪಿ.ಎಸ್.ಪಿ. ೧,೦೦೩(೩.೭೯) ಮತ್ತು ಸೋಷಿಯಲಿಸ್ಟ್ ಪಕ್ಷ (ಎಸ್.ಒ.ಪಿ.) ೩೧೮(೧.೨೦). ೫. ಅಫಜಲ್‌ಪುರ: ಕಾಂಗ್ರೆಸ್ ೧೪,೦೭೮(೮೬.೫೨) ಆಯ್ಕೆ ಅಣ್ಣಾರಾವ್ ಬಸಪ್ಪ ಗಣಮುಖಿ, ಆರ್.ಪಿ.ಐ. (ರಿಪಬ್ಲಿಕನ್ ಪಕ್ಷ) ೧,೪೧೧(೮.೬೭) ಹಾಗೂ ಪಿ.ಎಸ್.ಪಿ. ೭೮೨(೪.೮೧) ೬. ಕಾಳಗಿ: ಕಾಂಗ್ರೆಸ್ ೧೦.೬೦೮(೬೦.೪೯) ಆಯ್ಕೆ-ಎಸ್. ರುದ್ರಪ್ಪ, ಸ್ವತಂತ್ರ ಪಕ್ಷ ೩,೭೩೩(೨೧.೫೫), ಸಿ.ಪಿ.ಐ. ೨,೨೮೫(೧೩.೦೩) ಅಲ್ಲದೆ ಪಕ್ಷೇತರ ೮೬೬(೪.೯೩). ೭. ಚಿತ್ತಾಪುರ: ಕಾಂಗ್ರೆಸ್ ೧೧,೨೯೬(೫೩.೦೧) ಆಯ್ಕೆ-ಶ್ರೀಮತಿ ವಿಜಯಾದೇವಿ ರಾಘವೇಂದ್ರ ರಾವ್, ಸ್ವತಂತ್ರ ಪಕ್ಷ ೬,೧೬೭(೨೮.೯೪) ಹಾಗೂ ಸಿ.ಪಿ.ಐ. ೩,೮೪೭(೧೮.೦೫). ೮. ಸೇಡಂ (ಮೀಸಲು): ಕಾಂಗ್ರೆಸ್ ೧೦,೦೧೨(೫೮.೯೨) ಆಯ್ಕೆ-ಜಮದಂಡ ಸರ್ವೇಶ್, ಸ್ವತಂತ್ರ ಪಕ್ಷ ೬,೯೮೧(೪೧.೦೮) ೯. ಗುರುಮಠಕಲ್-ಸ್ವತಂತ್ರ ಪಕ್ಷ ೧೯,೩೭೮(೬೭.೧೮) ಆಯ್ಕೆ-ವಿದ್ಯಾಧರ ಗುರೂಜಿ ವೀರಣ್ಣ, ಕಾಂಗ್ರೆಸ್ ೯,೪೬೯(೩೨.೮೨). ೧೦. ಜೇವರ್ಗಿ: ಕಾಂಗ್ರೆಸ್ ೧೨,೨೫೧(೫೧.೩೮) ಆಯ್ಕೆ-ನೀಲಕಂಠಪ್ಪ ಶರಣಪ್ಪ, ಸ್ವತಂತ್ರ ಪಕ್ಷ ೧೧,೫೯೫(೪೮.೬೨). ೧೧. ಯಾದಗಿರಿ: ಲೋಕ ಸೇವಕ ಸಂಘ ೧೫,೮೭೨(೫೩.೫೧) ಆಯ್ಕೆ-ಭೋಜರಾಜ, ಕಾಂಗ್ರೆಸ್ ೧೩,೭೮೮(೪೬.೪೯) ೧೨. ಶಹಾಪುರ: ಸ್ವತಂತ್ರ ಪಕ್ಷ ೧೧,೯೧೫(೫೯.೫೫) ಆಯ್ಕೆ-ಮಹಂತಸ್ವಾಮಿ ವಿರುಪಾಕ್ಷಯ್ಯ, ಕಾಂಗ್ರೆಸ್ ೮,೦೯೪(೪೦.೪೫). ೧೩. ಶೋರಾಪುರ: ಸ್ವತಂತ್ರ ಪಕ್ಷ ೧೮,೮೪೧(೭೦.೬೪) ಆಯ್ಕೆ-ರಾಜಾಪಿಡ್ ನಾಯ್ಕ ಕೃಷ್ಣಪ್ಪ ನಾಯ್ಕ, ಅಲ್ಲದೆ ಕಾಂಗ್ರೆಸ್ ಸ್ಪರ್ಧೆಗೆ ಬಿದ್ದ ಮತಗಳ ಸಂಖ್ಯೆ ೭,೮೩೦(೨೯.೩೬).

**ಲೋಕಸಭಾ ಚುನಾವಣೆ** - ೧೯೬೭

ಈ ಚುನಾವಣೆಯಲ್ಲಿ ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ನಾಲ್ವರು ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದರು. ಅವರೆಂದರೆ ಕಾಂಗ್ರೆಸ್, ಸ್ವತಂತ್ರ ಪಕ್ಷ, ಭಾರತೀಯ ಜನಸಂಘ (ಈಗ ಭಾರತೀಯ ಜನತಾ ಪಕ್ಷ)ಗಳಿಗೆ ಸೇರಿದ್ದು ಮತ್ತೊಬ್ಬರು ಪಕ್ಷೇತರರು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ತನ್ನ ಸ್ಥಾನವವನ್ನು ಉಳಿಸಿಕೊಂಡಿತು. ಕಾಂಗ್ರೆಸ್ ೧,೩೬,೪೮೮(೫೮.೭೭) ಆಯ್ಕೆ ಎಂ. ಯಶವಂತಪ್ಪ, ಸ್ವತಂತ್ರ ಪಕ್ಷ ೭೭,೯೧೧(೩೩.೬೨), ಭಾರತೀಯ ಜನಸಂಘ ೧೦,೭೨೮(೪.೬೩) ಹಾಗೂ ಪಕ್ಷೇತರ ಅಭ್ಯರ್ಥಿ ೬,೯೧೦(೨.೯೮).

**ವಿಧಾನಸಭಾ ಚುನಾವಣೆ** - ೧೯೬೭

ಈ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಸ್ವತಂತ್ರ ಪಕ್ಷ ಸಂಯುಕ್ತ ಸೋಷಿಯಲಿಸ್ಟ್, ಪ್ರಜಾ ಸೋಷಿಯಲಿಸ್ಟ್, ಭಾರತೀಯ ಜನಸಂಘ ಅಲ್ಲದೇ ಪಕ್ಷೇತರರು ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು. ಕಾಂಗ್ರೆಸ್ ಪಕ್ಷವು ಜಿಲ್ಲೆಯಲ್ಲಿ ಗಣನೀಯ ಪ್ರಭಾವವನ್ನು ಹೊಂದಿತ್ತು. ಆದ್ದರಿಂದ ಆ ಪಕ್ಷವು ಚುನಾವಣೆಯಲ್ಲಿ ಎಂಟು ಸ್ಥಾನಗಳನ್ನು ಗಳಿಸಿತು. ಸ್ವತಂತ್ರ ಪಕ್ಷಕ್ಕೆ ಮೂರು ಸ್ಥಾನಗಳು ಲಭ್ಯವಾದರೆ ಪ್ರಜಾ ಸೋಷಿಯಲಿಸ್ಟ್ ಪಕ್ಷ, ಪಕ್ಷೇತರರು ತಲಾ ಒಂದೊಂದು ಸ್ಥಾನ ಪಡೆದರು. ಪ್ರತಿ ಅಭ್ಯರ್ಥಿ ಪಡೆದ ಮತಗಳು, ಪಕ್ಷ ಹಾಗೂ ಅದರ ಶೇಕಡಾವಾರು ಇಂತಿದೆ. ೧. ಚಿಂಚೋಳಿ: ಕಾಂಗ್ರೆಸ್ ೩೧,೦೩೦(೮೭.೯೮) ಆಯ್ಕೆ ವೀರೇಂದ್ರ ಪಾಟೀಲ್ ಬಸಪ್ಪ, ಸ್ವತಂತ್ರ ಪಕ್ಷ ೩,೬೧೭(೧೦.೨೬) ಮತ್ತು ಪಕ್ಷೇತರ ೬೨೧(೧.೭೬). ೨. ಕಮಲಾಪುರ:ಕಾಂಗ್ರೆಸ್ ೧೨,೬೮೨(೪೬.೩೫) ಆಯ್ಕೆ ಶ್ರೀಮತ ಲಲಿತಾಬಾಯಿ ಚಂದ್ರಶೇಖರ್, ಪಕ್ಷೇತರ ೮,೮೦೧(೩೨.೧೭) ಮತ್ತು ಸಂಯುಕ್ತ ಸೋಷಿಯಲಿಸ್ಟ್ ಪಕ್ಷ(ಸ.ಸೊಪ) ೫,೮೭೬(೨೧.೪೮). ೩. ಆಳಂದ: ಪ್ರಜಾ ಸೋಷಿಯಲಿಸ್ಟ್ ಪಕ್ಷ(ಪ್ರ.ಸೊ.ಪ) ೧೫,೯೧೬(೫೦.೬೦) ಆಯ್ಕೆ ದಿಗಂಬರರಾವ್ ಬಲವಂತರಾವ್, ಕಾಂಗ್ರೆಸ್ ೧೫,೫೩೬(೪೯.೪೦). ೪. ಗುಲಬರ್ಗಾ: ಕಾಂಗ್ರೆಸ್ ೧೭,೬೯೪(೫೩.೯೬) ಆಯ್ಕೆ ಮಹಮ್ಮದ್ ಅಲಿ ಮೆಹ್ತಾಬ್ ಅಲಿ,

ಸಿಪಿಎಂ(ಕಮ್ಯೂನಿಸ್ಟ್ ಪಕ್ಷ) ೧೩,೦೭೫(೩೯.೮೭) ಮತ್ತು ಭಾರತೀಯ ಜನಸಂಘ ೨,೦೨೪(೬.೧೭). ೫. ಅಫಜಲ್‌ಪುರ: ಕಾಂಗ್ರೆಸ್ ೧೯,೭೬೧(೭೨.೧೭) ಆಯ್ಕೆ ಎನ್.ಎಸ್. ಪಾಟೀಲ, ಪಕ್ಷೇತರ ೭,೬೨೦(೨೭.೮೩). ೬. ಕಾಳಗಿ: ಕಾಂಗ್ರೆಸ್ ೧೬,೫೩೩(೭೬.೪೬) ಆಯ್ಕೆ ಕೆ.ಆರ್. ಮಲ್ಲಪ್ಪ, ಸ್ವತಂತ್ರ ಪಕ್ಷ ೪,೨೨೩(೧೯.೫೩), ಎಸ್.ಎಸ್.ಪಿ. ೮೬೬(೪.೦೧). ೭. ಚಿತ್ತಾಪುರ: ಕಾಂಗ್ರೆಸ್ ೧೭,೦೮೮(೫೯.೭೬) ಆಯ್ಕೆ ಆರ್. ನಾಗಪ್ಪ, ಸ್ವತಂತ್ರ ಪಕ್ಷ ೮,೮೬೭(೩೧.೦೧), ಸಿ.ಪಿ.ಐ. ೨,೪೩೩(೮.೫೧) ಹಾಗೂ ಪಕ್ಷೇತರ ೨೦೪(೦.೭೨). ೮. ಸೇಡಂ: (ಮೀಸಲು) ಸ್ವತಂತ್ರ ಪಕ್ಷ ೧೩,೧೭೩(೫೦.೩) ಆಯ್ಕೆ ಜೆ.ಎಸ್. ಪಾಪಯ್ಯ, ಕಾಂಗ್ರೆಸ್ ೧೧,೯೪೩(೪೫.೬೬) ಮತ್ತು ಆರ್‌ಪಿಐ ೧,೦೪೫(೩.೯೯). ೯. ಜೇವರ್ಗಿ: ಸ್ವತಂತ್ರ ಪಕ್ಷ ೧೬,೩೪೦(೫೪.೭೩) ಆಯ್ಕೆ ಎಸ್. ಸಿದ್ರಾಮಗೌಡ, ಕಾಂಗ್ರೆಸ್ ೧೦,೮೮೧(೩೬.೪೫) ಹಾಗೂ ಸಿಪಿಐ ೨,೬೩೩(೮.೮೨). ೧೦. ಗುರುಮಟಕಲ್(ಮೀಸಲು): ಕಾಂಗ್ರೆಸ್ ೧೪,೧೨೭(೫೧.೭೦) ಆಯ್ಕೆ ಎನ್. ಯಂಕಪ್ಪ, ಸ್ವತಂತ್ರ ಪಕ್ಷ ೧೩,೨೦೦(೪೮.೩೦). ೧೧. ಯಾದಗಿರ: ಪಕ್ಷೇತರ ೨೩,೩೧೮(೫೫.೦೪) ಆಯ್ಕೆ ವಿಶ್ವನಾಥರೆಡ್ಡಿ ರಾಚನಗೌಡ, ಕಾಂಗ್ರೆಸ್ ೧೯,೦೫೦(೪೪.೯೬). ೧೨. ಶಹಾಪುರ: ಸ್ವತಂತ್ರ ಪಕ್ಷ, ೧೭,೮೬೪(೫೦.೭೧) ಆಯ್ಕೆ ರಾಜಾ ವೆಂಕಟಪ್ಪನಾಯ್ಕ ರಾಜಾ ಕೃಷ್ಣಪ್ಪ ನಾಯ್ಕ, ಕಾಂಗ್ರೆಸ್ ೧೭,೩೬೪(೪೯.೨೯). ೧೩. ಶೋರಾಪುರ: ಕಾಂಗ್ರೆಸ್ ೨೦,೧೧೭(೮೧.೭೦) ಆಯ್ಕೆ ರಾಜಾಪಿಡ್ ನಾಯ್ಕ ರಾಜಾ ಕೃಷ್ಣಪ್ಪನಾಯ್ಕ, ಮತ್ತೊಬ್ಬ ಪಕ್ಷೇತರ ಅಭ್ಯರ್ಥಿಗಳಿಸಿದ ಮತಗಳು ೪,೫೦೫(೧೮.೩೦).

**ಉಪ ಚುನಾವಣೆ**

ಶಹಾಪುರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ರಾಜಾ ವೆಂಕಟಪ್ಪ ನಾಯ್ಕ ಅವರ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಪುನಃ ೧೯೬೭ನೇ ಮೇ ಒಂದರಂದು ಉಪ ಚುನಾವಣೆ ನಡೆಯಿತು. ಇವರಲ್ಲಿ ಕಾಂಗ್ರೆಸ್ಸಿನ ಬಾಪುಗೌಡ ರಾಯಪ್ಪಗೌಡರು ಆಯ್ಕೆಯಾದರು. ಇವರು ೨೩,೧೮೪(೬೬.೬೦) ಮತಗಳನ್ನು ಪಡೆದರೆ ಇವರ ಪ್ರತಿಸ್ಪರ್ಧಿ ಸ್ವತಂತ್ರ ಪಕ್ಷದ ಉಮೇದುವಾರ ೧೫,೦೭೩(೩೯.೪೦) ಮತಗಳನ್ನು ಗಳಿಸಿದರು.

**ಲೋಕಸಭಾ ಚುನಾವಣೆ** - ೧೯೭೧

ಲೋಕಸಭೆಯ ಅವಧಿ ೧೯೭೨ರಲ್ಲಿ ಮುಕ್ತಾಯವಾಗುವ ಮುನ್ನವೇ ವಿಸರ್ಜಿಸಿ ಹೊಸ ಚುನಾವಣೆಗಳನ್ನು ೧೯೭೧ರ, ಮಾರ್ಚ್ ತಿಂಗಳಲ್ಲಿ ನಡೆಸಲಾಯಿತು. ರಾಷ್ಟ್ರೀಯ ಕಾಂಗ್ರೆಸ್ಸಿನ ಎರಡು ಬಣಗಳಲ್ಲಿ ಒಂದಕ್ಕೆ ಜಗಜೀವನರಾಮರವರು ಅಧ್ಯಕ್ಷರಾದರೆ (ಎನ್‌ಸಿಜೆ) ಮತ್ತೊಂದು ಬಣಕ್ಕೆ ನಿಜಲಿಂಗಪ್ಪನವರು ಅಧ್ಯಕ್ಷರಾದರು (ಎನ್‌ಸಿಎನ್). ಈ ಎರಡು ಗುಂಪುಗಳು ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದವು. ಚುನಾವಣೆಯಲ್ಲಿ ಜಗಜೀವನರಾಮರ ನೇತೃತ್ವದ ಕಾಂಗ್ರೆಸ್ ಬಣವು ಲೋಕಸಭಾ ಕ್ಷೇತ್ರವನ್ನು ಗೆದ್ದುಕೊಂಡಿತು. ವಿವಿಧ ಅಭ್ಯರ್ಥಿಗಳು ಪಡೆದ ಮತಗಳ ವಿವರ :- ರಾಷ್ಟ್ರೀಯ ಕಾಂಗ್ರೆಸ್ (ಎನ್‌ಸಿಜೆ) ೧,೭೧,೨೬೪(೬೮.೧೦) ಆಯ್ಕೆ ಧರ್ಮರಾವ್ ಶರಣಪ್ಪ ಅಫ್‌ಜಲ್‌ಪುರಕರ್, ಎನ್‌ಸಿಎನ್ ೭೫,೬೯೦(೩೦.೦೦) ಮತ್ತು ಪಕ್ಷೇತರ ಅಭ್ಯರ್ಥಿ ೪,೬೯೧(೧.೯೦).

**ಉಪಚುನಾವಣೆ**

ಕಾಂಗ್ರೆಸ್ ಸದಸ್ಯರು ನಿಧನ ಹೊಂದಿದ ಕಾರಣ ದಿ. ೨೧-೪-೧೯೭೪ರಂದು ಗುಲಬರ್ಗಾ ಲೋಕಸಭಾ ಕ್ಷೇತ್ರಕ್ಕೆ ಪುನಃ ಚುನಾವಣೆ ನಡೆಯಿತು. ಜಗಜೀವನರಾಮ ಪಕ್ಷದ ಸಿದ್ರಾಮರೆಡ್ಡಿಯವರು ಈ ಕ್ಷೇತ್ರದಿಂದ ಆಯ್ಕೆಗೊಂಡರು. ಇವರು ಗಳಿಸಿದ ಮತಗಳು ೧,೭೯,೩೭೭(೫೭.೩೦), ಎನ್‌ಸಿಓ ೯೧,೫೮೪(೨೯.೨೫), ಪಕ್ಷೇತರ ೧೫,೫೫೨(೪.೯೭), ಪಕ್ಷೇತರ ೧೨,೩೩೯(೩.೯೪), ಬಿಜೆಎಸ್ ೮,೦೯೮(೨.೫೯) ಹಾಗೂ ಮತ್ತೊಬ್ಬ ಪಕ್ಷೇತರ ಅಭ್ಯರ್ಥಿ ೬,೦೮೨(೧.೯೫).

**ವಿಧಾನಸಭಾ ಚುನಾವಣೆ** - ೧೯೭೨

ಜಿಲ್ಲೆಯ ಹದಿಮೂರು ವಿಧಾನಸಭಾ ಕ್ಷೇತ್ರಗಳ ಪೈಕಿ ಸೇಡಂ ಹಾಗೂ ಗುರುಮಟ್ಕಲ್‌ಗಳು ೧೯೭೨ರ ಚುನಾವಣೆಗೂ ಸಹ ಮೀಸಲು ಕ್ಷೇತ್ರಗಳಾಗಿ ಮುಂದುವರೆದವು. ಕಾಂಗ್ರೆಸ್ಸಿನಲ್ಲಿ ಒಡಕು ಉಂಟಾಗಿ ಎರಡು ಗುಂಪುಗಳಾದವು. ಒಂದು ಬಣ ಸಂಸ್ಥಾ ಕಾಂಗ್ರೆಸ್ (ಎನ್‌ಸಿಓ) ಎಂದು ಮತ್ತೊಂದು ಬಣ ಕಾಂಗ್ರೆಸ್ ಐ ಎಂಬುದಾಗಿ ಚುನಾವಣಾ ಆಯೋಗದಿಂದ ಮನ್ನಣೆ ಪಡೆದ ಪಕ್ಷಗಳಾದವು. ಈ ಎರಡು ಪಕ್ಷಗಳು ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಸಹ

ಕಾಂಗ್ರೆಸ್ ಐ ಪಕ್ಷವು ಚುನಾವಣೆಯಲ್ಲಿ ಮೇಲುಗೈ ಪಡೆದು ೧೦ ಕ್ಷೇತ್ರಗಳಲ್ಲಿ ವಿಜಯವನ್ನು ಸಾಧಿಸಿತು. ಸಂಸ್ಥಾ ಕಾಂಗ್ರೆಸ್ ಒಂದು ಸ್ಥಾನವವನ್ನು ಪಡೆದರೆ, ಪಕ್ಷೇತರರು ಎರಡು ಕ್ಷೇತ್ರಗಳಲ್ಲಿ ಜಯ ಗಳಿಸಿದರು. ಚುನಾವಣೆಯ ಅಂಕಿ ಅಂಶಗಳು ಈ ಕೆಳಕಂಡಂತಿವೆ.

೧. ಚಿಂಚೋಳಿ: ಕಾಂಗ್ರೆಸ್ ಐ ೨೪,೩೬೪(೫೯.೫೨) ಆಯ್ಕೆ ದೇವೇಂದ್ರಪ್ಪ ಘಾಳಪ್ಪ, ಸಂಸ್ಥಾ ಕಾಂಗ್ರೆಸ್ (ಎನ್‌ಸಿಓ) ೧೫,೩೨೨(೩೭.೪೩) ಹಾಗೂ ಒಬ್ಬ ಪಕ್ಷೇತರ ೧,೨೪೭(೩.೦೫). ೨. ಕಮಲಾಪುರ: ಕಾಂಗ್ರೆಸ್ ಐ ೨೨,೧೯೬(೭೦.೩೧), ಆಯ್ಕೆ ಸುಭಾಷ್ ಶಂಕರಶೆಟ್ಟಿ ಪಾಟೀಲ್, ಸೋಷಿಯಲಿಸ್ಟ್ ಪಾರ್ಟಿ (ಎಸ್‌ಓಪಿ) ೯,೩೭೫ (೨೯.೬೯). ೩. ಆಳಂದ: ಕಾಂಗ್ರೆಸ್ ೩೨,೧೮೧(೭೩.೭೮) ಆಯ್ಕೆ ಅಣ್ಣಾರಾವ್ ವೀರಭದ್ರಪ್ಪ, ಎನ್‌ಸಿಓ ೧೦,೭೨೧(೨೪.೫೮) ಮತ್ತು ಬಿಜೆಎಸ್ (ಭಾರತೀಯ ಜನಸಂಘ) ೭೧೭(೧.೬೪). ೪. ಗುಲಬರ್ಗಾ: ಕಾಂಗ್ರೆಸ್ ಐ ೨೨,೬೫೭(೪೭.೯೭) ಆಯ್ಕೆ ಮಹಮ್ಮದ್ ಆಲಿ ಮೆಹ್ತಾಬ್ ಅಲಿ, ಬಿಜೆಎಸ್ ೧೧,೬೬೩(೨೪.೭೦), ಸಿಪಿಎಂ ೮,೯೨(೧೮.೮೩) ಹಾಗೂ ನಾಲ್ಕು ಮಂದಿ ಪಕ್ಷೇತರರು ೪,೦೧೬(೮.೫೦). ೫. ಅಫಜಲ್‌ಪುರ: ಕಾಂಗ್ರೆಸ್ ಐ ೧೯,೭೨೯(೫೩.೨೩) ಆಯ್ಕೆ ದಿಗಂಬರರಾವ್ ಬಲವಂತರಾವ್, ಎನ್‌ಸಿಓ ೧೭,೩೩೩(೪೬.೭೭). ೬. ಕಾಳಗಿ : ಕಾಂಗ್ರೆಸ್ ಐ ೧೪,೭೦೭(೫೦.೨೮) ಆಯ್ಕೆ ಪ್ರಭಾಕರ ತೇಲ್ಕರ್, ಎನ್‌ಸಿಓ ೧೨,೪೮೫(೪೨.೬೮), ಮತ್ತು ಸ್ವತಂತ್ರ ಪಕ್ಷ ೨,೦೬೧(೭.೦೪). ಚಿತ್ತಾಪುರ: ಕಾಂಗ್ರೆಸ್ ಐ ೧೮,೩೯೨(೫೨.೫೧) ಆಯ್ಕೆ ಶ್ರೀಮತಿ ವಿಜಯಾ ದೇಸಾಯಿ, ಎನ್‌ಸಿಓ ೧೪,೧೧೯(೪೦.೩೧) ಹಾಗೂ ಬಿಜೆಎಸ್ ೨,೫೧೩(೭.೧೮). ೮. ಸೇಡಂ: ಕಾಂಗ್ರೆಸ್ ೧೫,೬೮೨(೪೯.೮೦) ಆಯ್ಕೆ ಜಮದಂಡ ಪಾಪಯ್ಯ ಸರ್ವೇಶ್, ಎನ್‌ಸಿಓ ೧೪,೭೧೩(೪೬.೭೨) ಹಾಗೂ ಬಿಜೆಎಸ್ ಅಭ್ಯರ್ಥಿ ೧,೦೯೫(೩.೪೮). ೯. ಜೇವರ್ಗಿ: ಕಾಂಗ್ರೆಸ್ ೨೦,೫೦೦(೫೭.೯೯) ಆಯ್ಕೆ ಧರ್ಮಸಿಂಗ್ ನಾರಾಯಣಸಿಂಗ್, ಎನ್‌ಸಿಓ ೧೩,೮೯೬(೩೯.೩೧) ಮತ್ತು ಬಿಜೆಎಸ್ ಅಭ್ಯರ್ಥಿ ಪಡೆದ ಮತಗಳು ೯೫೩(೨.೭೦). ೧೦. ಗುರುಮಟಕಲ್ (ಮೀಸಲು): ಕಾಂಗ್ರೆಸ್ ೧೬,೭೯೬(೬೨.೬೮) ಆಯ್ಕೆ ಮಲ್ಲಿಕಾರ್ಜುನ ಖರ್ಗೆ, ಪಕ್ಷೇತರ ೭,೩೫೬(೨೯.೪೫) ಅಲ್ಲದೆ ಇಬ್ಬರು ಪಕ್ಷೇತರರಿಗೆ ಲಭಿಸಿದ ಮತಗಳು ೨,೬೪೫(೯.೮೭). ೧೧. ಯಾದಗೀರ: ಪಕ್ಷೇತರ ಅಭ್ಯರ್ಥಿ ೨೧,೦೬೮(೪೯.೪೪) ಆಯ್ಕೆ ವಿಶ್ವನಾಥ ರೆಡ್ಡಿ, ಕಾಂಗ್ರೆಸ್ ಐ ೨೦,೪೨೩(೪೭.೯೩) ಹಾಗೂ ಬಿಜೆಎಸ್ ೧,೧೧೯(೨.೬೩). ೧೨. ಶಹಾಪುರ: ಎನ್‌ಸಿಓ (ಸಂಸ್ಥಾ ಕಾಂಗ್ರೆಸ್) ೧೯,೫೭೫(೫೩.೭೯) ಆಯ್ಕೆ ಬಾಪುಗೌಡ ರಾಯಪ್ಪ, ಕಾಂಗ್ರೆಸ್ ಐ ೧೬,೮೧೧(೪೬.೨೧). ೧೩. ಶೋರಾಪುರ: ಪಕ್ಷೇತರ ಅಭ್ಯರ್ಥಿ ೧೬,೫೪೧(೫೪.೧೮) ಆಯ್ಕೆ ರಾಜಾಪಿಡ್ಡನಾಯ್ಕ ರಾಜಾ ಕೃಷ್ಣಪ್ಪ ನಾಯ್ಕ, ಕಾಂಗ್ರೆಸ್ ೮,೬೪೮(೨೮.೩೩) ಇವರಲ್ಲದೆ ಸ್ವತಂತ್ರ ಅಭ್ಯರ್ಥಿ ಗಳಿಸಿದ ಮತಗಳು ೫,೩೪೧(೧೭.೪೯).

**ಲೋಕಸಭಾ ಚುನಾವಣೆ** - ೧೯೭೭

ಚುನಾವಣಾ ಆಯೋಗವು ೧೯೭೬ರಲ್ಲಿ ಪುನರ್ ವಿಂಗಡಣೆ ಆಜ್ಞೆಯನ್ನು ಹೊರಡಿಸಿ (ಡಿಲಿಮಿಟೇಶನ್ ಆಜ್ಞೆಯ ಅನ್ವಯ) ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳನ್ನು ಪುನರ್ ವಿಂಗಡಿಸಿತು. ಇದರ ಅನುಸಾರವಾಗಿ ಗುಲಬರ್ಗಾ ಲೋಕಸಭಾ ಕ್ಷೇತ್ರ ಎಂಟು ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡಿತು. ಅವೆಂದರೆ ಚಿಂಚೋಳಿ, ಗುಲಬರ್ಗಾ, ಶಹಬಾದ್, ಅಫಜಲ್‌ಪುರ, ಚಿತ್ತಾಪುರ, ಸೇಡಂ, ಜೇವರ್ಗಿ ಮತ್ತು ಗುರುಮಟ್ಕಲ್‌ಗಳು, ಜಿಲ್ಲೆಯ ಯಾದಗೀರ, ಶಹಾಪುರ ಮತ್ತು ಶೋರಾಪುರ ಮತ ಕ್ಷೇತ್ರಗಳನ್ನು ರಾಯಚೂರು ಜಿಲ್ಲೆಗೆ ಸೇರಿಸಲಾಯಿತು. ಉಳಿದ ಎರಡು ವಿಧಾನಸಭಾ ಕ್ಷೇತ್ರಗಳಾದ ಕಮಲಾಪುರ (ಮೀಸಲು) ಮತ್ತು ಆಳಂದಗಳು ಬೀದರ್ ಲೋಕಸಭಾ ಕ್ಷೇತ್ರದ ಭಾಗವಾದವು. ೧೯೭೬ರಲ್ಲಿ ಮುಕ್ತಾಯವಾಗಬೇಕಾಗಿದ್ದ ಐದನೇಯ ಲೋಕಸಭೆ ಅವಧಿಯನ್ನು ಮತ್ತೊಂದು ವರ್ಷ ವಿಸ್ತರಿಸಿ, ೧೯೭೭ರಲ್ಲಿ ಚುನಾವಣೆಗಳನ್ನು ನಡೆಸಲಾಯಿತು. ಈ ಅವಧಿಯಲ್ಲಿ ದೇಶದಲ್ಲಿ ರಾಜಕೀಯ ಧ್ರುವೀಕರಣ ಪ್ರಾರಂಭವಾಯಿತು. ರಾಷ್ಟ್ರೀಯ ಪಕ್ಷಗಳಾದ ಭಾರತೀಯ ಜನಸಂಘ, ಸ್ವತಂತ್ರ ಪಕ್ಷ, ಸೋಷಿಯಲಿಸ್ಟ್ ಇತ್ಯಾದಿಗಳು ಒಂದುಗೂಡಿ ಭಾರತೀಯ ಲೋಕದಳ ಎಂಬ ಪಕ್ಷ ರಚಿಸಿಕೊಂಡವು. (ನಂತರ ಜನತಾ ಪಕ್ಷವಾಯಿತು). ಗುಲಬರ್ಗಾ ಲೋಕಸಭಾ ಸ್ಥಾನಕ್ಕೆ ಮೂರು ಮಂದಿ ಸ್ಪರ್ಧಿಗಳಿದ್ದರು. ಮುಖ್ಯ ಸ್ಪರ್ಧೆ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಭಾರತೀಯ ಲೋಕದಳಗಳ ನಡುವೆ ಇದ್ದಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಸ್ಥಾನವನ್ನು ಉಳಿಸಿಕೊಂಡಿತು. ಇದರ ವಿವರಗಳು ಹೀಗಿವೆ. ೧. ರಾಷ್ಟ್ರೀಯ ಕಾಂಗ್ರೆಸ್ ೧,೮೮,೩೮೧(೬೦.೬೭) ಆಯ್ಕೆ ಸಿದ್ರಾಮರೆಡ್ಡಿ, ಬಿಎಲ್‌ಡಿ ೧.೦೨,೯೮೮(೩೩.೧೭) ಮತ್ತು ಸಿಪಿಐ ೧೯.೧೫೨(೬.೧೬).

## ವಿಧಾನಸಭೆ ಚುನಾವಣೆ - ೧೯೭೮

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಪುನಃ ಒಡಕುಂಟಾಗಿ ಅದು ಹೋಳಾಯಿತು. ಅದರ ಒಂದು ಬಣದ ನೇತೃತ್ವವನ್ನು ಬ್ರಹ್ಮಾನಂದ ರೆಡ್ಡಿಯವರು ವಹಿಸಿದರು. (ಭಾರತೀಯ ರಾಷ್ಟ್ರೀಯ ಕಾಂಗ್ರೆಸ್) ಮತ್ತೊಂದು ಬಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐ) ಎಂಬುದಾಗಿ ಕರೆಯಲ್ಪಟ್ಟು ಇಂದಿರಾಗಾಂಧಿಯವರು ಅದರ ನಾಯಕಿಯಾದರು. ಜಿಲ್ಲೆಯಲ್ಲಿ ಚುನಾವಣಾ ಕಣದಲ್ಲಿದ್ದ ಪಕ್ಷಗಳೆಂದರೆ ಕಾಂಗ್ರೆಸ್(ಐ), ಜನತಾಪಕ್ಷ, ರಾಷ್ಟ್ರೀಯ ಕಾಂಗ್ರೆಸ್, ಸಿಪಿಐ, ರಿಪಬ್ಲಿಕನ್(ಖೋಬ್ರಗಡೆ) ಇತ್ಯಾದಿಗಳು. ದಿ. ೨೫-೨-೧೯೭೮ ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಐ ಪಕ್ಷವು ಎಂಟು ಸ್ಥಾನಗಳನ್ನು ಪಡೆಯಿತು. ಜನತಾ ಪಕ್ಷವು ಮೂರು ಸ್ಥಾನಗಳನ್ನು, ಸಿಪಿಐ ಒಂದು ಸ್ಥಾನವನ್ನು ಹಾಗೂ ಪಕ್ಷೇತರರು ಒಂದು ಸ್ಥಾನವನ್ನು ಪಡೆದರು. ಈ ಚುನಾವಣೆಯ ವಿವರಗಳು ಇಂತಿವೆ. ೧. ಚಿಂಚೋಳಿ: ಕಾಂಗ್ರೆಸ್ ಐ ೨೫,೯೬೩(೫೧.೫೯) ಆಯ್ಕೆ ದೇವೇಂದ್ರಪ್ಪ ಘಾಳಪ್ಪ ಜಮಾದಾರ್, ಜನತಾ ಪಕ್ಷ ೧೯,೫೦೮(೩೮.೭೭), ರಾಷ್ಟ್ರೀಯ ಕಾಂಗ್ರೆಸ್ 'ಬಿ' (ಬ್ರಹ್ಮಾನಂದ ರೆಡ್ಡಿ) ೪,೧೨೩(೮.೧೯) ಮತ್ತು ಪಕ್ಷೇತರ ೭೨೭(೧.೪೫). ೨. ಕಮಲಾಪುರ(ಮೀಸಲು): ಜನತಾಪಕ್ಷ ೨೩,೧೧೦(೫೧.೫೯) ಆಯ್ಕೆ ಗೋವಿಂದ ಪಿ. ಒಡೆಯರಾಜ, ಕಾಂಗ್ರೆಸ್ ಐ ೧೭,೩೦೧(೩೮.೬೨), ರಿಪಬ್ಲಿಕನ್ ಪಕ್ಷ (ಖೋಬ್ರಗಡೆ) ೧,೮೪೦(೪.೧೧), ಕಾಂಗ್ರೆಸ್ ಬಿ ೧,೪೮೯(೩.೧೭) ಮತ್ತು ಇಬ್ಬರು ಪಕ್ಷೇತರರು ೧,೧೨೫(೨.೫೧). ೩. ಆಳಂದ: ಜನತಾ ಪಕ್ಷ ೨೬,೨೩೨(೫೬.೫೩) ಆಯ್ಕೆ ಅಣ್ಣಾರಾವ್ ಭೀಮರಾವ್ ಪಾಟೀಲ್, ಕಾಂಗ್ರೆಸ್ ಐ ೧೬,೯೫೬(೩೬.೫೪) ಮತ್ತು ಕಾಂಗ್ರೆಸ್ ಬಿ ೩,೨೧೯(೬.೯೩). ೪. ಗುಲಬರ್ಗಾ: ಪಕ್ಷೇತರ ೧೮,೦೦೫(೩೨.೮೦) ಆಯ್ಕೆ ಕಮರೂಲ್ ಇಸ್ಲಾಂ, ಜನತಾ ಪಕ್ಷ ೧೭,೨೪೨(೩೧.೪೧), ಕಾಂಗ್ರೆಸ್ ಐ ೧೨,೪೭೬(೨೨.೭೩), ಸಿಪಿಐ ೩,೫೨೭(೬.೪೨), ಕಾಂಗ್ರೆಸ್ ಬಿ ೨,೦೦೨(೩.೬೫), ರಿಪಬ್ಲಿಕನ್ ಪಕ್ಷ ಮತ್ತು ಪಕ್ಷೇತರರು ೧,೬೪೭(೨.೯೯). ೫. ಶಹಾಬಾದ್ (ಮೀಸಲು): ಭಾರತೀಯ ಕಮ್ಯೂನಿಸ್ಟ್ ಪಕ್ಷ(ಸಿಪಿಐ) ೨೨,೬೮೫(೫೧.೫೦) ಆಯ್ಕೆ ಶರಣಪ್ಪ ಫಕೀರಪ್ಪ ಬೈರಿ, ಜನತಾಪಕ್ಷ ೧೪,೦೪೭(೩೧.೮೯) ರಿಪಬ್ಲಿಕನ್ ಪಕ್ಷ(ಖೊ) ೪,೧೧೪(೯.೩೪), ಕಾಂಗ್ರೆಸ್ ಬಿ ೩,೧೯೯(೭.೨೭). ೬. ಅಫಜಲ್‌ಪುರ : ಜನತಾಪಕ್ಷ ೨೩,೮೨೩(೪೭.೫೨) ಆಯ್ಕೆ ಎಂ.ವೈ. ಪಾಟೀಲ್, ಕಾಂಗ್ರೆಸ್ ಐ ೨೩,೪೩೬(೪೬.೭೫), ಕಾಂಗ್ರೆಸ್ ಬಿ ೨,೮೭೩(೫.೭೩). ೭. ಚಿತ್ತಾಪುರ: ಕಾಂಗ್ರೆಸ್ ಐ ೨೦,೮೧೪(೫೬.೦೮) ಆಯ್ಕೆ ಪ್ರಭಾಕರ ಆರ್.ತೇಲ್ಕರ್, ಜನತಾಪಕ್ಷ ೧೦,೦೫೫(೨೬.೯೮), ಕಾಗ್ರೆಸ್ ಬಿ ೫,೧೦೮(೧೩.೭೬) ಮತ್ತು ಪಕ್ಷೇತರ ೧,೧೮೦(೩.೧೮). ೮. ಸೇಡಂ : ಕಾಂಗ್ರೆಸ್ ಐ ೨೨,೩೯೭(೪೫.೩೧) ಆಯ್ಕೆ ಷೇರಖಾನ್, ಜನತಾಪಕ್ಷ ೧೮,೭೬೧(೩೭.೯೬) ಮತ್ತು ಕಾಂಗ್ರೆಸ್ ಬಿ ೮,೨೭೦(೧೬.೭೩). ೯. ಜೇವರ್ಗಿ: ಕಾಂಗ್ರೆಸ್ ಐ ೨೬,೫೮೪(೫೪.೧೩) ಆಯ್ಕೆ ಧರ್ಮಸಿಂಗ್ ನಾರಾಯಣಸಿಂಗ್, ಜನತಾಪಕ್ಷ ೧೪,೯೮೯(೩೦.೫೨), ಕಾಂಗ್ರೆಸ್ ಬಿ ೬,೨೬೬(೧೨.೭೬) ಮತ್ತು ಪಕ್ಷೇತರ ೧,೨೭೩(೨.೫೯). ೧೦. ಯಾದಗೀರ: ಕಾಂಗ್ರೆಸ್ ಐ ೨೮,೩೧೯(೫೫.೫೩) ಆಯ್ಕೆ ಶರಣಪ್ಪ ನಾಗಪ್ಪ ಕಲಬುರ್ಗಿ, ಜನತಾ ಪಕ್ಷ ೨೦,೭೫೯(೪೦.೭೨) ಮತ್ತು ಇತರರು ೧,೯೨೦(೩.೭೫). ೧೧. ಶಹಾಪುರ: ಕಾಂಗ್ರೆಸ್ ಐ ೨೯,೧೩೨(೫೯.೯೪) ಆಯ್ಕೆ ಶಿವಣ್ಣ ಸವೂರ್, ಜನತಾಪಕ್ಷ ೧೬,೧೯೮(೩೩.೧೩), ಕಾಂಗ್ರೆಸ್ ಬಿ ೨,೦೦೯(೪.೧೩) ಹಾಗೂ ಪಕ್ಷೇತರ ೧,೩೬೨(೨.೮೦). ೧೨. ಶೋರಾಪುರ: ಕಾಂಗ್ರೆಸ್ ಐ ೨೩,೨೦೧(೫೧.೯೬) ಆಯ್ಕೆ ರಾಜಾ ಕುಮಾರ ನಾಯ್ಕ, ಜನತಾಪಾರ್ಟಿ ೧೬,೪೬೧(೩೬.೮೬) ಮತ್ತು ಕಾಂಗ್ರೆಸ್ ಬಿ ೪,೯೯೨(೧೧.೧೮). ೧೩. ಗುರುಮಟ್ಕಲ್ (ಮೀಸಲು) : ಕಾಂಗ್ರೆಸ್ ಐ ೩೦,೩೮೦(೬೪.೯೯) ಆಯ್ಕೆ ಮಲ್ಲಿಕಾರ್ಜುನ ಖರ್ಗೆ, ಜನತಾಪಕ್ಷ ೧೩,೭೮೧(೨೯.೪೮), ಕಾಂಗ್ರೆಸ್ ಬಿ ೧,೫೨೨(೩.೨೬) ಮತ್ತು ಇಬ್ಬರು ಪಕ್ಷೇತರರು ೧,೦೬೧(೨.೨೭).

## ಲೋಕಸಭಾ ಚುನಾವಣೆ - ೧೯೮೦

ಆರನೇಯ ಲೋಕಸಭೆಯ ಅವಧಿ ಮುಕ್ತಾಯವಾಗುವುದಕ್ಕೆ ಇನ್ನೂ ಎರಡು ವರ್ಷಗಳಿರುವಾಗಲೇ ಲೋಕಸಭೆಯನ್ನು ವಿಸರ್ಜಿಸಲಾಯಿತು. ಕಾಂಗ್ರೆಸ್ ಐ ಪಕ್ಷದಲ್ಲಿದ್ದ ದೇವರಾಜ ಅರಸುರವರು ಆ ಪಕ್ಷವನ್ನು ತೊರೆದು ಬ್ರಹ್ಮಾನಂದ ರೆಡ್ಡಿಯವರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸೇರಿದರು. ಅನಂತರ ಅದರ ಅಧ್ಯಕ್ಷರಾದರು. ಲೋಕಸಭೆಯ ಚುನಾವಣೆಯನ್ನು ೧೯೮೦ರ ಜನವರಿ ಮೂರರಂದು ನಡೆಸಲಾಯಿತು. ದೇವರಾಜ ಅರಸುರವರ ನೇತೃತ್ವದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಸಹ ಈ ಚುನಾವಣೆಯಲ್ಲಿ ಭಾಗವಹಿಸಿತು. ಎಂಟು ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡಿದ್ದ ಗುಲಬರ್ಗಾ ಕ್ಷೇತ್ರದಲ್ಲಿ ಆರು ಮಂದಿ ಅಭ್ಯರ್ಥಿಗಳಿದ್ದರು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಈ ಸ್ಥಾನವನ್ನು ಉಳಿಸಿಕೊಂಡಿತು.

ವಿವಿಧ ಪಕ್ಷಗಳು ಗಳಿಸಿದ ಮತಗಳ ವಿವರಗಳು ಈ ರೀತಿ ಇದೆ. ಕಾಂಗ್ರೆಸ್(ಐ) ೧,೭೪,೩೯೮(೫೬.೧೯) ಆಯ್ಕೆ ಧರ್ಮಸಿಂಗ್, ಜನತಾಪಕ್ಷ ೫೬,೪೨೨(೧೮.೧೮), ಕಾಂಗ್ರೆಸ್(ಅರಸು) ೪೮.೯೫೯(೧೫.೭೮), ಜನತಾಪಕ್ಷ(ಎಸ್) ೧೬,೪೪೨(೫.೩೦) ಹಾಗೂ ಪಕ್ಷೇತರರು ಇಬ್ಬರು ೧೪,೧೨೨(೪.೫೫).

**ವಿಧಾನಸಭೆ ಚುನಾವಣೆ** - ೧೯೮೩

ವಿಧಾನಸಭೆಯ ಅವಧಿ ಮುಕ್ತಾಯವಾದ ನಂತರ ಹೊಸ ಸದಸ್ಯರ ಆಯ್ಕೆಗೆ ಚುನಾವಣೆಯನ್ನು ನಡೆಸಲಾಯಿತು. ಜಿಲ್ಲೆಯ ೧೩ ಕ್ಷೇತ್ರಗಳ ಪೈಕಿ ಕಮಲಾಪುರ, ಶಹಾಬಾದ್ ಮತ್ತು ಗುರುಮಟ್ಕಲ್‌ಗಳು ಹಿಂದಿನಂತೆ ಮೀಸಲು ಸ್ಥಾನಗಳಾಗಿ ಮುಂದುವರೆದವು. ೧೯೮೫ರ ಜನವರಿ ಐದರಂದು ನಡೆದ ಚುನಾವಣೆಯಲ್ಲಿ ಗುರುಮಟ್ಕಲ್ ಮತ್ತು ಶಹಾಪುರಗಳಲ್ಲಿ ನೇರ ಸ್ಪರ್ಧೆಯಿದ್ದು ಉಳಿದ ಕ್ಷೇತ್ರಗಳಲ್ಲಿ ಬಹುಮುಖ ಸ್ಪರ್ಧೆಯಿತ್ತು. ಈ ಚುನಾವಣೆಯಲ್ಲಿ ಜನತಾಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಸಮಬಲ ಹೋರಾಟ ನಡೆಸಿ ತಲಾ ಐದು ಸ್ಥಾನಗಳನ್ನು ಗೆದ್ದುಕೊಂಡವು. ಭಾರತೀಯ ಜನತಾಪಕ್ಷ ಹಾಗೂ ಭಾರತೀಯ ಕಮ್ಯೂನಿಸ್ಟ್ ಪಕ್ಷಗಳು ತಲಾ ಒಂದು ಸ್ಥಾನವನ್ನು ಪಡೆದವು. ಚುನಾವಣೆಯ ಫಲಿತಾಂಶಗಳ ವಿವರ. ೧. ಚಿಂಚೋಳಿ : ಕಾಂಗ್ರೆಸ್ ೧೯,೫೧೩(೩೮.೬೫) ಆಯ್ಕೆ ದೇವೇಂದ್ರಪ್ಪ ಘಾಳಪ್ಪ ಜಮಾದಾರ್, ಜನತಾಪಕ್ಷ ೧೯,೪೨೫(೩೮.೪೭), ಪಕ್ಷೇತರ ೫,೯೩೭(೧೧.೭೬), ಬಿಜೆಪಿ ೨,೧೧೯(೪.೧೮) ಹಾಗೂ ನಾಲ್ಕು ಮಂದಿ ಪಕ್ಷೇತರರು ೩,೫೦೮(೬.೯೪). ೨. ಕಮಲಾಪುರ: (ಮೀಸಲು) ಕಾಂಗ್ರೆಸ್ ೧೮,೮೩೦(೪೮.೭೪) ಆಯ್ಕೆ ಗೋವಿಂದ ಪಿ. ಒಡೆಯರಾಜ್, ಜನತಾಪಕ್ಷ ೧೩,೭೧೩(೩೫.೪೮), ಲೋಕದಳ ೩,೨೪೬(೮.೪೦) ಮತ್ತು ನಾಲ್ಕು ಮಂದಿ ಪಕ್ಷೇತರರು ಗಳಿಸಿದ ಮತಗಳು ೨,೮೫೦(೭.೩೮). ೩. ಆಳಂದ : ಜನತಾಪಕ್ಷ ೧೯,೫೦೭(೪೪.೯೩) ಆಯ್ಕೆ ಬಿ.ಆರ್. ಪಾಟೀಲ್, ಕಾಂಗ್ರೆಸ್ ೧೬,೧೬೩(೩೭.೨೩), ಲೋಕದಳ ೩,೧೪೩(೭.೨೪), ಬಿಜೆಪಿ ೨,೦೭೩(೪.೭೭), ಆರ್‌ಪಿಐ ೧,೫೧೯(೩.೫೦) ಹಾಗೂ ಇಬ್ಬರು ಪಕ್ಷೇತರರು ೧,೦೧೩(೨.೩೩). ೪. ಗುಲಬರ್ಗಾ : ಜನತಾಪಕ್ಷ ೨೫,೫೦೩(೩೬.೭೯) ಆಯ್ಕೆ ಎಸ್.ಕೆ. ಕಾಂತಾ, ಪಕ್ಷೇತರ ೨೩,೫೧೫(೩೩.೯೨), ಕಾಂಗ್ರೆಸ್ ೧೧,೨೭೮(೧೬.೨೭), ಬಿಜೆಪಿ ೪,೫೨೭(೬.೫೩), ಲೋಕದಳ ೨,೭೩೬(೩.೯೫) ಮತ್ತು ಏಳುಮಂದಿ ಪಕ್ಷೇತರರು ಪಡೆದ ಮತಗಳು ೧,೦೬೩(೧.೫೪). ೫. ಶಹಾಬಾದ್(ಮೀಸಲು) : ಭಾರತೀಯ ಕಮ್ಯೂನಿಸ್ಟ್ ಪಕ್ಷ ೧೬,೮೮೮(೪೪.೬೫) ಆಯ್ಕೆ ಕೆ.ಬಿ. ಶಾಣಪ್ಪ, ಕಾಂಗ್ರೆಸ್ ೧೬.೫೯೦(೪೩.೮೬), ಬಿಜೆಪಿ ೨,೦೪೮(೫.೪೧) ಹಾಗೂ ಮೂವರು ಪಕ್ಷೇತರರು ೨,೨೯೯(೬.೦೮). ೬. ಅಫಜಲ್‌ಪುರ : ಜನತಾಪಕ್ಷ ೨೪,೬೪೮(೪೯.೦೧) ಆಯ್ಕೆ ಹನುಮಂತರಾವ್ ದೇಸಾಯಿ, ಕಾಂಗ್ರೆಸ್ ೧೯,೩೯೦(೩೮.೫೫), ಲೋಕದಳ ೩,೨೩೭(೬.೪೪), ಪಕ್ಷೇತರರು ೩,೦೨೧(೬.೦೦). ೭. ಚಿತ್ತಾಪುರ : ಜನತಾಪಕ್ಷ ೨೨,೯೦೬(೫೬.೧೦) ಆಯ್ಕೆ ವಿಶ್ವನಾಥ ಪಾಟೀಲ್, ಕಾಂಗ್ರೆಸ್ ೧೨,೯೧೧(೩೨.೭೮), ಲೋಕದಳ ೨,೬೦೩(೬.೬೧) ಮತ್ತು ನಾಲ್ಕು ಮಂದಿ ಪಕ್ಷೇತರರು ೧,೭೭೬(೪.೫೦). ೮. ಸೇಡಂ : ಭಾರತೀಯ ಜನತಾಪಕ್ಷ ೨೦,೮೦೦(೪೬.೦೭) ಆಯ್ಕೆ ನಾಗರೆಡ್ಡಿ ಲಚ್ಚಮರೆಡ್ಡಿ ಪಾಟೀಲ್, ಕಾಂಗ್ರೆಸ್ ೧೮,೭೫೭(೪೧.೫೩), ಜನತಾಪಕ್ಷ ೨,೮೦೨(೬.೨೧) ಮತ್ತು ಪಕ್ಷೇತರ ೨,೭೯೪(೬.೧೯). ೯. ಜೇವರ್ಗಿ : ಕಾಂಗ್ರೆಸ್ ೨೬,೬೪೩(೫೪.೩೪) ಆಯ್ಕೆ ಧರ್ಮಸಿಂಗ್ ನಾರಾಯಣಸಿಂಗ್, ಜನತಾಪಕ್ಷ ೧೬.೭೮೧(೩೪.೨೩) ಪಕ್ಷೇತರರು ೩,೩೩೯(೬.೮೧) ಮತ್ತು ಬಿಜೆಪಿ ೨,೨೬೫(೪.೬೨). ೧೦. ಗುರುಮಟಕಲ್(ಮೀಸಲು) : ಕಾಂಗ್ರೆಸ್ ೩೦,೯೩೩(೬೭.೬೫) ಆಯ್ಕೆ ಮಲ್ಲಿಕಾರ್ಜುನ ಖರ್ಗೆ, ಜನತಾಪಕ್ಷ ೧೪,೭೯೦(೩೨.೩೫). ೧೧. ಯಾದಗಿರಿ : ಜನತಾದಳ ೨೫,೬೦೬ (೫೫.೩೮) ಆಯ್ಕೆ ವಿಶ್ವನಾಥರೆಡ್ಡಿ, ಕಾಂಗ್ರೆಸ್ ೧೫,೯೦೪ (೩೬.೫೫), ಬಿಜೆಪಿ (ಭಾರತೀಯ ಜನತಾ ಪಾರ್ಟಿ) ೨,೩೪೪ (೫.೦೭) ಮತ್ತು ಪಕ್ಷೇತರ ೧,೩೮೧ (೨.೯೯).

೧೨. ಶಹಾಪುರ : ಜನತಾಪಕ್ಷ ೩೧,೦೮೯(೫೬.೮೬) ಆಯ್ಕೆ ಬಾಪುಗೌಡ ದರ್ಶನಾಪುರ ಹಾಗೂ ಕಾಂಗ್ರೆಸ್ ೨೩,೫೮೩(೪೩.೧೪). ೧೩. ಶೋರಾಪುರ : ಕಾಂಗ್ರೆಸ್ ೨೬,೦೬೨(೫೩.೯೬) ಆಯ್ಕೆ ಮದನಗೋಪಾಲ ನಾಯಕ್, ಜನತಾಪಕ್ಷ ೧೧,೧೭೭(೨೩.೧೪) ಮತ್ತು ಪಕ್ಷೇತರ ೧೧,೦೬೨(೨೨.೯೦).

**ಲೋಕಸಭೆ ಚುನಾವಣೆ** - ೧೯೮೪

ಅವಧಿ ಪೂರ್ಣಗೊಳ್ಳುವ ಮುನ್ನವೇ ಆರನೇಯ ಲೋಕಸಭೆಯನ್ನು ವಿಸರ್ಜಿಸಿ ೧೯೮೪ರ ಡಿಸೆಂಬರ್ ಮಾಹೆಯಲ್ಲಿ ಹೊಸ ಚುನಾವಣೆಗಳನ್ನು ನಡೆಸಲಾಯಿತು. ಗುಲಬರ್ಗಾ ಲೋಕಸಭಾ ಕ್ಷೇತ್ರದಲ್ಲಿ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ

ಎರಡು ಮೀಸಲು ಕ್ಷೇತ್ರಗಳಾಗಿದ್ದು ಯಾವುದೇ ಬದಲಾವಣೆಗಳಿರಲಿಲ್ಲಾ. ಒಂಬತ್ತು ಮಂದಿ ಅಭ್ಯರ್ಥಿಗಳು ಚುನಾವಣೆಯಲ್ಲಿ ಭಾಗವಹಿಸಿದ್ದರೂ ನಿಜವಾದ ಸ್ಪರ್ಧೆ ರಾಷ್ಟ್ರೀಯ ಕ್ಞಾಂಗ್ರೆಸ್ ಮತ್ತು ಜನತಾ ಪಕ್ಷಗಳ ನಡುವೆ ಇದ್ದಿತು. ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಈ ಚುನಾವಣೆಯಲ್ಲಿ ತನ್ನ ಸ್ಥಾನವನ್ನುಳಿಸಿಕೊಂಡಿತು. ಲೋಕಸಭಾ ಚುನಾವಣೆಯ ಅಂಕಿ ಅಂಶಗಳು ಇಂತಿವೆ. ಕಾಂಗ್ರೆಸ್ ೨,೩೫,೭೫೧(೫೮.೭೫) ಆಯ್ಕೆ ವೀರೇಂದ್ರ ಪಾಟೀಲ, ಜನತಾಪಕ್ಷ ೧,೪೦,೨೬೧(೩೪.೯೫) ಹಾಗೂ ಏಳು ಮಂದಿ ಪಕ್ಷೇತರ ಅಭ್ಯರ್ಥಿಗಳು ಪಡೆದ ಮತಗಳು ೨೫,೨೫೭(೬.೨೬).

## ವಿಧಾನಸಭೆ ಮಧ್ಯಾವಧಿ ಚುನಾವಣೆ - ೧೯೮೫

ರಾಜ್ಯದ ರಾಜಕೀಯ ರಂಗದಲ್ಲಿ ಅನಿರೀಕ್ಷಿತ ಬೆಳವಣಿಗೆಗಳುಂಟಾಗಿ ಇನ್ನೂ ಮೂರು ವರ್ಷಗಳ ಅವಧಿಯಿರುವಾಗಲೇ ವಿಧಾನಸಭೆಯನ್ನು ವಿಸರ್ಜಿಸಿ ೧೯೮೫ರಲ್ಲಿ ಹೊಸ ಚುನಾವಣೆ ನಡೆಸಲಾಯಿತು. ಜಿಲ್ಲೆಯ ೧೩ ವಿಧಾನಸಭಾ ಕ್ಷೇತ್ರಗಳ ಪೈಕಿ ಅಫಜಲ್‌ಪುರ, ಗುರುಮಟ್ಕಲ್ ಮತ್ತು ಯಾದಗಿರಿಗಳಲ್ಲಿ ತ್ರಿಕೋಣ ಸ್ಪರ್ಧೆ ಏರ್ಪಟ್ಟಿದ್ದರೆ ಉಳಿದ ಕ್ಷೇತ್ರಗಳಲ್ಲಿ ಬಹುಮುಖ ಸ್ಪರ್ಧೆ ಇತ್ತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ ಪಡೆದು ಎಂಟು ಸ್ಥಾನಗಳನ್ನು ಗಳಿಸಿದರೆ ಜನತಾಪಕ್ಷ ಮೂರು ಸ್ಥಾನಗಳನ್ನು ಹಾಗೂ ಕಮ್ಯೂನಿಸ್ಟ್ ಪಕ್ಷ ಮತ್ತು ಪಕ್ಷೇತರ ಅಭ್ಯರ್ಥಿಗಳು ತಲಾ ಒಂದು ಸ್ಥಾನ ಪಡೆದರು. ವಿವಿಧ ಪಕ್ಷಗಳು ಪಡೆದುಕೊಂಡ ಮತಗಳು ಹಾಗೂ ಅವುಗಳ ಶೇಕಡಾವಾರು ವಿವರ. ೧. ಚಿಂಚೋಳಿ: ಕಾಂಗ್ರೆಸ್ ೨೦.೩೮೭(೪೬.೩೨) ಆಯ್ಕೆ ವೀರಯ್ಯ ಸ್ವಾಮಿ ಮಹಾಲಿಂಗಯ್ಯ, ಜನತಾಪಕ್ಷ ೧೮,೮೪೭(೪೨.೮೨), ಬಿಜೆಪಿ ೧,೪೮೨(೩.೩೭) ಮತ್ತು ಪಕ್ಷೇತರರು ಒಂಬತ್ತು ಮಂದಿ ೩,೨೦೪(೭.೪೬). ೨. ಕಮಲಾಪುರ (ಮೀಸಲು) : ಕಾಂಗ್ರೆಸ್ ೧೪,೭೭೮(೩೬.೨೫) ಆಯ್ಕೆ ಜಿ. ರಾಮಕೃಷ್ಣ, ಜನತಾಪಕ್ಷ ೧೨,೫೪೬(೩೦.೭೭), ಪಕ್ಷೇತರ ೧೧,೭೬೭(೨೮.೯೬) ಮತ್ತು ಇಬ್ಬರು ಇತರರು ೧,೬೭೮(೨.೦೨). ೩. ಆಳಂದ : ಕಾಂಗ್ರೆಸ್ ೨೮,೦೮೫(೪೯.೪೨) ಆಯ್ಕೆ ಶರಣಬಸಪ್ಪ ಮಾಲಿಪಾಟೀಲ, ಜನತಾಪಕ್ಷ ೨೭,೪೨೩(೪೮.೨೫) ಮತ್ತು ಬಿಜೆಪಿ ೧,೩೨೪(೨.೩೩). ೪. ಗುಲಬರ್ಗಾ : ಜನತಾಪಕ್ಷ ೩೬,೮೨೮(೪೧.೪೦) ಆಯ್ಕೆ ಎಸ್.ಕೆ. ಕಾಂತಾ, ಪಕ್ಷೇತರ ೩೫,೭೯೪(೪೦.೨೪), ಕಾಂಗ್ರೆಸ್ ೧೧,೫೫೧(೧೨.೯೮), ಬಿಜೆಪಿ ೧,೭೭೭(೨.೦) ಮತ್ತು ಪಕ್ಷೇತರರು ೨,೭೧೧(೩.೩೬). ೫. ಶಹಾಬಾದ್ (ಮೀಸಲು) : ಸಿಪಿಐ ೧೬,೨೬೩(೨೭.೪೦) ಆಯ್ಕೆ ಕೆ.ಬಿ. ಶಾಣಪ್ಪ, ಪಕ್ಷೇತರ ೧೬,೧೮೮(೨೭.೨೮), ಕಾಂಗ್ರೆಸ್ ೧೫,೬೧೨(೨೬.೩೧), ಬಿಜೆಪಿ ೨,೧೮೩(೩.೬೮) ಮತ್ತು ಇತರೇ ಮೂರು ಮಂದಿ ೯,೦೯೧(೧೫.೩೧). ೬. ಅಫಜಲ್‌ಪುರ : ಕಾಂಗ್ರೆಸ್ ೩೮,೭೭೭(೬೨.೪೦) ಆಯ್ಕೆ ಮಾಲೀಕಯ್ಯ ವೆಂಕಟಯ್ಯ ಗುತ್ತೇದಾರ್, ಜನತಾಪಾರ್ಟಿ ೨೨,೩೦೪(೩೫.೪೯) ಮತ್ತು ಒಬ್ಬರು ಪಕ್ಷೇತರ ೧,೦೬೩(೧.೭೧). ೭. ಚಿತ್ತಾಪುರ : ಜನತಾ ಪಾರ್ಟಿ ೨೩,೦೩೮(೪೯.೫೨) ಆಯ್ಕೆ ವಿಶ್ವನಾಥ ಪಾಟೀಲ್, ಕಾಂಗ್ರೆಸ್ ೧೯,೬೦೫(೪೨.೧೪) ಮತ್ತು ನಾಲ್ವರು ಇತರರು ೩,೮೭೬(೮.೩೩). ೮. ಸೇಡಂ : ಪಕ್ಷೇತರ ೨೦,೯೮೨(೪೧.೬೬) ಆಯ್ಕೆ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ, ಕಾಂಗ್ರೆಸ್ ೧೩,೯೮೪(೨೭.೭೮). ಬಿಜೆಪಿ ೧೧,೨೮೨(೨೨.೪೦), ಜನತಾಪಾರ್ಟಿ ೧,೫೮೧(೩.೧೪) ಮತ್ತು ಇತರ ನಾಲ್ವರು ೨,೫೩೨(೫.೦೩). ೯. ಜೇವರ್ಗಿ : ಕಾಂಗ್ರೆಸ್ ೨೭,೫೪೮(೪೭.೯೯) ಆಯ್ಕೆ ಧರ್ಮಸಿಂಗ್ ನಾರಾಯಣಸಿಂಗ್, ಜನತಾಪಾರ್ಟಿ ೨೨,೯೫೭(೪೦.೧೨), ಬಿಜೆಪಿ ೧,೧೫೬(೨.೦೨) ಮತ್ತು ಆರು ಮಂದಿ ಪಕ್ಷೇತರರು ೫,೫೫೬(೮.೯೭). ೧೦. ಗುರುಮಟ್ಕಲ್ (ಮೀಸಲು) : ಕಾಂಗ್ರೆಸ್ ೩೨,೬೭೯(೬೬.೦) ಆಯ್ಕೆ ಮಲ್ಲಿಕಾರ್ಜುನ ಖರ್ಗೆ, ಜನತಾಪಕ್ಷ ೧೪,೯೯೬(೩೦.೨೩) ಮತ್ತು ಲೋಕದಳ ೧,೮೩೪(೩.೭೭). ೧೧. ಯಾದಗೀರ : ಜನತಾಪಕ್ಷ ೨೮,೭೫೬(೫೧.೭೪) ಆಯ್ಕೆ ವಿಶ್ವನಾಥ ರೆಡ್ಡಿ, ಕಾಂಗ್ರೆಸ್ ೨೪,೩೭೪(೪೩.೮೬) ಹಾಗೂ ಮೂರು ಮಂದಿ ಇತರರು ೨,೪೪೭(೪.೪೦). ೧೨. ಶಹಾಪುರ : ಕಾಂಗ್ರೆಸ್ ೩೩,೫೪೦(೫೧.೫೯) ಆಯ್ಕೆ ಶಿವಶೇಖರಪ್ಪಗೌಡ ಸಿರ್ವಾರ, ಜನತಾಪಕ್ಷ ೨೭,೭೮೫(೪೨.೭೪), ಪಕ್ಷೇತರ ೨,೮೫೭(೪.೪೦) ಮತ್ತು ಬಿಜೆಪಿ ೮೨೪(೧.೨೭). ೧೩. ಶೋರಾಪುರ : ಕಾಂಗ್ರೆಸ್ ೨೨,೪೧೧(೩೯.೯೬) ಆಯ್ಕೆ ಮದನಗೋಪಾಲ ನಾಯಕ್, ಜನತಾಪಕ್ಷ ೨೧,೨೩೮(೩೭.೮೭), ಪಕ್ಷೇತರ ೯,೨೬೧(೧೬.೫೧) ಮತ್ತು ಇತರರು ೨,೯೬೭(೫.೨೯).

## ಲೋಕಸಭಾ ಚುನಾವಣೆ - ೧೯೮೯

ದೇಶದ ರಾಜಕೀಯ ರಂಗದಲ್ಲಿ ಕೆಲವೊಂದು ಏರು ಪೇರುಗಳುಂಟಾಗಿ ರಾಜಕೀಯ ಪಕ್ಷಗಳ ಮೇಲು ಸಹ ಇದರ ಪರಿಣಾಮ ಉಂಟಾಯಿತು. ೧೯೮೯ರಲ್ಲಿ ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದ್ದ ಜನತಾ ಪಾರ್ಟಿಯಲ್ಲಿ

ಒಡಕುಂಟಾಗಿ ಜನತಾಪಕ್ಷ ಮತ್ತು ಜನತಾದಳಗಳೆಂದು ಎರಡು ಹೋಳಾದವು. ಜನತಾ ದಳವು ಒಂದು ರಾಷ್ಟ್ರೀಯ ಪಕ್ಷವಾಗಿ ರೂಪುಗೊಂಡಿತು. ದಿ. ೨೪-೧೧-೧೯೮೯ರಂದು ಒಂಬತ್ತನೇಯ ಲೋಕಸಭೆಗೆ ನೂತನ ಸದಸ್ಯರನ್ನು ಚುನಾಯಿಸಲು ಚುನಾವಣೆ ನಡೆಸಲಾಯಿತು. ಜನತಾ ಪಕ್ಷ ಮತ್ತು ಜನತಾದಳಗಳು ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದವು.

ಗುಲಬರ್ಗಾ ಕ್ಷೇತ್ರದಲ್ಲಿ ೮ ವಿಧಾನಸಭಾ ಕ್ಷೇತ್ರಗಳಿದ್ದು ಅದರಲ್ಲಿ ಎರಡು ಮೀಸಲು ಕ್ಷೇತ್ರಗಳಾಗಿದ್ದವು. ಒಟ್ಟು ೧,೩೦೯ ಮತಗಟ್ಟೆಗಳಿದ್ದವು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಲೋಕಸಭಾ ಸ್ಥಾನವವನ್ನು ಪುನಃ ತನ್ನದಾಗಿಸಿಕೊಂಡಿತು. ವಿವಿಧ ಪಕ್ಷಗಳು ಗಳಿಸಿದ ಮತಗಳು ಹಾಗೂ ಅವುಗಳ ಶೇಕಡಾವಾರು ಇಂತಿದೆ. ಕಾಂಗ್ರೆಸ್ ೨,೮೩,೭೯೬(೪೭.೪) ಆಯ್ಕೆ ಡಾ.ಬಿ.ಜಿ. ಜವಳಿ, ಜನತಾದಳ ೧,೭೪,೯೫೮(೨೯.೨), ಜನತಾಪಕ್ಷ ೯೨,೯೦೭(೧೫.೫), ಆರ್‌ಪಿಐ(ಕೆ) ೭,೭೫೯(೧.೩), ಆರ್‌ಪಿಐ(ಗ) ೭,೬೨೯(೧.೩), ಲೋಕದಳ(ಜೆ) ೩,೯೬೨(೦.೬) ಹಾಗೂ ಐದು ಮಂದಿ ಪಕ್ಷೇತರರು ೨೭,೬೯೧(೪.೭).

## ೧೯೮೯ರ ವಿಧಾನಸಭಾ ಚುನಾವಣೆ

ವಿಧಾನಸಭೆಯ ಅವಧಿ ಮುಕ್ತಾಯಗೊಳ್ಳುವ ಮುನ್ನವೇ ಅದನ್ನು ವಿಸರ್ಜಿಸಲಾಯಿತು. ಹೊಸ ಸದಸ್ಯರನ್ನು ಆಯ್ಕೆ ಮಾಡಲು ಲೋಕಸಭೆ ಚುನಾವಣೆ ಜೊತೆಯಲ್ಲಿಯೇ ವಿಧಾನಸಭಾ ಚುನಾವಣೆಯನ್ನು ನಡೆಸಲಾಯಿತು. ಜಿಲ್ಲೆಯ ೧೩ ಕ್ಷೇತ್ರಗಳಲ್ಲಿ ಬಹುಮುಖ ಸ್ಪರ್ಧೆ ಏರ್ಪಟ್ಟಿತ್ತು. ದಿ. ೨೪-೧೧-೧೯೮೯ರಂದು ನಡೆದ ಈ ಚುನಾವಣೆಯಲ್ಲಿ ಜಿಲ್ಲೆಯ ೧೩ ಕ್ಷೇತ್ರಗಳಲ್ಲಿ ಹನ್ನೆರಡನ್ನು ಕಾಂಗ್ರೆಸ್ ಪಕ್ಷವು ಗೆದ್ದು ಜಯಭೇರಿ ಬಾರಿಸಿತು. ಗುಲಬರ್ಗಾ ಕ್ಷೇತ್ರವನ್ನು ಮುಸ್ಲಿಂ ಲೀಗ್ ಪಡೆಯುವುದರಲ್ಲಿ ಸಫಲತೆ ಪಡೆಯಿತು. ವಿವಿಧ ಪಕ್ಷಗಳು ಗಳಿಸಿದ ಮತಗಳು ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳ ವಿವರಗಳು ಈ ಕೆಳಗೆ ಕೊಟ್ಟಿದೆ.

೧. ಚಿಂಚೋಳಿ : ಕಾಂಗ್ರೆಸ್ ೨೯,೭೬೨(೪೦.೯೭) ಆಯ್ಕೆ ವೀರೇಂದ್ರ ಪಾಟೀಲ್, ಜನತಾಪಕ್ಷ ೨೭,೨೧೭(೩೮.೧೬), ಪಕ್ಷೇತರ ೭,೩೦೩(೧೦.೫), ಜನತಾದಳ ೬,೦೭೨(೮.೩೬), ಮೂರು ಮಂದಿ ಪಕ್ಷೇತರರು ೧,೭೭೫(೨.೪೬). ೨. ಕಮಲಾಪುರ (ಮೀಸಲು) : ಕಾಂಗ್ರೆಸ್ ೧೯,೪೯೬(೩೭.೨೯) ಆಯ್ಕೆ ಜಿ. ರಾಮಕೃಷ್ಣ, ಪಕ್ಷೇತರ ೧೪,೧೫೯(೨೭.೦೭), ಜನತಾಪಕ್ಷ ೯,೯೯೯(೧೯.೧೨), ಬಿಜೆಪಿ ೭೯೬(೧.೫೨), ಮೂವರು ಪಕ್ಷೇತರರು ೭,೮೪೬(೧೫.೦೦). ೩. ಆಳಂದ : ಕಾಂಗ್ರೆಸ್ ೨೮,೩೭೫(೪೬.೪೮) ಆಯ್ಕೆ ಶರಣಬಸಪ್ಪ ಮಾಲಿಪಾಟೀಲ, ಜನತಾದಳ ೧೮,೫೯೬(೩೦.೪೬), ಜನತಾಪಕ್ಷ ೪,೬೪೦(೭.೬೦), ಬಿಜೆಪಿ ೧.೩೫೪(೨.೨೨), ಆರು ಮಂದಿ ಪಕ್ಷೇತರರು ೮,೦೮೩(೧೩.೨೪). ೪. ಗುಲಬರ್ಗಾ : ಮುಸ್ಲಿಂ ಲೀಗ್ ೫೫,೮೦೧(೪೩.೧೫) ಆಯ್ಕೆ ಕಮರೂಲ್ ಇಸ್ಲಾಂ, ಜನತಾದಳ, ೫೧,೨೦೪(೩೯.೫೯), ಕಾಂಗ್ರೆಸ್ ೧೨,೬೭೫(೯.೮೦), ಬಿಜೆಪಿ ೪,೭೫೮(೩.೬೮), ಜನತಾಪಕ್ಷ ೨,೬೨೪(೨.೦೩), ಆರ್‌ಪಿಐ ೪೫೨(೦.೩೫), ಏಳು ಮಂದಿ ಪಕ್ಷೇತರರು ೧,೭೯೬(೧.೪೦). ೫. ಶಹಾಬಾದ್(ಮೀಸಲು) : ಕಾಂಗ್ರೆಸ್ ೨೬,೧೮೯(೩೮.೭೦) ಆಯ್ಕೆ ಬಾಬುರಾವ್, ಜನತಾಪಕ್ಷ ೧೯,೧೦೪(೨೮.೨), ಸಿಪಿಐ ೧೭,೫೧೮(೨೫.೯), ಬಿಜೆಪಿ ೨,೬೦೨(೩.೯), ಕೆಆರ್‌ಆರ್‌ಎಸ್ (ಕರ್ನಾಟಕ ರಾಜ್ಯ ರೈತ ಸಂಘ) ೧,೫೦೧(೨.೨), ಇಬ್ಬರು ಪಕ್ಷೇತರರು ೮೦೨(೧.೧). ೬. ಅಫಜಲ್‌ಪುರ : ಕಾಂಗ್ರೆಸ್ ೩೮,೮೧೦(೫೫.೫೬) ಆಯ್ಕೆ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್, ಜನತಾಪಕ್ಷ ೨೫,೯೬೪(೩೭.೧೭), ಜನತಾದಳ ೪,೫೧೦(೬.೪೫), ಪಕ್ಷೇತರ ೫೬೦(೦.೮೨). ೭. ಚಿತ್ತಾಪುರ : ಕಾಂಗ್ರೆಸ್ ೩೦,೭೮೬(೫೦.೩೮) ಆಯ್ಕೆ ಬಾಬುರಾವ್ ಚಿಂಚನಸೂರ, ಜನತಾಪಕ್ಷ ೧೯,೭೧೯(೩೨.೨೭), ಜನತಾದಳ ೮,೬೦೭(೧೪.೧೦), ಪಕ್ಷೇತರ ೯೭೪(೧.೬೦), ರೈತಸಂಘ ೫೧೦(೦.೮೩) ಬಿಜೆಪಿ ೫೦೬(೦.೮೨). ೮. ಸೇಡಂ : ಕಾಂಗ್ರೆಸ್ ೩೯,೬೪೧(೫೬.೪೪) ಆಯ್ಕೆ ಬಸವಂತರೆಡ್ಡಿ ಮೋತಕಪಲ್ಲಿ, ಜನತಾದಳ ೨೦,೯೨೫(೨೯.೭೯), ಜನತಾಪಕ್ಷ ೪,೮೮೮(೬.೯೬), ರೈತಸಂಘ ೧,೯೬೫(೨.೮೦), ಬಿಜೆಪಿ ೧,೮೪೭(೨.೬೩), ಪಕ್ಷೇತರ ೯೬೯(೧.೩೮). ೯. ಜೇವರ್ಗಿ : ಕಾಂಗ್ರೆಸ್ ೩೦,೭೫೧(೪೭.೧೩) ಆಯ್ಕೆ ಧರ್ಮಸಿಂಗ್ ನಾರಾಯಣಸಿಂಗ್, ಜನತಾಪಕ್ಷ ೧೯,೦೮೭(೨೯.೨೫), ಜನತಾದಳ ೧೦,೭೦೫(೧೬.೪೧), ರೈತಸಂಘ ೧,೪೯೪(೨.೨೯), ಬಿಜೆಪಿ ೮೨೩(೧.೨೬) ಮತ್ತು ಪಕ್ಷೇತರರರು ನಾಲ್ಕು ಮಂದಿ ೨,೩೮೬(೩.೬೬). ೧೦. ಗುರುಮಟಕಲ್ ಮೀಸಲು : ಕಾಂಗ್ರೆಸ್ ೩೯,೬೦೮(೬೪.೨೩) ಆಯ್ಕೆ ಮಲ್ಲಿಕಾರ್ಜುನ ಖರ್ಗೆ. ಜನತಾದಳ ೧೯,೬೫೩(೩೧.೮೫) ರೈತಸಂಘ ೧,೭೭೮(೨.೮೮) ಪಕ್ಷೇತರ ೬೪೯(೧.೦೪). ೧೧. ಯಾದಗೀರ : ಕಾಂಗ್ರೆಸ್ ೩೬,೦೫೩(೫೯.೬) ಆಯ್ಕೆ ಡಾ. ಮಲಕರೆಡ್ಡಿ ಲಕ್ಷ್ಮಣರೆಡ್ಡಿ, ಜನತಾಪಕ್ಷ ೧೬,೨೩೮(೨೬.೯), ರೈತಸಂಘ ೩,೧೨೯(೫.೨) ಮತ್ತು ಇಬ್ಬರು ಪಕ್ಷೇತರರು ೫.೦೧೬(೭.೧೩). ೧೨. ಶಹಾಪುರ : ಕಾಂಗ್ರೆಸ್ ೩೫,೦೬೭(೪೮.೪೧)

ಆಯ್ಕೆ ಶಿವಶೇಖರಪ್ಪ ಗೌಡ ಸಿರ್ವಾರ, ಜನತಾಪಕ್ಷ ೧೫,೯೮೨(೨೨.೦೬), ಜನತಾದಳ ೧೩,೪೪೦(೧೮.೫೫), ರೈತಸಂಘ ೬,೫೮೮(೯.೧೦) ಹಾಗೂ ಪಕ್ಷೇತರ ಅಭ್ಯರ್ಥಿ ೧,೩೫೯(೧.೮೮). ೧೩. ಶೋರಾಪುರ : ಕಾಂಗ್ರೆಸ್ ೩೦,೫೪೫(೪೦.೪೧) ಆಯ್ಕೆ ರಾಜಾ ಮದನಗೋಪಾಲ ನಾಯಕ, ಜನತಾಪಕ್ಷ ೧೮,೧೫೬(೨೪.೦೨), ಜನತಾದಳ ೧೫,೭೭೮(೨೦.೮೮), ರೈತಸಂಘ ೧೧,೧೦೧(೧೪.೬೦).

### ಲೋಕಸಭಾ ಚುನಾವಣೆ - ೧೯೯೧

ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಪುನರ್‌ವಿಂಗಡಣೆಯ ೧೯೭೬ರ ಆದೇಶದ ಅನುಸಾರವಾಗಿ ಗುಲಬರ್ಗಾ ಜಿಲ್ಲೆಗೆ ಒಂದು ಲೋಕಸಭಾ ಕ್ಷೇತ್ರವನ್ನು ನಿಗದಿಪಡಿಸಲಾಗಿತ್ತು. ಇದಕ್ಕೆ ಸೇರ್ಪಡೆಯಾಗಿದ್ದ ವಿಧಾನಸಭಾ ಕ್ಷೇತ್ರಗಳು ೧. ಚಿಂಚೋಳಿ, ೨. ಗುಲಬರ್ಗಾ, ೩. ಶಹಬಾದ್(ಮೀಸಲು), ೪. ಅಫಜಲ್‌ಪುರ, ೫. ಚಿತ್ತಾಪುರ, ೬. ಸೇಡಂ, ೭. ಜೇವರ್ಗಿ ಹಾಗೂ ೮. ಗುರುಮಟಕಲ್ ಮೀಸಲು ಕ್ಷೇತ್ರ. ಜಿಲ್ಲೆಯ ಯಾದಗಿರ, ಶೋರಾಪುರ ಹಾಗೂ ಶಹಾಪುರ ವಿಧಾನಸಭಾ ಕ್ಷೇತ್ರಗಳನ್ನು ರಾಯಚೂರು ಲೋಕಸಭಾ ಕ್ಷೇತ್ರಕ್ಕೆ, ಕಮಲಾಪುರ(ಮೀಸಲು) ಮತ್ತು ಆಳಂದನ್ನು ಬೀದರ್ ಮೀಸಲು ಲೋಕಸಭಾ ಕ್ಷೇತ್ರಕ್ಕೆ ಸೇರಿಸಲಾಯಿತು. ಗುಲಬರ್ಗಾ ಲೋಕಸಭಾ ಕ್ಷೇತ್ರದ ಚುನಾವಣಾ ಕಣದಲ್ಲಿ ಒಟ್ಟ ೧೫ ಮಂದಿ ಸ್ಪರ್ಧಿಗಳಿದ್ದರೂ ಸಹ ಮುಖ್ಯ ಪೈಪೋಟಿ ಕಾಂಗ್ರೆಸ್, ಬಿಜೆಪಿ ಮತ್ತು ಜನತಾದಳದ ನಡುವೆ ಇದ್ದಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಸ್ಥಾನವನ್ನು ಉಳಿಸಿಕೊಂಡಿತು. ವಿವಿಧ ಪಕ್ಷಗಳು ಗಳಿಸಿದ ಮತಗಳು ಹಾಗೂ ಅವುಗಳ ಶೇಕಡಾವಾರು ಈ ರೀತಿ ಇದೆ. ೧. ಕಾಂಗ್ರೆಸ್ : ೧,೮೨,೩೫೧(೪೩.೯೪) ಆಯ್ಕೆ ಡಾ.ಬಿ.ಜಿ. ಜವಳಿ, ೨. ಭಾಜಪ ೧,೨೦,೨೬೮(೨೮.೯೮), ೩. ಜನತಾದಳ ೮೯,೭೬೦(೨೧.೬೩). ೪. ೧೨ ಜನ ಪಕ್ಷೇತರರು ೨೨,೫೮೩(೧೫.೪೫).

### ವಿಧಾನಸಭಾ ಚುನಾವಣೆ - ೧೯೯೪

ರಾಜ್ಯ ವಿಧಾನಸಭೆಗೆ ಹೊಸ ಸದಸ್ಯರನ್ನು ಆಯ್ಕೆ ಮಾಡಲು ೧೯೯೪ರಲ್ಲಿ ಚುನಾವಣೆಯನ್ನು ನಡೆಸಲಾಯಿತು. ಜಿಲ್ಲೆಯ ೧೩ ವಿಧಾನಸಭಾ ಸ್ಥಾನಗಳಲ್ಲಿ ಮೂರು ಮೀಸಲು ಕ್ಷೇತ್ರಗಳಾದಿದ್ದವು. ಕಾಂಗ್ರೆಸ್ ಪಕ್ಷದ ಭದ್ರ ಕೋಟೆಯಾಗಿದ್ದ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಎಲ್ಲಾ ಕ್ಷೇತ್ರಗಳಲ್ಲೂ ವಿರೋಧ ಪಕ್ಷಗಳಾದ ಜನತಾದಳ, ಕೆಸಿಪಿ ಮತ್ತು ಬಿಜೆಪಿಗಳು ತೀವ್ರ ಸ್ಪರ್ಧೆಯನ್ನೊಡ್ಡಿದವು. ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ ನಾಲ್ಕು ಸ್ಥಾನಗಳಲ್ಲಿ ಜಯಗಳಿಸಿತು. ಹಾಗೂ ವಿರೋಧ ಪಕ್ಷಗಳಾದ ಜನತಾದಳ ನಾಲ್ಕು ಸ್ಥಾನ, ಕರ್ನಾಟಕ ಕಾಂಗ್ರೆಸ್ ಪಕ್ಷ ಮೂರು ಸ್ಥಾನ, ಬಿಜೆಪಿ ಮತ್ತು ಮುಸ್ಲಿಂ ಲೀಗ್‌ಗಳು ತಲಾ ಒಂದೊಂದು ಸ್ಥಾನವನ್ನು ಗೆದ್ದವು. ವಿವಿಧ ಕ್ಷೇತ್ರಗಳಲ್ಲಿ ಪಕ್ಷಗಳು ಗಳಿಸಿದ ಮತಗಳು ಹಾಗೂ ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಈ ರೀತಿ ಇತ್ತು. ೧. ಚಿಂಚೋಳಿ : ಜನತಾದಳ ೫೬,೩೭೩(೬೯.೧೨) ಆಯ್ಕೆ ವೈಜನಾಥ ಪಾಟೀಲ, ಕಾಂಗ್ರೆಸ್ ೧೭,೩೨೦(೨೧.೨೪), ಕರ್ನಾಟಕ ಕಾಂಗ್ರೆಸ್ ಪಕ್ಷ(ಮುಂದೆ ಕೆಸಿಪಿ ಎಂದು ನಮೂದಿಸಲಾಗುವುದು) ೪,೫೪೮(೫.೫೮), ಬಿಜೆಪಿ ೧,೬೮೮(೨.೦೭) ಹಾಗೂ ಪಕ್ಷೇತರರು ೧,೬೨೨(೩.೯೯). ೨. ಕಮಲಾಪುರ (ಮೀಸಲು) : ಬಿಜೆಪಿ ೧೯,೩೪೮(೨೯.೭೭) ಆಯ್ಕೆ ರೇವು ನಾಯಕ ಬೆಳಮಾಗಿ, ಕಾಂಗ್ರೆಸ್ ೧೩,೮೧೮(೨೧.೨೨), ಜನತಾದಳ ೧೩,೮೪೯(೨೧.೨೦), ಕೆಸಿಪಿ ೩,೨೯೨(೫.೦೬), ಬಹುಜನ ಸಮಾಜ ಪಾರ್ಟಿ(ಮುಂದೆ ಬಿಎಸ್‌ಪಿ ಎಂದು ನಮೂದಿಸಲಾಗುವುದು) ೫೭೪ ಮತ್ತು ಆರು ಮಂದಿ ಪಕ್ಷೇತರರು ೧,೫೬೦(೩.೨೮). ೩. ಆಳಂದ : ಕೆಸಿಪಿ ೩೫,೫೪೮(೪೭.೪೫) ಆಯ್ಕೆ ಗುತ್ತೇದಾರ ಸುಭಾಷ್ ರುಕಮಯ್ಯ, ಜನತಾದಳ ೧೭,೨೨೫(೨೨.೯೯), ಕಾಂಗ್ರೆಸ್ ೧೩,೧೯೧(೧೭.೬), ಬಿಜೆಪಿ ೮,೫೬೫(೧೧.೪೩), ಆರ್‌ಪಿಐ ೨೯೮(೦.೪೦), ಮತ್ತು ಒಬ್ಬ ಪಕ್ಷೇತರ ೯೦. ೪. ಗುಲಬರ್ಗಾ : ಇಂಡಿಯನ್ ನ್ಯಾಷನಲ್ ಲೀಗ್(ಮುಂದೆ ಐಎನ್‌ಎಲ್ ಎಂದು ನಮೂದಿಸಲಾಗುವುದು) ೫೮,೭೧೯(೪೪.೩೭) ಆಯ್ಕೆ ಕಮರೂಲ್ ಇಸ್ಲಾಂ, ಬಿಜೆಪಿ ೪೦,೮೨೯ (೩೦.೮೫), ಜನತಾದಳ ೨೩,೨೨೯ (೧೭.೫೫), ಕಾಂಗ್ರೆಸ್ ೬,೭೬೨(೫.೧೧), ಐಯುಎಮ್‌ಎಲ್ ೩೭೪, (೦.೨೮) ಆರ್‌ಪಿಐ ೨೮೫(೦.೨೨) ಮತ್ತು ಹನ್ನೆರಡು ಮಂದಿ ಪಕ್ಷೇತರರು ೨,೧೫೩. ೫. ಶಹಾಬಾದ್(ಮೀಸಲು) : ಜನತಾದಳ ೩೨,೯೩೭(೪೦.೩೩), ಆಯ್ಕೆ ಸಿ. ಗುರುನಾಥ್, ಕಾಂಗ್ರೆಸ್ ೧೬,೦೮೬(೧೯.೭೦), ಬಿಜೆಪಿ ೧೪,೮೧೧(೧೮.೧೪), ಕೆಸಿಪಿ ೮,೦೭೪(೯.೮೮), ಬಿಎಸ್‌ಪಿ ೩,೪೪೭(೪.೨೨), ಸಿಪಿಐ ೩,೧೧೭ (೩.೮೨) ಮತ್ತು ಪಕ್ಷೇತರ ಅಭ್ಯರ್ಥಿಗಳು ಐದು ಮಂದಿ ೩,೧೯೩(೩.೯೪). ೬. ಅಫಜಲ್‌ಪುರ : ಕೆಸಿಪಿ ೩೯,೯೨೪(೪೯.೨೭) ಆಯ್ಕೆ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್, ಕಾಂಗ್ರೆಸ್ ೩೫,೭೦೩(೪೪.೦೬), ಬಿಜೆಪಿ ೩,೧೭೦(೩.೯೧), ಜನತಾದಳ

೧,೮೯೪(೨.೩೪) ಮತ್ತು ಆರ್‌ಪಿಐ ೩೪೩(೦.೪೨). ೭. ಚಿತ್ತಾಪುರ : ಕಾಂಗ್ರೆಸ್ ೨೫,೩೫೫(೩೬.೩೨) ಆಯ್ಕೆ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರು, ಪಕ್ಷೇತರ ೨೪,೫೨೯(೩೫.೧೪), ಕೆಸಿಪಿ ೫,೧೬೫(೭.೪೦), ಬಿಜೆಪಿ ೪,೨೭೩(೬.೧೨), ಜನತಾದಳ ೨,೨೮೭(೩.೨೮), ಬಿಎಸ್‌ಪಿ ೨,೦೩೨(೨.೯೧) ಇತರೇ ಪಕ್ಷಗಳು ಹಾಗೂ ಪಕ್ಷೇತರರು (೧೨) ೬,೧೭೧. ೮. ಸೇಡಂ : ಜನತಾದಳ ೩೭,೧೧೮(೪೭.೧೨) ಆಯ್ಕೆ ಚಂದ್ರಶೇಖರ ರೆಡ್ಡಿ ದೇಶಮುಖ ಮದನ, ಕಾಂಗ್ರೆಸ್ ೨೪,೪೮೫(೩೧.೦೮), ಬಿಜೆಪಿ ೫,೭೭೬(೭.೩೩), ಕೆಸಿಪಿ ೪,೧೯೮(೫.೩೩), ಸಿಪಿಐ(ಎಂ) ೩,೩೩೧(೪.೨೩), ರೈತ ಸಂಘ ೧,೭೮೩(೨.೨೬) ಮತ್ತು ಮೂರು ಮಂದಿ ಪಕ್ಷೇತರರು ೨,೦೭೭(೨.೬೩). ೯. ಜೇವರ್ಗಿ : ಕಾಂಗ್ರೆಸ್ ೩೦,೮೪೦(೪೦.೯೧) ಆಯ್ಕೆ ಧರ್ಮಸಿಂಗ್ ನಾರಾಯಣಸಿಂಗ್, ಕೆಸಿಪಿ ೨೬,೭೮೫(೩೫.೫೩), ಬಿಜೆಪಿ ೭,೭೯೦(೧೦.೩೪), ಜನತಾದಳ ೭,೩೦೭(೯.೬೯) ಮತ್ತು ಮೂರು ಮಂದಿ ಪಕ್ಷೇತರರು ೧,೬೬೦. ೧೦. ಗುರುಮಟಕಲ್(ಮೀಸಲು) : ಕಾಂಗ್ರೆಸ್ ೪೨,೫೮೮(೫೮.೭೫), ಮಲ್ಲಿಕಾರ್ಜುನ ಖರ್ಗೆ, ಜನತಾದಳ ೨೩,೨೫೨(೩೨.೧೯), ಕೆಸಿಪಿ ೬,೬೩೫(೯.೧೬). ೧೧. ಯಾದಗೀರ : ಕಾಂಗ್ರೆಸ್ ೨೬,೩೫೯(೩೮.೭೪) ಆಯ್ಕೆ ಡಾ.ಎ.ಬಿ. ಮಲಕರೆಡ್ಡಿ ಲಕ್ಷ್ಮರೆಡ್ಡಿ, ಜನತಾದಳ ೧೯,೬೩೫(೨೮.೮೬), ಕೆ.ಸಿ.ಪಿ. ೧೦,೫೯೩(೧೫.೫೭), ಬಿಎಸ್‌ಪಿ ೭,೭೩೩(೧೧.೩೬), ಬಿಜೆಪಿ ೩,೦೬೩(೪.೫೦), ಮತ್ತು ಪಕ್ಷೇತರ ೬೫೭ (೦.೯೭). ೧೨. ಶಹಾಪುರ : ಜನತಾದಳ ೪೦,೯೮೪(೪೬.೪೨) ಆಯ್ಕೆ ಶರಣಬಸಪ್ಪ ದರ್ಶನಾಪೂರ, ಕಾಂಗ್ರೆಸ್ ೨೭,೧೫೮(೩೦.೭೬), ರೈತಸಂಘ ೯,೨೯೭(೧೦.೫೩), ಬಿಜೆಪಿ ೪,೨೧೩(೪.೭೭), ಬಿಎಸ್‌ಪಿ ೩,೦೯೩(೩.೫೦), ಇತರೇ ಪಕ್ಷಗಳು ಮತ್ತು ಪಕ್ಷೇತರರು(೪) ೩,೫೪೮(೪.೦೨). ೧೩. ಶೋರಾಪುರ : ಕೆಸಿಪಿ ೩೪,೦೭೮(೩೮.೧೯) ಆಯ್ಕೆ ರಾಜಾ ವೆಂಕಟಪ್ಪ ನಾಯಕ, ಜನತಾದಳ ೨೮,೪೧೯(೩೧.೮೫), ಕಾಂಗ್ರೆಸ್ ೧೬,೨೧೩(೧೮.೧೭), ಬಿಜೆಪಿ ೯,೦೬೬(೧೦.೬೬), ಇಬ್ಬರು ಪಕ್ಷೇತರರು ೧,೪೪೮ (೧.೬೩).

**ಲೋಕ ಸಭಾ ಚುನಾವಣೆ** - ೧೯೯೬

ಗುಲಬರ್ಗಾ ಲೋಕ ಸಭಾ ಕ್ಷೇತ್ರಕ್ಕೆ ದಿನಾಂಕ ೨.೫.೧೯೯೬ರಂದು ಚುನಾವಣೆ ನಡೆಯಿತು. ೧೯ ಅಭ್ಯರ್ಥಿಗಳು ಸ್ಪರ್ಧಿಸಿದ್ದ ಈ ಕ್ಷೇತ್ರದಲ್ಲಿ ಜನತಾದಳದ ಕಮರೂಲ್ ಇಸ್ಲಾಂರವರು ಆಯ್ಕೆಗೊಂಡರು. ಇವರು ಪಡೆದ ಮತಗಳು ೨,೦೩,೫೨೧ (೩೫.೯೦) ಆಗಿದ್ದರೆ ಮತ ಚಲಾಯಿಸಿದವರ ಒಟ್ಟು ಸಂಖ್ಯೆ ೫,೮೦,೬೭೯ ಆಗಿತ್ತು.

೧೯೯೪ರಲ್ಲಿ ಗುಲಬರ್ಗಾ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಮರೂಲ್ ಇಸ್ಲಾಂರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಲೋಕ ಸಭೆಗೆ ಆಯ್ಕೆಯಾದರು. ತೆರವಾದ ಈ ಗುಲಬರ್ಗಾ ವಿಧಾನ ಸಭಾ ಕ್ಷೇತ್ರಕ್ಕೆ ೧೧.೧೦.೯೬ರಂದು ಮರುಚುನಾವಣೆ ನಡೆದು ಕೈಸರ್ ಮಹಮ್ಮದ್ ಮಣಿಯಾರ್ ಆಯ್ಕೆಗೊಂಡರು. ಇವರು ಜನತಾ ದಳದ ಅಭ್ಯರ್ಥಿಯಾಗಿದ್ದು ೪೮,೯೨೩ ಮತಗಳನ್ನು ಪಡೆದರೆ ಇವರ ಸಮೀಪದ ಸ್ಪರ್ಧಿ ಸಮತಾ ಪಕ್ಷದ ಅಭ್ಯರ್ಥಿ ಎಸ್. ಕಾಂತಾ ಅವರು ೪೧,೬೮೪ ಮತ ಗಳಿಸಿದ್ದರು.

# ಅಧ್ಯಾಯ - ೩

# ಜನತೆ

ಗುಲಬರ್ಗಾ ಜಿಲ್ಲೆಯು ೧೦ ತಾಲೂಕುಗಳನ್ನೊಳಗೊಂಡಿದ್ದು, ಭೌಗೋಳಿಕವಾಗಿ ಕರ್ನಾಟಕದ ಈಶಾನ್ಯ ಭಾಗದಲ್ಲಿ ಎತ್ತರವಾದ ವ್ಯಾಪಕ ಪ್ರದೇಶದಲ್ಲಿದೆ. ಈ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಎಲ್ಲೆಗಳಿಂದ ಸುತ್ತುವರೆದಿದ್ದು ಅಲ್ಲಿಯ ಜನಜೀವನದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಒಂದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ ಹಾಗೂ ಸಾಮಾಜಿಕ ಲಕ್ಷಣಗಳು ಅವಿಭಾಜ್ಯ ಅಂಗವಾಗಿದ್ದು ಇವು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುತ್ತವೆ. ರಾಜ್ಯದ ಇತರೆ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ ಸಹ ವಿವಿಧ ಜಾತಿ, ಮತ, ಧರ್ಮ, ಭಾಷೆ, ಆಚಾರ-ವಿಚಾರಗಳು, ನಂಬಿಕೆಗಳು, ಆಹಾರಾಭ್ಯಾಸ, ಭಾಷೆ, ವೇಷ-ಭೂಷಣಗಳು ಇವೇ ಮೊದಲಾದ ವೈವಿಧ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡು ಬರುತ್ತವೆ. ಈ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಜನತೆಯ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

## ಜನಸಂಖ್ಯಾ ಬೆಳವಣಿಗೆ

೧೯೬೧ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯು ೧೩,೯೯,೪೫೭ ಇದ್ದು ೧೯೯೧ರಲ್ಲಿ ೨೫,೮೨,೧೬೯ ಆಗಿರುವುದು. ರಾಜ್ಯದ ೨೦ ಜಿಲ್ಲೆಗಳ ಜನಸಂಖ್ಯೆಯನ್ನು ಅವಲೋಕಿಸಿದಾಗ ಇದು ಏಳನೆಯ ಸ್ಥಾನವನ್ನು ಪಡೆದಿರುವುದು. ಜಿಲ್ಲೆಯಲ್ಲಿನ ೧೯೬೧ರಿಂದ ೧೯೯೧ರವರೆಗಿನ ಜನಸಂಖ್ಯಾ ಬೆಳವಣಿಗೆಯನ್ನು ತಾಲೂಕುವಾರು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಈ ಕೆಳಗಿನ ಕೋಷ್ಟಕದಲ್ಲಿ (೩.೧) ನೀಡಲಾಗಿದೆ.

೧೯೦೧ ರಿಂದ ೧೯೧೧ರ ಜನಸಂಖ್ಯಾ ಬೆಳವಣಿಗೆಯು ಶೇ. ೯.೨೨ ಆಗಿದ್ದು ಇದು ರಾಜ್ಯದ ಜನಸಂಖ್ಯಾ ಬೆಳವಣಿಗೆಗಿಂತ (ಶೇ. ೩.೬೦) ಹೆಚ್ಚಾಗಿರುತ್ತದೆ. ೧೯೧೧-೨೧ರ ದಶಕದಲ್ಲಿ ರಾಜ್ಯದ ಜನಸಂಖ್ಯೆಯಲ್ಲಿ ಇಳಿಮುಖವಾಗಿದ್ದು ಇದು ಗುಲಬರ್ಗಾ ಜಿಲ್ಲೆಗೂ ಅನ್ವಯವಾಗಿರುತ್ತದೆ. ಇದಕ್ಕೆ ಕಾರಣ ಈ ಅವಧಿಯಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪಗಳು ಹಾಗೂ ವ್ಯಾಪಕವಾಗಿ ತಲೆ ದೋರಿದ ಸಾಂಕ್ರಾಮಿಕ ರೋಗಗಳೂ ಇದ್ದಿರಬಹುದು. ನಂತರದ ಪ್ರತಿದಶಕದಲ್ಲೂ ಜಿಲ್ಲೆಯ ಜನಸಂಖ್ಯೆ ಹೆಚ್ಚುತ್ತಾ ಬಂದಿದ್ದರೂ ಇದು ರಾಜ್ಯದ ಸರಾಸರಿ ಏರಿಕೆಯ ದರಕ್ಕಿಂತ ಕಡಿಮೆಯಾಗಿರುತ್ತದೆ. ೧೯೬೧ ರಿಂದ ೧೯೭೧ರವರೆಗಿನ ಜನಸಂಖ್ಯಾ ಬೆಳವಣಿಗೆಯು (ಶೇ ೨೪.೨೮) ರಾಜ್ಯದ ಸರಾಸರಿ ಜನಸಂಖ್ಯಾ ಬೆಳವಣಿಗೆಯ